THE BOOK WAS DRENCHED

UNIVERSAL
LIBRARY
OU_202005
UNIVERSAL
LIBRARY

OSMANIA UNIVERSITY LIBRARY

Call No. K 349.545/N46R. Accession No. K.5200

Author ಸಂಕನ್ನಾ ವೆ ಗರ್.

Title ಭಾರತ ಸಂವಿಧಾನ ಭಾ. III. 1955.

This book should be returned on or before the date last marked below.

Karnatak Sahitya Mandira
DHARWAR.

MADRAS GOVERNMENT ORIENTAL MANUSCRIPTS SERIES No. 43.

ವೆಂಕಾಮಾತ್ಯಕವಿವಿರಚಿತಂ

ಶ್ರೀ ಮ ದ್ರಾ ಮಾ ಯ ಣ ಂ

ಕಿ ಷ್ಕಿಂ ಧಾ ಕಾಂ ಡಂ

KISKINDHĀKĀṆḌAM

(RĀMĀYAṆAM) OF VEṄKĀMĀTYA

EDITED BY

T. CHANDRASEKHARAN, M.A., L.T.,

Curator, Government Oriental Manuscripts Library, Madras.

and the staff of the Library

(Under the orders of the Government of Madras)

PRINTED BY THE SUPERINTENDENT
GOVERNMENT PRESS
MADRAS
1955

INTRODUCTION

This edition of Kiṣkindhākāṇḍa is the third volume of the Rāmāyaṇa of Veṅkāmātya of which two Kāṇḍas, namely, Ayōdhyā-Kāṇḍa and Sundarakāṇḍa have already been published. Details regarding the author and the literary value of this work have been noted in the first volume—Sundarakāṇḍa. It is enough to state here that the same flow of language and style which is seen in the first two volumes runs throughout this Kāṇḍa also with flashes of fine poetical thoughts. It is hoped that this volume will have the same good reception as the other two volumes. It may be mentioned here that Bālakāṇḍa will be taken up next and printed during 1955-56.

My thanks are due to Sri V. Hanumanthachar, M.A., L.T., Librarian, and Sri Vidvan C. Madhusudana Bhat, Kannada Pandit of this Library, for preparing the press copy and going through the proof. My thanks are also due to the Superintendent, Government Press, Madras, for printing the book in a very short time and making it available to the public.

GOVERNMENT ORIENTAL MANUSCRIPTS LIBRARY, MADRAS.
20th January 1955.

T. CHANDRASEKHARAN,
Curator.

ಮುನ್ನುಡಿ

ವೆಂಕಾಮಾತ್ಯ ಕವಿಯಿಂದ ವಿರಚಿತವಾದ ರಾಮಾಯಣದ ಭಾಗಗಳ ಪೈಕಿ ಮೂರನೆಯ ಹೊತ್ತಿಗೆಯಾಗಿ ಈ ಕಿಷ್ಕಿಂಧಾಕಾಂಡವನ್ನು ಕನ್ನಡಿಗರ ಮುಂಬಿಡಲು ನಾನು ಆನಂದಿಸುತ್ತೇನೆ. ಮೊದಲಿನ ಎರಡು ಪುಸ್ತಕಗಳಾದ ಸುಂದರಕಾಂಡ ಮತ್ತು ಅಯೋಧ್ಯಾಕಾಂಡಗಳು, ಮದ್ರಾಸು ಸರಕಾರದ ಪ್ರಾಚೀನ ಹಸ್ತಲಿಖಿತಪುಸ್ತಕಭಂಡಾಗಾರದ ಸಂಪಾದಕೀಯಸಮಿತಿಯವರಿಂದ ಆರಿಸಲ್ಪಟ್ಟ ಮೇರೆಗೆ ಈ ಮೊದಲೇ ಅಚ್ಚಾಗಿ ಬೆಳಕಿಗೆ ಬಂದಿವೆ.

ಕನ್ನಡ ಸಾಹಿತ್ಯದಲ್ಲಿ ವೆಂಕಾಮಾತ್ಯರಾಮಾಯಣಕ್ಕೆ ಇರುವ ಸ್ಥಾನಮಾನಗಳು, ಕವಿಯ ಕಾಲ, ದೇಶ ಮುಂತಾದುವು ಪ್ರಥಮದಲ್ಲಿ ಮುದ್ರಿತವಾದ ಸುಂದರಕಾಂಡದ ಮುನ್ನುಡಿಯಲ್ಲಿ ನಿರೂಪಿತವಾಗಿರುವುದರಿಂದ ಅವನ್ನಿಲ್ಲಿ ಪುನಃ ಪ್ರಸ್ತಾಪಿಸಿಲ್ಲ. ಇಷ್ಟು ವಿಸ್ತಾರವಾಗಿ ರಚಿತವಾದ ಈ ಗ್ರಂಥವು ಅಲ್ಲಲ್ಲಿ ಆಕರ್ಷಣೀಯವಾದ ಕವಿತಾಕೌಶಲಗಳಿಂದ ಕೂಡಿದ್ದು ಕನ್ನಡಸಾಹಿತ್ಯದ ಕಳೆಯನ್ನು ಹೆಚ್ಚಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಇಂತಹ ಗ್ರಂಥವನ್ನು ಪೂರ್ಣವಾಗಿ ಮುದ್ರಿಸಿ ಕನ್ನಡಿಗರಿಗೊದಗಿಸಲು ಶಕ್ತನಾದರೆ ನಾನು ಕೃತಾರ್ಥನೆಂದು ಭಾವಿಸುವೆನು. ಮುಂದಿನ ಸಂಚಿಕೆಯಾಗಿ ಬಾಲಕಾಂಡವನ್ನು ಮುದ್ರಿಸಬೇಕೆಂದಿದೆ.

ಇದರ ಮುದ್ರಣಪ್ರತಿಯನ್ನು ಸಿದ್ಧಪಡಿಸಿದ ಶ್ರೀ ವಿ. ಹನುಮಂತಾಚಾರ್, ಎಂ.ಎ., ಎಲ್.ಟಿ., ಮತ್ತು ಲೈಬ್ರರಿಯಲ್ಲಿ ಇತ್ತೀಚೆಗೆ ಕನ್ನಡಪಂಡಿತರಾಗಿ ನೇಮಕಹೊಂದಿದ ವಿದ್ವಾನ್ ಶ್ರೀ ಸಿ. ಮಧುಸೂದನ ಭಟ್ಟ ಇವರ ಕಾರ್ಯದಕ್ಷತೆಯು ಸ್ತುತ್ಯವಾದುದು.

ಕೊನೆಯದಾಗಿ ಈ ಗ್ರಂಥವನ್ನು ಸಕಾಲದಲ್ಲಿ ಅಂದವಾಗಿ ಅಚ್ಚುಮಾಡಿಕೊಟ್ಟಿರುವ ಸರಕಾರೀಮುದ್ರಣಾಲಯದ ಸೂಪರಿಂಟೆಂಡೆಂಟರವರಿಗೆ ಮತ್ತು ಅವರ ಸಿಬ್ಬಂದಿಗೆ ನಮ್ಮ ಹಾರ್ದಿಕಕೃತಜ್ಞತೆಗಳು.

ಗವರ್ನ್‌ಮೆಂಟ್ ಓರಿಯೆಂಟಲ್
ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ,
ಮದ್ರಾಸು-5,

ಟಿ. ಚಂದ್ರಶೇಖರನ್,
ಕ್ಯೂರೇಟರ್.

1955 ನೇ ಇಸವಿ ಜನವರಿ 20ನೇ ತಾರೀಕು.

ವೆಂಕಾಮಾತ್ಯ ವಿರಚಿತಂ

ಶ್ರೀಮದ್ರಾಮಾಯಣಂ

ಕಿಷ್ಕಿಂಧಾ ಕಾಂಡಂ

ಒಂದನೆಯ ಸಂಧಿ.

ಶ್ರೀಜನಕನಂದಿನಿಯು ಶ್ರೀವತ್ಸದೆಡೆಯಿಟ್ಟು ।
ಮೂಜಗನ್ಮೋಹಿನಿಯು ಪೊರಗಿಟ್ಟು ನಸುನಗುತ ।
ಮೂಜಗತ್ಪ್ರಾಣ ನಂದನನ ಶುಭವಾಣಿಯುಂ ಪತಿಕರಿಸಿ ಸೂರ್ಯಸುತಗೇ ॥
ರಾಜತ್ವಮನ್ನಿತ್ತು ದಯದಿಂದಲುಂ ವಿಬುಧ ।
ರಾಜಸುತನಂ ತರಿದು ಹರಿಗಳಂ ಪೊರೆದ ರಘು ।
ರಾಜನೊಲಿದೆಮಗನಾರತಸೌಖ್ಯಸಂಪದಗಳೀಯಲಾನಂದಗಳನು ॥ (1)

ಬಲವು ಜಸವುಂ ಧೈರ್ಯಮಭಯ ಪ್ರಾಜ್ಞ್ಯ ದಾರ್ಢ್ಯ ।
ನಲವು ಸೌಖ್ಯಂ ಚಾತುರವಚನರಚನೆಗಳು ।
ಕಲಿತಮಪ್ಪುದದಾರ ನಾಮಗ್ರಹಣಮಾತ್ರದೊಳೆಗಖಿಳಜೀವರಿಗೇ ।
ಸಲಲಿತೋದಾರ ಅಕ್ಷಾದಿ ರಕ್ಕಸಹಾರ ।
ಕಲಿಮಲಾಪಹ ಧೀರ ಕಾಮಿತದ ದಾತಾರ ।
ಅಲಘುಮತಿ ಪಾವನಸಮೀರನಕುಮಾರನಂ ಭಾವಿಸುವೆ ಭಕ್ತಿಯಿಂದ ॥ (2)

ಪಳಿವಾತುಗಳ ಕೆಳೆಯನಾಂತಾಗಮಂಗಳಗೆ ।
ನಿಳಯಮೆನಿಸುವ ದಿವ್ಯಚರಿತ್ರೆಯನ್ನಮೃತರಸ ।
ತುಳುಕುವಂದದ ಭವ್ಯವಚನರಚನಾರಸವನೀಂಟಿ ಶ್ರುತಿಗಳ್ತಣಿಪವೇ ॥
ಜಳಜಾಕ್ಷನಭ್ಯುದಯಮೇಲ್ಗತೆಯನುಸುರೆಂದು ।
ನಳಿನಮುಖಿ ಪದಕೆರಗಿ ಬಿನ್ನವಿಸೆ ಹರ್ಷಮಂ ।
ತಳೆದು ವೃಷಕೇತನಂ ವಿಸ್ತರಿಸಲನುಗೈದನಖಿಲತ್ರಯೀಮಾತ್ರವನು ॥ (3)

ಹಿಮಗಿರಿತನೂಜಾತೆ ಕೇಳ್ಸಕಲಪುರುಷಾರ್ಥ ।
ದಮಿತ್ರವೈಭವಮಿತ್ತು ಪಾಲಿಪುದು ಲೋಕಮಂ ।
ದ್ಯುಮಣಿಕುಲರನ್ನನ ಚರಿತ್ರೆಯೊಳಗತಿಶಯವ ತಳೆದ ಕಿಷ್ಕಿಂಧಾಖ್ಯದಾ ॥
ಸುಮನಸಾನಂದಕರಕಾಂಡಮಂ ವಿಸ್ತರಿಪೆ ।
ಕಮಲಾಯತಾಕ್ಷಿ ಕಾಮಿಸಿದರ್ಥಗಳ ನೀವು ।
ದಮೃತೋಪಮಾನಮೆಂದಾನಂದದಿಂದನವರತ ಸೇವನಂಗೈಯಲು ॥ (4)

ಅಭಯಮನ್ನಿತ್ತು ಸುರಗಭೆ ಸಂತಸಂಗೊಳಲು ।
ಶಬರಿಯಂ ನಿಜಪದಕೆ ಕಳುಪಿ ಪಂಪಾಸಾರಮು ।
ಶುಭಸರಸಿಯೆಡೆಯೊಂದು ತಾಣದೊಳ್ ಕುಳ್ಳಿರ್ದು ರಾಘವಂ ತನ್ನ ಸತಿಯಾ ॥
ವಿಭವಂಗಳಂ ನೆನೆದು ಹಂಬಲಿಸುತಾಗಳುಂ ।
ರಭಸದಿಂ ಮೊರೆವ ಭೃಂಗಾಳಿಗಿಳಿಕೋಗಿಲೆಯ ।
ಶುಭನಾದಗಳಗಳ್ಕಿ ಸೌಮಿತ್ರಿಯಂ ಕರೆದು ಪೇಳ್ದನಾ ಪರಿಯೆಲ್ಲವಂ ॥ (5)

ಕಾಲಾಂಗನಾಕರದ ತಾಳವೃಂತಾಗ್ರಸಂ ।
ಚಾಲನೆಯಲುದ್ಭವಿಸಿ ಬರುತ ಕಲಶೋದ್ಭೂತ ।
ನಾಲಯೋಪರಿ ಕಷಾಯಾರ್ಧತೆಯನಪಹರಿಸಿ ಮಲಯಾನಿಲಯವನು ಸಾರಿ ॥
ಮೇಲಿರ್ಪ ಕಾಳಾಹಿಗಳ ವದನಚುಂಬನದಿ ।
ಹಾಲಾಹಲಾಂಗನಹ ಪವಮಾನಮುರ್ವೃತ್ತು ।
ಬಾಲ ಹೃತ್ತಾಪಕಂ ಗೊಳಪ್ರತಿಂದುಷ್ಣತೆಯನಾಂತುದಚ್ಚರಿಯ ನೋಡು ॥ (6)

ಕಾಂಚನಾಸೆಯನುಳಿದು ಸಕಲಾಗಮಾಂತ ಪ್ರ ।
ಪಂಚಂಗಳನ್ನಾಂತು ಮಾಧವಾಂಘ್ರಿಯೊಳು ನಿ ।
ಶ್ಚಂಚಲದಿ ಮನವಿಟ್ಟ ಮೃದುರವಾನಂದಕರಮಾಧುಕರ ಗೋತ್ರಂಗಳು ॥
ಪಂಚಶರನುಪದೇಶದಿಂದ ಮಧುಮತ್ತತೆಯ ।
ಮುಂಚೆ ಮೈಮರೆದು ಸಿಂಜನಿಯಂತೆ ಹೃದಯವ ಪ ।
ಳಂಚುತಿವೆ ಸೌಮಿತ್ರಿ ನೋಡು ದುಸ್ಸಹವಾಸವಮಾರಾರ ಕೆಡಿಸವಕಟಾ ॥ (7)

ತುತ್ತನುಳಿದನವರತಮೊಳೆದಳಿರುಮಂ ಮೆಲುತ ।
ಪೊತ್ತುಸಲಹಿದರ ನಾಕದೆ ವಿಷ್ಣುಚರಣಂಗ ।
ಳೆತ್ತ ಸಾರುವೆನೆಂದು ಮೌನವ್ರತವ ಪಿಡಿದು ಕಾನನಪ್ರಿಯಗನಿಪರು ॥
ಚಿತ್ರರದ ಮಧುಪಾಯಿಗಳ ಬೆರೆದು ಚಾರಿಸುತ ।
ಮತ್ತಮತೆಯಂ ಸಾಧುಚಿದ್ರವದಿ ನಡುಗಿಪರು ।
ಮತ್ತೆ ದುಷ್ಕಾಲ ಬರೆ ಮೃದು ಕೋಣತರಮೆನಿಪ್ಪುದೈಸ ಸೌಮಿತ್ರಿ ನೋಡು (8)

ಪಿಡಿದ ನಿಯಮದಿ ಫಲಾಹಾರಮಂ ಗೈದು ನಿಜ ।
ದೃಢದಿ ವರ್ನಿತ್ವಮಂ ಕೈಕೊಂಡು ವಚನದಿಂ ।
ದೆಡೆವಿಡದೆ ಶೌರಿಯಂ ಭಾವಿಸುವ ಶುಕಕುಲಂ ಮದನರಥಮೆಂದೆನಿಸುತಾ ॥
ಕಡುನಿಟ್ಟುರಗಳಂದಲೆದೆವಡೆಯಲೀ ಬನದಿ ।
ಕುಡುದಂಷ್ಟ್ರನಂ ಕೋಪಿಸುವವೈದೆ ಖಗತತಿಯು ।
ತೊಡರಿದಡೆ ಮೌನಿಗಳು ಕೆಡದುಳಿಯರೀ ನೆಲದಿ ಸೌಮಿತ್ರಿ ನೋಡು ವಿಧಿಯಾ ॥ (9)

ಜ್ಞಾನಪದರನುವನಂಗೀಕರಿಸಿದಲೆ ತನ್ನ ।
ಮಾನಸಸರಸ್ಸಿನಲಿ ಕ್ರೀಡಿಸುತ ಬೇಗ ಚತು ।
ರಾನನಗತಿವಿಡಿದ ಪಾರವಶ್ಯತೆಯಾಂತ ಪದ್ಮಾಸನಾಭ್ಯಾಸದಿಂ ॥
ದೇಸೊಂದನೆಣಿಸದೀ ಹಂಸಕುಲ ದುಷ್ಕಾಲ ।
ಭಾಸದಿ ಪರಾಧೀನವೃತ್ತಿಯಂ ಜಗತಿಯಂ ।
ತಾನಲೆವದೇನೆಂಬೆನಾರ್ತಿಯೊಳು ಸಾಧುಗಳದೆಂದೆನಿಸಿಕೊಂಬರಹಹಾ ॥ (10)

ಭ್ರಮರಮಂಡಿತಕುವಲಯಂಗಳು ಕಂಗಳಂ ।
ವಿಮಲಸರಸಿಜ ಮುಖದ ಸುಖತೆಯಂ ಬಿಸಕಾಂಡ ।
ಸಮತೆ ಬಾಹಾಲತೆಗಳಂ ವಳಿತ್ರಿವಳಿಗಳ ಶೈವಾಲ ರೋಮಾಳಿಯಂ ॥
ಭ್ರಮಿತಚಕ್ರಂಗಳು ಪಯೋಧರಗಳಂ ರಸೋ ।
ತ್ಕ್ರಮವು ಶೃಂಗಾರಹಾಸ್ಯಾದಿಗಳ ಸಂತತಿಯು ।
ಭ್ರಮೆಗೊಡುತಲೀ ಸರಸಿವಿರಸಮನ್ನೆಸಗುತಿರೆಯಂತುಸ್ಸೈರಿಸುವೆನಣುಗಾ ॥ (11)

ದ್ರಾವಣ ವಶೀಕರಣ ಮೋಹನಂ ಶೋಷಣಂ ।
ರಾಮರಾಜ್ಯಸ್ತ್ರಗಳ ತನ್ನೊಳಂಬಿಟ್ಟು ರತಿ ।
ದೇವಿಯರ ಸಂಗಾಸ್ಪದವ ಕೊಟ್ಟು ಬೇಡಿದುದ ಕೊಟ್ಟುಕಾರುತಗಳಂದೇ ॥
ತಾವೆನಿಸಿದೀ ಬನಂ ಕಪಟಿಯುಹೃದಯದಂತ ।
ತೀವ ಹರ್ಷವ ನೀವುದೆನುತ್ತಾಯದ್ವೈತಂದೆ ।
ಮೀವಸುಧೆ ಗರಿಯುದುಚಿತ್ರಮನುಚಿತಂ ದೈವಕೃತವಿಕೃತಿ ಬೇರಿರ್ಪುದಕಟಾ ॥ (12)

ಹರನಿಟಾಲಾಗ್ನಿಯಿಂ ಬೆಂದು ಬೇಗುದಿಯಾದ ।
ಸ್ಮರ ತರುಣಿಯರ ಮನೋಜನ್ಮನಾಗುತ ದೃಷ್ಟ ।
ಪರಿಕರದೊಳೊಡೆವೆರೆದು ಪರಮಋಷಿಮುಖ್ಯರಂ ಕೊಲುವ ಪಾತಕಿಯು ಮನವಾ ॥
ಬಿರಿಸ ಪರಪುಷ್ಟ ಮಧುಪಗಳು ಮಂದಾನಿಲಂ ।
ಪುರಿಗೂಡಿ ಶುಕಪಿಕಾಳಿಗಳ ಸಾಹಾಯಕಂ ।
ಕರದೆಮ್ಮ ನಿಷ್ಕಾರಣದಿ ಬಾಧೆಗೊಳಿಸುತಿಹವೇನೆಂಬುವಚ್ಚರಿಯನೊ ॥ (13)

ಸ್ಮರನ ಬೋಧೆಯೊಳಂ ಬಸಂತ ತರುಪಲ್ಲವಗ ।
ಳುರಿಗಳಂ ಬೆರ್ಚಿಸುತ ಕುಣಿವ ಸೋಗೆಯು ಪಕ್ಕ ।
ನಿರಿಗಣ್ಗಳಂದ ಹಲಹಲ ಮರುತನಂ ಬಿಡುತ ಮೆಲ್ಲ ಮೋಹನಗೊಳಸುತ ॥
ಕರೆವುತಿಹ ಕೋಕಿಲಾರವದಿಂದ ಮಾರ್ದವದ ।
ಲಿರಲಸತ್ವತೆಯಾಂತುದಯ್ಯ ಲಕ್ಷ್ಮಣಾ ಪೋಗೆ ।
ಧರಣೀತನುಜೆಯೆನಗೆ ಖಗಮೃಗಂಗಳು ನಗುತ ಬಗೆವರತಿಪಾತಕಗಳಾ ॥ (14)

ನಲಿಯುವ ಮಯೂರಗಳನೊಲಿಸುಬಹಕೇಕೆನಿಗ ।
ಳುಲಿವುತ್ತ ಸಾರಂಗ ಜೊತ್ತನರಸುತ ಬಪ್ಪ ।
ಚೆಲುವ ಭ್ರಮರೀಗಣವ ನೋಡು ಲಕ್ಷ್ಮಣ ಮರಾನ್ಯೋನ್ಯಾನುರಾಗಗಳನು ॥
ಪಲಬಗೆಯ ಲೀಲೆಯಿಂ ಕುಹುಕಿತ್ತು ಮುದ್ದಿಸುತ ।
ಮೊಲವಿಂದ ಸುಖಿಪ ಕೆಂಗಣ್ವಕ್ಕಿಗಳ ನೋಟ ।
ಲಲನೆಯಂ ನೆನೆದೆನ್ನ ಹೃದಯಮಿಬ್ಬಗೆಯುಪ್ಪುದೇಂಗೈವೆ ಪೇಳ್ವುದೆನಗೆ ॥ (15)

ತಳತ್ರಮಾಮರ ಪಲ್ಲವಿತವ ಕಂಕೆಲ್ಲಿಗಳು ।
ತಿಲಕಚಂಪಕಕುಂದಮಂದಾರಕುಸುಮಂಗ ।
ಳೊಳು ನಮ್ರಪಾಟಲೀಪ್ರಮುಖತರುಗಳ ಲತೆಗಳಪ್ಪಿ ಮಸ್ತಕಕಡರುವಾ ॥
ಕಳಿಯು ನಿಟ್ಟಿಸುತಲೊಂದೊಂದರೊಳು ಸಂಚರಿಸಿ ।
ಪುಳಕಮಂನಾಂತು ಮಂದಾನಿಲಂ ಚಲಿಸುತಿರೆ ।
ನಳನಮುಖಿಯಾಲಿಂಗನವ ನೆನೆದು ತೊಳಲುತಿಹುದೆಮ್ಮ ಮಾನಸ ಲಕ್ಷ್ಮಣಾ ॥ (16)

ಸೋಗೆಗಳ ನಿಟ್ಟಿಸುತ ಬರಲು ಮುಡಿದೋರುತಿದೆ ।
ಶ್ರೀಗರುವ ಬಂದೂಕ ಬಾಯಿದೆರೆಯಲುಃಸುರುತಿದೆ ।
ಕೋಗಿಲೆಯು ನುಣ್ದನಿಯು ಗಿಳಿಗಳುಂ ಸವಿನುಡಿಯು ಚಮರಿಯುಂ ಚಿಕುರಂಗಳಾ ॥
ಪೂಗ ಕಂಠವ ಮರಾಳಂ ಗತಿಯು ತೋರುತ್ತ ।
ಮಾಗಲುಂ ಪಗೆಯಾಂತು ತರುಮೃಗಂಗಳು ಕೊಂದು ।
ಕೂಗುತಿರಲಾನೆಂತು ಸೈರಿಪೆನು ಸೌಮಿತ್ರಿ ಪೊರೆವೆನೆಂತೆನ್ನಸುಗಳಾ ॥ (17)

ಕಮಲಸೌರಭದ ಮಂದಾನಿಲನು ನಿಶ್ವಾಸ ।
ಗಮಕವಂ ತೋರುತಿಹನೆರಳೆಗಳು ನಿಜನೇತ್ರ ।
ಭ್ರಮಣೆಯಿಂದಂಗನಾಥಾಳಥಳ್ಯಪ್ರಭಾಕಲಿತ ಸುಕಟಾಕ್ಷಂಗಳಾ ॥
ಕ್ರಮಗಳಂ ಸೂಚಿಸುತ ಸರ್ವರೊಮ್ಮೊತ್ತದಿಂ ।
ಭ್ರಮರಾಳಕೆಯ ನೆನಹ ಕೊಡುತಲಿರೆ ಧೈರ್ಯಮಂ ।
ತಮಮ ಪುಟ್ಟುವುದಕಟ ಕಾಯ್ವರಾರೆನ್ನನಿಂ ಪೇಳು ಸೌಮಿತ್ರಿ ದಯದಿ ॥ (18)

ಎಲ್ಲರೊಂದೆಸುತೆಡರುಗಳ ಪರಪಲ್ಮನುದ ।
ನೆಲ್ಲಿ ಬದುಕುವ ಶೋಕವಡಸಿದೆಡೆಯೊಳು ದುಃಖ ।
ದುಲ್ಲಾಸ ಪೆರ್ಚಿಬಹುದಖಿಲಪ್ರಾಣಿಗಳೆಲ್ಲ ಕೋಪಿಸುವರಾತನೊಡನೆ ॥
ಬಲ್ಲವಿಕೆಯಜ್ಞಾನಕರಮಪ್ಪುದೆಂದೊರೆವ ।
ಸೊಲ್ಲುಗಳಗಾಂ ಲಕ್ಷ್ಯಮಾದೆ ತೋರ್ಗೈ ಪ್ರಾಣ ।
ವಲ್ಲಭೆಯನಲ್ಲದಿರಲುಳಿಯದೆನ್ನಯ ಜೀವ ಕಾವಡಿದು ಸಮಯ ದೇವಾ ॥ (19)

ಕುಸುಮಗಳ ಸಂಪದವ ಪೊಸಪಲ್ಲವದ ಹದರ ।
ಬಿಸಜಗಂಧಾನಿಲನ ಸಸಿತಾರೆಗಳ ಕಲನ ।
ದೆಸಕವಂ ಕಂಡೆನ್ನನುಳಿದ ಜಾನಕಿ ತನುವ ಪೊರೆದು ಜೀವದೊಳಪ್ಪುದೊ ।
ಪುಸಿ ವಸುಮತೀಯಣುಗಿ ಪೋದಡೆನ್ನಯ ಜೀವ ।
ನಸಿಯದುಳವುದೆ ಮಗುಳೆ ವಸುಮತಿಯೊಳಿಲೆ ತನಯ ।
ಬಸವಳಿದರೇಂ ಪೋಗು ಬನವನುಳಿದುಂ ಜೀವಿಯಾಗು ದುಃಖಗಳ ನೀಗು ॥ (20)

ಪಲವು ಮಾತಿನ್ನೇನು ಲಲಿತಾಂಗಿಯಂ ಕಾಣ ।
ದುಳಿಯದೆನ್ನಯ ಪ್ರಾಣವಳಲುವದ ನೀಂ ಮಾಣು ।
ಪೊಳಲಿಗಭಿಮುಖನಾಗಿ ಪೋಗಿ ಭರತನ ಪೊರೆಗೆ ಮದ್ವಾರ್ತೆಗಳನು ಪೇಳ ॥
ಸುಲಭದಿಂ ತನುವ ಸಲಹುವದುಚಿತವೀ ದುಃಖ ।
ಕಲನೆಯನ್ನಾಂ ತನುವ ತೊರೆವುದನುಚಿತಮೆಂದು ।
ಪಲುಬುತ್ತಲಿ ಮೂರ್ಛೆಯನ್ನಾಂತ ರಾಘವನನುಪಚರಿಸಿ ಲಕ್ಷ್ಮಣ ನುಡಿದನು ॥ (21)

ಕುಧರಸಮಧೈರ್ಯ ಕುತ್ಸಿತಕಾರ್ಯಕೆಂದಿಗುಂ ।
ಬೆದರುವದೆ ಜೀಯ ಭವದೀಯ ಧೃತಿ ಮತಿ ಶಾಂತಿ ।
ಸುದತಿಯ ವಿಯೋಗ ಸೂದನಗೈವುದುಂಟೆ ಮೇಣುಂಟೆ ವಿಕ್ರಮಸಾಟಿಯು ।
ಉದಿತಾನುರಾಗದಿಂದಾದುದೀ ವಿಧರೋಗ ।
ಮಿದಕೆಲ್ಲಿ ಪೋದರುಂ ಕಡೆಗೊಳಸದಿರಲು ತ ।
ನ್ನುದರಗತರೋಗಕಂ ಮೇಲೌಷಧಿಯು ತೊಡೆಯಲಾರೋಗ್ಯಮಪ್ಪುದೆನುತಾ ॥ (22)

ಎಲ್ಲಿ ಪೋದಗು ಚಿಂತೆ ಪೊಲ್ಲಲಾಲಿಪುದೆನ್ನ ।
ಸೊಲ್ಲ ಧೃತಿಯುಂ ತರಲು ಪೋಪುವಶುಭಗಳೆಲ್ಲ ।
ಮೆಲ್ಲನೆ ವಿವೇಕವಂ ಮೋಣ್ವನಿಸುವಂತೆಸಗಿ ಮುಂದಪ್ಪ ಕಾರ್ಯದೆಸಕಾ ॥
ಯೆಲ್ಲಮಂ ಯೋಚಿಸಿದಡುಲ್ಲಾಸ ಸಂಭವಿಪು ।
ದಲ್ಲಲ್ಲಿ ಶುಭತತಿಗಳೆಸದಪವು ಕೆಂಗಳಗೆ ।
ಬಲ್ಲಹರ ಬಲ್ಲಹಂ ದೇವ ನೀಂ ಸರ್ವಜ್ಞಗಜ್ಞನೇಂ ಬಿನ್ನವಿಪ್ಪುದು ॥ (23)

ಕಾಮವೃತ್ತಿಯು ಪಿಡಿಯೆ ಕೆಡುವುದೆಲ್ಲಂ ತಪೋ ।
ನೇಮಾದಿಗಳು ಪೋಪುವೈಸೆ ಬೃಂದಾಕಾಪ ।
ತಾಮಸವನುಳಿದು ನೆನೆಯಾತ್ಮನಿಂದಾತ್ಮನಂ ತಳೆದಂ ಪರಾತ್ಮತೆಯನು ।
ಕೋಮಲಾಂತಃಕರಣದಿಂ ನೋಡೆ ನಿಮಗೆ ಭೂ ।
ವ್ಯೋಮಪಾತಾಳದೊಳಗೇನಸಾಧ್ಯಂ ಸುರ ।
ಸ್ತೋಮನುತ ಶೋಕವಂ ಪಂದಿಟ್ಟು ಮುಂದಪ್ಪ ಕಾರ್ಯಮಂ ಪೇಳ್ವುದನಘಾ ॥ (24)

ವೀರವಿಕ್ರಮವಿಜಯರೆಂದಾಗೆ ದೈನ್ಯದಲ ।
ಪಾರಚಿಂತೆಯೊಳು ಬಾಯಾರುವರೆ ದೇವ ನೀಂ ।
ಶೂರಾಗ್ರಗಣ್ಯ ರಾಜನ್ಯ ಗೋತ್ರವರೇಣ್ಯ ಶೋಕಮೆನಲೇನು ನಿನಗೆ ॥
ಧಾರಿಣೀಸುತೆಯನೊಯಿದಿರ್ಪ ಖಳನಂ ತಿಳಿಯೆ ।
ಸೂರಿಯನ ಸುತನೆಡೆಗೆ ಪೋಗಿ ಕರೆತಂದು ಚರ ।
ಣಾರವಿಂದದೊಳಡುವೆನಿದಕೆ ಚಿಂತಿಸಲೇಕೆ ಬಡಿವೆ ರಕ್ಕಸಕುಲವನು ॥ (25)

ಪೇಳದನಿತೂಳಗವ ಮಕುಟಾಗ್ರಸೀಮೆಯೊಳು ।
ತಾಳ ಸೇವನೆ ಗೈವದಲ್ಲದುಳಿದುವ ಪೇಳ್ವ ।
ರಾಳಲ್ಲವಾದರುಂ ಸಮಯದೊಳು ವಾಗ್ರೂಪಮೆನಿಪ ಸೇವೆಯೆನುತ್ತಲೀ ॥
ಖೂಳಬುದ್ಧಿಯೊಳನಿತ ಪದಕೆ ಬಿನ್ನವಿಸಿದೆ ದ ।
ಯಾಳುವೆನ್ನಪರಾಧಮೇನಿರ್ದಡಂ ಕ್ಷಮಿಸಿ ।
ಕಾಳರಕ್ಕಸಗನುವ ಚಿಂತಿಸಲ್ವೇಳ್ಕೆನುತಮೆರಗಿ ಕರಗಳ ಮುಗಿದನು ॥ (26)

ಚಿಕ್ಕವನದಾಗಿರಲಿ ಪಕ್ಕಿಯಾಗಲ್ ಶುಭವ ।
ಮುಕ್ಕುಳಪ ಯುಕ್ತಿಯುಕ್ತದ ಭಾಷೆಯಂ ಗ್ರಹಿಸ ।
ಲಕ್ಕುಮೆಂಬತಿನೀತಿಗಾಧಾರಭೂತ ನೀ ರಘುನಾಥನಲ್ತೆ ಜಗದಿ ।
ಅಕ್ಕರಿಂದನುಜ ಬಿನ್ನವಿಸಿದರ್ಥಮಂ ಕೇಳ ।
ತಕ್ಕುದೆಂದರಿತು ಸಂತಸದಿಂದ ಶೋಕಮ ।
ನ್ನಿಕ್ಕಡಿಯುಮಾಡಿ ನಸುನಗೆಯಿಂದ ಲಕ್ಷ್ಮಣನ ನೋಡಿ ಮತ್ತಿಂತೆಂದನೂ ॥ (27)

ಸಿರಿಯನುಂ ಬರೆ ಬಂದು ನೆರದಪರನೇಕಜನ ।
ತರಳಸತಿಸೋದರಾದಿಗಳೆಲ್ಲ ಸಂಕಟದಿ ।
ಬೆರದನೊಡನಿರದೈದಿ ಸ್ವಪ್ರಾಣಧಾರಣಗಳೆಸಗುವರು ಧರಣಿಯೊಳಗೆ ।
ನಿರತ ಬಹುವತ್ಸರಂಗಳ ಕಷ್ಟಮಾದಡಂ ।
ಪರಿಕಿಸಲು ಪದಚಲನೆಗೈಯದೆಮ್ಮನುಸರಣೆ ।
ವೆರೆದು ಸಂತಸಗೊಳಪ ಸುದ್ಗುಣಂಗಳ ಕಣಿಯೆ ಸಾಧುಗಳ ಮಕುಟಮಣಿಯೆ ॥
(28)

ನಿನಗೆಣೆಯದಾರುಂಟು ಪೇಳ್ದ ನುಡಿ ಶುಭಕರಗ।
ಳೆನುತ ಸಂತಸದಿಂದ ತೆಗೆದಪ್ಪಿ ಸೌಮಿತ್ರಿ।
ಯನು ಹರುಷಗೊಳಿಸಿದಂ ಸರ್ವಜ್ಞತೆಯದೆಂತೊ ರಘುಕುಲಾನ್ವಯದೀಪನಾ॥
ತನಯ ಕೇಳಂದಧಿಕ ವಿನಯವಚಾಧುರ್ಯಕರ
ದನುಮಾಂತ ವಾಣಿಯಂ ಮಾರುತ್ತರಂಗೊಟ್ಟ।
ನನಿಮಿಷರ ಪೊರೆವ ದೇವಂ ಭಕ್ತ ಸಂಜೀವ ಪೊದ್ದಿದರನುಂ ಕಾಯ್ವನು। (29)
ಶ್ರೀಮಂತ ನೀಪೇಳ್ದ ನುಡಿ ಸತ್ಯಮದರಿಂದ।
ತಾಮಸದಮತಿ ಪೋದುದಾದುದುತ್ಸಹವೆಮಗೆ।
ತಾಮರಸನೇತ್ರಯಂ ಕಾಣ್ಬ ಕಜ್ಜಕೆ ಸೂರ್ಯತನಯನಿಹ ತಾಣಕೈದಿ॥
ಸಾಮಂತ್ರಸಂಧಾನಗೈದು ಮನಮಂ ಹರ್ಷ।
ಸಾಮರಸ್ಯಂಗೈದು ಸತ್ವರದಿ ಪೊರೆಯೆನುತ
ರಾಮಪುರದರಸನಾಜ್ಞಾಪಿಸಿದ ನಾನಂದಸಂದೋಹ ಮುಂದುವರಿಯೆ॥ (30)

ಪ್ರಥಮ ಸಂಧಿ ಸಮಾಪ್ತಂ.

ಎರಡನೆಯ ಸಂಧಿ.

ಸೂಚನೆ॥ ತರಣಿಸುತನನುಮತದೊಳೈತಂದು ರಾಘವನ।
ಸಿರಿಚರಣಗಳ ಕಂಡು ರಿಷ್ಯಮೂಕಾಚಲಕೆ।
ಕರದೊಯ್ದು ಸುಗ್ರೀವಗೆಚ್ಚರಿಸಿದಂ ಪ್ರೀತಿಯಿಂದೆ ಮಾರುತಾತ್ಮಭವನು॥

ಗಿರಿರಾಜಸುತೆ ಕೇಳು ರಾಮಚಂದ್ರಂ ಪ್ರಿಯದಿ।
ಚರಿಸುತಿರೆ ಪಂಪಾಸರೋವರದ ತೀರದೊಳ್।
ಶರಚಾಪಹಸ್ತರಂ ಸೂರ್ಯಾಗ್ನಿನಿಭತೇಜರಿರ್ವರಂ ಕಂಡು ಭಯದಿ...
ಹರಿಕುಲಾಧಿಪ ವಾಯುವೇಗದಿಂ ಮಂತ್ರಿಗಳ।
ಬೆರೆದು ಬೆಗಿಬ್ಬಿಗಿದು ನಗನಗವಗ್ರಗಳನಡರಿ।
ಹರಿಸುತನ ಭಯದಿಂದ ಮಲಯಾಚಲವ ಸಾರ್ದು ಮುಂಗಾಣದೊಂದೆಣಿಸದೆ॥ (1)
ತಿರಿತಿರಿಗಿ ನೋಡುತ್ತ ಚೀರಿ ಪಲ್ಗಳ ಕಿರಿದು।
ಭರದಿ ವಾಲಧಿಯೆತ್ತಿ ಬಾಯಿಬಿಟ್ಟು ಮರನೇರಿ।
ಮರಳೆ ನೆಲದೊಳ್ಕೆಡೆದು ಮತ್ತೆ ಕಂಗಳ ತೆರೆದು ನಾಲ್ದೆಸೆಯ ನೋಡಿ ಚೀರ್ದು॥
ತ್ವರಿತದಿಂದಂಗಂಡಶೈಲಗಳ ಕುಪ್ಪಳಿಸಿ।
ಕರಿಸಿಂಹ ಶಾರ್ದೂಲ ಖಗಮೃಗಂಗಳನೆಲ್ಲ।
ತರುಬುತ್ತ ಕಪಿವೀರರೈದಿ ಮಲಯಾಚಲದೊಳೊಂದಡೆಯ ನಿಂದರೊಲಿದು॥ (2)
ಮೊದಲೆಮ್ಮನೀ ಪರಿಯ ಮುನಿದು ಬನದೆಡೆಗಟ್ಟಿ।
ಸುದತಿಯಂ ಸೆಳೆದು ಶುಭತತಿಗಳೆಲ್ಲವ ಮೆಟ್ಟಿ।
ಹೃದಯದುಮ್ಮಳ ಸವೆಯದತಿಮತ್ಸರಂ ಪುಟ್ಟಿ ತನುಗಳಂ ಕುಟ್ಟಿಕಡಿವೆ॥
ಬದಲಿಸುತ ವೇಷಮಂ ಬಂದ ಕುಲದ್ವೇಷದಿಂ।
ಸದೆಯಲೈತಂದಿರ್ಪ ವಾಲಿಯಲ್ಲದೆ ಪೆರರು।
ಪದವಿಡುವರೆಂತಿಲ್ಲಿ ಪವನಸುತ ನೋಡೆಂದು ದುರ್ದೆಸೆಯನೆನುತಳಲಿದಂ॥ (3)

ಪರರ ಸಾಧಿಸುವ ದುರ್ಜೀವಿಗಾಯುಷ್ಯಬಲ ।
ವರರೆ ಪೆರ್ಚುವದು ಸರಸಿಜಭವನ ಸಾಮರ್ಥ್ಯ ।
ಕರಣೀಯವಲ್ಲದೀ ವಾಲಿಯೆಸಗಿದ ಪಾಪಭರದಿಂದ ಉಳಿವನೆಂತು ॥
ಅರಿತು ಧರ್ಮಂಗಳಾಚರಣೆಗೈಯುವ ಜನರಿ ।
ಗಿರದೆ ದುರ್ದಶೆ ಯಳಿವುದೆನುತ ಹರಿವರ ಮರುಗು ।
ತಿರೆ ಕಂಡು ಮರುತಜಂ ಮಾವನೊಡನಿಂತೆಂದ ಮಾನಸೋಲ್ಲಾಸದಿಂದ ॥ (4)

ಈ ತಪೋವನವ ಪೊಗಲಮ್ಮನೆಂದಿಗು ವಾಲಿ ।
ಕಾತರಿಸಿ ಕಳವಳಸಿ ಕಡುಭಯದಲೈತಂದ ।
ಮಾತಿಗುತ್ತರವುಂಟೆ ಮಾವ ಲಾಲಿಸು ಧೈರ್ಯವಿಡಿಯೆ ಸರ್ವಾರ್ಥಸಿದ್ಧಿ ॥
ಜಾತಮಾದಪುದೆಂದು ಮಾರುತೋದ್ಭವ ಪೇಳ್ದ ।
ನೀತಿಗಂ ಸಂತಸದಿ ಮಗುಳಿಂದ ದಿನಪಸಂ ।
ಭೂತ ಧೀಮಂತರೊಳು ಧೊರೆ ಸಕಲಸೌಖ್ಯಗಳದಾತಾರನಹುದೆನ್ನುತ ॥ (5)

ಅರಿತರಿಯದಾವಿಲ್ಲ ಪರಿಯಂತ ಸಂಕಟದಿ ।
ಬಿರುವದಾದುದು ತಾತ ಜಾತಾನುರಾಗದಿಂ ।
ಪರಿಹರಿಸುತೆಡರುಗಳ ಭಯರಸದ ತೊಡರುಗಳ ತತ್ತತ್ಪ್ರತೀಕಾರಮಂ ।
ವಿರಚಿಪುದುಪಾಯಮಂ ಶತ್ರುಗಳಪಾಯಮಂ ।
ತರಿಯುವೇಳ್ಕೆಂದೆನುತ ಸುಗ್ರೀವ ಮಾಧುರ್ಯ ।
ತರನುಡಿಗಳಿಂದಮುಪಚರಿಸೆ ಮಾರುತಿ ನುಡಿದನಾ ವಿಭಾಕರತನಯಗೆ ॥ (6)

ನಿಗಮಾಗಮಂಗಳಧ್ಯಯನಮಾಗಲ್ಕತ್ತೆ ।
ಖಗನ ಚರಣಕೆ ನಮಿಸಿ ಗುರುದಕ್ಷಿಣೆಗೆ ಚಿತ್ತ ।
ಸೊಗಸಿದುದು ಬೇಡಲೊಪ್ಪಗಿಸಿ ಕೃತಕೃತ್ಯನಹೆನೆನುತ ವಿಜ್ಞಾಪಿಸಿದರೆ ॥
ನಗುತಮಾಜ್ಞಾಪಿಸಿದ ನೀನು ಸಂತತವೆನ್ನ ।
ಮಗನೆಡೆಯಲಿರ್ಪುದೆನಲೊಪ್ಪಿ ಪದಕೆರಗಿದಡೆ ।
ಪಗಲಾಣ್ಮ ಹರುಷದಿಂ ಪರಸಿ ಕಳುಪಿದನೆನ್ನ ದಯದಿಂ ಭವನ್ನಿಕಟಕೆ ॥ (7)

ಗುರುವಚನಗೌರವದಿ ಬಂದಾನು ಭವದೀಯ ।
ಪೊರೆಯಲೊಪ್ಪಿದೆ ಮತ್ತೆ ಮಜ್ಜನನಿ ನಿಮ್ಮ ಸೋ ।
ದರಿಯಾದ ಕತದಿಂದ ಗುರುವಿಗತಿಶಯಮಾದ ಪಿತ್ರವು ಸಂಜನಿಸಿತೆನಗೆ ॥
ಹರಿಕುಲಾಧಿಪ ಚಿಂತೆ ಯಾತಕೆನ್ನಿಂವಪ್ಪ ।
ದರುಹಿದಡೆ ಮರೆಯುಳ್ಳ ತೆರದಿ ರಚಿಸುವೆನೆಂದು ।
ಮಾರುತಾತ್ಮಜಪೇಳ್ ತರಣಿಸುತನಿಂತೆಂದು ಬಿತ್ತರಿಸಿದಂ ಪ್ರಿಯದೊಳು ॥ (8)

ಕಪಿಯವೇಷವನುಳಿದು ತಪಸಿಯಾಕೃತಿದಳೆದು ।
ಗುಪಿತದಿಂ ನೀನೈದಿ ಪಂಪಾಸರತ್ತಟದಿ ।
ಸಪದಿ ಸಂಚರಿಪ ತಾಪಸರ ಪರಿಯಂ ತಿಳಿದು ಸಾಧ್ವಸಾಧುತೆಗಳರಿದು ॥
ಕಪಟವಿಲ್ಲದೆ ನೈಜಮಾಗಿ ತೋರಿದರೆ ನಮ ।
ಗುಪಕಾರಗೈವ ಸಾಹಸವು ಕಾಣ್ಪಷ್ಟರಾ ।
ನೃಪತಿಗಭಿಮತವನೆಚ್ಚರಿಸಿ ನೇಹವ ಬಳಸಿ ಮಗುಳ್ ನೀ ನೈತಪ್ಪುದು ॥ (9)

ಕ್ರೂರಕಲ್ಮಷರಾದರವರಿಗೆ ನಿಜಾಕೃತಿಯು ।
ತೋರದಲ್ಲದುರ್ಗ ಕೈಸನ್ನೆಗೈದರೆ ಮರೆಯು ।
ಸಾರುವೆನೆನುತ್ತ ಸುಗ್ರೀವ ಪೇಳದ ಪರಿಯನವಧರಿಸಿ ಪ್ರೇಮದಿಂದ ॥
ಮಾರುತಾತ್ಮಜ ಗಿರಿಯನುಳಿದು ವಟುರೂಪ ಸಂ ।
ಧಾರಣಂಗೈದು ಫಲಪುಷ್ಪತುಳಸೀದಳಗ ।
ಳಾರೈವನಂದದಿಂದೈತಂದ ಶ್ರೀರಾಮಲಕ್ಷ್ಮಣರ್ ಚಲಿಸುವೆಡೆಗೆ ॥ (10)

ಧರಿಸಿರುವ ವಲ್ಕಲಾಂಬರದಿಂದ ಮಸ್ತಕದಿ ।
ತುರುಗುವ ಸಟಾಭಾರದಿಂದುಭಯಕರಗಳೊಳ್ ।
ಮೆರೆವ ಶರಚಾಪಗಳಿಂದ ಶುಭಲಕ್ಷಣಾನ್ವಿತದೇಹಭಾಸದಿಂದೆ ॥
ಹರುಷದಿಂ ಸೌಮಿತ್ರಿ ಸೇವಿಸುತ್ತ ಕೆಲದಲೊ ।
ಪ್ಪಿರುವ ರಾಘವನ ಸನ್ಮೂರ್ತಿಯಂ ಕಾಣುತ್ತೆ ।
ಪರಬೊಮ್ಮನೆಂದರಿದು ಹರುಷಿಸಿದ ಮಾರುತಿಯ ಜ್ಞಾನಬಲಮಿನ್ನೆಂತುಟೋ ॥ (11

ಕಂಡಮಂದಾಧಿಕ್ಯಹರುಷದಿಂ ಮಾರುತಿಯು ।
ಖಂಡತೇಜೋರಾಶಿಯೆನುತರಿತು ಪ್ರೀತಿ ಮಂ ।
ಕೊಂಡು ಮನದಿಷ್ಟಾರ್ಥಪ್ರೌಢಗೂಡಿತೆಂದೆನುತ ಮೆಲ್ಲನಲ್ಲಲ್ಲಿನಿಲುತಾ ॥
ಪುಂಡರೀಕಾಯತೇಕ್ಷನ ಪೊರೆಗೆ ನಡೆತಂದು ।
ಗಂಡುಗಲಿಗಳ ನೋಡಿ ಮಾನಸದ ಸಂತಸದಿ ।
ಮಂಡೆಯನ್ನೊಲದೊಲದು ಮೂದಲಿಸಲನುಗೈಯೆ ಮೃದುಮಧುರವಾಣಿಯಿಂದ ॥

ಹರಿಗರಸಿಜಾಸನರೊ, ಸುರಪಸುತಮನ್ಮಥರೊ । (12)
ತರಣಿಶಶಿಗಳೊ ಸುರೇಂದ್ರಾಪ್ತವೈದ್ಯರೊ ಮೇಣು ।
ವರುಣಮರುತರೊ ಚೈತ್ರ ವೈಶ್ರವಣನಂದನರೊ ಮಾನುಷಾಕಾರವಿಡಿದು ॥
ಶರಚಾಪಗಳ್ಪಿಡಿದು ಮುನಿವೇಷಗಳ ತಳೆದು ।
ಕರುಣಾರಸಂ ಶಾಂತಿಯಾಕೃತಿಗಳಂ ತಳೆದು ।
ಧರಣಿಯಂ ಪೊರೆಯಲೈತಂದ ಮಾಳ್ಕೆಯೊಳೆನಗೆ ತೋರುತಿದೆ ನೃಪತಿಗಳಿರಾ ॥ (13)

ಶ್ರೀಮಂತರತಿರೂಪಸಂಪನ್ನರಮಿತ ಸು ।
ಪ್ರೇಮ ವಿಶ್ರಾಂತಗಾಮಿಗಳು ಚತುರಾಬ್ಧಿಯಂ ।
ತೀ ಮಹಿಯನಾಳ್ವ ಲಕ್ಷಣಸುಲಕ್ಷಿತಪದ್ಮನೇತ್ರರತಿಶೂರರೆನಿಸಿ ॥
ವ್ಯೋಮಚಿಕುರವ ಚಾಪನಿಭ ಚಾಪಗಳನಾಂತು ।
ಭೂಮಿಯಿಂದಾಗಸವನಿಳುಹುವ ಪರಾಕ್ರಮಿಗ ।
ಳೀಮಹಿಗದೃಷ್ಟಪೂರ್ವದಿ ಬಂದಿರೆಂದೆನಗೆ ತೋರುತಿಹುದಚ್ಚರಿಯನು ॥ (14)

ಸಕಲಾಂಗಸೌಂದರ್ಯಮಕಳಂಕತರ ಶೌರ್ಯ ।
ನಿಖಿಲಲೋಕವನಾಳುವೌದಾರ್ಯಗಾಂಭೀರ್ಯ ।
ಶಕುತಿಯುಕುತಿಗಳಿಂದಲೆಸದಿಹ ಮಹಾರಾಜಲಕ್ಷಣಗಳಾಂತೊಪ್ಪುವಾ ॥
ಸುಕುಮಾರಶರೀರ ಸುಗುಣಭದ್ರಾಕಾರ ।
ರಕುಟಿಲಮಹೋತ್ಸಾಹಮನ್ಯೋನ್ಯ ಸಮದೇಹ ।
ಪ್ರಕಟವಿಕ್ರಮರು ನೀವಾರದೇಂಕಾರಣದೊಳೀವನಕೆ ಬರ್ಪುದಾಯ್ತು ॥ (16)

ಧರೆಯೊಳು ಭವತ್ಸದೃಶರಿಲ್ಲ ಲಕುಮಿಯನಲ್ಲ ।
ಸರಸಿಜೋದ್ಭವರೆನಿಸಿ ತೋರುತಿದೆಯಾಕೃತಿಯು ।
ಪರಮಮಂಗಳಭರಿತವಾಗಿ ಕಂಗೊಳಸುತಿದೆ ಭಕ್ತಿ ಮುಂಬರಿವುತಿದೆಕೋ ॥
ಪರಿಪೂರ್ಣರೂಪ ನೀವರಿಯದುದದೇನಿಹುದು ।
ಧರೆಯಲಖಿಲಪ್ರಾಣಿಗಳು ಬುದ್ಧಿಸಾಕ್ಷಿಯೆಂ ।
ದರಿವುತಿದೆ ಮನವೆಂದು ಕಪಟವಟುಕೇಳ್ವುದಂ ಕಾಣುತಚ್ಚರಿಯಿಂದಲಿ ॥ (16)

ರಾಮಲಕ್ಷ್ಮಣರು ಮೊಗಮೊಗಗಳಂ ನೋಡುತ್ತ ।
ಪ್ರೇಮದಿಂ ನಸುನಗುತಲಿರೆ ಮಾರುತ್ಸಂಭೂತ ।
ನಾ ಮಹಿಮರೊಡನೆಂದ ದೇವರಾಲಿಪ್ಪುದೆನ್ನಪರಿಯ ಬಿತ್ತರಿಪೆ ನಯದಿ ॥
ತಾಮರಸಮಿತ್ರನಂದನನ ಸಚಿವ ನಾಂ ಮ ।
ತ್ತೀ ಮಹಾದ್ರಿಯೊಳಿರ್ಪ ಭವದಾಗಮವ ಕಂಡು ।
ನೇಮಿಸಿದರಾಂ ಬಂದು ಕಂಡೆನು ಭವಚ್ಚರಣಪುಂಡರೀಕಂಗಳನ್ನು ॥ (17)

ವಂಚನಾಪರನಲ್ಲ ಭವದೀಯ ಕೃಪೆಯಿಂದ ।
ಕಿಂಚಿತಿರ್ಪುದು ಬುದ್ಧಿಯರಿತಿರ್ಪೆ ನಿಖಿಲಪ್ರ ।
ಪಂಚಾಧಿಪತಿಯೆನುತಮದಕೆಸಂದೆಗವಿಲ್ಲ ದಯದಿಂದ ವೃತ್ತಾಂತವಂ ॥
ಚಂಚಲಿಸದುಸುರವೇಳ್ಕೆನುತಲಿಂಗಿತವರಿತು ।
ಮುಂಚಿಸುವ ಯುಕುತಿಗಳ ಪೆರ್ಚಿಗೆಯ ಕಂಡು ರೋ ।
ಮಾಂಚಿತದಿ ರಘುವೀರ ಲಕ್ಷ್ಮಣನೊಳಂತೆಂದನಮಿತದಾಶ್ಚರ್ಯದಿಂದ ॥ (18)

ಎನಿತು ನಿಗಮಂಗಳೋದಿರ್ಪನಿವಶಾಸ್ತ್ರಗಳ ।
ನೆನಿಸನಧ್ಯಯನಗೈದಿರ್ಪ ಜಗತೀತಳದೊ ।
ಳೆನಿತು ಮಾತುಗಳುಂಟವೆಲ್ಲಮಂ ತಿಳಿದಿರ್ಪ ಸರ್ವದರ್ಶಿಯೆನುತ್ತಲಿ ॥
ಮನಕೆ ತೋರುತ್ತಲಿದೆ ಸೌಮಿತ್ರಿ ನಾವುಕಂಡ ।
ಜನರೊಳೀಪರಿಯ ಸರ್ವಜ್ಞನಂ ನೋಡಿಲ್ಲ ।
ಮಿನಿತು ಸದ್ಗುಣಶಾಲಿ ಸಚಿವನಾಗಿರಲೀತನಧಿನಾಥನೆಂತಿರ್ಪನೋ ॥ (19)

ತ್ವರಿತಸಂದಿಗ್ಧವಿಸ್ವರವೆಂಬ ದೋಷಗಳ ।
ಪರಿದುರಸ್ಥಲಕಂಠಮೂರ್ಧ್ವಾನಗಳ ಪೊಂದಿ ।
ಸುರಿವ ವರ್ಣಗಳಂದ ಮಧ್ಯಮಸ್ವರವಿಡಿದು ಸಂಸ್ಕೃತಸುವಾಣಿಯಿಂದ ॥
ಬೆರಗುಗೊಳಸುವ ಪೆರರಚಿತ್ತವೃತ್ತಿಯೊಳಿರ್ಪ ।
ಪರಿಗಳೆಲ್ಲವತಿಳಿದು ಸೂಚಿಸುವನಿವ ನೋಡೆ ।
ಪರಮಸುಜ್ಞಾನವಿಗ್ರಹವಲ್ಲದೀ ಧರಾತಳದಿ ಸಾಮಾನ್ಯನಲ್ಲ ॥ (20)

ಇಂತಪ್ಪ ಮಿತ್ರನಂ ಸಂಗ್ರಹಿಸಿ ಪೊರೆದ ಭೂ ।
ಕಾಂತಂಗೆ ಮನದ ಬಯಕೆಗಳು ಕೈಸಾರುವದ ।
ಕಂತರವದೇನಿಹುದು ಮುಂದರಿತು ಮತ್ತೀತನೊಡನೆ ಮಾತಾಡೆನುತಲಿ ॥
ಸಂತಸದಿ ರಾಘವಂ ಬೆಸಸೆ ಲಕ್ಷ್ಮಣ ನಗುತ ।
ಮಂತರಂಗದಿ ಬಾಹ್ಯಜನರರಿಯದಂದದಿಂ ।
ಮುಂತಪ್ಪ ಕಜ್ಜಗಳ ಕೇಳಲುಜ್ಜುಗಗೊಂಡ ಚಿತ್ತದಾನಂದದಿಂದ ॥ (21)

ಪಂಡಿತಾಗ್ರಣಿ ಭವದ್ಗುಣಗಣಗಳೆಲ್ಲಮುಂ ।
ದ್ದಂಡತರವಾಗೆಮಗೆ ತಿಳದುದಾವ್ರುಬಂದು ಮಾ ।
ರ್ತಾಂಡತನಯನ ಕಾಂಚಿವೆಂಬುಜ್ಜುಗದೊಳಲ್ಲಿಗೈತಂದೆವೆಂದರಿವ್ರುದು ॥
ಗಂಡುಗಲಿ ರವಿತನಯು ನೋಡಿ ಪ್ರಿಯದಿ ಹರ್ಷ ।
ಗೊಂಡು ನಿನ್ನಂ ಕಳುಪಲಾದುದುತ್ತ್ರಮುಮವನ ।
ಕಂಡಪೆವೆನುತ್ತ ಸೌಮಿತ್ರಿ ಸೂಚಿಸೆ ಪ್ರೀತಿಗೊಂಡ ಪವಮಾನಾತ್ಮಭವನು ॥ (22)

ಕುವಲಯಾಧಿಪನನುಜನೊರೆದ ಶುಭವಾಣಿಗಂ ।
ಪವನಜಂ ಸಂತಸಂಗೊಂಡು ಸುಗ್ರೀವಂಗೆ ।
ತವಕದಿಂದೊದಗಿದುದು ಯೋಚಿಸಿದ ಕಾರ್ಯಮಿನ್ನೆಂತುಟೊ ಕೃತಪುಣ್ಯವ್ರು ॥
ಶಿವನ ಕೃಪೆಯಿಂ ಬಂದ ಕಾರ್ಯಕ್ಕೈಗೂಡಿತೆಂ ।
ದವಿರಳಾನಂದದಿಂ ಮುಗುಳೆ ಸೌಮಿತ್ರಿಯೊಳು ।
ನವಸುಧಾರಸಕಲಿತ ವಾಣಿಯಿಂ ಮೂದಲಿಸಲನುಗೈದನತಿಶಯಮೆನೆ ॥ (23)

ದೊರೆತನದ ಮೋಡಿಯಂ ಪರಿದು ಭೂಷಾಂಬರವ ।
ಧರಿಸುವದನುಳದು ಪವಗಮನದಿಂದೀ ಬನಕೆ ।
ಬರಲದೇಂ ಕಾರಣಂ ಭವದೀಯನಾಮಮುಂ ತಿಳುಪಿದೊಡೆ ಸಂಭ್ರಮದೊಳು ॥
ಚರಣಕಾನತನಪ್ಪೆನೆನುತ ಮಾರುತಿ ಕೇಳೆ ।
ಲರಿತು ರಘುವೀರನಪ್ಪಣೆಯಿಂದ ವೃತ್ತಾಂತ ।
ದಿರವ ಬಿತ್ತರಿಸಿದಂ ಸೌಮಿತ್ರಿ ನಿಜಮನೋಲ್ಲಾಸವೆರ್ಚಿಗೆಯಿಂದಲಿ ॥ (24)

ವಾಸವನಮಿತ್ರ ದಶರಥಮಹಾರಾಜ ನಿಜ ।
ವಾಸಿಯಿಂದಖಿಲಲೋಕವಪೊರೆದು ಸರ್ವಗುಣ ।
ರಾಸಿಯೆಂದೆನಿಸಿ ತಂದೆಯು ತಂದೆಯುಂದದಿಂ ಲೋಕವಿಶ್ರುತ ಕೀರ್ತಿಯಿಂ ॥
ಭೂಸುರಸುರಾಸುರಪ್ರಕರ ಪೊಗಳುತ್ತಲಿರೆ ।
ವಾಸವೋಪಮಿತದಿಂ ಕೋಸಲದಿ ಸುಖಮಿರ್ದು ।
ಭಾಸುರ ಶ್ರೀನೃಪತಿಯಾತ್ಮಭವರೆಂದರಿವ್ರುದೆಮ್ಮನಂ ನೀವೆಂದನು ॥ (25)

ಜನಿಸಿದೆವ್ರು ತನ್ನೃಪಗೆ ನಾಲ್ವರು ಕುಮಾರಕರ್ ।
ಘನನೀಲಸಂಕಾಶನೀ ರಾಮನಗ್ರಭವ ।
ನನುಜಾತರೀತಗಾಂ ಭರತ ಶತ್ರುಘ್ನರಿರಲೊಂದಾಗಿ ಹರುಷದಿಂದಾ ॥
ಜನಪನರ್ಧಾಂಗಿ ಕೈಕೇತರುಣಿ ಪೂರ್ವದೊಳೆ ।
ಗನಿಮಿಷಾಸುರಯುದ್ಧದಲ್ಲಿ ಪತಿಯಿಂ ಪಡೆದ ।
ಳನುವಾದ ವರವೆರಡನದರಿಂದೆ ಯಾಚಿಸಿದಳರಸನೋಳ್ಕಾಲವಶದಿಂ ॥ (26)

ಭರತನಂ ಯುವರಾಜಪದವಿಯೊಳ್ನಿಲಿಸಿ ಕರ ।
ತರವಾದ ದಂಡಕಾರಣ್ಯದೊಳ್ ಪದಿನಾಲ್ಕು ।
ವರುಷಮಿ ರಾಮನಿರಲೆಂದು ನೇಮಿಪುದೆಂದ ವಾಣಿಯಂ ಕೇಳೆ ನೃಪನು ॥
ಪರವಶಂ ತಾನಾಗೆ ಕಾಣುತಂ ರಘುವರಂ ।
ಗುರುವಚನಕೆಂತಧಿಕಮಿಲ್ಲೆನುತನುಜ್ಞೆಯಂ ।
ಶಿರದೊಳಾಂತೈದುತಿರೆ ತತ್ಕಾಂತೆ ಪತಿಯೊಡನೆ ಬಂದಳತಿಭಕ್ತಿಯಿಂದ ॥ (27)

ತಂದೆಗಿಮ್ಮಡಿಯಗ್ರಭವನೆಂದು ತತ್ಪದರ ।
ವಿಂದಮಂ ಸೇವಿಸುತ ಕೃತಕೃತ್ಯ ಸಪ್ಪರ್ಯೆ ।
ತಂದೆನೀ ಶ್ರೀರಾಮನೊಡನೆ ಗುಹನಿಹ ಶೃಂಗಿವೇರಪುರಕಂ ಭರದೊಳು ॥
ಮಂದಾಕಿನೀನದಿಯನುರೆ ದಾಂಟಿ ಗುಹನಿಂದೆ ।
ಬಂದುಂ ಭರದ್ವಾಜಮುನಿಪನಂ ಕಂಡುಮಾ ।
ನಂದದೊಳ್ ಚಿತ್ರಕೂಟಾದ್ರಿಗಂ ನಡೆತಂದು ಪರ್ಣಮಂದಿರದೊಳರಲು ॥ (28)

ತಾತನೀ ದುಃಖದಿಂದಮರೇಶನೆಡೆಗೈದೆ ।
ಮಾತುಳನ ಪುರದಿಂದ ಬಂದು ಭರತಂ ತನ್ನ ।
ಮಾತೆಯಂ ಧಿಕ್ಕರಿಸಿ ಪಿತೃ ಕೃತ್ಯಮಂ ರಚಿಸಿ ನಿಜಜನಂ ಸಹಿತ ಭರದಿ ॥
ವೀತ ಕಲ್ಮಷನಾಗೆ ನಡೆತಂದು ಕಂಡು ರಘು ।
ನಾಥನ ಪದಾಬ್ಜಮಂ ತತ್ಪಾದುಕೆಯ ಶಿರದೊ ।
ಳಾಂತು ಕೊಂಡೈದಿದಂ ಮರಳಿ ಸಾಕೇತಪುರದತ್ತಲಿತ್ತ ಬಳಿಕ ॥ (29)

ಚಿತ್ರಕೂಟಾದ್ರಿಯಿಂದೈತಂದು ವೇಗದಿಂ ।
ದತ್ರಿಯಾಶ್ರಮಕೈದಿ ತನ್ಮುನಿಪನಂ ಕಂಡು ।
ರಾತ್ರಿಂಚರಾಧಮ ವಿರಾಧನಂ ಸಂಹರಿಸಿ ಪೂರ್ವಪದವಂ ಕರುಣಿಸಿ ।
ಮಿತ್ರಸಂಕಾಶ ಶರಭಂಗಮುನಿಗಂ ಮಣಿದು ।
ಮೈತ್ರಾವರುಣಿಯನ್ನು ಕಾಂಬ ತವಕದೊಳ್ ತ ।
ಚ್ಛಾತ್ರನಾದ ಸುತೀಕ್ಷ್ಣರುಷಿಯಂಪೆ ಬಂದೆವಾಯತಿನಾಥ ನಾಶ್ರಮಕ್ಕೆ ॥ (30)

ಕಲಶಸಂಭವನಿಂದ ಶರಚಾಪಮಂ ಕೊಂಡು ।
ವಿಲಸಿತದ ಪಂಚವಟಿಗೈತಂದು ನಿರ್ಮಲ ।
ಸ್ಥಳದೊಳ್ ಭವನೆಗೈದು ಪಾವನೆಯುಮಾದ ಗೋದಾವರೀತೀರದಲಿ ।
ನಲವಿನಿಂದಿರಲೊಂದು ದಿನಮಸುರೆ ಶೂರ್ಪನಖಿ ।
ಚೆಲುವತನಮಂ ತೋರ್ದು ಮಾಯೆಯಿಂ ಬಳಸಿರಲ್ ।
ಕಳವಳಸೆ ಕರ್ಣನಾಸಿಕಗಳಂ ತರಿದೆನಾನಗ್ರಜನನುಜ್ಞೆಯಿಂದ ॥ (31)

ಅಸುರೆ ಘೋಳೆಂದಳುತ ಪೋಗಿ ಖರನೆಂಬ ರಾ ।
ಕ್ಷಸಗುಸುರೆ ತ್ರಿಶಿರದೂಷಣಮುಖ್ಯರಿಂ ಚತು ।
ರ್ದಶಸಹಸ್ರಾತಿಬಲದ ದನುಜರೊಡನೈತಂದುದಂ ಕಂಡು ರಘುನಾಥನು ॥
ನಿಶಿತಾಸ್ತ್ರದಿಂದಮರರಿಪುಗಳಂ ಸಂಹರಿಸಿ ।
ಬಸವಳಿದುಮಾದಸುರೆ ಲಂಕೇಶಗಂ ದೂರೆ ।
ಸಸಿನೆ ಮಾಯಾವಿಮಾರೀಚಸಹಿತಂ ಬಂದನೇನೆಂಬೆನಚ್ಚರಿಯನು ॥ (32)

ಸುಳಿಯೆ ಮಾರೀಚನತಿಚಿತ್ರತರ ಮೃಗವಾಗಿ ।
ಲಲನೆ ಸೀತಾದೇವಿ ಕಂಡು ಬೇಡಲ್ಕೆ ರಘು ।
ಕುಲತಿಲಕನದರ ಬೆಂಬೊತ್ತಿದೊಡೆ ಸಿಲ್ಕದಿರೆ ಮಾಯೆಯೆಂದರಿತು ಕೊಲಲು ॥
ನೆಲಕವಂ ಬೀಳ್ವಾಗ ಸೀತೆ ಲಕ್ಷ್ಮಣರೆಂದು ।
ಮುಲಿಯಲಂಬಿಕೆ ತನ್ನನಟ್ಟಲತ್ತಲುಮಿತ್ತ ।
ಖಳದಶಾಸ್ಯಂ ಯತಿಯ ರೂಪಾಂತುಕೊಂಡೊಯ್ದನಟವಿಯೊಳ್ ಭೂಸುತೆಯನು ॥ (33)

ಸೀತೆಯಂ ಕಾಣದರಸುತ್ತಿರೆ ರಾವಣನ ।
ಘಾತದಿಂದಸುವೋತ್ರುವಿರ್ಪ ವಿಹಗೇಂದ್ರನಂ ।
ಮಾತನಾಡಿಸಿ ಮಗುಳೆ ವೃತ್ತಾಂತಮಂ ಕೇಳ ಸುರಪದವಿಗವನ ನಿಲಿಸಿ ।
ಭೂತನೂಜಾತೆಯಂ ಕಾಂಬ ಕತದಿಂದ ಮುಂ ।
ದೈತ್ಯರಾತಮಿರೆ ಕಬಂಧಾಖ್ಯನೆಂದೆಂಬೊರ್ವ ।
ದೈತ್ಯೇಯನ ವಿಕಾರದೇಹಮಂ ಕಾಣುತಂ ವಿಸ್ಮಯಂಗೊಂಡವನಘಾ ॥ (34)

ಬಂದೊಂದುಯೋಜನದ ಬಾಹುಗಳನತಿಶೀಘ್ರ ।
ದಿಂದತರಿದಿಟ್ಟು ಬಳಿಕವನಸುವಸೆಳೆಯಲ್ಕೆ ।
ಗಂಧರ್ವರೂಪಮಂ ತಾಳ್ದಂಬರಾಂಗಣದೊಳಿಂತೆಂದನತಿವಿನಯದಿಂ ॥
ಇಂದಿರಾಪತಿ ನಿಮ್ಮ ಮನದಿಷ್ಟಮಪ್ಪುದರ ।
ವಿಂದಸುಖಸಂಜಾತನಿಂದೆನುತ ಮರಳದಂ ।
ಬಂದೆವಾತನನುಡಿಯು ನಾಂತ್ರಿತ್ತಮುಖವಾಗಿ ಕಪಿನಾಥನಂ ಕಾಣಲು ॥ (35)

ಬರುತಿರಲ್ಕು ಬರಿಯೆಂಬೊರ್ವಳತಿಭಕ್ತಿಯಿಂ ।
ಕರದೊಯ್ದು ನಿಜಗೃಹಕೆ ಶ್ರೀರಾಮಚಂದ್ರನಂ ।
ಧರೆಯ ಭಾರವ ಕಳೆಯಲೋಸುಗಂ ಬಂದಿರ್ಪ ಹರಿಯೆಂದು ತಿಳದು ನುತಿಸಿ ॥
ನರದೇಹಮಂ ಬಿಟ್ಟು ದಿವ್ಯರೂಪವ ತಾಳ ।
ಪರಮಋಷಿಪದವಿಯಂ ಸಾರಲ್ಕೆ ಬಂದೆವಾವು ।
ನರರೂಪನಾಂತೆಸೆವ ನೀನಾರೆನಲ್ಪವನತನುಜಾತನಿಂತೆಂದನು ॥ (36)

ಬಲ್ಲೆನಾಂ ರಘುವನಪದಪಲ್ಲವಂಗಳಂ ।
ಬಲ್ಲಿದರ ಬಲ್ಲಿದನೆನುತ್ತಿರಿವೆ ಮರೆವಾಜ ।
ದೆಲ್ಲಮಂ ವಿಸ್ತರದಿ ಬಿನ್ನವಿಪೆ ತಿಳವುದೆನ್ನಭಿಮತಗಳನ್ನು ಮುದದಿ ॥
ಇಲ್ಲಿಗೈತರಲು ಮಾನುಷರೂಪನಾಂತೆ ಯತಿ ।
ಯಲ್ಲಂ ಪ್ಲವಂಗಮಂ ಪವನಸಂಭೂತ ಕಪಿ ।
ವಲ್ಲಭನ ಮಂತ್ರಿ ಹನುಮಂತನೆಂಭಿದಾನವೆಸಗಿತೀ ಲೋಕದೊಳಗೆ ॥ (37)

ವಾಲಿಸುಗ್ರೀವರೆಂದೀರ್ವರೇಕೋದರರು ।
ಮೇಲೆ ವಿದ್ವೇಷ ಸಂಭವಿಸಿತಿಬ್ಬರಿಗೊಂದು ।
ಕಾಲದೊಳು ಬಲಿಯನಾತಗಿದಿರಾಗಿ ಕಾದುತಂ ಕಣ್ಗೆಟ್ಟುತರಹರಿಸದೇ ॥
ಭೂಲೋಕಮಂ ಸುತ್ತಿ ಬಂದು ಮೌನಿಯ ಪರ್ಣ ।
ಶಾಲೆಯೊತ್ತಂ ಸಾರಿ ತನ್ನಿಧಿಯೊಳಿರೆ ಯಮಿಗ ।
ಳಾಲಯಕೆ ಬರೆಶಾಪಭಯದಿಂದ ಸುರಪಸುತ ಹೇಳನಂಗೈದುಳಿದನು ॥ (38)

ಸಿರಿಪೋಗಿ ಪಟ್ಟಣವ ನೀಗಿಭಯದಿಂ ಬಂದು ।
ಗಿರಿಯಗ್ರದೊಳು ನಿಂದು ಮುಂಗಾಣದಲೆ ಚಿಂತೆ ।
ವೆರದಳಲುತಿರಲನ್ನೆಗಂ ಬಂದ ನಾರದಂ ಪರಮಕಾರುಣ್ಯದಿಂದ ॥
ವರಮೌನಿಯಂ ಕಂಡು ಚರಣಕಾನತನಾಗಿ ।
ಕರಗಳಂ ಮುಗಿದರ್ಚನಂಗೈದು ಪ್ರೀತಿಯಿಂ ।
ಬರಿಸಿಕೊಳಲಾಮೌನಿ ಕಂಡವಸ್ಥೆಯ ಪರಿಯ ಮುಗುಳ್ನಗೆಯಲಿಂತೆಂದನು ॥ (39)

ತರಣಿಸುತ ನೀನೇತಕಳಲುತಿಹೆ ಪರಬೊಮ್ಮ ।
ಬರುವ ಭೂಮಿತಳಕೆ ದಶರಥಗೆ ಸುತನೆನಿಸಿ।
ದುರುಳದಶಕಂಠನಂ ಮಥಿಸಲೆಂದೈತಪ್ಪನಾ ಜನಸ್ಥಾನದೆಡೆಗೆ ॥
ಖರದೂಷಣತ್ರಿಸಿರಮುಖ್ಯದಾನವರುಗಳ ।
ತರಿದಾ ಕಬಂಧನಂ ಕಡಿದಿಟ್ಟು ಶಬರಿಯಂ ।
ಪೊರೆದು ಪಂಪಾತಟಕೆ ಬರುವ ಲಕ್ಷ್ಮಣಸಹಿತ ಮಾನುಷಾಕಾರದಿಂದ ॥ (40)
ನಳನಾಕ್ಷ ರಾಮನಂ ಕಂಡು ಸಂತಸಗೊಂಡು ।
ನಳಿನಮುಖಿಯಿರವ ಸೂಚನೆ ಗೈದರಾಕ್ಷಣದಿ ।
ಕೆಳೆಯಿಂದ ಕೈವಿಡಿದು ವಾಲಿಯಂ ಸಂಹರಿಸಿ ದೊರೆತನದ ಸಿರಿಯನಿತ್ತು ॥
ಜಲಧಿಮೇಖಲೆಗಧಿಕನೆನಿಪ ನೀ ಚಪಲತೆಯು ।
ಳಳಲಬೇಡವೆನುತ್ತ ಸುರಮುನಿ ಪೇಳ್ದರುಗ ।
ಉಳಿದು ಚಿಂತೆಯ ಭವನ್ಮಾರ್ಗರಕ್ಷಣೆ ಗೈವುತಿರ್ದೆವಾವಿನಿಸು ದಿನವು ॥ (41)
ಕೃತಪುಣ್ಯ ಪರಿಪಾಕದಿಂದ ಶ್ರೀಮೂರ್ತಿ ಸಂ।
ಗತಿಯಾದುದೆಮಗೆ ಸುಗ್ರೀವನತಿ ಭಕ್ತಿಯಿಂ ।
ಸತಿಯ ತಂದೊಪ್ಪಿಸುವನಿದಕೆ ಸಂದೆಗಮಿಲ್ಲ ಹಿತವಿಡಿದು ತಿಳದುಸೊಲ್ಲ ॥
ಪತಿಕರಿಸಿ ದಯದಿಂದ ಪಾಲಿಸಲ್ಕಾಸೂರ್ಯ ।
ಸುತನಿಂದ ಮನದಿಷ್ಟವಹುದೆನುತ ಪೇಳ್ದ ಶುಭ ।
ಮತಿಯ ವಾಣಿಯ ಕೇಳ ಸಂತಸದಿ ಶ್ರೀರಾಮಚಂದ್ರನಿಂತೆಂದನೊಲಿದು ॥ (42)
ತರಣಿ ಕುಲದೊಳಗಮಿತ್ರ ನರನಾಥರುದಿಸಿದರು ।
ತರಣಿಸಮವಿಕ್ರಮರು ಮತ್ತಾವ ಗೋತ್ರದವ ।
ತರಣವಾದುದರಿಂದ ಸಂತತಿಗೆ ದುಷ್ಕೀರ್ತಿ ಸಮನಿಸಲ್ಬರದೆನುತ ॥
ದುರುಳದಶಕಂಧರನ ತರಿಯಲೆಂದೈತಂದೆ।
ವರುಣ ಸಾಕ್ಷಾತ್ಪುತ್ರನಿವನನ್ಯಾಯದ ಲೇಸು ।
ಕರಕಷ್ಟಮಾತಗಾವನ್ಯಕದಿ ಪೇಳ್ವುದೇನುಂಟು ಪೊಸತಲ್ಲ ನಂಟೂ ॥ (43)
ಕುಂಜರಾಚಾರ್ಯಂಗೆ ಪುತ್ರನಾತಂ ತನ್ನ ।
ಬಲವಿಕ್ರಮಂಗಳಂ ಬಂದ ದುಷ್ಕೀರ್ತಿಯಂ ।
ಗೆಲಿದು ಗೋತ್ರಪ್ರವರ್ಧನಗೈವ ಬಾಧ್ಯತೆಯನಾಂತ ಸುಗ್ರೀವನಿಂಗೆ ॥
ಪಲವು ವಿಧದಿಂದ ಪೇಳ್ವುದೇನು ಪವನಸುತ ।
ಬಲಬುದ್ಧಿಗಳ ನೇತ ನೀನರಿಯದೇನಿಹುದು ।
ಛಲದಂತ ಕುಲಪರಂಪರೆಯ ಜಸಕೊಣ್ಣೆಯಂ ಬಾರದೊಲು ಕಾಯ್ವುದೆಂದಂ ॥ (44)
ಎಂದು ರಘುನಂದನಂ ಪ್ರೇಮದಿಂ ಪೇಳಲಾ ।
ನಂದದಿಂ ಪವನಸುತ ಪದಯುಗಳಕಭಿನಮಿಸಿ ।
ಇಂದಿನಿಂದೆನ್ನ ಸರ್ವಸ್ವಮಂ ಪದಪದ್ಮಕರ್ಪಿಸಿದೆ ದಾಸನಾದೆ ॥
ಪೊಂದಿದೆ ಪದಾಬ್ಜಮಂ ಕರವಿಡಿದು ಪೊರೆ ದೀನ ।
ಬಂಧು ಸರ್ವಶರಣ್ಯ ಸೂರ್ಯವಂಶವರೇಣ್ಯ ।
ಇಂದಿರಾವರ ದಯಾಪರ ಪರಾತ್ಪರ ಪಾಪಹರ ಭಕ್ತರಘವಿದೂರ ॥ (45)

ಎನುತ ವಂದಿಸಿ ತನುಮನಂಗಳನೊಪ್ಪಿಸಿ ।
ದನುವನಿಟ್ಟಿಸಿ ರಾಮ ವಾತ್ಸಲ್ಯದಿಂ ಪವನ ।
ತನಯನಂ ಕುಸ್ತರಿಸಿ ತ್ರಿಭುವನಾನಂದಕರವೆನಿಪಭಯಮನ್ನಿತ್ತನು ॥
ನಿನಗೆನಗೆ ಭೇದಮೆಳ್ಳನಿತ ನೆನೆಯದೆ ಸುಖ ।
ಮನೆಯೆನಿಸಿ ಬಾಳ್ವುದೆಂದಾಜ್ಞಾಪಿಸಲು ಪಾದ ।
ವನಜಗಳಗೆರಗಿ ಕರಗಳ ಮುಗಿದು ಬಿನ್ನಪಂಗೈದ ಕಜ್ಜದ ಪರಿಯನು ॥ (46)

ದೇವ ಬಿನ್ನಪವೊಂದನಾಲಿಪುದು ಸುಗ್ರೀವ ।
ಜೀವಭಯದಿಂದರುಗಿ ಮಲಯಾಚಲವ ಸಾರ್ದ ।
ಪಾವನಾಂಘ್ರಿಯ ರಿಷ್ಯಮೂಕದ್ರಿಪರಿಯಂತ ಬಳಲಿಸಿದಡರೆನಿಮಿಷದಿ ॥
ಯಾವಸುಧೆಗಾತನಂ ಕರತಂದು ಕಾಣಿಸುವೆ ।
ದೇವರಾವುದ ನೆನೆದರೆಲ್ಲಮಂ ಕೈಗೈವೆ ।
ಸಾವಧಾನದೊಳಿನ್ನ ಬಿನ್ನಪವನವಧರಿಸವೇಳ್ಕೆನುತ ಮುಗುಳ್ದರಗಿದಂ ॥ (47)

ಮಾರುತಿಯ ವಾಣಿಯಂ ಪತಿಕರಿಸಿ ರಘು ।
ವೀರ ಪೇಳ್ದನೆಲೆ ಕುಮಾರ ನೀಂ ಪೇಳ್ದುದು ।
ಮಾರುವದದೆಂದಿಗುಂ ಬರಲಿಯುದಾಡಿಮುದ ಮರಳಸುವಡರಿಯೆವಾವು ॥
ಕಾರಿಯದಪಥವಾವುದುಂಟದೆಲ್ಲವ ತಿಳಿವು ।
ದಾರೈವುದೆನೆ ಪುಳಕಿತಾಂಗನಾಗುತ ಚರಣ ।
ಸಾರಸಂಗಳಗೆರಗಿ ಪ್ರೀತಿಯಿಂದೊರೆದಂ ಸಮೀರಣಾತ್ಮಜ ಬೇಗದಿ ॥ (48)

ಬೆಗಲೇರ್ದರೀ ಕ್ಷಣಂ ಕರದೊಯ್ದು ಮುಂದಪ್ಪ ।
ಬಗೆಯನಾರೈವೆನೆನಲಿಂತಾಗಲೆನಲುಭಯ ।
ರಿಗೆ ನಮಿಸಿ ಬೆನ್ನೆದೆಯೊಳಾಂತು ಬಾನೆಡೆಯ ಪಥವಿಡಿದು ಭರದಿಂದ ನಡೆದು ॥
ಸುಗುಣರ ಕರದೊಯ್ದು ರಿಷ್ಯಮೂಕಾದ್ರಿಯೊಳು ।
ಸೊಗಸೆನಿಪ ತರುನೆಳಲೊಳೊಂದುತಾಣದೊಳಿಟ್ಟು ।
ಖಗಸುತನ ಪೊರೆಗೆನಡೆದಂ ಪವನನಂದನಂ ತುಳ್ಕುವಾನಂದದಿಂದ ॥ (49)

ಜವದಿಂದ ಬಂದು ಸುಗ್ರೀವನೆಡೆಗೈತಂದು ।
ಸುವಿಮಲೋತ್ಕರ್ಷಹರ್ಷದಿ ವಾರ್ತೆಯಂ ಪೇಳ್ದ ।
ಕುವಲಯಂಗಳ ಪೊರೆವ ಸರ್ವಾರ್ಥದಾತಾರ ಶೂರ ದುರ್ಭಯವಿದೂರ ॥
ನವನೀರದಶ್ಯಾಮ ರಾಮಪುರದರಸ ನೀ ।
ಭುವಿಯೊಳವತರಿಸಿ ಶರಣಾಗತರ ರಕ್ಷಿಸುವ ।
ಲವಲವಿಕೆಯಿಂ ಬಂದನೆಂದು ಶುಭವಾರ್ತೆಯಂ ಪೇಳ್ದನತಿಪ್ರೇಮದಿಂದ ॥ (50)

ಸಂಧಿ 2 ಕ್ಕಂ ಪದ 80.

ಮೂರನೆಯ ಸಂಧಿ-

ಸೂಚನೆ ॥ ಅಂಜನಾತನಯನನುಮತಿಯಿಂದ ಸುಗ್ರೀವ ।
ಕಂಜಾಕ್ಷನಂಘ್ರಿಯಂ ಕಂಡಭಯಮಂ ಕೊಂಡು ।
ಭಂಜಿಸುತ ಚಿಂತೆಯಂ ನಿಜವೃತ್ತಗಳನೆಲ್ಲ ವಿಜ್ಞಾಪನಂ ಗೈದನು ॥

ಹೆಂಗಳಶಿರೋರನ್ನೆ ಕೇಳ್ ಪ್ರಭಂಜನತನಯ ।
ಪಿಂಗಾಕ್ಷನೆಡೆಗೆ ನಡೆತಂದು ಪೇಳ್ದನು ನರ ।
ಪುಂಗವನ ಪಾವನಚರಿತ್ರೆಯಂ ಶ್ರುತಿಶಿರಶ್ರೀಮಂತಕರ ಕೀರ್ತಿಯಂ ॥
ಅಂಗಜಾರಿಯ ಮನೋನಿಲಯ ಬ್ರಹ್ಮಾಂಡಗಳ ।
ನಂಗಂಗದೊಳಗಿಟ್ಟ ಪರಬೊಮ್ಮನೀತನ ಪ ।
ದಂಗಳಂ ಮರೆಯೊಕ್ಕರಿಂಗೆ ಭವಭಂಧಂಗಳಿಲ್ಲವು ಪತಂಗತನಯಾ ॥ (1)

ಸುರಧೇನುವೀ ನೆಲನ ಪೊರೆಯುತ್ತೈತಂದುದೋ ।
ಸುರಪಾದಪಂ ಧರೆಯ ನೋಡಲೆಂ ಬಂದಿಹುದೊ ।
ಸುರರತ್ನವೀ ಭೂಮಿಯನ್ನು ಪಾಲಿಸಲೆಂದು ಪುರುಷಾಕೃತಿಯನಾಂತುದೊ ॥
ಪರಮ ಮುನಿಗಳ ತಪಃಪುಣ್ಯರಾಶಿಯೊ ದೈವ ।
ದುರು ಭಾಗ್ಯತೇಜವೊಯಿಂತಂತೆನುತ ಮೂರ್ತಿ ।
ಯಿರವ ಪೇಳಲ್ಕಾರಿಗಳವಹುದು ವಾಚಾಮಗೋಚರ ಮಹಾತ್ಮೆಗಳನು ॥ (2)

ಚಂಡತರ ಕೋದಂಡ ಕಾಂಡ ಕಲಿತದ ಕರೋ ।
ದ್ದಂಡಂಗಳಿಂದ ಸುರನೀಲ ನೀಲಾಭ್ರಮುಂ ।
ಮಂಡಿಸಿದ ಮೌಳಿಯೊಳ್ಗುರುಜಟಾಭಾರದಿಂ ವಲ್ಕಲಾಜಿನಗಳಿಂದ ॥
ಖಂಡೇಂದುಧರ ಬೊಮ್ಮ ಹರಿ ಮುಖ್ಯರಂ ಪಡೆದ ।
ಖಂಡ ತೇಜೋರಾಶಿ ಮಾನುಷಾಕೃತಿಯಾಲಿರೆ ।
ಕಂಡೆ ಕೃತಸುಕೃತಪರಿಪಾಕದಿಂದಾನಂದಮಯನಾದೆ ತರಣಿತನುಜಾ ॥ (3)

ಕಮಲಪೀಠನಿಗಭಯಮಿತ್ತ ಕತದಿಂ ಬಂದು ।
ದ್ಯುಮಣಿ ವಂಶಜ ನೆನಿಸಿ ಪಿತುರಾಜ್ಞೆಯಂ ಸಲಿಸಿ ।
ಕ್ರಮದಿಂ ಜನಸ್ಥಾನದೆಡೆಗೆ ಬರೆ ರಾವಣಂ ಧರಣಿಜೆಯ ಕದ್ದೊಯ್ಯಲು ॥
ಶ್ರಮಣಿ ಪೇಳ್ದ ಪರಿಯೊಳಲ್ಲಿ ಪರಿಯಂತ ಸಂ ।
ಭ್ರಮದಿಂದ ಬಂದುದಾದುದು ತಾತ ಪೂರ್ವ ಕೃತ ।
ವೆಮಗೆ ಫಲರೂಪವಾಂತು ಕಂಗೆಸದುದೇನೆಂಬೆನಚ್ಚರಿಯ ಪೆರ್ಚಿಗೆಯನು ॥ (4)

ಗುರುಭಕ್ತ ದಾಂತ ಶಾಂತಂ ಸದಾ ಹರಿರೂಪ ।
ಪುರುಷ ಸೌಮಿತ್ರಿಯೆಂದನುಜನೊಪ್ಪಿಹನವರ ।
ಪರಿಯ ಚಿಂತಿಸಲು ವೇದಾಂತಾಗಮಂಗಳುಂ ಬಳಲಿ ಪಿಂತಿರುಗುತಿಹವು ॥
ತರಣಿಸುತ ನಿನ್ನಾಜ್ಞೆಯಿಂದಲಾಂ ವಟುರೂಪ ।
ಧರಿಸಿ ಪೊರೆಗೈದಲೀಕ್ಷಿಸುತೆನ್ನ ಬುದ್ಧಿಯಂ ।
ಪರಿಕಿಸುತ ಬಂದ ವೃತ್ತಾಂತವಂ ಲಾಲಿಸಿದರಮಿತಸಂತೋಷದಿಂದಾ ॥ (5)

ವಾಲಿಯುಪಟಳದಿಂದ ವನದಲಿಹ ಸೂರ್ಯಸುತ।
ಲೀಲೆಯಿಂದವನ ಕರವಿಡಿದರೆ ಭವತ್ಕಾರ್ಯ।
ಮೂಲಸ್ಯಮಿಲ್ಲದಾಗುವದೆನ್ನುತಾನರುಪಲಾರಾಜಸುತನೆಂದನು॥
ಯಿಾಲೋಕನೇತ್ರಕುಲಸಂಭೂತರಾವು ತರಣಿ।
ಬಾಲಕಂ ಸುಗ್ರೀವ ಬಾಂಧವಂ ನಮಗಿನ್ನು।
ಮೇಲಪ್ಪ ಕಾರ್ಯಮವನಾಧೀನಮೆಂದೊಪ್ಪಿಸುತ ಪಿಂದೆ ನಡೆತಂದರು॥ (6)

ಕರತಂದು ಮತ್ತೊಂದು ತರುನೆಳಲೊಳಟ್ಟು ಬಂ।
ದಿರುವೆನೆಂದಾ ಮರುತಭವ ಪೇಳೆ ಶೋಕಮಂ।
ಪರಿದು ಸುಗ್ರೀವ ಪೊಗಳುತವಂಜನಾಸುತನ ಬಂದಪ್ಪಿ ಮುಂಡಾಡುತಾ।
ನರದೇವನಂ ಕಾಣಲಾಕ್ಷಣದಲೈತಂದ।
ನರದೇಹ ವಿಡಿದರಸಿನಂದದಿಂ ಶ್ರೀರಾಮ।
ಚರಣಕಭಿನಮಿಸೆ ಪಿಡಿದೆತ್ತಿ ಕುಳ್ಳಿರಿಸಲತಿ ಪ್ರೀತಿಯಿಂದಂ ನುಡಿದನು॥ (7)

ದೇವನೀಂ ಧರ್ಮಜ್ಞ ಧರ್ಮವತ್ಸಲ ಜಗ।
ಜ್ಜೀವನಾಧಾರ ದೇವೋತ್ತಮ ನೆನುತ್ತಮಿತ।
ಪಾವನನ ಗುಣಗಳಂ ಪವನಸುತ ತಿಳದನಿತು ಪೇಳ್ದುದಂ ಕೇಳ ಭಯದಾ॥
ಠಾವಿಗಪ್ಪಣೆಯಿತ್ತು ತವಕದಿಂದೈತಂದೆ।
ನೀವತಿ ಪ್ರಿಯದಿಂದ ಕಪಿಕುಲದೊಳೆಂ ಸಖ್ಯ।
ಗೈವುದಾದಡೆ ಕರವ ಪಿಡಿದು ಮರಿಯಾದೆಯಂ ಮನ್ನಿಸಲ್ವೇಕು ಜೀಯಾ॥ (8)

ಎನುತ ಸುಗ್ರೀವ ಸಂಪ್ರೀತಿಯಿಂ ತನ್ನ ಕರ।
ವನು ನೀಡೆ ರಘುನಾಥ ನಸುನಗುತ ಕೈವಿಡಿದು।
ಎನಗೆ ನೀಂ ಪ್ರಿಯತಮನೆನುತ್ತಲಾಲಿಂಗನಂ ಗೈದು ಪ್ರಿಯದಿಂದ ಬಳಕ॥
ಹನುಮನನಿತರೊಳುಭಯ ಮಧ್ಯದೊಳ್ ಕ್ರತುಭುಜನ।
ಮಿನುಗಿಸುತ ಪೂಜಿಸಲು ಕಂಡು ಕರಗಳ ಪಿಡಿದು।
ಮನದೊಲವಿನಿಂ ಪ್ರದಕ್ಷಿಣೆಗೈದು ತತ್ಸಾಕ್ಷಿಯಿಂ ರಾಮನಿಂತೆಂದನು॥ (9)

ಹರಿತನಯ ಕೇಳ್ ಭರತಸೌಮಿತ್ರಿಗಿಂ ನೀನೆ।
ಪಿರಿಯನುಜನೆಂದರಿತೆ ಪ್ರಾಣಸಖ ನಿನಗಿಂತ।
ಪೆರತಿಲ್ಲ ಮನದಂದಮಿದೆ ಕೊಟ್ಟ ಭಾಷೆಗಂ ಪುಸಿಯಿಲ್ಲ ಮೆಂದೆಂದಿಗುಂ॥
ತರಣಿಯೌರಸತನಯ ನೀನು ನಿನ್ನಯ ಕುಲಾ।
ಕರರಾವು ಕೀರ್ತಿ ದುಷ್ಕೀರ್ತಿ ಸುಖದುಃಖಗಳ।
ಪರಿಯುಭಯಸಮಮಿದಕೆ ಸಾಕ್ಷಿಭೂತಗಳೆನುತ ರಾಮನಭಯವನಿತ್ತನು॥ (10)

ದಿನಪಸುತ ರಾಮವಾಣಿಯ ಕೇಳಿ ಸಂತಸದಿ।
ಮನದಹರ್ಷದಿ ಹಿಗ್ಗ ವನಿತರೊಳು ಮರುತಜಂ।
ವಿನಯದಿಂ ಸಾಲ ಪಲ್ಲವಗಳಂ ನೆಲದೊಳಂ ಪರಪಿ ಪರಿತೋಷದಿಂದ।
ನನುಮತಿಸಿ ಕುಳ್ಳಿರ್ಪುದೆನಲು ರವಿಸುತನೃಪತಿ।
ತನಯರೀರ್ವರು ಸುಖದಿ ಮಂಡಿಸಲು ಲಕ್ಷ್ಮಣಗೆ।
ಹನುಮ ಚಂದನದಳರ ಶಾಸಿಗೆಯನೆಸಗಿದಂ ಸಂತಸದಿ ಕುಳ್ಳಿರ್ಪರೆ॥ (11)

ಸಂತಸದಿ ಕುಳ್ಳಿರ್ದರ್ ಸಕಲ ಕಪಿಗಳು ನೋಡು ।
ವಂತೆ ಸುಗ್ರೀವ ಬಿನ್ನಪಗೈದ ರಘುನಾಥ ।
ಪಿಂತೆ ಸುರಪತಿಯಣುಗನಾದಣ್ಣನಿಂದಾದವಸ್ಥೆಗಳ ವಿಸ್ತರಿಪೆನು ॥
ಕಾಂತೆಯು ಸೆಳದು ಕಾರ್ಪಣ್ಯಗೊಳಸಲ್ವಿಪಿನ ।
ದಂತರಾಳದೊಳಂದಿನಿಂದ ಬಿದ್ದಿಹೆನೆನ್ನ ।
ಚಿಂತೆಯಂ ಪರಿಹರಿಸಿ ಕಾಯಬೇಕೆನೆ ರಾಮ ನಸುನಗುತಲಿಂತೆಂದನು ॥ (12)
ರಾಮವಾಕ್ಯದ ಪರಿಯು ಮೈತ್ರಿಯು ಫಲಂಗಳಂ ।
ಪ್ರೇಮಲಕ್ಷಣವ ನಿಚ್ಚೈಸುವೆ ಸುಗ್ರೀವ ನಿ ।
ನ್ನಾಮಹಾರಿಪು ವಾಲಿಯನುವೊಂದು ಶರದಿಂದ ಭೂತಳದ ಧೂಳಿಯೊಳಗೆ ॥
ಭ್ರಾಮಕಂಗೊಳಿಪುದ ಕಪಿರಾಜ್ಯ ದೈಶ್ವರ್ಯ ।
ವಾಮಹತ್ತರ ಸುಖವನೀವ ಸತಿಸುತರೆಲ್ಲ ।
ಪ್ರೇಮಗೊಳಿಸುವದನುಂ ಕಾಣ್ಬೆ ಭಯಬೇಡೆನುತ ಹರಿಗಭಯವನ್ನಿತ್ತನು ॥ (13)
ಯೆಂದೊರೆದ ಮಧುರತರ ರಾಮವಾಕ್ಯದಿ ಹರ್ಷ ।
ದಿಂದ ಸುಗ್ರೀವ ನುತಿಸುತಲೆಂದ ದೇವಪತಿ ।
ನಂದನನ ದೆಸೆಯಿಂದಲೆನಗೆ ಭಯ ಸಂಜನಿಸದಂತಭಯಮಿತ್ತಪರಿಯು ।
ಛಂದದಿಂ ಪರಿಪಾಲಿಸಲ್ವೇಳ್ಕುಮೆನುತ ನಯ ।
ದಿಂದ ಬಿನ್ನವಿಸುತಿರಲನಿತರೊಳು ಸುಗ್ರೀವ ।
ಗಂದು ವಾಮಾಂಬಕಸ್ಪಂದವಾದುದು ಶುಭಗಳಂದವಂ ಸೂಚಿಪಂತೆ ॥ (14)
ಹೊಮ್ಮರಿಯು ಸುಳಿಸಿ ನೆಲೆಯಿಂದ ನಿಮ್ಮೊರ್ವರಂ ।
ಗಮ್ಮನೊಂದೆಡೆಗೆಳೆದು ಧರಣಿಜೆಯ ಕದ್ದೊಯ್ದ ।
ದುರ್ಮಾರ್ಗಿ ದಶಶಿರ ರಸಾತಲವಳಿರ್ದಡಂ ಛೇದಿಸುತಲವನ ಕುಲವ ।
ಕಾಮ್ಯಗೊಳಿಸುತ ಭೂಮಿಸುತೆಯ ತಂದೀವೆನಿದ ।
ನಮ್ಮಸಚಿವಂ ಪೇಳ್ದ ನಿದಕೆ ಸಂದೆಗವಿಲ್ಲ ।
ನೆಮ್ಮಿರುವ ಚಿಂತೆಯಂ ಕಳೆ ನೃಪತಿಕುಲಚಂದ್ರ ದೈತ್ಯಸಂತಾನತಂದ್ರಾ ॥ (15)
ಮಿತ್ರ ವಾಲಿಯ ಭಯಕೆ ತ್ರೆತ್ತು ತನುವಂ ಚಿಂತೆ ।
ವೆತ್ತೈವರಾವು ಶೈಲ ಮಸ್ತಕದಿ ಕುಳ್ಳಿರಲ್ ।
ಮತ್ತೇಭಗಮನೆಯಂ ಕಳ್ದೊಯ್ವ ದಶಕಂಠ ಕಂಗೆಸದನಂಬರದೊಳು ॥
ಮತ್ತಕಾಶಿನಿಯಳುತ ಯೆಮ್ಮ ನಿಟ್ಟಿಸಿ ತನ್ನ ।
ಉತ್ತರೀಯವ ಪರಿದು ಭೂಷಣಂಗಳ ಕಟ್ಟಿ ।
ಬಿತ್ತರಿಪುದೆನ್ನಪರಿಯಂ ರಘೋತ್ತಮಗಿದಂ ಕೊಡುಗೆನುತ ಪರಿದಿಟ್ಟಳು ॥ (16)
ಒಡವೆಗಳನೆಲ್ಲವೊಂದೆಡೆಯೊಳಾಂ ಮಡಗಿಸಿಹೆ ।
ಪೊಡವೆನಸುರನ ತ್ರಿಳಯದಾದನಂದಿಗೆ ದುಷ್ಟ ।
ನಡತೆಯಿಚ್ಛೈಸಿದನ ಪಿಡಿತಂದೊಪ್ಪಗಿಪೆ ನೆನುತ ಸುಗ್ರೀವ ಪೇಳೆ ॥
ಕಡುಮುಮತೆಶೋಕಗಳ್ ಪೆರ್ಚೆಬರೆ ಕಣ್ಬನಿಯು ।
ಕೆಡವುತಲೆ ರಾಘವಂ ನುಡಿದನೆಲೆ ಸುಗ್ರೀವ ।
ಮಡದಿಯಿತ್ತಾಭರಣಗಳ ತಂದುಕೊಡುವುದೆನೆ ನೋಡೆನುತ ಮುಂದಿಟ್ಟನು ॥ (17)

ಚೆಲುವ ಭೂಷಣವಸ್ತ್ರಕಲಿತ್ರದಿಂ ಮುಂಗಡೆಯು ।
ನೆಲದಲಿರೆ ಕಂಡೆತ್ತಿ ವಕ್ಷಸ್ಥಳದೊಳಟ್ಟು ।
ಲಲನೆಯಂ ನೆನೆನೆನೆದು ಪಲುಬಿದನದೇನೆಂಬೆ ಕಲುಮರಂ ಕರಗುವಂತೆ ॥
ಹಲವು ವಿಧದಿಂದಳಲಲಾದುಃಖ ತನ್ನಿಂದ ।
ಚಲಿಸದಿರೆ ಕ್ರೋಧಶಿಖಿ ಮುಂಬರಿದು ಬರೆ ಬಾಣ ।
ದಲಗಪಿಡಿದಿಂತೆಂದ ಸರ್ವರುಂ ಭಯದಿಂದ ನೋಡುತಿರೆ ರೌದ್ರದಿಂದ ॥ (18)

ಪಾಪದಾಚರಣೆಯನುಸರಣೆ ಗೈದನ ಶರದ ।
ದೀಪದಿಂ ಸುಡುವೆ ನಜಭವಪಿನಾಕಿಗಳನೈ ।
ರೂಪಮಂ ನಂದಿಸುವೆ ನಿಂದೆ ಮೂಲೋಕಮಂ ಕಲ್ಪಾವಸಾನವೆನಿಪೆಂ ॥
ಪಾಪಿರಕ್ಕಸ ಪೋಗಿ ಪದುಮಾಕ್ಷನೆಡೆಯಲಿರ ।
ಲಾಪನೀರ್ವರನು ಕೆಂಗರಿಗೋಲಿನಿಂದ ಸಂ ।
ತಾಪಗೊಳಿಸುವೆನೆಂದು ಭೋರ್ವೊರೆದ ಕಾಲಾಗ್ನಿಯುಗ್ರದಿಂ ವೊರೆವಂದದಿ ॥ (19)

ಒಡಲುಪಿಡಿಯದೆ ಬರ್ಪ ಕಡುಶೋಕಕೋಪಗಳ ।
ಪಿಡಿಯಲಸದಳವಾಗಿ ರಾಘವಂ ಸಂಕ್ಷೋಭ ।
ಬಡುತಲಿರೆ ಸುಗ್ರೀವ ನೋಡಿ ಚಿಂತಿಸಿ ಕರವ ಮುಗಿದು ಮಗುಳಿಂತೆಂದನು ॥
ಕೆಡೆಗು ದುಃಖದಿ ಕಾರ್ಯತತಿಗಳುಂ ರಘುನಾಥ ।
ಬಿಡು ಚಿಂತೆಯಂ ಧೈರ್ಯವಿಡಿದೆನ್ನ ನಿಟ್ಟಿಪುದು ।
ಮಡದಿಮನೆಯನ್ನುಳಿದು ಪಿಡಿದ ಧೈರ್ಯದೊಳಿರ್ಪ ದೃಢವನಿಟ್ಟೈಸು ನರೇಂದ್ರ ॥

ಬಿರುಗಾಳಿಯಿಂದ ಕಿರುಮರಗಳುರುಳುವ ತೆರದಿ । (20)
ಗಿರಿಗಳೇಂ ಚಲಿಸುವವೆ ಸಾಮಾನ್ಯ ಜನರಿಂದ ।
ಪರಿಸುವಕ್ಲೇಶ ಮಹಾತ್ಮರದ ನಿಟ್ಟಿಪರೆ ಬಗೆವರೆ ಮಹತ್ತ್ವನ್ನುತ ॥
ಪಿರಿದುಸಿರಿಯಡಸಲತಿಕಷ್ಟಸಂಭವ ಮಾಗ ।
ಲುರದೈನ್ಯದಿಂದದಂ ಪರಿಗಣನೆಗೈಯದಲೆ ।
ಹರಿಯುಕ್ಷನಂತಿರ್ಪುದದು ಮಹಾಪುರುಷಗುಣ ಸರ್ವಜ್ಞಗೇಂ ಪೇಳ್ವುದು ॥ (21)

ದೊರೆಯಲತಿಪೊನ್ನು ಸಂತಸದಿ ಹಿಗ್ಗುತ ಪೋದ ।
ರರೆತಾಸು ದುಃಖಸಾಗರದಿ ಮುಳುಗುವ ದುಷ್ಟ ।
ನರರಸ್ವಭಾವಮದು ದುಃಖಮಲ್ಲದುಮರಸ ಶೂರಸಂಪದಕೆ ಬಳಿಕ ॥
ಇರದು ಸುಖಮುಂ ಶಾಂತಿಬಲಧೈರ್ಯಸಂಪತ್ತಿ ।
ಉರುವಿಕ್ರಮಂಗಳಾ ಶೋಕಕಿನಿತಾದಡಂ ।
ಇರುಗೆಗಾಸ್ಪದಮಿತ್ತಡಾ ಪುರುಷ ಜೀವಿಪ್ಪುದು ದುಷ್ಕರಂ ಜಗತಿಯೊಳಗೆ ॥ (22)

ಚಿಂತೆ ಸಕಲೋಪಾಯಶಾಂತಿಯುತ್ಸಾಹಗಳ ।
ಗಂತಮೆನುತಂ ಸಂತರಾಡುವರು ಸರ್ವಜ್ಞ ।
ನೀಂ ತಿಳಿಯದೇನಿಹುದು ಸೇವಕಗೆ ತೋರಿದುದ ನರುಪದಿರಸಲ್ಲದೆನುತ ॥
ಮುಂತೆ ತಿಳಿದನಿತ ವಿಜ್ಞಾಪಿಸಿದೆ ಚಿತ್ತದೊಳ ।
ಗಾಂತೆನ್ನ ನುಡಿಯ ದಯದಿಂದ ಪಾಲಿಸವೇಳ್ಕು ॥
ಮೆಂತೆನುತ ಸುಗ್ರೀವ ಪೇಳ್ದರಾ ರಘುವೀರನಾಲಿಸುತಲಿಂತೆಂದನು ॥ (23)

ಹಿತವರಿನ್ನುಂಟೆ ನಿನ್ನಿಂದೆಮಗೆ ಭಾಸ್ಕರನ ।
ಸುತನೆ ಸರ್ವಾಗಮಾಮ್ನಾಯಕೋವಿದನೆ ಭವ ।
ಸ್ಮತಿಗೆ ಪೊಸಬೆಯುಂಟೆಯೆನುತ ನುತಿಸುತಲಪ್ಪಿ ತನ್ನ ಚಿಂತೆಯನು ಬಿಟ್ಟು ॥
ಹಿತಕರದ ವಾಣಿಯಿಂದಿಂತೆಂದ ರಾವಣನ ।
ಗತಿಯು ನೀನೇ ತಿಳಿದು ಧರಣಿಸುತೆಯಂ ತಂದು ।
ಕೃತಿಯುಮಾಡೆಂದು ಬಹುವಿಧದಿಂದಲುಸುರಿದಂ ರಾಘವಂ ಪ್ರೀತಿಯಿಂದಾ ॥ (24)

ರಾಮನಾಡಿದ ನುಡಿಗೆ ಸುಗ್ರೀವ ಸಂಭ್ರಮ ।
ಸ್ತೋಮಲಾಭವಿ ಹಿಗ್ಗುತಡಿಗೆರಗಿ ಸಕಲ ಗುಣ ।
ಧಾಮ ನಿಮ್ಮಯ ಕೃಪೆಯೊಳಮರಾಧಿಪತ್ಯಮೆನಗಾಯಿತೆಂದು ನಿಶ್ಚೈಸಿದೆಂ ॥
ಪ್ರೇಮದಿಂದಿತ್ತ ಭಾಷೆಗೆ ಮೋಸಮುಂಟೇ ಸೀ ।
ತಾ ಮನೋಹರನೆ ಪತಿಕರಿಸಿ ಮದ್ವಾಕ್ಯದಿಂ ।
ದಾಮೋದಚಿತ್ತನಾದುದಕೆ ಸಂತಸಗೊಂಡೆನೆನುತೊರೆದು ಮಗುಳಿಂದನು ॥ (25)

ಮೂರು ಲೋಕಾಧಿಪತಿ ನಿಮ್ಮಂಘ್ರಿಗಳಗಾನು ।
ತೋರಯುಕ್ತಿಯ ನೋಡೆಯೆಲೇಸರವ ಕರುಣದ ಕು ।
ಮಾರನೆಂದೆನಗೊಲಿದು ಪಾಲಿಪುದು ಸಾಧುಗಳ ನೈಜಮಲ್ಲವೆ ಧರೆಯೊಳು ॥
ಶೂರನಾಗಲಿ ಗುಣವಿಕಾರನಾಗಲಿ ಧನಾ
ಧಾರನಾಗಲಿ ನಿಸ್ವನಾಗಲಿ ದುಃಖದಾ ।
ಗಾರನಾಗಲಿ ಸೌಖ್ಯಯುತನಾದಡಂ ಮಿತ್ರನಿಗೆ ಹಿತನು ನೀನುಮಲ್ತೆ ॥ (26)

ಕುಲ ಛಲಂ ಗುಣ ರೂಪು ಜಾತಿ ಗೋತ್ರಂ ದೇಹ ।
ಬಲಪೌರುಷಂಗಳೊಂದೆಣಿಸದೇ ನೇಹಿತರ ।
ಪಲವು ವಿಧದುಪಚರಣೆಯಿಂದ ಭೇದದಿ ತಿಳಿಮ ಸುಖಕಷ್ಟಮೇಕಮೆನುತ ॥
ಸುಲಭರಾದರು ಮಿತ್ರತೆಯನೆಣಿಸಿ ಸಾಮ್ರಾಜ್ಯ ।
ಮೊಲಿದೀವುದದು ಜಗತ್ಪೂಜ್ಯಮುತ್ತಮೆಂಬುದೀ ।
ನೆಲದಿ ಪ್ರತ್ಯಕ್ಷಮಂಗೈದೆ ಕಪಿಯಂ ಪಿಡಿದು ಸಖನೆಂಬ ಪ್ರೀತಿವಿಡಿದು ॥ (27)

ಮೂದೇವರೊಡೆಯ ಕೇಳ್ಮನ್ನಸುರಪತಿಯಣುಗ ।
ಬಾಧೆಯಿಂ ಮತಿಮಾಂದ್ಯವಾಗಿ ಮುಂಗಾಣದಿದೆ ।
ಯಾದುರಾತ್ಮನ ಕೃತ್ಯಮೊಮ್ಮೆ ಮನಗೊಂಡೊಲಿದು ಮತ್ತ ವಿಕಳತೆಗೊಳ್ಳುತಿದೆ ॥
ಆದರಾಸಂಬಾಧದಿಂದೆನ್ನ ಪ್ರಕೃತಿಯಿಂ ।
ದಾ ಧರಾಸುತೆ ಪೋದ ಹಾದಿಯಂ ಶೋಧಿಸುತ ।
ಮೋದಗೊಳಿಸುವೆನೆಂದು ಸುಗ್ರೀವ ಮರುಗುತಿರೆ ರಘುವೀರನಿಂತೆಂದನು ॥ (28)

ವೀರನಿನಗಪಕಾರಮೆಸಗಿದ ದುರಾತ್ಮನ ವಿ ।
ದಾರಣಂಗೈದು ಕಪಿರಾಜ್ಯರುಮೆತಾರೆಯುರ ।
ನೋರಂತೆ ನಿನಗಿತ್ತೆನೆಂದಾನು ಪೇಳರ್ದ ಮೇಲೆ ಸಂಶಯಮೇತಕೆ ॥
ಸೋದರರ ಕ್ಲೇಶಗಳ ಪರಿಹರಿಸಿ ಸೌಖ್ಯದಾ ।
ಗಾರಮೆನಿಸದೆ ಸುಮ್ಮನಿರ್ದರೆಮ್ಮಂ ಭಜಿಪ ।
ರಾರಕಟ ನುಡಿದೆರಡನಾಡಲುಂಟೇ ರಘುಕುಲಾನ್ವಯ ನೃಪರು ಬಳಿಕ ॥ (29)

ಎಂದು ನಿನಗಭಯವನ್ನಿತ್ತನಾದಿನ ಪ್ಲವಗ ।
ಬಂಧು ಹಿತವಾದನೆಂಬುದತಿಳಿಯಹಸ್ಕರನ ।
ನಂದನನೆ ಕಪಿರಾಜ್ಯ ಸ್ತ್ರೀರತ್ನ ಧನವಶವಾದವೆಂದರಿತಿರು ॥
ಪೊಂದಿದರಿಗೋಸುಗ ಶರೀರವಂ ತೆತ್ತಿರುವೆ ।
ಕುಂದುಕೊರತೆಗಳೆನ್ನದೆಂದು ಮನದೊಳ್ಬಗೆದು।
ಬಂಧುರ ಪ್ರೇಮದಿಂ ಪಿಂದೆ ಕಾಯ್ದಿಹೆ ನಲ್ಲದರೆನಿಮಿಷ ಮರೆದಿರುವೆನೆ ॥ (30)

ಶರಣರಿಂಗೆನಗೆ ಭೇದಮಿಲ್ಲವವರೆಲ್ಲ ।
ಚರಿಸುವಾಚರಣೆಯೆನ್ನದು ಸುಖಾಸುಖಗಳಂ ।
ದುರೆಸಮರ್ಪಿಸುತೆನಗೆ ಮನದೊಳೊಂದಂ ನೆನೆಯದನುಪಮಾನಂದದಿಂದ ॥
ಹರಸರಸಿಜಾಸರ ಗಣನೆ ಗೈಯದೆ ಸುಖದಿ ।
ಬೆರದಿರ್ಪೊಲಾಂ ಗೈವೆನಲ್ಲದೊಂದೇ ನಿಮಿಷ ।
ಮರದಿರೆನಿದೆನ್ನ ಮತವೆನ್ನ ಶರಣರ ಜೀವನವೆ ಜೀವವೆನಗೆ ಕೇಳು ॥ (31)

ಕೋಗಿಲೆಯು ಬನವನಂ ಪಗಲಂ ಬಿಸಿಲ್ವಕ್ಕಿ ।
ಸೋಗೆ ಕಾರ್ಮುಗಿಲನೆಳೆಗಂಧಿ ಕರುವಂ ಸಾಧ್ವಿ ।
ಯಾಗ ಪತ್ರಿಯನ್ನೆನಪ್ಪೊಲೆಮ್ಮನಲಂ ಸಾರಿದರ ಸಕಲ ಯೋಗಕ್ಷೇಮವಂ ॥
ಬೇಗಲನಪದಬಿಡದ ಲಾರ್ಯೆವೆನಳ ಮನವ ।
ನೀಗುತೆನ್ನವನೆಂದು ಮರೆಯೊಕ್ಕಡಾರಾದ ।
ಡಾಗಲವರಂ ಬಿಡದೆ ಪೊರೆವ ವ್ರತವೆಮಗೆ ಕೇಳ್ ಸೂರ್ಯಸುತ ನಂಬು ದೃಢದಿ ॥

ಎನಲಖಿಲ ಲೋಕ ಹಿಗ್ಗುವ ತೆರದಿ ರಘುನಾಥ । (32)
ನಿನಸುತನ ಸಂತೈಸಲತುಲ ಮೋದದಿ ಸೂರ್ಯ ।
ತನಯ ವಿಜ್ಞಾಪಿಸಿದ ದೇವ ಕೇಳ್ಬವದೀಯ ಚರಣದರ್ಶನವಮಾತ್ರದೆ ॥
ವನಜಪೀಠನ ಲೋಕವನದೊಲಾಂ ಸಂಚಪ ।
ಬನಮೆನುತ ತಿಳದಿರ್ಪ ನಾರದನ ಶಶಿಮೌಳಿ ।
ಮುನಿಗಳ ಸಮಾಧಿಯೊಳು ಸಿಲ್ಕಿದ ಪರಂಜ್ಯೋತಿಯೆನಗೆ ವಶವಾದುದೆನುತ ॥ (33)

ಸಂತಸಂ ದಳೆದಿರ್ಪ ಕರದಿ ಚಿಂತಾಮಣಿಯು ।
ತಾಂತಳೆದು ಬಯಸುವುದದೇನ ಮನದಿಷ್ಟಗಳ ।
ತಾಂತಿಳದು ಸಫಲ ಗೈದಪ್ಪುದೆನುತ ನಿಶ್ಚಯದೊಳರಿತಿರ್ಪ ರಘುಕುಲೇಶ ॥
ಚಿಂತೆಯೊಳ್ಳನಿತಿಲ್ಲ ಸಾಮ್ರಾಜ್ಯ ವೈಭವವ ।
ಸ್ವಾಂತಾನುಮೋದವಂ ತಾಳ್ದಿ ದುರ್ದಶೆಗಳಂ ।
ಪಿಂತಣ್ಣನೆಸಗಿದುದ ನೆನೆದರೆನ್ನಯ ಮನಂ ಕಂದುತಿದೆ ನೃಪಲಲಾಮ ॥ (34)

ಜನಪತಿತ್ವವನುಳದು ಸನುಮಾರ್ಗಮಂ ಪಳದು ।
ಮನವ ಕ್ರೋಧಕೆ ತಂದು ತನುಜೆಯೆಂಬುದದೊಂದು ।
ನೆನೆಯದೆನ್ನಯ ವನಿತೆಯನು ಸೆಳದು ರಾಜ್ಯಮಂ ತೆಗೆದು ಬನಕಟ್ಟಿ ಮಗುಳ್ ॥
ಅನುಜನೆಂದೆನಿಸದಪಯಶಸ್ಸಂ ಗಣಿಸದತೆ ।
ಯೆನಗಹಿತಮಂ ಮಾಡಿ ಘನತೆಯಂ ಪೋಗಾಡಿ ।
ದಿನಿಸನುಂ ಬಗೆದೀಗ ಮೂಡಿ ಶೋಕಂ ಬೇಗ ತೊಳಲುವಂತಾದುದಕಟ ॥ (35)

ತಿರುಗಿದೆನು ಭೂಲೋಕಮೆಲ್ಲಮಂ ಕಾಲೂರ ।
ಲರಗೇಣಿ ನೆಲನಿಲ್ಲದಳಲಿ ಬಳಲುತ ವಾಲಿ ।
ಯುರುಬೆಗಂ ನಿಲಲಮ್ಮದುವಾವ ತಾಣಗಳ ಪೊಕ್ಕಡರಸುತಲಿ ಬಂದು ॥
ತರುವಡೆಳಸಿದ ಪಾಪಿ ಕರುಣಮೆಳ್ಳನಿತಿಲ್ಲ ।
ದರರೆ ನೆಲನೆಂತು ಪೊತ್ತಿರ್ಪುದೆನ್ನುತ ನೆನೆದು ।
ಮರುಗುತಿದೆ ಚಿತ್ತಮಿದ ನಾರ್ಗೊರೆವೆ ರಘುನಾಥ ಲಾಲಿಸುವುದೆನ್ನನೆನುತ ॥ (36)
ರಾಜಧರ್ಮವನುಳಿದು ಖಲಮಾರ್ಗವಿಡಿದು ಸುರ ।
ರಾಜಸುತಗಾಯುಷ್ಯಮೈಶ್ವರ್ಯ ಜಯಸಿರಿಯು ।
ರಾಜಿ ಬೆರ್ಚುವುದದಂ ನೋಡೆ ಧರ್ಮಂ ಪೋಗಿ ನೀರಧಿಯು ಪೊಕ್ಕು ಕುರುಹಂ ॥
ಮಾಜಕೊಂಡುದೊ ಧರ್ಮಗಳ ಪೇಳ್ವನೈಗಮ ಸ ।
ಮಾಜಮೇಂ ಪುಸಿಯೊ ಕಾಣಿಸದೆನುತ ಕಮಲಭವ ॥
ನೋಜೆಯು ಸ್ಮರಿಸಿ ಸಂಕಟಗೊಂಬೆ ರಘುವೀರ ಕಾರುಣ್ಯಮಯಶರೀರ ॥ (37)
ಎಂದು ನಾನಾಪರಿಯೊಲತಿದೈನ್ಯದಲಿ ನುಡಿಯು ।
ಲಂದು ರಘುವರ ನೋಡಿ ನುಡಿದ ನಸುನಗೆಗೂಡಿ ।
ಕುಂದಲೇತಕೆ ತಾತ ಕೇಳ್ವುದೆನ್ನಯಮಾತ ಭೀತಿಯಂ ಬಿಟ್ಟು ಖ್ಯಾತಾ ॥
ಕೊಂದಪೆನು ಬಾಲಿಯಂ ಕೊಡುವೆ ಕುಶಲಾಳಿಯಂ ।
ಪಿಂದಿರುಗದೆನ್ನ ನುಡಿ ಬೆದರದೆಲೆ ಧೃತಿಯು ಪಿಡಿ ।
ಸಂದೇಹಮಂ ಮಾಡಿ ಹಿಂದು ಮುಂದಂ ನೋಡಿ ಖತಿಯನುಳಿ ಹರುಷಮೂಡಿ ॥
ಹರಿಯು ಚಕ್ರವಯಸ್ಯದನುಷಂಗವೊಪ್ಪಿರುತ । (38)
ಮರಿಭಯದ ದೈನ್ಯಮೊಶಸ್ಕೃತಿಗೆ ತರಲದೇಂ ।
ಕರದ ಧನುವಾರೋಪಣಂ ಗೈವುದಕೆ ಮುನ್ನಮೊಬ್ಬಹತ್ಕಂ ಕೋಪದ ॥
ಭರವನನುಸರಣೆ ಗೈವುದರೆಂದ ಮೊದಲೆ ನೀ ।
ನೊರೆಯಲಹಿತನ ವೈರಕಾರಣವ ಬಿತ್ತರದೊ ।
ಳರಿವು ನಿಷ್ಕೃತಿಯು ನೆಸಗುವೆನಿಂದೆ ದುಷ್ಕೃತಿಯತನುಹರಣಮಂ ಗೈದಪೆಂ ॥ (39)
ಚರಮಗಿರಿಯಾಗ್ರಮಂ ನಾರ್ವ ಮಿತ್ರನ ಕಂಡು ।
ಕೊರಗುತಿಹ ನಾರಸವ ಮಾಳ್ಕೆಯನುಮನುಸರಿಸಿ ।
ಮರುಕಗೊಳುತಿದೆ ಚಿತ್ತ ಭವದೀಯ ದುರ್ಭರದ ದೈನ್ಯನಿರ್ಭರವ ತಿಳದು ॥
ನಿಂಗೆಗೊಂಡುದದೇನು ಕತದಿ ಸಹಜನ್ಮರಿಂ ।
ಗುರುತರದ ಕಿಲ್ಬಿಷಾಕರ ವಿಧಾನವನೆನ್ನೊ ।
ಳೊರೆದ ರರೆನಿಮಿಷದೊಳ್ ಮಾಳ್ಪ ಪ್ರತಿಕ್ರಿಯವ ನಿರ್ವೈರಮಪ್ಪಂದದಿ ॥ (40)
ಸ್ಪರ್ಧಾನುಬೀಜಮಂ ರಿಪುಬಲಾಬಲಗಳನು ।
ಸುರ್ದಡೆ ಪ್ರತೀಕಾರಮೆಸಗಿ ಜಯಸಿರಿಯನಂ ।
ಪೊರ್ದಿಸುವೆನೆಂದು ಶ್ರೀರಾಮ ಪುರದಧಿನಾಥ ಪ್ರೀತಿಯಿಂದಾಜ್ಞಾಪಿಸಿ ॥
ಹೃದ್ರೋಗಮಂ ನೀಗಿ ಮಿತ್ರಸುತನತುಳ ಹರು ।
ಷೋದ್ರೇಕದಿಂದಮಾವೃತ್ತಮಂ ಬಿತ್ತರಿಸೆ ।
ನಿರ್ಧಾರಣಂಗೈದು ತನ್ನೊಳಾಲೋಚಿಸುತಮಿರ್ದನಾ ಕ್ರೋಡದೊಳಗೆ ॥ (41)

ಸಂಧಿ 3 ಕ್ಕಂ ಪದ 121.

ನಾಲ್ಕನೆಯ ಸಂಧಿ.

ಸೂಚನೆ ॥ ಅಗ್ರಜಾನುಜವೈರ ಕಾರಣವನೆಲ್ಲಂ ಸ।
ಮಗ್ರಮೆನೆ ವಿಸ್ತರದಿ ಬಿನ್ನಪಂಗೈದರಾ।
ಸುಗ್ರೀವನಂ ದಯದಿ ಮನ್ನಿಸುತಮಭಯಮಂ ದಯಗೈದ ರಘುವೀರನು ॥

ಗಿರಿಜೆ ಕೇಳ್ ರಾಘವಂ ಬೆಸಗೊಳ್ಳಲ್ ಸುಗ್ರೀವ।
ಪರಮ ಹರುಷದಿ ಪೂರ್ವ ವೃತ್ತಾಂತಮೆಲ್ಲಮಂ।
ಪರಮ ಪುರುಷಂಗೆ ಬಿತ್ತರಿಸಿ ಪೇಳ್ದ ದೇವ ಲಾಲಿಪುದು ಬಿನ್ನಪವನು ॥
ವರಮಹಾಕಿಷ್ಕಿಂಧಿ ಬೆರ್ಗಿರಿಗೆ ವಡುಲದಿಂ।
ಪರವೃಢ ತಾನಾಗಿ ಸುರನರ ಭುಜಂಗರಿಂ।
ನರರೆ ಕಡಕರ್ಕಶಂ ಬಳತಾಗಿ ಬಲಿಯದಿಂದಿದಿರಿಲ್ಲದಾವೋದದಿ ॥ (1)

ಸರಸಿಜಾಸನ ತನಯ ರಿಕ್ಷನವನಾತ್ಮಜರು।
ಧುರವಿಜಯ ವಾಲಿಯಾತನ ತಮ್ಮನಾಂ ಜಗ।
ದ್ಭರಿತ ಜಸಮಂ ಪಡೆಯಲಯ್ಯನೊಡನೈತಂದೆ ಛಂದದಿಂದೆ ॥
ಪರಮ ಸುಖದಿಂದ ಕಪಿರಾಜ್ಯಮಂ ಪಾಲಿಸುತ।
ಧೊರೆಯೆನಿಸಿ ರಿಕ್ಷನಿರಲಖಿಳ ಭೋಗಂಗಳಂ।
ಸರಭಸದಿ ಕೈಕೊಂಡು ಸಕಲ ಸನ್ಮತದಿಂದ ಪಲಕಾಲ ಬಾಳ್ದನರಸಾ ॥ (2)

ದೇವನಿರ್ಮಿತವಾದ ಕಿಷ್ಕಿಂಧಿಯೊಳು ಮಹಾ।
ದೇವನಪ್ಪಣೆಯಿಂದ ಸಕಲ ಕಪಿ ಕರಡಿಗಳ।
ದೇವತಾತ್ಮವನಾಂತು ರಿಕ್ಷರಾಜಂ ಸುಖದಲಿರ್ದ ಕೆಲಕಾಲಕರಸಾ ॥
ಆವ ಕಾಲದಲಪ್ಪದದು ತಪ್ಪದೆಂದಾತ।
ದೇವಲೋಕಕೆ ನಡೆದನಾದುದೈಸಿರಿಯಣ್ಣ।
ದೇವಗನುದಿನ ನಾನು ಪಿತೃಭಕ್ತಿಗಿಂದಧಿಕ ಸೇವೆಯೆಸಗುತಮಿರ್ದೆನು ॥ (3)

ನುಡಿಯಮೀರದೆ ಧರ್ಮನಡತೆಯಂ ಜಾರಿಸದೆ।
ದೃಢಭಕ್ತಿಯಿಂದಣ್ಣ ಪೇಳ್ದಂತ ಸಂತಸದೊ।
ಳೆಡೆವಿಡದೆ ಪ್ರಾಣವೊಂದೆನಿಸಿ ತನುವೆರಡಾಗಿ ತೋರ್ಪಂತೆ ನಡೆಯುತಿರಲು ॥
ಕಡುಮಮತೆಯಿಂದಗ್ರ ಭವನೆನ್ನ ಪ್ರೀತಿಯಿಂ।
ಪೊಡೆಯೊಳುದಿಸಿದ ತರುಣನಿಂದಧಿಕವೆಂದು ಸಂ।
ಗಡಿಗನಂ ಗೈದೊಂದು ಕಾರ್ಯದೊಳ್ಬಿಡದೆ ಪೋಷಿಸಿದ ನೆನ್ನನೊಲಿದು ॥ (4)

ದುಂದುಭಿಯ ತನುಜ ಮಾಯಾನಿದಾನವನೇನ।
ದೊಂದು ದಿನ ಕಿಷ್ಕಿಂಧದೊತ್ತಿಗೈತಂದು ಬಲ।
ದಿಂದ ಪ್ರಳಯಾನಿಲಂ ಮೊರವಂತೆ ಭೋರ್ಮೊರೆದನರ್ಧರಾತ್ರಿಯೊಳು ಪೊರಗೆ ॥
ಬಂದುದಾಸಮಯದೊಳ್ ಕೋಪವಣ್ಣಂಗದಾ।
ರಿಂದ ಶಾಂತಂ ಪೊಂದದಾದುದತಿ ರೋಷದಿಂ।
ಕೊಂದಿಡುವೆ ರಕ್ಕಸನ ನೀಕ್ಷಣದೊಳೆಂದೆನುತ ಪೊರಟನುತ್ಸವದಿ ವಾಲಿ ॥ (5)

ಕಾಲಾಗ್ನಿ ಸದೃಶ ಸುರಪತಿಯ ಸುತನಂ ಕಂಡು ।
ಜಾಲಂಗಳಂ ತೋರಿ ನಿಲಲಮ್ಮದಸುರಂ ನಿ
ಜಾಲಯಕೆ ಗಮಿಸುತಿರೆ ಪಿಂದಿಟ್ಟು ಪೋದನೇನೊಂದನೆಣಿಸದೆ ಕೋಪದಿಂ ॥
ಕಾಲ ಪ್ರಾಣಿಗಳ ಮೇಲ್ವರಿವಂತೆ ಬೆಂಬಿಡದೆ ।
ವಾಲಿ ದೈತ್ಯನ ಪಿಡಿಯಲವ್ವಳಿಸಿ ಪೋಗುತಿರ ।
ಲಾಲಸ್ಯಮಿಲ್ಲದಾಸ್ಯೈತಂದೆನಾತನೊಡನೆಡೆವಿಡದೆ ಮಮತೆಯಿಂದ ॥ (6)

ಕತ್ತಲೆಯ ಮೊತ್ತ ಬಲು ಮುತ್ತಿರಲು ಸುತ್ತಲೆ ।
ತ್ತಿತ್ತಲುಂ ಕಾಣದಂಧತೆಯಿಂದಲಸುರನಂ ।
ಪತ್ತಿ ಬೆಂಬೊತ್ತಿ ಮಗುಳೊತ್ತಿ ಪಿಡಿದಪೆನೆಂಬ ಮಮಕಾರವೆತ್ತು ಬಳಕ ॥
ಆತ್ತಿತ್ತನೋಡದೊಂದೊತ್ತು ಸಾಗದೆ ಕ್ರೋಧ ।
ಚಿತ್ತಮತ್ತತೆವೆತ್ತ ಮಮಕಾರದಿಂ ಬಾಲಿ ।
ಬಿತ್ತರದ ಉತ್ತಮಂ ಚಿತ್ತ ಬಲದಿಂ ಶೈಲದೊತ್ತ ಸಾರಿದ ನರೇಶಾ ॥ (7)

ಕಕ್ಕುಲಿತೆಗೊಂಡು ಸಿಲ್ಕದೆ ದೈತ್ಯ ನೋಟದಿಂ ।
ಮಿಕ್ಕು ಮತ್ತೊಂದು ಬಿಲಮಂ ಪೊಕ್ಕು ಕಾಣದಿರ ।
ಲುಕ್ಕುವತಿ ಕೋಪ ಮೇಲೊಕ್ಕುದಣ್ಣಗದೇನ ಪೇಳ್ವೆ ಕಾಳಾಹಿಯಂತೆ ॥
ಒಕ್ಕಲಿಕ್ಕದೆ ಮಾಣೆ ಬಪ್ಪನ್ನ ಬಾಗಿಲೊಳ ।
ಗಿಕ್ಕೆಯನಿಸೊಂದಕ್ಕೆ ತಾಣಮಂ ಕೊಡದೆ ನೀ ।
ನಿಕ್ಕುಮೆಂದೊರೆದು ಪೊಕ್ಕ ಬಿಲವ ಪಾತಾಳನಿಭವನಾ ರಾತ್ರಿಯೊಳಗೆ ॥ (8)

ತಾಂಬು ಜವ್ವನದ ಮದದಿಂ ಬಲಿದ ವಾಲಿ ತಮ ।
ದಂಭದಾಡಂಬರದ ಗುಹೆಯನೊಳಪೊಕ್ಕಾಗ ।
ಜಂಭ ವೃತ್ರಾಸುರನ ದಂಭವ ವಿಡಂಬಿಸುವ ಮಾಯಾವಿಯೊಡನೆ ಬಣಗಿ ॥
ಇಂಬುಗೂಡದವನ ವಿಕ್ರಮಕೆ ದೈತ್ಯನ ಶೌರ್ಯ ।
ದಂಭಮಂ ಕೆಡಿಸಿ ಕಾದುತ್ತಮಿರ್ದರನ್ನೆಗಂ ।
ತುಂಬಿದುದು ವರ್ಷಮೇನೆಂಬೆ ಮಗುಳ್ದನಾರ ಬೆಸಗೊಂಬೆನೆಂತು ಕೌಙ್ಬೈ ॥ (9)

ಪ್ರಳಯಕಾಲದ ಮೇಘದಾರ್ಭಟೆಯ
ನೊಳಕೊಂಡು ಬಲುತೋಳಹೋರಟೆಗಳಿಂದಲುಂ ।
ಬೆಳಗಿದುದು ವೀರನಾದಂ ಗುಹಂಕಾರದೊಳ್ ಧರಣಿಯೆದೆ ಬಿರಿವಂದದಿ ॥
ಕಳಕಳದ ಬೊಬ್ಬೆಯುಬ್ಬರವಡಸಿತಾಕ್ಷಣಂ ।
ದಳದಳನೆ ಪೊರಟುದುದು ಸಫೇನ ಬುದ್ಬುದಗಳಂ ।
ತಳೆದ ರೋಹಿತದ ಪೆರ್ದೊರೆಯನಂ ಕಂಡಾನು ತಲ್ಲಣಂಗೊಂಡೆ ಜೀಯಾ ॥ (10)

ಅನಿತರೊಳು ದಾನವನ ಘನರವಂ ಪೆರ್ಚಿದುದು ।
ಮಿನುಗದಾದುದು ಮಹೇಂದ್ರಾತ್ಮಜನ ವೀರರವ
ಮೆನಗೊಂದು ಪರಿಯಾಗಿ ತೋರ್ದುದಂತರವರಿಯದಾತವೋ ನಿಲಯದೊಳಗೆ ॥
ಮನದೊಳಗೆ ಕುದಿದಾನು ಕೆಲಕಾಲ ಕಾಯ್ದಿರ್ದೆ ।
ರೆನಿತಾದರಣ್ಣನಬ್ಬರ ಕಾಣದಾದರಂ ।
ಜನಿಸಿತತಿಭೀತಿ ಮುಂಗಾಣದಲೆ ಕೆಲವುದಿನ ಬಿಲದೆಡೆಯ ತೊಳಲ್ದೆನರಸಾ ॥ (11)

ತಿಳದುದೆನಗಣ್ಣನಂ ಪೊಡೆದನಾಸುರ ತನ್ನ ।
ಖಳತ್ರೆಯುಂ ಮಿಂಚಿಸಿದನೆಂದು ಭಾರಿಯ ಶಿಲೆಯು ।
ತಳೆದುತಂದಾ ಗುಹದ್ವಾರವನು ಬಂಧಿಸಿದೆನೊಂದು ನಿಮಿಷದಿ ವೇಗದಿ ॥
ಅಳುತಳುತಮಣ್ಣನಂ ನೆನೆನೆನೆದು ದುಃಖಿಸುತ ।
ಜಳವನಿತ್ತೈತಂದು ಚೋರವೃತ್ತಿಯೊಳಾನು ।
ಪೊಳಲೊಳೊಂದಡೆಯು ಮೊಗದೋರದಾರಿಗು ಮರೆಯೊಳಿರ್ದೆನುರಸಂಕಟದಲಿ ॥

ಹಲಕೆಲವು ದಿನ ಮೌನವಿಡಿದು ಮತ್ತನ ತೆರದಿ । (12)
ನಿಲಯದೊಳ್ಕಡದಿರ್ದೆನಲ್ಲಿದ್ದರುಂ ಬಿಡದೆ ।
ಲಲನೆಯನು ಪಿಡಿದೆಳದು ಮಂತ್ರಿಗಳು ಕಪಿರಾಜ್ಯದರಸುತನವಂ ನೇಮಿಸಿ ॥
ಪಲವು ವಿಧದಿಂದ ಬೋಧಿಸಿದರಂತಃಕರಣಾ ।
ನಿಲದಾಯ್ತು ಭೋಗದೊಳ್ ತೊಳಲುತಣ್ಣನ ನೆನೆದು ।
ಬಲಬುತನ್ಮತ್ತನಂತಿರ್ದೆನಂತಃಪುರದೊಳೊಂದನಾಂತರಿಸದನಘಾ ॥ (13)

ಕಾಲಹರನಂ ಕೆಣಕಿ ಬಾಳ್ದಸುರದಾರುಂಟು ।
ಮೇಲೆ ದೈತ್ಯನ ಪೊಡೆದು ಬಾಲಿ ಪೊರಮಟ್ಟು ಬಾ ।
ಗಿಲಲಿ ಕಾಣದೆ ಕೋಪವೆರ್ಚೆ ಕಡುರೋಷದಿಂದೌಡನೊಡೆಯುಗಿದು ಬಳಕಾ ॥
ಕಾಲಲೊದೆಯಲ್ ಶೈಲ ಕಡೆಗುರುಳಲೆಡೆಬಲನ ।
ಲೀಲೆಯಿಂ ದಿಟ್ಟಿಸುತಮೆನ್ನ ಕಾಣದೆ ಕೋಪ ।
ಜಾಲ ಪೆರ್ಚುತ್ತ ಬರಲ್ಜವದಿಂದಲೈತಂದು ಕೆಲಕನ್ನ ತ್ರವಕದಿಂದ ॥ (14)

ಗುರು ಬರುವದರಿದಾನು ಹರುಷದಿಂ ಪೊರಮಟ್ಟು ।
ಚರಣಕಾನತನಾಗಿ ಪರಿಪರಿಯ ಭಕ್ತಿಯಿಂ ।
ಕರಗಳಂ ಮುಗಿದು ಕಲುಷಿತೆಯಿಲ್ಲದತಿ ಮೃದುಲ ನುಡಿಗಳಂ ಪ್ರಾರ್ಥಿಸಿದೆನು ॥
ಕರುಣಮೆಳ್ಳನಿತಿಲ್ಲದಾದುದಾತಗೆ ಕೋಪ ।
ಕರಿಗೊಂಡು ಚಪಲತೆಯೊಳೆನ್ನ ನಾನಾ ವಿಧದಿ ।
ಬಿರುನುಡಿಗಳಂ ಬೈದು ಮಂತ್ರಿಜನರೊಡನೆಂದ ವಾಲಿಯತಿರೋಷದಿಂದ ॥ (15)

ಕೇಳಿರೈ ಮಂತ್ರಿಜನರಂದು ನಡುರಾತ್ರಿಯೊಳು ।
ಖೂಳರಕ್ಕಸಬಂದು ಕೂಗಲವನಂ ಕೊಲಲು ।
ತಾಳದೈದಿದರೆನ್ನ ಬಿಡದೆ ಸಂಗಡಿಗನಂತೈತಂದನನುಜನೆಂದು ॥
ತಾಳ ಹರ್ಷದೊಳಾನು ಬೆನ್ನಟ್ಟಿ ಪೋಗುತಿರೆ ।
ಕಾಳ ದಾನವ ನೋಡಿ ಪೊಕ್ಕು ಗುಹೆಯಂ ಬಿಲದೊ ।
ಳಾಳುತನವಂ ಗೈವುದೆನುತ ಪೇಳ್ದಂ ಪೋದೆ ಪಾತಾಳಸದೃಶದೆಡೆಗೆ ॥ (16)

ಒಳಪೊಕ್ಕು ನೋಡ್ದರಾಖಳನ ಕುಲಗೋತ್ರಮುಂ ।
ಬೆಳಗಿದುದು ಕಾಳಗಂ ಬೆಳೆದುದವನೊಡನೆನಗೆ ।
ಕೊಳುಗುಳದೊಳೆಲ್ಲರಂ ಸವರಿಬರ್ಪುದಕಾದುದೈಸೆ ಮತ್ತೊಂದು ವರುಷ ॥
ಖಳನೊಡನೆ ಪೋದುದಂ ಕಂಡಾಬಿಲದ್ವಾರ ।
ದೊಳಗಾರು ಚರಿಸದಂತೊಂದು ಪೆರ್ಬೆಟ್ಟಮಂ ।
ತುಳದು ನಗರಿಗೆ ಬಂದು ರಾಜ್ಯಮಂ ಪರಿಪಾಲನಂಗೈದ ಸಂತಸದೊಳು ॥ (17)

ದೈತ್ಯೇಯಕುಲವ ಸಂಹರಿಸಿ ವಿಕ್ರಮದಿಂದ ।
ಐತಂದು ಹಾದಿಯಂ ಕಾಣದಲೆ ಕೂಗುತಿರೆ ।
ಮಾತಾಡಲೋರ್ವರಂ ಕಾಣದಾಂ ಖತಿಯಿಂದಲೊದೆದಾಗುಹದ್ವಾರದಿಂ ॥
ಆತುರದಲೈತಂದು ನಾಲ್ದೆಸೆಯ ನಿಟ್ಟಿಸುತ ।
ಭ್ರಾತನಂ ಕಾಣದತಿ ದುಃಖದಿಂದಳಲುತ್ತ ।
ಈತೆರದೊಳಿರುವನಂ ಕಂಡು ಖತಿ ಮುಂಕೊಂಡುದೆನುತವರೊಳೊರೆದನಾಗ ॥

ಕಿಡಿಯಿಡುವ ಕೋಪದಿಂದೆನ್ನ ನಿಟ್ಟಿಸಿ ಕ್ರೂರ । (18)
ನುಡಿಗಳಂ ಬೈದರಾಂ ಪದಯುಗಳ ಮಂಪಿಡಿದು ।
ಕೆಡುದೈನ್ಯದಿಂದ ಗುರುವೆನುತ ನಾನಾಪರಿಯಲಿ ಬೇಡಿ ಬಿನ್ನಪಗೈಯಲು ॥
ಪೊಡೆವುತೈತರಲಾನು ಪದುಳದಿಂದಿರ್ದೊಡೆಯು ।
ಕೆಡುವುದೊಡಲೆಂದು ಮುಂಗಡೆಯ ನಿಲೆ ಶೈಲಗಳ ।
ತುಡುಕೆ ಮರಮರಡಿಗಳೊಳಟ್ಟೆನ್ನ ಭಂಗಿಸಿದನಂಗನಾಜನದೆಡೆಯೊಳು ॥ (19)

ತಂದೆಯಿಂದಧಿಕನಗ್ರಜನೆಂದು ಭಕ್ತಿಯಿಂ ।
ದೊಂದನೇಳಿಸದೆ ಭೀತಿಯಿಂದ ಮೈದೆಗದೈದೆ ।
ಪಿಂದಟ್ಟಿ ಭೂತಳವನೆಲ್ಲಮಂ ಸುತ್ತಿದರು ಬಿಡದೆ ಪೊಯ್ಯುತ್ತ ಬರಲು ॥
ನಿಂದು ನಿರ್ವಹಿಸುವರೆ ನೆಲನಿಲ್ಲದಿರಲೆನಗೆ ।
ಬಂದು ಮರುತಾತ್ಮಭವನೀ ಗಿರಿಯ ತೋರಿಸಿದ ।
ರಂದಿನಿಂದಿಹೆನರಸ ಶಾಪಭಯದಿಂ ವಾಲಿ ಬರಲಮ್ಮನೀ ಶೈಲಕೆ ॥ (20)

ದೇವ ಕೇಳ್ ಗುಣಕೆ ಹುರುಡುಂಟೆ ಮೂಲೋಕದೊಳ್ ।
ಗಾವನಾದರು ಸುರಪಸುತನಿದಿರೊಳು ನಿಂದು ।
ಜೀವದಿಂ ಪೋಗುವಡಸಾಧ್ಯವಾತನ ಶೌರ್ಯದಿರವ ಬಿತ್ತರಿಪೆ ಜೀಯ ॥
ಸಾವಧಾನದಿ ಲಾಲಿಸಲ್ವೇಳ್ಕು ದಿನದಿನದಿ ।
ತೀವಿಯಿಂದವ ಮಾಳ್ಪ ಲೀಲೆಗಳ ಗಿರಿಗಳಂ ।
ಠಾವತಪ್ಪಿಸುವ ಶಶಿರವಿಗಳೆಡೆಯಾಟವಂ ನಿಲಿಸುವಂ ವಾಲಧಿಯೊಳು ॥ (21)

ತರಣಿಯುದಿಸದ ಮುನ್ನಲೈದಿ ಚತುರಾಬ್ಧಿಯೊಳು ।
ವಿರಚಿಸುವನರ್ಘ್ಯಗಳ ಗಿರಿಗಳಂ ಕಿಳ್ತಿಟ್ಟು ।
ಕರತಳದೊಳಾನವಂ ದಶಕಂಠನಂ ಕಕ್ಷದೊಳಗಿಟ್ಟುಮತ್ತೊತ್ತಲು ॥
ನರಿಯಂತೆ ಪಲ್ಗಿರಿದು ಧರೆಗೆ ಕೆಡವಂ ತಿರೆ ।
ಯರಲನಂ ಸುಮಗೈದು ಮುಡಿವುತಿಹ ಮತ್ತವನ ।
ಸರಿಸದೊಳ್ನಿಲುವರುಂಟೇ ದೇವ ಮಗುಳೊಂದು ಚಿತ್ರಮಂ ಬಿತ್ತರಿಪೆನು ॥

ದುಂದುಭಿಯೆನುತ್ತೋರ್ವನಸುರ ಸರಸಿಜಪೀಠ । (22)
ನಿಂದಮಮ ಸಾಹಸ್ರ ನಾಗಬಲಮಂ ಪಡೆದು ।
ಮುಂದರಿಯತುನ್ಮತ್ತನೆನಿಸಿ ದೇವಾಸುರರ ಭಂಗಿಸುತ ತನ್ನಿಚ್ಛೆಯಿಂ ॥
ಸಿಂಧುರಾಜನ ಪೊರೆಗೆ ಬಂದತುಲ ದರ್ಪದಿಂ ।
ಬಂಧಿಸುತಮಾರ್ಭಟಿಯಲಖಿಳ ದಿಕ್ತಟಗಳಂ ।
ಕಂಧರವ ಪೋಲ್ವ ಮಹಿಷಾಕೃತಿಯ ತಳೆದಸುರನೆಂದನತಿಗಡಣದಿಂದ ॥ (23)

ನೀರೊಟ್ಟಿಲಾಣ್ಮನೀ ಜಗತಿಯೊಳಗತ್ಯಂತ ।
ಶೂರನೆನ್ನುತ ಪೇಳುತಿರೆ ಕೇಳ ರಣದೊಳ ।
ಜಜ್ಜರೆಯನುತೆಚ್ಚಾಡಲೆಂದು ಬಂದಿಹೆನೆಂದು ರಕ್ಕಸಂ ನುಡಿಯೆ ಬೆದರಿ ॥
ಆರೆನ್ನ ಸುಭಟನೆಂದಾಡಿದವ ನೋಡುವರ ।
ತೋರು ಜಡಧಿಯೆನುತ್ತಲೆಲ್ಲರರಿತಿಹರೆಂದು ।
ವೀರತ್ವಮಂ ಬಿಟ್ಟು ನುಡಿದುದಧಿಯನ್ನೋಡಿ ದಾನವಂ ಮಗುಳೆಂದನು ॥ (24)

ನುಡಿಯಿಂದ ಹೇಯಗೈದರೆ ನಿನ್ನನಾನೆಂತು ।
ಬಿಡುವೆ ಯುದ್ಧಾತಿಥ್ಯಮಿತ್ತಪುದದಲ್ಲದೊಡೆ ।
ಪೊಡವಿಯೊಳಗಾರಿರ್ಪರೆನಗೆ ತೋರುವುದೆನಲ್ ನೀರಧಿಯು ಕೈಮುಗಿಯುತಾ ॥
ನಡುಗುತಾಳೋಚನಂ ಗೈದ ಪೈಶಾಚಮಿದು ।
ಕಡೆಗಟ್ಟುವದಲ್ಲದರುಗದೆನುತ್ತ ಮನದೊಳಗೆ ।
ಮಡಗಿ ಸಮಯೋಚಿತದ ನುಡಿಗಳಂ ಪೇಳದಂ ರಕ್ಕಸರ ರಾಯನಿಂಗೆ ॥ (25)

ಹರಗೆ ಮಾವಂ ಧರಾಧರಗಳರಸಂ ಧೈರ್ಯ ।
ದೆರೆಯು ಹಿಮಶೈಲೇಂದ್ರನಿರ್ಪನಲ್ಲಿಗೆ ಪೋಗೆ ।
ಕರದು ರಣಭೋಜನವನುಣ್ಬಡಿಸಿ ಸಂತಸಂ ಬಡಿಸುವನೆನುತ್ತ ಪೇಳೆ ॥
ತರಿಸಿ ರತ್ನಂಗಳಂ ಕಾಣಿಕೆಯನೊಪ್ಪಗಿಸಿ ।
ಕರತಳಗಳಂ ಮುಗಿದು ಪರಿಪರಿಯನುತಿ ಗೈಯೆ ।
ಹರುಷದಿಂದಾಸುರಂ ಹಿಮಗಿರಿಯನರಸುತ್ತ ಕ್ರೋಧದಿಂದೈತಂದನು ॥ (26)

ಪುಟನೆಗವುತಾರ್ಭಟಿಸಿ ಕೂಗಿದಡೆ ಬಹ್ಮಾಂಡ ।
ಪಟಪಟನೆ ಸಿಡಿವುದೆಂಬಂತೆ ರಕ್ಕಸಲೋಕ ।
ಕಟಕಿ ದುಂದುಭಿ ಬಂದು ಹಿಮಶೈಲದಾಪತ್ಯ ಕಚ್ಛದೊಳ್ ನಿಂದು ಮೊರೆದು ॥
ಕಟಕಟನೆ ಖುರಗಳಂ ಪರ್ವತವನಪ್ಪಳಿಸೆ ।
ಚಟಚಟನೆ ಗಂಡಶೈಲಗಳೊಡೆದು ಧರೆಗುರುಳೆ ।
ಪಟಪಟಾರ್ಭಟೆಗಂಜಿ ತಲ್ಲಣಿಸಿ ಗಿರಿರಾಜ ನಡೆತಂದ ನಸುರನೆಡೆಗೆ ॥ (27)

ಬರಸಿಡಿಲ್ಮೂರ್ತಿಯಾಂ ತಾಳ್ದಂತೆ ಕಂಗೆಸೆವ ।
ದುರುಳ ದೈತ್ಯನ ಕಂಡು ಕರಪದಂಗಳು ನಡುಕ ।
ವೆರದಾ ಮಹೇಂದ್ರೇಂದ್ರನುಪಚರಿಸಿ ಬೆಸಗೊಂಡನೇಂಕತದೊಳೆನ್ನಲ್ಲಿಗೆ ॥
ಬರವಾಯ್ತು ದೈತೇಂದ್ರ ಬೆಸನಿತ್ತರಾಂಗೈದು ।
ತರುವೆನೆನೆ ರಕ್ಕಸಂ ಗಿರಿಯ ನೋಡುತಲೆಂದ ।
ಧುರವ ಯಾಚಿಸಿ ಬಂದ ದುಂದುಭಿಯೆನುತ್ತೆನ್ನ ತಿಳ ಪಾರ್ವತಿಯ ತಾತನೆ ॥ (28)

ಕೈಗೊಡು ರಣಾಂಕಣದಿ ಸೆಣಸು ಮಲ್ಲರ ತೆರದಿ ।
ಕೈಗೆ ಕೈ ಮೈಗೆ ಮೈ ತೆತ್ತು ರೋಷಂಬೆತ್ತು ।
ಬೈಗಿನ ಬಿಸಿಲ್ಗೈವ ಭವದೀಯ ವಿಕ್ರಮವ ತಿಳ ಮತ್ಪರಾಕ್ರಮವನು ॥
ಕೈಗುರಿಯ ಮಾಡಿ ವೇತಾಳ ಭೂತಂಗಳಗೆ ।
ಕೈಗೈವೆ ರೋಹಿತದ ಪಾರಣೆಯ ನೋಡೆನ್ನ ।
ಕೈಗುಣವನೆಂದಸುರ ಬೊಬ್ಬಿರಿಯಲಾಗ ನಗರಾಜ ಭಯಗೊಳುತೆಂದನು ॥ (29)

ಕೊಳುಗುಳದಿ ಮುರಿದು ಮುಂಗೆಟ್ಟು ಬಂದವರಿಂಗೆ ।
ನಿಳಯಮಾಗುವದೊಂದೆ ಶೌರ್ಯಮಲ್ಲದೆ ತೋಳ ।
ಬಲುಹಲಾವೆಡೆಯೊಳಾಂ ಕಾದಿದುದ ಕಂಡರಿವುದಿಲ್ಲ ಭೂಮಂಡಲದೊಳು ॥
ಕಲಿಗಳಂ ಪಿಡಿದು ನೀಂ ಸೆಣಸಲತುಲಿತ ಕೀರ್ತಿ ।
ಬೆಳಗುವದು ಭೂತಳದೊಳಲ್ಲದೀ ಸ್ಥಾವರಗ ।
ಳಳಲಿಸಿದರೇ ಬಪ್ಪುದೈಯ ರಕ್ಕಸರಾಯ ಪಿಡಿಯೆನುತ ಕೈಮುಗಿದನು ॥ (30)

ಹಿಮಗಿರಿಯ ನುತಿಗಳಂ ಕೇಳ ದುಂದುಭಿ ನಗುತ ।
ಲೆಮಗೆ ಮಾರ್ಮಲವರಂ ತೋರಿಸೆನೆ ರಕ್ಕಸನ ।
ಭ್ರಮೆ ನಿವಾರಣಮಪ್ಪ ತಾಣಮಂ ಮಾನಸದಿ ಚಿಂತಿಸುತಲೆನುತಸುರಿದಂ ॥
ಅಮರಪತಿಯನಾಗನಾಹವಭೀಮ ನಿನ್ನೊಡನೆ ।
ಸಮರದೊಳ್ಸೆಣಸಿ ಭುಜಕಂಡೂತಿಯಪಟಳವ ।
ಶಮೆಗೊಳಿಪನಲ್ಲದುಳಿದವರಿಂದಮಿನಿಸು ಫಲಮಾಗದಾವೆಡೆಯೊಳೆನುತ ॥ (31)

ಬೇಳಲಚ್ಚರಿಗೊಂಡು ಚಿತ್ತದೊಳ್ಮತ್ಸರವ ।
ತಾಳಿ ದುಂದುಭಿ ಜವದಲೈತಂದು ಕಪಿಕುಲವ ।
ನಾಳವನ ನಗರದೆಡೆಯೊಳ್ಮಹಾರ್ಭಟೆಗೈದು ರೋಷದಿಂ ಹೂಂಕರಿಸಲು ॥
ಕಾಳಾನಿಲಂ ಬಂದುದೆನುತ ಭಯದಿಂದ ಹರಿ ।
ಕೋಳಾಹಳ ಧ್ವನಿಯು ಪರಕಲಿಸೆ ಕಪಿರಾಯ ।
ಕೇಳ ಸಂವರ್ತರುದ್ರನ ರೋಷಕೆಮ್ಮಡಿಯ ತಾಳ್ದುಮುಗಿದಂ ಕ್ಷಣದೊಳು ॥ (32)

ಯಮನ ದಾಡೆಯ ವದನನೋಡಿ ಸಾಹಸಕನಹ ।
ಭ್ರಮೆ ಯಾವಗುದಿಸಿದುದೊ ನೋಳ್ಪೆನಾತನ ಪರಾ ।
ಕ್ರಮವನೆನುತೈದುತಿಹ ಪತಿಯ ನಿಟ್ಟಿಸಿ ತಾರೆ ಚರಣಾಬ್ಜಗಳಗೆ ನಮಿಸಿ ॥
ಸಮದ ರಿಪು ಗರ್ವ ಪರ್ವತ ಕುಲಿಶನ ಸುರಪತಿ ।
ತಮದಂಭಜಂಭನಿಭ ವಿಗ್ರಹೋಪಾಯಗಳ ।
ಸಮತೆ ಕೈಗೈಯವೇಳ್ಕೆನುತ ಬಿನ್ನಪಗೈಯಲಾನೆರಗಿ ಕಾಲ್ಪಿಡಿದೆನು ॥ (33)

ಕೊಡನ ಮಗನೆಡೆಯ ನೀರಧಿಗಳ ಪ್ರಯತ್ನಮೇಂ ।
ಮೃಡನಿದಿರಲಾವ ದೇವರ್ಕಳಾರ್ಭಟೆಗಳೇಂ ।
ನಡೆದಪವ್ರೊ ಸುರಪಸುತಗಿದಿರಾಂತು ಬಾಳ್ವರಾರೀ ಸುರಾಸುರ ಭಟರೊಳು ॥
ದೃಢವ ಕಂಡರಿತು ಕೇಳ್ದೀ ಪರಿಯ ದೈನ್ಯಗತಿ ।
ವಿಡಿದು ಕಾಲ್ವಿಡಿದು ಕಾರ್ಪಣ್ಯಗೊಳಲೇಕವನ ।
ಬಡಿದು ಕೆಡಪದೆ ಮಾಣೆ ಬಡುಬಡೆನುತಂ ಕೊಡಪಿ ನಡೆದನಸುರೇಂದ್ರನೆಡೆಗೆ ॥ (34)

ಪ್ರಳಯಜಂಝಾನಿಲಂ ಸುಳಿವಂತೆ ದರ್ಪದಿಂ ।
ಪೊಳಲಿಂದ ಪೊರಮಟ್ಟು ಬರ್ಪ ಸುರಪಸುತನ ।
ಖಳ ನಿರೀಕ್ಷಿಸಿ ರೌದ್ರದಿಂದ ಕಾಲ್ಗಳ ಕೆರದು ಪಲ್ಮರಿದು ಶೌರ್ಯವೆರದು ॥
ಧಳಧುಳದಲೈತಂದು ಧಿಕ್ಕರಿಸಿದಂ ಬೇಗ ।
ನಿಳಯದೊಳ್ಪಾನಮದದಿಂದ ಬೆಂಗಳಪುದಾ ।
ವಳಯದೊಳು ಬಲುಹ ತೋರ್ಪಂತಿಲ್ಲ ಸುಳಿವರೇನಹುದು ನಿನ್ನಿಂದ ಕಪಿಯೆ ॥ (35)

ಮರದಿಂದ ಮರಕಡರಿ ಮತ್ತೆ ಧರೆಯೊಳಗುರುಳ ।
ಮರಳ ಶೈಲಗಳೇರ್ದು ಮಗುಳಿಲ್ಲ ಪೊರೆಬಿರ್ದು ।
ಗಿರಿಗಿಳಲು ನಿಬಿಲೆನುತ ತರುಗೊನೆಗಳಂ ಮುರಿದು ಪರಿದು ಮಧುಪಾನಗೈದು ।
ನರಿಗಳಂ ಧಿಕ್ಕರಿಸಿ ಹರಿಗಳಂ ನೆಕ್ಕರಿಸಿ ।
ಕೆರಿದು ಪಲ್ಗಳ ಪಣ್ಪಲಂಗಳಂ ತಿರಿದುಂಬ ।
ಪರಿಹಾಸಕರ ಕಪಿಯೆ ನೀನೆನಗೆ ತೋಱಿಯೇ ಪೋಗೆನುತ ಧಿಕ್ಕರಿಸಿದಂ ॥ (36)

ಸಂಗರದಿ ಜಯ ಪರಾಜಯ ವಾರ್ತೆಗಳನಾವು ।
ದಂಘವಣೆಯುನ್ನಳದು ಬೆಂಗಳಂದದಿ ಪಾಳ್ವು ।
ಸಂಗವಾಡುವೆ ಮರುಳೆ ಕಾಡರಿಯದಾದೆ ನೀನೆಂದಿಗುಂ ಸುರಪಸುತನ ।
ಸಂಗರವ ನೋಡೆಂದು ಸರಿಸದೊಳ್ನಿಂದು ಸಿಡಿ ।
ಲಂಗನೆ ಸಘಾತವೆಂಬಂತೆ ಮುಷ್ಟಿಯನಸುರ ।
ನಂಗದೊಳಗರ್ಪಿಸಿದನೇನೆಂಬೆ ದಂಭೋಳಿ ನೀಲಗೆರಗುವಂತೆ ॥ (37)

ಹರಿಯು ಬಲುಹಿಂಗಳ್ಕದ ಸುರನೆರಗಿದ ಗಿರಿಯು ।
ಬರಸಿಡಿಲು ಪೊಡವಂತೆ ಕರಿದು ಕೇಶಾಕೇಶಿ ।
ಭರದಿ ಮುಷ್ಟಾಮುಷ್ಟಿಗಳಲಿ ಸೆಣಸಿದರೋರ್ವರೋರ್ವರಂ ಗಣನೆಗೊಳದೆ ॥
ಹರಿಯು ಕೈಟಭನ ಜಂಭಾರಿ ವೃತ್ರಾಸುರನ ।
ಹರಗಜಾಸುರ ಯುದ್ಧಕೈವಡಿನೆ ಮೂಲೋಕ ।
ಬೆರಗುಗೊಂಡಿರಲರ್ಧ ನಿಮಿಷ ಪುತ್ಥಳಿಕೆಗಳ ಮಾಳ್ಕೆಯೊಳಗಚ್ಚರಿಯನೆ ॥ (38)

ಘೋರರೌದ್ರಾವೇಶದಿಂದ ಮುಂಬರಿದು ಕಪಿ ।
ವೀರನಾತನ ಪಿಡಿದು ಕಾಲ್ವಿಡಿದು ಭೂತಳದಿ ।
ಪೂರಾಯಘಾತಮಪ್ಪಂತೆ ಮತ್ತಪ್ಪಳಿಸೆ ಕರಣಗಳ್ಕಳವಳದು ತ ॥
ಕ್ಕರಿ ರಕುತವನಸುಗಳಂ ತೊರೆಯೆ ವಾಲಿ ಮುದ ।
ವೇರಿ ಕಾಲಿಂದವನ ತೂಗಿ ಚಿಮ್ಮಿದರಮಿತ ।
ದೂರದೊಳ್ಬಿಡದುದಸುರನ ಕಳೇವರ ಮಾದೆಚ್ಚರಿಯದೊಂದೆಡೆಯೊಳು ॥ (39)

ಒಂದು ಯೋಜನದಳತೆಗೈದುವೆಡೆಯೊಳು ರಕುತ ।
ಬಿಂದುಗಳು ಬಿರುಗಾಳಿಯಿಂ ಪದತಿ ಜವದಿಂದ ।
ಬಂದಾ ಮತಂಗಮುನಿಯಾಶ್ರಮದಿ ಬರ್ದವಲೆ ಮುಂಗಾರಪನಿಗಳೆನಲು ॥
ಬಂಧುರದ ರಕ್ತವೃಷ್ಟಿಯು ನೋಡಿ ಮುನಿಪ ನಿಂ ।
ತೆಂದನನುಚಿತಕಾಲದೊಳು ಮೇಘಶೋಣಿತದ ।
ವೃಂದಮಂ ಕರೆವುದೇಂ ಕಾರಣವೊಯೆನುತಲುಂ ಕೋಪಭರಮಂ ತಾಳ್ದನು ॥

ಕಡುಗೋಪದಿಂದಲಾ ಮುನಿಪ ಬಿಗ್ಗನೆ ಬಂದು । (40)
ಕೆಡದಸುರನಟ್ಟೆಯಂ ಕಂಡು ಮತ್ತಾವನೀ ।
ಪೊಡವಿಯೊಳು ಪರ್ವತಾಕಾರ ಮಾಹಿಷನಿವನ ತಂದಿಡಲು ಬಲವಂತನು ।
ಮೃಡ ನಮಶ್ಶಿವಯೆನುತ ಜ್ಞಾನದೃಷ್ಟಿಯನಾಂತು ।
ಸಡಗೆರದಿ ನಿಟ್ಟಿಸಲು ತೋರ್ದುದಾತಗೆ ಕೈಲಿ ।
ಪಿಡಿದ ಕನ್ನಡಿಯೋಲ್ ಪ್ರಪಂಚ ಕಾಣ್ಬಂದದಿಂದೇನೆಂಬೆನದ್ಭುತವನು ॥ (41)

ಒಂದು ಯೋಜನದಗಲ ಶೋಣಿತದ ಮಳೆ ಸುರಿಯು।
ವಂದದಿಂದಖಿಲ ತರುಜಾಲಂಗಳುಂ ನೆಲಕೆ।
ಪೊಂದುವಂದದ ದೂರಾತ್ಮತೆಯುನೆಸಗಿದ ವಾಲಿಯೆವಿಪ್ರ ಬನದ ಪೊರೆಯೊಳು ॥
ಯೆಂದಾದರೆಯು ಸುಳದರಸುಗಳೆಯುಲೆಂದು ಕಪಿ।
ವೃಂದ ಕಾಣ್ಬೋಲ್ ಶಪಿಸೆ ಕಂಡು ಭಯದಿಂದೋಡಿ।
ಬಂದು ಸುರಪನ ಸುತನಿಗೀ ವಾರ್ತೆಯನ್ನು ದೂರಿದರಾಕ್ಷಣಂ ಸಮುಖದಿ ॥ (42)

ಯೆನುತ ಕಪಿಗಳ್ಪೇಳಲತಿಭಯದೊಳಮರೇಂದ್ರ।
ತನಯ ಮುನಿಯೆಡೆಗೈದಿ ಬಹುವಿಧದಲುಪಚರಿಸೆ।
ಅನುಮತಿಸದಾ ಮುನಿಪ ನಿತ್ತ ಶಾಪವ ನೈಜವೆನಲಂಜಿ ಕೆಲಸಾರಿದಂ ॥
ವನವ ನಿಟ್ಟಿಸದಂದಿನಿಂದ ವಾಲಿಯು ಶಾಪ।
ದನುವ ತಿಳದತಿ ಭಯದೊಳೀ ವಾರ್ತೆಯುಂ ತಿಳುಹೆ।
ಹನುಮಂತನೆನಗಂತರಂಗದೋಳ್ಮುದದಿಂದ ನೆಲೆಯಾದುದರಸ ಖಪಿನಾ ॥ (43)

ತ್ರಿದಶಪತಿಸುತನಾವನಾದವಂ ಸುರಪಸುತ।
ನದುಭುತ ಪರಾಕ್ರಮವನಳ್ಕಿಸುವರಿಲ್ಲ ಬಲ।
ಮದದಿಂದಲೇನೊಂದ ತಿಳಿಯದತಿ ಗರ್ವದಿಂ ಕಿಷ್ಕಿಂಧಿಯೊಳಗಿರ್ಪನು ॥
ಸದಯಮುನಿಪನ ಬನದೊಳಭಯ ಮಾಗಲ್ಕೆಮಗೆ।
ಉದರಪೋಷಣೆ ಗೈದುಮುಚಿತ ಕರ್ಮಗಳುಳಮು।
ಸದಗರಂತಿನಿರ್ಪೆನೊಂದ ನೆನೆಯದೆ ರಾಮ ಲಾಲಿಪ್ಪುದು ನೃಪಲಲಾಮ ॥ (44)

ಜಗತೀತಳದೊಳೋರ್ವರಾದಡಂ ವಾಲಿಯಂ।
ಮಿಗೆನೋಳ್ಪರಸದಳಂ ಮೂದಲಿಸುತಾತನಂ।
ಬಗೆಯೊಳಗೆ ಸ್ಮರಿಸುವಡಸಾಧ್ಯ ನಿರವದ್ಯನಿನ್ನಾಲಗುಂ ದುಸ್ಸಾಧ್ಯನು ॥
ಜಗದೀಶರಾಮ ಪುರವರಸನಾ ಬಲಿಯಿರ್ಪ।
ಬಗೆಯ ವಿಸ್ತರದಿಂದ ಜನ್ನಪಂ ಗೈದೆ ನೀಂ।
ಸುಗುಣಗಣ ಮಣಿ ವನೆಂತವನದರ ಸಂಥಾನ ಚಿಂತೆಯುಂ ನೀವರಿಪ್ಪುದು ॥ (45)

ಸಂಧಿ 4 ಕ್ಕಂ ಪದ 167.

ಐದನೆಯ ಸಂಧಿ.

ಸೂಚನೆ ॥ ವಿಶ್ವರೂಪವ ತೋರಿ ವಿನಯದಿಂದಾಗ ಹರಿ।
ದಶ್ವನಂದನನ ಸಂತಸ ಗೊಳಸಿದಂ ರಾಮ।
ವಿಶ್ವಾತ್ಮನಹುದೆನಿಸಿ ರಾಜಿಸಿದ ಶೈಲದೊಳು ಶರಣರಂ ಹರುಷಗೊಳಿಸಿ ॥

ಶಿವೆ ಕೇಳು ವಾಸವನ ತನಯನುರು ವಿಕ್ರಮವ।
ಪವಣಬಿನ್ನವಿಸಿ ಸುಗ್ರೀವ ಕರಗಳ ಮುಗಿಯೆ।
ತವಕದಿಂ ನಸು ನಗುತ ರಾಮಚಂದ್ರಮ ನುಡಿದನಾ ಕಪಿಪ್ರವರನೊಡನೆ ॥
ನವನವಕವೆನಲಣ್ಣನತಿಶಯದ ವಿಕ್ರಮಮ।
ನವಿರಳದ ಭಯಗೊಂಡು ನೀ ಪೇಳ್ವನಾವರಿಂ ॥
ದವನಳವ ತಿಳವದಕದೇಂ ಗೈದರಹುದು ನಿನಗನುವಮಾನಹರವೆಂದನು ॥ (1)

ಕೊಂದಪೆವು ವಾಲಿಯನೆನುತ್ತಲಾವು ಪೇಳ್ದಡೆ ।
ಬಂದುದಿಲ್ಲವು ಮನಕೆ ನಿನ್ನಾವುದಂ ಮಾಡಿ ।
ಸಂದೆಗವ ಪರಿಹರಿಪೆವೆನಲು ಭಾಸ್ಕರತನಯ ಬಿನ್ನವಿಸಿದಂ ಮುದದೊಳು ॥
ಮುಂದೆಸೆವ ಸಪ್ತತಾಳಂಗಳಂ ನಿಜಬಾಣ ।
ವೊಂದರಿಂ ಖಂಡಿಸಲು ದುಂದುಭಿಯ ತನುವ ಪದ ।
ದಿಂದ ಮಿಂಟಲು ಹರುಷಗೊಂಡು ಸುಖದಿಂದಿರ್ಪೆನೆಂದು ವಾಲಿಯು ಮಡಿವನು ॥

ಸಮರ ದುರ್ಜಯ ಮಹಾಬಲ ಪರಾಕ್ರಮಶೂರ । (2)
ನಮರೇಂದ್ರಸುತನಾರ ಲೆಕ್ಕಿಸಂ ಮತ್ತವನ ।
ಭ್ರಮಣಿಯೊಳ್ನಿಗ್ಗಿಕುಗ್ಗಿಹೆನರಸ ಮತ್ತೊರ್ವರಾದರಂ ಗಣಿಸೆನೆನುತ ॥
ಶ್ರಮಗೊಳುವ ಸುಗ್ರೀವನಂ ಪಿಡಿದು ತಳ್ಕೈಸಿ ।
ಮಮತೆಯಿಂ ಸಂತೈಸಿ ಕಪಿರಾಯನೆಮ್ಮ ವಿ ।
ಕ್ರಮವ ನಿಟ್ಟಿಸಿ ಹರುಷವಟ್ಟೈಹುದೆನುತ್ತಲುಂ ಮೃದುನುಡಿಯೊಳುಪಚರಿಸಿದಂ ॥ (3)

ಶರಣರ ವಿಪತ್ಕರವ ಸೈರಿಸಿದ ದೇವ ನಿಜ ।
ಕರುಣದಿಂ ರವಿಸುತನ ಕ್ಲೇಶಮಂ ಪರಿಹರಿಸಿ ।
ಚರಣದುಂಗುಟದಿಂದ ಚಿಮ್ಮಿದಂ ದುಂದುಭಿಯ ತನುವ ದಶಯೋಜನಕ್ಕೆ ॥
ತ್ವರಿತದಿಂದಿಡೆ ಕಂಡು ಸುಗ್ರೀವ ಸಂಶಯದಿ ।
ಬೆರದು ವಿಜ್ಞಾಪಿಸಿದ ದೇವ ಪೂರ್ವದಿ ವಾಲಿ ।
ಭರಿತರಕ್ತಂಮಾಂಸ ನೂತನಕಳೇವರವ ಯೋಜನಕೆ ಮಿಡಿದನೊಲಿದು ॥ (4)

ಪೊಸ ಶರೀರವನಿಟ್ಟು ಪಸಿಯುಲೆಯದೆಂಬಂತೆ ।
ಬಿಸಿಲಿಂದಲೊಣಗಿದಟ್ಟೆಯ ಮಿಡಿಯಲೆನಗೆ ಭರ ।
ವಸೆದೋರದೆಲೆ ತಾತ ನೀ ಸಾಲ ವೃಕ್ಷಗಳ ನೊಂದಸ್ತ್ರದಿಂದ ಸೆಳೆಯೆ ॥
ನುಸಿದು ಪೋದುದು ಚಿಂತೆಯೆನುತ ಬಿನ್ನಪಗೈಯೆ ।
ನಸುನಗುತ ಶರವಿಡಿದು ತಾಳಂಗಳಂ ತೋರು ।
ತ್ರಿಸೆಯೆ ಖಂಡಿಸಿ ರಸಾತಳವ ಭೇದಿಸಿ ಮಗುಳೆ ಪೊಕ್ಕುದಾ ಬತ್ತಳಿಕೆಯಂ ॥ (5)

ತಾಳಂಗಳೇಳನರೆನಿಮಿಷದೊಳ್ಕತ್ತರಿಸಿ ।
ಸೀಳ ಭೂತಳವ ಮಗುಳ್ಕೈತಂದ ಬಾಣದುರು ।
ಕೋಲ್ಗಾ ಹಳವನೋಡಿ ನಾಳೀಕಮಿತ್ರಸುತ ಹರ್ಷದಿಂದೆದ್ದು ಬೇಗ ॥
ತಾಳದಚ್ಚರಿಯಿಂದ ತನ್ನೊಳಗೆ ತಾನೆ ನೃಪ ।
ನಾಳುತನಮಂ ಗಣಿಸಿ ಭಯವ ಮಾನಸಕುಣಿಸಿ ।
ನೀಲಮೇಘಶ್ಯಾಮ ರಾಮನಂಘ್ರಿಗೆ ಮಣಿದನಾಗ ಸಂತೋಷವೆರಸಿ ॥ (6)

ಪೂರ್ವದೊಳಗವನಿಂದ ಬನ್ನಬಟ್ಟುದ ನೆನೆದ ।
ಖರ್ವಭೀತಿಯೊಳಾನು ಬಿನ್ನಪಂ ಗೈದೆನಿದು ।
ಸರ್ವಾಪರಾಧ ಕ್ಷಮಿಸಲ್ವೇಳ್ಕು ಭವದೀಯ ಶೌರ್ಯವಂ ನಿಟ್ಟಿಸುವರೆ ॥
ಸರ್ವಮಂಗಳೆಯರಸ ಹರಿ ಸರಸಿಜೋದ್ಭೂತ ।
ಗೀರ್ವಾಣಪತಿಗಳಲೆ ದೇವ ಪಾಲಿಪುದೆನ್ನ ।
ದಿರ್ವಿದಗ್ಧತೆಯನೆಣಿಸದೆ ಕೃಪೆಯೊಳೆನುತೆರಗಿ ಬೇಡಿದಂ ಬಹುವಿಧದಲಿ ॥ (7)

ತ್ರಿಪುರಹರ ಹರಿ ವಿರಿಂಚಿ ಪ್ರಮುಖರಾದರಂ ।
ಕುಪಿತನಾದೆಡೆ ನಿನ್ನ ನಿಟ್ಟಿಸಲು ಶಕ್ತರೆ ।
ಕಪಿಯುದೇಂ ಗಣನೆ ಮತ್ತಾವ ಪರಿಯೊಳಗೆಣಿಕೆ ಭವದೀಯ ಚರಣದೆಡೆಯ ॥
ವಿಪರೀತ ವಾಕ್ಯಗಳ ವಿಜ್ಞಾಪಿಸಿದ ಪರಿಯ ।
ಕೃಪೆಯಿಂದ ಮರೆದು ಕೈವಿಡಿದು ಪೊರೆದಪುದೆನ್ನು ।
ಅಪರಿಮಿತಭಯ ಭರಿತಭಕ್ತಿಯಿಂ ಪ್ರಾರ್ಥಿಸಿದ ನಾನಾವಿಧಂಗಳಿಂದ ॥ (8)

ಪದಗಳಂ ಪಿಡಿದು ಬಹು ಬಗೆಯಿಂದ ಪ್ರಾರ್ಥಿಸುವ ।
ಹೃದಯಮಂ ಕಂಡು ರಘುವೀರ ಕರುಣದೊಳಿಂದ ।
ಹೃದಯದನುತಾಪಮಂ ಬಿಡು ನಡಿದ ಬಳಿಕಿನ್ನು ಕೊರತೆ ಬಂದಪುದೆ ನುಡಿಗೆ ॥
ಬೆದರದಿರು ನಿನಗೆ ದೃಢಮುದಯಿಸುವ ರೀತಿಯೊಳು ।
ಮುದದಿ ತೋರುವೆ ದಿವ್ಯರೂಪವೆನ್ನಯ ಪೂರ್ಣ ।
ಪದವ ನಿಟ್ಟಿಪರೆ ದಿವ್ಯಾಂಬಕಂಗಳನೀವೆನೆಂದಭಯಮಂ ಕೊಡುತಲೆ ॥ (9)

ಕರುಣದಿಂದೊರೆದ ವಹಾತುರದಿ ದಿವ್ಯಜ್ಞಾನ ।
ದೊರದುದಾ ಸೂರ್ಯಸುತಗನಿತರೊಳು ಶ್ರೀರಾಮ ।
ಚರಣಾರವಿಂದಂಗಳಂ ಕಂಡ ಬಗೆಯಿಂದದೆಣಿಸಲರಿದೇನನೊಂದ ॥
ಪರಿಪರಿಯ ಮುಸಕಗಳಪರಿಮಿತ ಕರಗಳಂ ।
ಚರಣಂಗಳಮಿತ ದಿವ್ಯಾಂಬರ ವಿಭೂಷಣಂ ।
ಶರಚಾಪಖಡ್ಗಗಳ ಪಿಡಿದಖಿಳ ರೂಪಾಂತ ಮೂರ್ತಿಯಂ ನಿಟ್ಟಿಸಿದನು ॥ (10)

ಒಂದೆಸೆಯ ದೇವತಾಸಮುದಯಂ ನೋಡೆ ಮ ।
ತ್ತೊಂದೆಸೆಯ ಮೌನಿಗಳ ವೃಂದ ಮೇಣ್ನಿಟ್ಟಿಸಿವ ।
ರೊಂದೆಸೆಯ ಗಂಧರ್ವಯಕ್ಷಕಿನ್ನರಮರಗತರುಗುಲ್ಮಸಂತತಿಗಳು ॥
ಒಂದೆಸೆಯಲಸುರತತಿಯೊಂದೆಸೆಯ ಕಪಿಕರಡಿ ।
ಯೊಂದೆಸೆಯ ಮೃಗಪಕ್ಷಿಯೊಂದೆಸೆಯ ಶೈಲನದಿ ।
ಸಿಂಧುಗಳ ರಾಸಿಯಂ ನಿಟ್ಟಿಸುತಲಚ್ಚರಿಯೊಳಾಳ್ದದಂ ಸುಗ್ರೀವನು ॥ (11)

ಚತುರದಶ ಭುವನಗಳ ಚಾರು ಬ್ರಹ್ಮಾಂಡಗಳ ।
ಮಿತದಖಿಳ ಪ್ರಾಣಿಗಳ ವಿಮಲತರಕ್ಷೋಣಿಗಳ ।
ಕತಿಪಯ ಸುವೇಷಗಳ ಕಡುಕ್ರೂರ ತಮಗಳಂ ಬೆಳಗಿನೊಬ್ಬುಳಗಳನ್ನು ॥
ಅತಿಶಯದ ಘೋರ ಮತ್ತತಿವಿಪುಲ ಕ್ರೂರಗಳ ।
ನತಿಶಯದ ಶಾಂತಿಗಳನಮಿತಶಶಿರವಿಗಳಂ ।
ಪ್ರಥಿತಾಗ್ನಿಕೋಟಿಗಳ ಕಂಡನಾ ಸುಗ್ರೀವನಾ ಪುರುಷನಂಗದೊಳಗೆ ॥ (12)

ಕೆಲವೆಡೆಯ ಪಾಲನಂ ಕೆಲವೆಡೆಯ ಲಾಲನಂ ।
ಕೆಲವೆಡೆಯಲಸುರಕೊಲೆ ಕೆಲವೆಡೆಯ ನಿರಯನೆಲೆ ।
ಕೆಲವು ಕಡೆಯೊಳ್ಶೋಕ ಕೆಲವೆಡೆಯ ನಿಶ್ಶೋಕ ತೋರುತಿದೆ ಬಹಳ ಲೋಕ ॥
ಪಲವುವಿಧಜೀವರಂ ಕೊಲೆಯಿಂದ ಸಾವರಂ ।
ನಲಿವಮಿತದೇವರಂ ನಟಿಸಿ ತುತಿಸಲಿವರಂ ।
ಜಲಜಾತರಾದ್ಯರಂತಾಗಿಸುವಮಾದ್ಯರಂ ಮಿಗೆ ಕಂಡ ಸುಗ್ರೀವನು ॥ (13)

ದಶಕಂಠಕೋಟಿ ಕುಂಭಶ್ರವಣಕೋಟಿಗಳ್ ।
ದಶದಿಶೆಗಳೊಳು ಸುರಪಸುತಕೋಟಿಕೋಟಿಗಳ್ ।
ರಸೆಯು ಚಣಕೋಪಮಿತವಾಗಿ ಕಂಗೊಳಿಸಿದರ್ವೊತ್ತೊಂದು ತಾಣದೊಳಗೆ ॥
ಅಸುರಶತಸಾಸಿರ ಶಿರಸ್ಸುಗಳನಾಂತು ನಿಜ ।
ವೆಸರಿನುಚ್ಚಾರಣೆಯುಲೆಚ್ಚಾಡಿ ಮಡಿವುದಂ ।
ಪೊಸತೆನೆ ಮಹಾಪುರುಷನಂಗದೇಶದಿ ಕಂಡನಾಗ ಸುಗ್ರೀವನೊಲಿದು ॥ (14)

ನದಿಗಳೆಲ್ಲವು ನೀರಧಿಯನರಸಿ ಬರ್ಪಂತೆ ।
ವಿದಿತಪ್ರತಾಪದಾನವರೆಲ್ಲ ಬಂದಾಗ ।
ವದನಂಗಳಂ ಪೊಗುತ ದಂಷ್ಟ್ರದೆಡೆಯೊಳ್ಸಿಲ್ಕಿಪುಡಿಯಾಗಿ ಪೋಗುತಿರಲು ॥
ಕದನದೊಳ್ಕಲರು ಜಯಸಿರಿಯನಾಂತು ಸಂತೋಷ ।
ದುದಯವಂ ಕಾಣುತದ್ಭುತಗಳೆಂಬೆಲ್ಲ ಕಂ ।
ಸದನವಾದಂಗವಂ ನೋಡಿ ನಡುಗುತ ಭಯದಿ ಬೆರಗಾದ ಸುಗ್ರೀವನು ॥ (15)

ವಾಲಿಯೈತಂದೊಂದು ದಂತಾಗ್ರದೊಳು ಮಡಿದ ।
ಮೇಲೆ ರಾವಣ ಕುಂಭಕರ್ಣ ಮುಖ್ಯಾಸುರರ ।
ಜಾಲಂ ಪತಂಗಸಮುದಯ ಪಾವಕನ ಪೊಗುವ ತೆರದೊಳೈತಂದು ಕೆಡೆದು ॥
ಭೂಲಲನೆಗೊರಗಿದುದನೆಲ್ಲ ಕಪಿಕುಲವೆಲ್ಲ ।
ಲೀಲೆಯಿಂ ನಡಸುವದ ಕಂಡು ಸುಗ್ರೀವಂ ನಿ ।
ರಾಲಸ್ಯದಿಂದೆರಗಿ ನುತಿಸುವ ಸುರಾಸುರರ ಕಾಣುತಚ್ಚರಿಗೊಂಡನು ॥ (16)

ಭೀತಿಯಿಂದುದಿಸುವರು ಶಶಿರವಿಗಳುಂ ಭರದಿ ।
ವೀತಿಹೋತ್ರಂ ಮಹಾಬಲನಿಂದ್ರ ಮೃತ್ಯುಗಳ್ ।
ಧಾತುಗೆಡುವರ್ ತ್ರಿಮೂರ್ತಿಗಳಾತ್ಮರಕ್ಷಣಂ ಗೈಯಲ್ಕುಪಾಯಮೆನಿಸಿ ॥
ಸೋತುಪೋದರ್ ಚಂದ್ರರವಿಯಗ್ನಿನಕ್ಷತ್ರ ।
ಮೇತರತಿಶಯತೇಜವೆಂಬಂತೆ ಭೂವ್ಯೋಮ ।
ತಾತಷ್ಯವಾನಗೊಳುತಿರೆ ವಿಶ್ವಮೂರುತಿಯ ನೋಡಿ ವಿಸ್ಮಿತನಾದನು ॥ (17)

ಶತಕೋಟಿ ಬ್ರಹ್ಮರುದ್ರಾಬ್ಜಾಕ್ಷರುಗಳ ಮ ।
ತ್ತತಿಶಯ ಸಪ್ತರ್ಷಿ ನಾರದ ಸನಂದನಾ ।
ದ್ಯತಿ ತತಿಯನೊಂದೊಂದು ರೋಮಕೂಪಂಗಳಲಿ ಕಂಡು ಭಯಗೊಂಡು ಬಳಲೆ ॥
ಶತಕೋಟಿ ಸೂರ್ಯರೊಂದೇ ಬಾರಿ ಪುಟ್ಟಿದಂ ।
ತತುಲ ತೇಜೋರಾಶಿ ಬ್ರಹ್ಮಾಂಡಗಳ ಮನೋ ।
ಗತಿಯಿಂದ ಕಬಳಿಸುತಮಿರೆ ಕಂಡು ಬೆರಗಾದನಾ ವಿಶ್ವಮೂರುತಿಯನು ॥ (18)

ನಿಗಮಾಗಮಂಗಳೊಂದೆಡೆಯ ಪೊಗಳುತ ತೊಳಲಿ ।
ಬಗೆಗಳಂ ತಿಳಿಯದಲೆ ಕಂಗೆಟ್ಟು ನೋಡುತಿರ ।
ಲೊಗುಮಿಗೆಯ ಶ್ರುತಿಸಿರಗಳರಸಿ ಕಾಣದೆ ಬಳಲಿ ತುತಿಸಿ ಮುಂಗಾಣದಿದಕೊ ॥
ಬಗೆಬಗೆಯ ತಂತ್ರ ಸಿದ್ಧಾಂತಗಳುಂ ಕಾಣ ।
ದಗಣಿತದ ನಾಣ್ಣುಡಿಯ ನಗೆಗಾಸ್ಪದಗಳಾದ ।
ಬಗೆಗಗೋಚರ ನಿನ್ನ ಕಾಣ್ಬರಾರುಂಟು ನಾನೆಂತರಿವೆ ಮೂಢನಕಟಾ ॥ (19)

ವಿಶ್ವಲೋಕಾಧಾರ ವಿಶ್ವಭುವನಶರೀರ ।
ವಿಶ್ವನಾಟಕಸೂತ್ರಧಾರ ವಿಶ್ವಾಕಾರ ।
ವಿಶ್ವದೊಳಪೊರಗಿರ್ದು ವಿವಿಧಚೇಷ್ಟೆಗಳೆಸಗಿ ನಿರುನಿರುವಿಕಾರಿಯಾಗಿ ॥
ವಿಶ್ವಜೀವರ ಕಾಣಿಸಿ ವಿಧಿಭವಾದ್ಯರ ಸೃಜಿಸಿ ।
ಶಾಶ್ವತ ಕೃಪಾವನಧಿಯೆನಿಸಿ ತೋರುತ ಸರ್ವ ।
ವಿಶ್ವೇಶ ಜಯ ನಮೋನಮಯೆನುತಲೆರಗಿದಂ ಸುಗ್ರೀವ ಭಕ್ತಿಯಿಂದ ॥ (20)

ಬಲ್ಲೆನೆ ಮಹಾಮಹಿಮ ಭವದೀಯ ಶುಭಾಕರಣ ।
ಪಲ್ಲವಗಳಂ ಪ್ಲವಗ ಮೂಢಮತಿ ಭೀತಿರಸ ।
ದಲ್ಲಿ ಮುಳುಗಿಹ ಜಾತಿಹೀನರೂಪಿಂ ಧೈರ್ಯಮತಿಯೆನಿತು ಜನಿಪ್ಪುದರನಾ ।
ನಿಲಲಮ್ಮದೆ ನಿಖಿಲಭೂತಗಳು ಭಯಗೊಂಡು
ತಲ್ಲಣಿಸುತಿರೆ ಮಹಾದ್ಭುತರೂಪ ನೋಡುವರ
ದೆಲ್ಲಿ ಶಕ್ಯಮದಾರ್ಗೆ ಕರುಣದಿಂ ಮೂಜಗವ ರಕ್ಷಿಸಲ್ವೇಳ್ಕುಜೀಯಾ ॥ (21)

ಭಕುತನಂ ನೋಡು ಭವದೀಯ ಪೂರ್ವಾಕೃತಿಯ ।
ಸುಕರಮೆನೆ ದಯಮಾಡು ದೇವ ವಿಶ್ವಾಕೃತಿಯ ।
ಶಕುತರಾದಿಪ್ಪರೆ ಸೇವಕನ ಬಿನ್ನಪವ ಪತಿಕರಿಸು ದಯದಿ ಬೆರಸು ।
ಸಕಲಲೋಕಾತಂಕಮಂ ಪರಿಪ ನಿರ್ಜರ ।
ಪ್ರಕರಮಂ ಪಾಲಿಸುವೆನೆಂಬಭಯವಿತ್ತ ಪ್ರಿಯ ।
ದಕಲಂಕತೆಯ ನೀನದು ಜೀವಕೋಟಿಯ ಪೊರೆದು ಪಾಲಿಪ್ಪವೆನುತ್ತೆರಗಿದಂ ॥ (22)

ಕರಣಗಳು ಕಳವಳಿಸಿ ಕಾಯವನುಂ ಬಸಿವೆರಸಿ ।
ಚರಣಕರಗಲು ನಡುಗಿ ಸರ ಕಂಠದೊಳಗಡಗಿ ।
ತರಹರಿಸದತಿಭಯದಿ ಕಂಗೆಟ್ಟೆನೈದಯದಿ ಕಾಯ್ದು ಪೂರ್ವಾಕೃತಿಯನು ।
ಧರಿಸದಿರೆ ದೇಹಮಿನ್ನಿರದು ಸಂಕಟಪೆರದ ।
ಶರಣರಿಗೆ ಶರಣ ನೀನಲ್ಲದನ್ಯರದಾರು ।
ಧೊರೆಗಳೆನಿಸುವರೆನ್ನ ದೇವ ಸುರಸಂಜೀವ ನಮೋಯೆನುತ್ತೆರಗಿದಂ ॥ (23)

ಆರು ನೋಡುವರು ವಿಶ್ವಾಕಾರಮಂ ದೇವ ।
ಕಾರುಣ್ಯದಿಂ ಕಾಯವೇಳ್ಕೆಂದು ಭಯದಿಂದ ।
ಸೂರಿಯನ ಸುತ ನಡುಗಿ ಶತಸಹಸ್ರೋನ್ನತವಿ ನುತಿಗಳಂ ಮಾಡಿ ನಲಿದು ॥
ವೀರರಾಘವನು ವಿಶ್ವಾಕೃತಿಯನೊಳಗಿಟ್ಟು ।
ಪೂರುವದ ಮನುಜವೇಷದಿ ಕುಳಿತು ನಗುತ ಕಪಿ ।
ವೀರನೊಡನೆಂತೆಂದನತಿದಯಾರಸದಿಂದ ಹಿಗ್ಗುತಿರೆ ಪ್ಲವಗವೃಂದ ॥ (24)

ಪಳಿವಾತುಸಂದಣಿಗೆ ಪೊಳೆವಾಗಮದ ಕೆಳೆಗೆ ।
ತೊಳಲುತಿಹ ಮಂತ್ರಗಳ ತಂತ್ರಂಗಳಾರಡಿಗೆ ।
ಬೆಳಗುವೀ ಕರ್ಮಮರ್ಮಗಳ ಸ್ಪೃಕ್ಕಿಗೆ ಯೋಗಸಾಂಖ್ಯಾನುಮಾರ್ಗಗಳಿಗೆ ॥
ಅಳವಡುವನಲ್ಲವೇನೊಂದರಿಯದತಿಭಕ್ತಿ ।
ದಳೆದಾತನಿಗೆ ತೋರ್ಪ ನೆನ್ನ ನಿಜಮಂ ಕೇಳು ।
ಗೆಳೆಯ ನೀಂ ಬಹುಪುಣ್ಯ ಗೈದ ಕತದಿಂದಾದುದೆಮ್ಮ ದರುಶನವು ನಿನಗೆ ॥ (25)

ಸರಸಿಜಭವಾದಿಗಳು ಸತತ ಮಾಡುವ ನೇಮ।
ಭರದಿಂದಲೆನ್ನ ಕಂಡರಿಯರೇಕಾಯತನ।
ಪೆರದನನ್ಯತೆ ಪೆತ್ತ ಚಿತ್ತನೀನಾಗೆ ಮುದವೆತ್ತ ದಿಟ್ಟಿಗಳ ತೆತ್ತು॥
ಪರಮ ದಿವ್ಯಾಕೃತಿಯು ತೋರಿದೆನು ಬಕ್ತಿದೃಢ
ತರವಾಗಲೆಂದು ಸತತಾನಂದಗೊಳ್ಳುತಿರುವ।
ಪರಿಯನುಪದೇಶಿಸುವೆ ತಿಳಿದು ಕೃತಿಯುಸಾದೆನುತವುಸುರಿದಂ ರಘುವೀರನು॥ (26)

ಅರುಣೋದಯದೊಳೆದ್ದು ಕರಚರಣಗಳ ತೊಳೆದು।
ಹರುಷದಿಂದೊಂದೆಡೆಯು ಗೋಪ್ಯದೊಳು ಕುಳ್ಳಿರ್ದು।
ಸರಸಿಜಾಸನವ ಸಡಗರಿಸಿ ದಿಟ್ಟಿಗಳಿಂದ ನಾಸಾಗ್ರಕಳವಡಿಸುತ॥
ಮರುತರೋಧವ ನಿಲಿಸಿ ಹೃದಯವುವ್ಮುಕ್ಕಳಿಸಿ।
ಸರಸಿಜವ ಮಧ್ಯದೊಳು ದಿವ್ಯಸಿಂಹಾಸನವ।
ವರರತ್ನದ ಮಂಟಪದ ಮಧ್ಯದೊಳ್ ಜಾನಿಪುದು ಮಂದಾರಪಾದಪವನು॥ (27)

ಗದ್ದುಗೆಯು ಮಧ್ಯ ಮಧ್ಯಾಸೀನ ಮೂರುತಿಯು।
ಮುದ್ದುಮುಖ ಮುಗುಳುನಗೆ ಚಿತ್ರಭೂಷಾನ್ವಿತಯು।
ಬದ್ಧ ವಿರಜಾಂಬರಗಳೆಳವಟ್ಟ ಕರತಳದಿ ಧರಿಸಿರುವ ಶರಚಾಪದ।
ಪೊದ್ದಿಗೆಯನಂಕದೊಳಗಿರುವ ಧರಣೀಸುತೆಯು।
ಶುದ್ಧಾಂತರಂಗದೊಳಗೆಸೆವ ಸೌಮಿತ್ರಿಯುಂ
ಬುದ್ಧಿಗಾಜ್ಞೆಯೊಳೆಸೆವ ಶ್ರೀರಾಮಮೂರ್ತಿಯಂ ಜಾನಿಪುದು ಮನವಿಡಿದು॥

ಪರಮಪುರುಷನ ಚಿತ್ತಸರಸಿಜದಿ ಕುಳ್ಳಿರಿಸಿ।
ಪರಿಪರಿಯ ಭಕ್ತಿಯಿಂದಾವಹನಾದಿಗಳ।
ವಿರಚಿಸುತ ಪೂಜೆಗೈದೆರಗಿ ನುತಿಸುತ ಚಲಿಸದಂತೆ ಕುಳ್ಳಿರ್ದು ಬಳಿಕ॥
ಗಿರಿಜೆಯರಸಂ ಸದಾಸ್ಮರಿಸಿ ಕೃತಿಯಾದ ಶುಭ।
ಕರನಾಮಸಾಸಿರಗಳನ್ನು ಜಪಿಸುತ್ತಮಗು।
ಳೆರಗಿ ಸಂತಸದಿಂದ ನಿರತ ಸೇವಿಸಿ ನಿತ್ಯ ಸುಖಿಯಾಗಿನೆನುತೋರ್ಪನು॥ (29)

ಈ ಪರಿಯಲನುದಿನವು ಭಕ್ತಿಯಿಂ ಪೂಜಿಸುವ।
ಗೋಪಿತವ ಶರಣಂಗೆ ಪಾತಕಶತಂಗಳುಂ।
ಲೋಪವಾನಂದ ಬೆರ್ಚುತ್ತ ಬಪ್ಪದಾಸಪ್ಪನಂತ್ಯದೊಳು ಸುಖಿಯೆನಿಪ್ಪ॥
ಯೀ ಪೊಲೆಯ ದೇಹದೊಳಗಿರ್ದರಾ ಪುರುಷ ಸ।
ಲ್ಲೋಪ ನಿತ್ಯಾನಂದನಾಗಿರ್ದ ದಿನದಿನದ।
ಪಾಪಕೃತ್ಯಗಳೊಂದನೊಂದ ಜೀವನ್ಮುಕ್ತನವಸ್ಥ ಚಿತ್ತನುಸತ್ತ॥ (30)

ಎನುತ ತಿಳದೆನ್ನಲ್ಲಿ ಮನನಿಲಿಸಿ ನಿತ್ಯಸುಖ।
ದನುಭವಾನಂದದಿಂದುಪದೇಶವನು ಮಾಡೆ।
ಲಿನಸುತಂ ಭಕ್ತಿಯಿಂ ಸಾಷ್ಟಾಂಗವೆರಗಿ ನುತಿಗೈದು ಕೈಮುಗಿದು ನಿಲಲು॥
ಹನುಮ ಜಾಂಬವ ಮುಖ್ಯರಾನಂದಮಯರೆನಿಸಿ।
ವನಜಾಕ್ಷ ರಾಮ ಪುರವರಸ ರಾಘವನಪದ।
ವನಜಗಳಿಗಭಿನಮಿಸಿ ವಾಸುದೇವಾತ್ಮಕತೆವೆತ್ತು ಸುಖಿಮಿರ್ದರರಸಾ॥ (31)

ಸಂಧಿ 5 ಕ್ಕಂ ಪದ 198.

ಆರನೆಯ ಸಂಧಿ.

ಸೂಚನೆ॥ ತರಣಿತನಯಂಗೊಲಿದು ಸುರರಾಜನಂದನನ।
ಶರವೊಂದರಿಂದೆಚ್ಚು ಶಾಖಾಮೃಗದ ಬೆಚ್ಚು।
ಪರಿವನರೆನಿಮಿಷದೊಳು ರಾಘವಂ ಭಕ್ತಜನರಾನಂದ ವೆರ್ಚವಂತೆ।

ಗಿರಿಜೆಕೇಳ್ ದುಂದುಭಿಯ ಶಿರವ ಮಿಡಿದಂ ತಾಳ್।
ತರುಗಳೇಳಂ ಕಡಿದು ವಿಶ್ವರೂಪವ ತೋರ್ದ।
ಪರಮಪುರುಷನ ಮಹಿಮೆಯಂ ಕಂಡು ಸಂತೋಷಮೆಡೆಗೊಂಡು ಕಪಿರಾಜನು॥
ಚರಣಂಗಳಿಗೆ ನಮಿಸಿ ಕರಗಳಂ ಮುಗಿದು ಪ್ರಿಯ।
ಕರವಾಣಿಯನ್ನುಡಿದ ದೇವಚಿಂತಾತ್ರತಿಯು।
ಪರಿದು ಪೋದುದು ಭೀತಿ ಹಿಂಗಿದುದು ಭವಭಯ ಕೃಪೆಯುಮಂ ಪಡೆದು ಬಳಿಕ॥ (1)

ಸುರರಾಜನರಮನೆಯ ಕಳೆದುಕೊಂಡನು ಕಪಿಯು।
ಪರಿಯಾದಂತಿಹವೆನುತ್ತ ಪೇಳ್ದ ಸುಗ್ರೀವನಂ।
ಕರೆದೊಂದ ರಘುವೀರ ಮುಂದಪ್ಪ ಕಜ್ಜವಂ ವಿರಚಿಸು ನಿರಾಲಸ್ಯದೆ॥
ತ್ವರಿತದಿಂ ಪೋಗಿ ಕಪಿವರನ ಕರೆಯ ವ್ಧಕ್ಕೆ।
ಬರಲಾನು ಸಮಯಮಂ ನೋಡಿಹೊಂದವಂ।
ಧರೆಗುರುಳ್ದು ಪೆನಿವಕೆ ಸಂದೇಹ ಬೇಡೆನುತ್ತ ಮುಗುಳ್ನಗೆಯಮನ್ನಿತ್ತನು॥ (2)

ಕೇಳ ಸಂತ್ರಸದಿಂದ ಕಪಿವರ್ಯ ಧೈರ್ಯವಂ।
ತಾಳ ಕಿಷ್ಕಿಂಧೆಯಿಡಗೈದತಿನ ಲಕ್ಷ್ಮಣಾ।
ಮೇಳವಿಂ ಪೇಟೆ ನಡೆತಂದು ತಪ್ಪಿಸದೆನೆಯ ಲೆತ್ತಿಂದು ತರುಮೂಲದಿ।
ಭಾಳನೇತ್ರನ ತ್ರಿಪದಿ ಮಂಡಿಸಿರೆ ಸೌಮಿತ್ರಿ।
ತಾಳ ಶರಚಾಪಗಳ ಕೆಲದಿ ನಿಂದಿರೆ ನನವು।
ನಾಳೊಳಗಂ ಗೃಹತ್ರಡಿಗಟಿನೆ ಜಾಂಬವಂ ಪೊಗಳ ಭಾಳ್ವ್ಯಸ ತಿರಲು॥ (3)

ಆಳ್ವೆತ್ರಂವಗ್ರಜನ ನಾಮಮಂ ಪಿಡಿದು।
ಕೂಗೆ ಸುಗ್ರೀವ ನಾರ್ಭಟಿಯ ಕೇಳುತ ಕೋಪ।
ವೇಗುಹಿಸಿ ತಾ ಸುರಪನಂದನಗೆ ಲಯಕಾಲರುದ್ರ ನಿಮ್ಮಾಡಿಯೆನಲ್ಕೆ॥
ಸಾಗರವು ಮೇಲ್ವರಿದು ಪೋರದಿರ್ಪ ಮಾರುತದ।
ವೇಗದಿಂದೇನೆಂಬೆನಾ ಗಹನಬುವಿ ನಡುಗೆ।
ಲಾಗುವೇಗದಿ ತರಣಿಸುತನ ತಾಡುಕಿದ ಘರಾಸತಿ ಬಾಧನ ಪಿಡಿವಂದದಿ॥ (4)

ಆದುವದ್ಭುತಯುದ್ಧವಿರ್ವರ್ಗೆ ಮಲ್ಲಗತಿ।
ಮೇದುರತೆ ವೆರ್ಚೆ ಮುಷ್ಟಾಮುಷ್ಟಿಯಿಂದ ತರು।
ಭೂದರಗಳಂದಮರೆನಿಮಿಷ ಹರಿಕೈಟಭರ ರಣದಿಂದಮೈವಡಿಯೆನೆ॥
ಕಾದುವುದ್ಭಟವೀರ್ವರೊಳು ರೂಪುಬಲಸರದ।
ಭೇದಮೆಳ್ಳನಿತಾದಡಂ ಗ್ರಹಿಸೆ ಮತಿಗೆ ದು।
ರ್ಬೋಧವಾದುದರಿಂದ ಬೆರಗೆನಿಸಿ ನಿಟ್ಟಿಸುತಮಿರ್ದರಾ ಸನ್ನದ್ಧಮಂ॥ (5)

ಪಿಡಿದ ವೈರದೊಳು ಬಡಿದಾಡಲೀರ್ವರ ಶಕ್ತಿ ।
ಗೊಡನೊಡನೆ ಸಂತಸದಿ ನೋಡುತಿರಲನ್ನೆಗಂ ।
ಕಡುಗೋಪದಿಂ ವಾಲಿ ಮುಷ್ಟಿಪ್ರಹಾರದಿಂ ಮೊಳಕಾಲ್ಗಳಿಂದಡಕುತ ॥
ಬಡಿಯೆ ರಕುತವ ಕಾರುತೆಡೆಬಲನ ನೋಡಿ ಕಂ ।
ಗೆಡುತಾರನುಂ ಕಾಣದೋಡಿ ಬನವಂ ಪೊಕ್ಕು ।
ನೊಡನೆ ಬದುಕಿದೆನೆನುತ ಭಯದಿ ಪಿಂದಿರುಗಿದಂ ವಾಲಿ ಮುನಿವಚನವಿಡಿದು ॥ (6)

ಹನುಮ ಸೌಮಿತ್ರಿಜಾಂಬವರೊಡನೆ ರಾಘವಂ ।
ಬನಕೆ ನಡೆತರೆ ನೋಡಿ ಸುಗ್ರೀವ ದೈನ್ಯದಿಂ ।
ಕಿನಿಸಿಂದಲತಿ ಕ್ರೂರತರ ವಾಣಿಯಿಂ ಬಳಿಕ ಮೂವಲಿಸಲನುಗೈದನು ॥
ಎನಗೆ ನಂಬುಗೆಯಿತ್ತು ಬಲಶೌರ್ಯಗಳ ತೋರಿ ।
ಮನೆಯಿಂದ ಪೊರಮಡಿಸಿ ಮತ್ತೆ ಮರೆಗೊಂಡಿರ್ದ ।
ಮನುಜೇಶ ಕೊಲಲಾರೆನೆಂದರಾನೇಂ ಗೈವೆ ನಿನಗೆ ಮೊದಲೇಂ ಪೇಳ್ದೆನು ॥ (7)

ಶೂರವಿಕ್ರಮಶುಭಾಕಾರಜನ್ಯನಿಗನಾ ।
ಕಾಗಮಂ ವಳಿದು ಧೈರ್ಯವ ನುಡಿಗಳಂ ಪರರ ।
ನಾರಾರವಂಚಿಸಿದೆ ನಿಮಿತ್ತದೊಳಗೆನ್ನ ತುತ್ತು ಗೈದಿತ್ತೆ ಬಳಿಕ ।
ಕ್ರೂರಕಾಲಾನಲಗೆ ನಿನಗೆ ಬಂದುದದೇನು ।
ಚಾರುತರಕೀರ್ತಿ ಮುಂದೆನುತ ಮೂವಲಿಪ ಕಪಿ ।
ವೀರನಂ ಸಂತೈಸಿ ವಿನಯದಿಂದಿಂತೆಂದ ಕರುಣಾರಸಮುದ್ರಾತ್ಮ ॥ (8)

ತಪ್ಪಿದುದೆಮ್ಮಿಂದಮಪ್ಪ ಲಾಲಿಸು ಕೋಪ ।
ದೋಷವಮಂ ಶಮಗೊಳಿಸು ರೂಪ್ಯಯೌವನಬಲಂ ।
ಒಪ್ಪದಿಂ ಜವರವಗಳೊಂದೆನಿಸಿ ಭಿನ್ನತೆಯು ಗೋಚರಿಸದೆಮಗಿವಗೆ ॥
ಇಪ್ಪಡಿವಮಾಗದಿರೆ ಶರವ ನಿಲಿಸಿದೆ ಬಿಡಲು ।
ತಪ್ಪದಾರಾವಡಂ ತಿನಲೆನಗೆ ದುಷ್ಕೀರ್ತಿ ।
ಒಪ್ಪದೆನ್ನುವ ಭಯದಿ ನಿಂದು ನಿಟ್ಟಿಸುತಿರ್ದವಪಕೃತಿಗೆ ಮೊದಲಾದುದು ॥ (9)

ಇದರಿಂದಲಜ್ಞಾನ ಬಾಲ್ಯ ಮೌಢ್ಯಂಗಳಿವು ।
ಗೊದಗಿಸದೆ ತಪ್ಪೇನು ಪರರಿಂದ ಸಂಕಟದ ।
ಸದನಬಂದಡಸಿದುದು ನಿನಗಲ್ಲದೆಮಗಾದುದೆಂದರಿತು ಕ್ಷಮಿಸು ದಯದಿ ॥
ಸುಮತಿ ಲಕ್ಷ್ಮಣ ತಾನು ಮೂವರಂ ನಿನಗೆ ಸಂ ।
ಪದವ ನೆನೆವೆನೆನುತ್ತ ತಿಳಿದು ನೀ ಮಗುಳೊಮ್ಮೆ ।
ಕದನಕಾತನ ಕರೆಯೆ ಕಾಣ್ಬಹುದು ಮತ್ತಿನ್ನು ಪ್ರಸಿದ್ಧಿಪದ ಮುಟ್ಟ ನಿನಗೆ ॥ (10)

ಪೊರಡುಬರೆ ಸುರಪಸುತ ಶರಕಾಹುತಿಯೆನಿಪ್ಪ ।
ಭರವಸವಿದೆಂದರಿದು ಪೋಗೆಂದು ಪೇಳೆ ಪತಿ ।
ಕರಿಸಿ ಸುಗ್ರೀವನಿಗೆ ಸೌಮಿತ್ರಿಯಂ ಕರೆದು ಪೇಳಿದಂ ರಘುವೀರನು ॥
ಸುರಪನಂದನಗಿವಗೆ ಭೇಧಕಾಣ್ಬಡುಪಂತೆ ।
ಕೊರಳೊಳಿಡು ಗಜಪುಷ್ಪಮಾಲೆಯನ್ನೆನುತ ರಘು ।
ವರ ಪೇಳ್ದಂತೆಸಗಿ ಲಕ್ಷ್ಮಣಂ ಸಂತಸಂ ಗೊಳಿಸಿದಂ ಸುಗ್ರೀವನ ॥ (11)

ಬಾನೆಡೆಯು ವಿಪರೀತನಕ್ಷತ್ರಮಾಲೆಯಿಂ ।
ಭಾನು ಕಂಗೊಳಿಪಂತೆ ಸುಗ್ರೀವ ಕಾಮೊಸೆಯು ।
ಮಾನವಾಧಿಪ ಸಮರಸನ್ನಾಹಯುಕ್ತಂ ಮುಂಗಡೆಯುಲೈದುತಿರಲು ॥
ವಾನರಾಧಿಪ ಹನುಮ ನಳನೀಲ ಜಾಂಬವ ।
ದ್ವಾನರರು ಪಿಂತೆ ಬರೆ ಬಂಬನವ ನೋಡುತ್ತು ।
ಮ್ಲಾನಹರ್ಷದಿ ಸುರಪನಂದನಕ್ಕೆಮ್ಮಡಿಪ ಬನವು ಕಂಡಂ ರಘುಜನ ॥ (12)

ಅಚ್ಚರಿಯ ಬೀರುತಿದೆಯೆನುತ ರವಿಸುತ ನೆಲದಿ ।
ಪೊಚ್ಚಪೊಸ ಜನ್ಮವನಿಗರಂತೆ ವನ[ಮೆರೆಪಿದೆ] ।
ನಿಚ್ಚಮುಪುದಾರಿಂದ ನಿರ್ಮತ್ತಂ ಜತ್ತುರಿಸ್ಪದೆನೆ ಬೇಳ್ದ ಸುಗ್ರೀವನು ।
ಮಚ್ಚರವನುಳಿದ ಮನುಹಂ ಪಿನುತ ಸಪ್ತಜನ ।
ನಿಚ್ಚಮೊನೆಲದಿ ವಿಪರೀತ ಕರ್ಮದೊಳವೃತ ।
ದಿಚ್ಛೆಯು ನಿರಾಕಾರ ಶತವತ್ಸರಂಗಳಂ ನೇಮದಿಂದಿರ್ದನವಘಾತ ॥ (13)

ಆ ಮಹಾಮುನಿಗಳನುಗ್ರಹದಿ ಕಂಗೊಳಪು ।
ದೀ ಮಹದ್ವನ ಸುರಪ್ಯೈಶ್ವರ್ಯವಿಪಿನದಿಂ ।
ದಾ ಮಹತ್ಯಾಧಿಕವಿನೋದಮುತ್ಸವವಾಂತು ತೋರ್ಪುದು ತಪೋಜನಿತವು ॥
ಕಾಮಿತವನಿತ್ತಪುದು ಕಪಿಸಕ್ಯ್ಯಗತ್ತಿಯು ।
ಭೂಮಿಯಂ ಪೊಗಲು ಪಿಂದಿರಾಗದೈ ದ್ವೈತೀಯು ।
ಸೋಮಸೂರ್ಯಾದಿ ಸುರರಿಂದೆ ನಿಟ್ಟಿಸಲಪಿಮ ಕೇಳ್ ತಪೋವನವು ಜೀಯ ॥

ತೊಡೆರುಗಳ ರವ ತೂರ್ಯನಾಮಿತ್ರ ನಿಸ್ವನಂ ।
ಮಡದಿಯರ ಕೆಂಕೇಕರವಪಿಂಪು ಸೋಂಪು ಕೇ ।
ಳ್ಪುಡುತಲಿದೆ ತ್ರೇತಾಗ್ನಿಗಳು ತೋರುತ್ತಿದೆಯುಸಮಸಂಪತ್ಸಮೃದ್ಧಿಯಿಂದ ॥
ಬಡುಗಣ್ಣರಿಂದಧಿಕನೆಂದಾವನೈತಂದು ।
ಪೊಡೆವಡುವನವಗೆ ಶುಭ ವೆರ್ಚಿ ಬಹುದವರಿಂದ ।
ಪೊಡವೀಶ ವಂದಿಸಲ್ವೇಳ್ಪುದೆನಲೆರಗಿದಂ ರಾಮ ನಾಯಿತ್ರಿಸಹಿತ ॥ (15)

ವಂದಿಸುತ ಬನಕೆ ರಘುನಂದನಂ ಮನದೊಲವಿ ।
ನಿಂದ ಕಿಷ್ಕಿಂಧಪೊತ್ತಿನ ಬನಕೆ ನಡೆತಂದು ।
ಮುಂದಹಾಸದಲಂದು ಮದನ ಮರೆಯಂ ಪಿಡಿದು ಸುಳ್ಳಿರಲ್ಕನುಜಸಹಿತ ॥
ಬಂದು ಕಪಿವೀರರೆಡಬಲದಿ ನಿಂದಿರೆ ಸೂರ್ಯ ।
ನಂದನ ಜನ್ಮಪಂಗೈದನಿಂದ್ರದರುಂ ।
ಕುಂದೆನಿಸದೆನ್ನಯ ಮನೋರಥವ ಸಲಿಸೆಂದು ಪದಕೆರಗಿ ಬೇಳ್ಕೊಂಡನು ॥ (16)

ಬೆದರದಿರು ಸುಗ್ರೀವ ಭೇದಕಾಣ್ಪುದುವಂತೆ ।
ಹೃದಯದೊಳ್ಮಾಲಿಕಾಚಿಹ್ನೆಯುದೆ ತವದಿಂ ।
ಕದನಕ್ಕೆ ಕರೆ ವಾಲಿಯಂ ಬಂದರೊಂದು ಶರದಿಂದ ನಿನ್ನಯ ಭೀತಿಯಂ ॥
ಪುದಿದ ವೈರಗಳ ತೀರ್ಚುವೆನೆನ್ನುತಭಯಮಂ ।
ಮುದದಿಂದಲೀಯಲನುರಾಗದಿಂ ಸುಗ್ರೀವ ।
ಪದುಳದಿಂದೈತಂದು ಕಂದರಂ ಪೊಡೆವಂತೆ ಭೋರ್ಮೊರೆದ ನಗರ ಬೆದರೆ ಕಿ (17)

ಸಿಡಿಲರವಕಿಮ್ಮಡಿಸಿ ಸುಗ್ರೀವ ಕ್ರೋಧದಿಂ ।
ದಡಿಗಡಿಗೆ ಸಿಂಹನಾದಂಗೈಯೆ ಮೃಗಗಳೆದೆ ।
ಯೊಡೆದು ಧರಣೀತಳದಿ ಕೆಡದೊದರುತಿರೆ ಪ್ಲವಗತತಿ ನಡುಗಿ ತಲ್ಲಣಿಸಲು ॥ (18)
ಘುಡುಘುಡಿಸಿ ನಾದ ಕೇಳ್ಪಡಲು ಶುದ್ಧಾಂತದೊಳ್ ।
ಮಡದಿಯರ ಮಧ್ಯದೊಳಗಿರ್ದು ಕೇಳಿದ ವಾಲಿ ।
ಯೊಡನೊಡನೆ ಪಲ್ಮೊರೆದು ಪೊಡೆದಿಡುವೆನೆಂದೆದ್ದ ಕಾಲಾಗ್ನಿರುದ್ರನಂತೆ ॥

ಮೊದಲಿಂದ ದ್ವಿಗುಣೀಕೃತಕ್ರೋಧದಿಂ ವಾಲಿ ।
ಕದನಕ್ಕೈದುವ ಪರಿಯ ಕಂಡು ತಾರೆಯು ಬಂದು ।
ಪದಗಳಂ ಪಿಡಿದು ಸಮಯಾನುಸರಣೆಯ ನುಡಿಗಳಿಂದ ಬಿನ್ನಪಗೈದಳು ॥
ಕದನಕರ್ಕಶಮಲ್ಲ ನಹುದೆನುತ ತ್ರಿಜಗದೊಳ್ ।
ವಿದಿತಮಾಗಿರುವುದಾದರು ರಾಜಕುಲಧರ್ಮ ।
ತುದಿಯೆನಿಪುದನು ಸರಣೆಗೈವುದನುಚಿತಮೆನ್ನ ನುಡಿಯ ನವಧರಿಪುದಾರ್ಯ ॥ (19)
ಹಿತಜನರೊಳಾಳೋಚನಂಗೈದು ಕಾರ್ಯಸಂ ।
ಗತಿಯ ಬಲದುರ್ಬಲಗಳಂ ತಿಳಿದು ಸ್ವಜನ ಸಂ ।
ಮತಿವಂತೆ ರಣದ ಸನ್ನಾಹಂಗಳಂ ಗೈದು ಬಲವನುಂ ಸಮತ್ರಗೈದು ॥
ಮತಿಯಿಂದ ಸಾಧಿಸುವುದುತ್ತಮಂ ದುರ್ಬಲವ ।
ಜತೆಗೊಳಿಸಿ ಗೆಲುವುದದು ಮಧ್ಯಮಂ ತಾನೈದಿ ।
ಖತಿಗೊಂಬುದಧಮವನುಚಿತಮೆಂದು ನೀತಿನಯವಿತ್ತರೊರೆದುಸಿರ್ವರನಘ ॥ (20)

ನೋಡು ರಣದೊಳು ಪರಾಭವಹೊಂದಿ ಪೋದ ಹಂ ।
ಬೇಡ ಮಗುಳ್ದೈತಂದು ವೀರವಾದಗಳ ಪೇಳಿ ।
ದಾಡುತಾರ್ಭಟಿಪುದೇಂ ಕಾರಣ ಮೆನುತ್ತರಿಯದಲೆ ಬರಿದೆ ಕೋಪದಿಂದ ॥
ನಾಡಾಡಿತನದಲ್ಲೈದಿದರೆ ಜಯಸಿರಿ ಕೈಗೆ ।
ಗೂಡಬಹುದೆಲ್ಲಿಯದು ಬೆಂಬಲಕ್ಕಧಿಕರುಂಬಲ ।
ಕೂಡಿರಲ್ಕೋಡಿಗೆಡೆದೈತಂದು ಭೋರ್ಮೊರೆವ ಕಾಳಾಹಿಯನೆ ಕ್ರೋಧದೆ ॥ (2.)
ಅರಿನಿಗ್ರಹಂಗೈವುದಾತ್ಮರಕ್ಷಣೆಗೈದು ।
ಸಿರಿಯನುಂ ವಶಗೈದು ಸೀಮಂತಿನಿಯ ಬೆರೆದು ।
ಪರಮಸೌಖ್ಯವನುಂಬ ಪರಿಯನೆನದೈತಂದನಲ್ಲಿ ದೆಂದಿನ ತೆರದೊಳು ॥
ಬರುವದಲ್ಲಿವುಮಲ್ಲ ತಿಳಿಯದೈವಲು ಸಲ್ಲ ।
ಧುರದಿ ನಿಮ್ಮಯ ಶೌರ್ಯಗಳ ಕಾಣದವನಲ್ಲ ।
ತರಣಿಸುತ ನೆಲ್ಲಮಂ ಬಲ್ಲದಯದಿಂ ಮನಕೆ ತರವೇಳ್ಕುಮೆನ್ನ ಸೊಲ್ಲಾ ॥ (22)

ಪಲವುವಿಧಕಷ್ಟಗಳ ಪದನಖರಮುಷ್ಟಿಗಳ ।
ಸಿಲುಕೆನೊಳ್ ಕಂಗೆಟ್ಟು ಜೀವಮುಳಿದೈದಿದವ ।
ಬಲವಿಲ್ಲದೇನುಂ ಬರೈತರುವ ಮೊದಲು ದಿನ ಕಡದು ಗರ್ತದೊಳು ಮಗುಳೆ ॥
ನಿಲದೆ ಬೀಳ್ದಪನೆಂತು ಸುಲಭಮತಿಯನ್ನಾಂತು ।
ಕೊಲಿಸಿಕೊಳಲೇನವಗೆ ಫಲವೇನಹುದು ಕೊನೆಗೆ ।
ಕಳಿತನವನಲ್ಲಿಟ್ಟು ಕ್ರೋಧಬುದ್ಧಿಯ ಬಿಟ್ಟು ಸಾಧುಮಾರ್ಗವನು ಮುಟ್ಟು ॥ (23)

ಮೂರುಲೋಕದೊಳುಳ್ಳ ಶೂರರಿಂಗತಿಶಯದ ।
ಚಾರುಜಸವಂ ಗಳಿಸಿ ಚದುರಿಂದ ಬಾಳ್ವುದಕೆ ।
ತೋರಮೊಣೆಯುವ ಸಲಹುವುದುಚಿತವೆಲೆ ದೇವ ಕಾರ್ಯದುಷ್ಕಾರ್ಯಂಗಳಾ ॥
ಧಾರಣೆಯೊಲಾಪುವಗಳನು ತರ್ಕದಿಂ ತಿಳಿದು ।
ದಾರುಣವನುಳಿದು ಕಾರ್ಯವನೆಸಗೆ ಫಲವಿಫಲ ।
ಸಾರುವುದು ದೇವಮನುಚಿತವಲಿ ಕಾರ್ಯವಿಫಲ ಕಪಿವಂಶಧುರ್ಯ ॥ (24)

ಸಂಗಾತಪುಟ್ಟಿದವ ನಿಖಿಲಾಗಮಾಭಿಜ್ಞ ।
ಸೂತ್ರಾಂಗಳಂ ಬಲ್ಲನಿಂಗಿತಜ್ಞ ಮತಿಯುತ ಬಲಿಷ್ಠ ।
ತಂಗಸುತ ನಿಮಗನ್ಯನಲ್ಲ ನೇಮಿಸಿದುದೆ ಶಿರಸಾವಹಿಸಿ ನಡೆವರೆ ॥
ಅಂಗವನಿಗಿಂದಧಿಕಮೆಂದಮತ್ತು ಮನದ ಕೃ ।
ತ್ಯಂಗಳೆಲ್ಲವ ಮರೆತು ಯುವರಾಜ್ಯವಿತ್ತು ಪಾ ।
ದಂಗಳಂ ಸೇವಿಪೊಲು ದಯಗೈನರುತ್ತಮದ ಕೀರ್ತಿ ಸಮನಿಸುವುದಾರ್ಯ ॥ (25)

ಒಪ್ಪದುಂಟಾಗಿಗಾವರು ಕಾಲವಶದಿಂದ ।
ತಪ್ಪಿದಂ ಪಿರಿಯರನುಮತಿಸಿ ಸೀಕ್ಷಿಸಿದಯದೊ ।
ಳೊಪ್ಪುಗೊಳಲಿಹಪರದಲೇಳಿಕೆ ಕೈವಶಮಹುದು ಶಾಸ್ತ್ರಮತವೆಂದು ತಿಳಿದು ॥
ಅಪ್ಪಿಕೊಂಬರೆ ಪಗೆಗಳಾದರುಂ ಪಿರತಕರ ।
ಇಪ್ಪರಿಯೊಳಿರೆ ಮೂರುಲೋಕದೊಳ್ ಜಯಕೀರ್ತಿ ।
ಯಪ್ಪುದಿದು ಹಿತಮೆನುತವರಾಳೋಚನಂಗೈದು ಪತಿಕರಿಸವೇಳ್ಕು ಜೀಯ ॥ (26)

ಸಾವಧಾನದೊಳಿನ್ನು ಬಿನ್ನಪವ ನಾಲಿಪುದು ।
ದೇವ ನಾಂ ಕಂಡಕನಸಿನ ಪರಿಯ ಪೇಳ್ದಪೆನು ।
ದೇವತತಿಗಭಯಮಂ ಕೊಟ್ಟು ಬಂದಾನಂದಮೂರ್ತಿ ನುಂ ಮೂರ್ತಿವೆರೆದು ॥
ಈ ವಸುಧೆಯೊಳಗುದಿಸಿ ದಂಡಕಾರಣ್ಯದಿಂ ।
ಠೀವಿಯಿಂದೈತಂದು ಋಷ್ಯಮೂಕದ ಪೊರೆಯ ।
ಲಾ ವನದೊಳಿರೆ ಕಂಡು ಪವನಸುತ ಭಕ್ತಿಯಿಂದೆರಗಿದಂ ಪ್ರೀತಿಗೊಂಡು ॥ (27)

ಹಿತದಲುಪಚರಿಸಿ ಸಂಗತಿಗೈಯೆ ಸುಗ್ರೀವ ।
ಕ್ಷಿತಿಪತಿಗೆ ತನ್ನ ವೃತ್ತಾಂತಮಂ ಬಿನ್ನವಿಸೆ ।
ಶತಮುಖನಸುತನ ಸಂಹರಿಸಿ ರಾಜ್ಯವ ನೀವೆನೆನುತಭಯಮಂ ಕೊಡುತಲೆ ॥
ಖತಿಯಿಂದ ಕವನದೊಳ್ ಕೋಲೊಂದ ಬಿಡಲು ನೀಂ ।
ವ್ಯಥೆಗೊಳುತ ಪೊರಳುವವ ಕಂಡಾನು ತಳ್ಳಸುತ ।
ಕ್ಷಿತಿಯೊಳಗೆ ಬಿದ್ದಿರ್ದ ಘೋರಮಂ ಕಂಡಿರ್ದೆನುರಕ ಸಂಮೇವದೊಳಗೆ ॥ (28)

ಹತಮಲ್ಲದುದ ಪೆರರೊಳುಸುರ ಬಾರದೆನುತ್ತ ।
ಮತಿಗೋಪ್ಯಗೈದಿರ್ದರೊಂದು ದಿನ ಸುಕುಮಾರ ।
ಸುತರಂಗದನು ಬೇಂಟೆಗೈದಿರ್ದರಾ ವನದೊಳಾದ ಕಥೆಗಳನೆಲ್ಲಮಂ ॥
ಅತಿಗೋಪ್ಯದಿಂದೆನ್ನೊಳುಸುರಿರ್ದ ರಾಮ ಭೂ ।
ಪತಿ ನಿನ್ನ ಕೊಲಲೆಂದು ಬಂದಿರ್ದ ಕಾರ್ಯಸಂ ।
ಗತಿಯ ತಿಳಿದಾತ್ಮಕುಲಬಾಂಧವರ ರಕ್ಷಣಂಗೈದು ಬಾಳ್ದಪುದು ಲೇಸು ॥ (29)

ಫಲವು ಮಾತಿನ್ನೇನು ಪಂಥಮಂ ಬಿಡು ಮೊದಲ।
ಗೆಲವಪ್ಪುದೆಂಬುದ ಬಿಡು ಕರುಣಾವೃತ್ತಿಸಂ।
ಕಲಿತಮನದಿಂದ ಸುಗ್ರೀವನಂ ಕರೆತಂದು ಯುವರಾಜ್ಯಪಟ್ಟಮಿತ್ತು॥
ಚೆಲುವ ಕಪಿರಾಜ್ಯಮಂ ಸೌಖ್ಯದಿಂದನುಭವಿಸಿ।
ಸುಲಭಮಲ್ಲದ ಕೀರ್ತಿಫಳಸಿ ಬಾಳೆನುತ।
ಲಲನೆ ಬಹುವಿಧದಿಂದ ಮರುಗುತಳುತಳುತಂಘ್ರಿವಿಡಿದು ವಿಜ್ಞಾಪಿಸಿದಳು॥ (30)

ಪರಿಪರಿಯ ನಯನೀತಿಗಳ ತೋರಿ ತಾರೆ ಬಲು।
ಪರಿಯಿಂದ ಪೇಳ್ದುದಂ ಕೇಳ ಮತ್ತಾಗ್ರಹದಿ।
ಸುರಪಸುತನಿಂತೆಂದನೆಲೆ ಭೀರು ಪೇರವದ ಮತ್ತವನ ಕೂಗಿನಿಂದ॥
ಹರಿಯು ಪಿಂದಿರುಗಿದರೆ ತರಣಿ ಕಳ್ತಲೆಗಳ್ಕ।
ತೆರಳದಡೆ ಲೋಕಾಸ್ತಮಾಗದುಳವುದೆ ಕಪಿಯು।
ತರಳ ಬಂದಂಜಿಸಿದರನುನಯದೊಳಾನೈದಿ ಮಗುಳವನ ಕರತರುವದೆ॥ (31)

ಮಾನದಿಂ ಬಾಳ್ವ ಶೂರರಿಗೆ ಪರರಿಂದಪ್ಪ।
ದೇಸಾದರುಂ ಸಹಿಸಲಹುದೆ ಮೊರೆಯುತ ಕರೆವ।
ವಾನರನ ಧನಿಗೇಳ ನಿಲುವದಕ್ಕಂ ಮರಣ ಕರ ಲೇಸು ಭೂತಳದೊಳು॥
ಮಾನಿನೀ ಚಪಲತೆಯು ಭೀತಿಯಿಂ ಚಿತ್ತದನು।
ಮಾನ ಪೆರ್ಚಿತ ನುಡಿವೆಯಾದರಾಲಿಸು ಸೂರ।
ಸೂನು ಸಹಜಾತನೆಮಗವ ಕದನಕುಂ ಕರೆಯಲಾವು ಸುಮ್ಮನಿಹುದುಚಿತವೇ।

ಚತುರದಶ ಭುವನದೊಳಗುಳ್ಳ ಶೂರರ್ಬಲ್ಲ।
ರತಿಶಯದ ವೀರನೆಂದೆನ್ನ ಮಾನಿನಿ ಮಂದ।
ಮತಿಬಲನೆನುತ್ತವನ ನೀಂ ಬಲ್ಲೆ ತ್ರೈಜಗಂ ತಿಳದಿರ್ಪುದಾದರೊಂದು॥
ಕ್ಷಿತಿಜಾರಮಣ ಲೋಕನಾಥ ಬಂದಿಹನವಗೆ।
ಹಿತವ ಬಯಸುವರೆಂದು ಪೇಳ್ದೆ ನೀನದಕೆನ್ನ।
ಮತಿಯೊಳಪ್ಪುದ ಕೇಳ ನಿಶ್ಚಯಂಗೈದು ಸುಖದಿಂದಮಿರ[ಮಿಸು]ಕಾಮಿನಿ॥ (33)

ಸರಸಿಜಾಸನಗೊಲಿದು ಪರಬೊಮ್ಮ ಧರಣಿಯೊಳು।
ನರರೂಪಿನಿಂದಮೈತಂದಿರ್ಪ ದಶಗಳನ।
ತರಿದು ಲೋಕವ ಪೊರೆಯಲೆಂದು ಗಹನಕೆ ಬಂದನೆನುತಾನು ಕೇಳರ್ದೆನು॥
ಚರಣಕಾನತನಾಗಿ ಹರುಷದಿಂ ಕರೆತಂದು।
ಸಿರಿಸಂಪದಂ ಶರೀರಂಗಳನ್ನರ್ಪಿಸುತೆ।
ಶರಣನೆಂದೆನಿಸಿ ಕೃತಕೃತ್ಯನಾಗುವೆನಬಲೆ ಕೃತಪುಣ್ಯಪರಿಪಾಕದೆ॥ (34)

ಸರ್ವಭೂತಾಲಯ ಸಮಸ್ತ ಬುದ್ಧಿಯು ಸಾಕ್ಷಿ।
ಸರ್ವರಂತರ್ಯಾಮಿಗಾದ ಸಜ್ಜನ ಪ್ರೇಮಿ।
ಸರ್ವಾತ್ಮಗವರೋರ್ವ ಹಿತರಹಿತರೆಂಬ ಭೇದಂಗಳುಂಟೇ ಜಗದೊಳು॥
ದುರ್ವಿದಗ್ಧತೆಯಿಲ್ಲದನುದಿನಂ ಭಜಿಸುವರ।
ಸರ್ವದಾಂ ಭಜಿಸುತಿಹ ಕರುಣಾಳುಗಳ ದೇವ।
ನಿರ್ವಾಣದಾಯಕನೆನುತ್ತಮರಿತಿಹೆನಬಲೆ ರಾಮ ಪರಬೊಮ್ಮನೆನುತ॥ (35)

ಭಜಿಪೆ ಭಯಭಕ್ತಿಯಿಂ ಭಾವಿಸಿದರಿಂಗೊಲಿವ ।
ಭಜಕಸುರಧೇನು ರಾಘವ ಪರಾತ್ಪರ ವೈರಿ ।
ಗಜರುತಿಹ ಸುಗ್ರೀವನಧಟು ಕಟ್ಟಾಳುತನದಿರವ ಲೋಕಂ ಬಲ್ಲುದು ॥
ಸುಜನವಂದಿತ ರಾಮನಂ ಕಾಣಲವ ಬಂದು ।
ಸೃಜಿಸಿದೊಡೆ ಕರುಣದಿಂ ಕಾಯ್ವ ಗರ್ವಿಸೆ ಪೊಡೆದು ।
ವಿಜಯಸಿರಿಯಾಂತ್ಯದೆ ಬರ್ಪನಿದಕನುಮಾನ ಬೇಡೆನುತ ಸಂತೈಸಿದಂ ॥ (36)

ಇಂತೊರೆದ ಪತಿಯ ಬಲವಂತವಾಂ ನೋಡುತಾ ।
ಕಾಂತೆ ಜಯವಂತನಾಗೆನುತ ಸೇಸೆಯನಿಟ್ಟು ।
ಚಿಂತಿಸುತ ಶುದ್ಧಾಂತಕೈದಲಿತ್ತಲುಂ ವಾಲಿಕ್ರೋಧತಾಮ್ರಾಕ್ಷನಾಗಿ ॥
ಮುಂತಕೈದಿದನು ಪ್ರತ್ಯಾಸನ್ನದಲಿ ಸುಳಿಯ ।
ವಂತಕನ ಭೈರವನ ರೀತಿಹೋತ್ರನ ಪರಿಯ ।
ನಾಂತಾರ್ಭಟಿಯುಲತಾಲ ವೇಗದಿಂದೈತಂದು ರವಿತನಯನಿರ್ಪ ಧರೆಗೆ ॥ (37)

ಕಂಡನುದ್ದಂಡ ಭಾಸ್ಕರನಂತೆ ಕಂಗೊಳಪ ।
ಗಂಡುಗಲಿ ಸುಗ್ರೀವನಾರ್ಭಟಿಯ ವಾಲಿಯು ।
ದ್ದಂಡ ಪೌರುಷದಿಂದ ಮೂದಲಿಕೆಯಿಂ ಗಿರಿಯ ಬರಸಿಡಿಲು ಪೊಡೆವಂದದಿ ॥
ಮಂಡೆಯಂ ಕೊಡಪಿ ಕಡುನಿಷ್ಠುರದ ಮುಷ್ಟಿಯಲಿ ।
ಖಂಡಲಾತ್ಮಜ ಪೊಡೆಯೆ ಗನರುತಾದಾರ್ಗ ಬತಿ ।
ಗೊಂಡು ಸುಗ್ರೀವ ಮತ್ತೆರಗಿದಂ ವಾಲಿಯಂ ತತ್ತರಿಸಿ ಕೆಡೆವಂದದಿ ॥ (38)

ಮೇರುಮಂದರಗಳೀಂ ಶಾಖಾಮೃಗಂಗಳಾ ।
ಕಾರದಿಂ ಧರಣಿಯೊಳು ಕಾದುತ್ತ ವಿಕ್ರಮವ ।
ತೋರಲೈತಂದವೆಂಬಂತೋರ್ವರೋರ್ವರಂ ಜಯಿಸುವಾತುರಗಳಿಂದೆ ॥
ಭಾರಣೆಯ ಮರಮುರಿ ಪವಕರನಖಗಳಂ ಪ್ರ ।
ಹಾರದಿಂದರೆನಿಮಿಷ ಕಲ್ಪಾವಸಾನದಂ ।
ತಾರುಭಟಿ ಮಸಗೆ ಜೀವಿಗಳಳ್ಕಿ ತಿಪ್ರಡಾಗಿ ಬೆರೆದಿರ್ದುದೇನೆಂಬೆನು ॥ (39)

ಮೂದಲಿಸಿ ಗರ್ಜಿಸಲು ಭೂಧರಗಳೊಡೆದೊಡೆವು ।
ಮೇದಿನಿಗೆ ಕಡೆಯ ತೋಳ್ತೊಡೆಯ ಘಾಯಗಳಿಂದ ।
ಮೇದುರದ ತರುಷಂಡಮುನ್ಮೂಲವಾಗುತಿರೆ ಸಿಂಹನಾದಂಗಳಿಂದೆ ॥
ಭೂದಿವಿಗಳೆರಡು ಶಬ್ದಾದ್ವೈತಮಾಗಿರಲು ।
ಪಾದಹತಿಯಿಂದ ಕೆಂದೂಳೆದ್ದು ಜಗವನಾ ।
ಚ್ಛಾದಿಸಿತು ವಾಲಿಸುಗ್ರೀವರನ್ಯೋನ್ಯಬಲಪಾಟವಮನಿಡಲೆಂತುಟೊ ॥ (40)

ಪೊಡತಕ್ಕೆ ಪೊಡತ ಪಂಥಕೆ ಪಂಥ ಘಾತಗಳ ।
ಗೊಡನೆ ಘಾತಂ ಕೊಲೆಗೆ ಕೊಲೆ ಮುಷ್ಟಿಗುಂ ಮುಷ್ಟಿ ।
ಜಡಿತಕ್ಕೆ ಜಡಿತ ಮುಳಿಸಿಗೆ ಮುಳಿಸು ಮತ್ತಘಟಗಘಟು ಮಾನಕೆ ಮಾನದಿಂ ॥
ಸಿಡಿಲಾರ್ಭಟೆಗಳಿಂದ ತರಣಿಸುತ ಭೂಸುತರ ।
ಗಡಣಕೆಮ್ಮಡಿಯೆನಲ್ ವಾಲಿಸುಗ್ರೀವರೀ ।
ಪೊಡವಿಯೊಳು ಪೊಡೆದಾಡುತಿರ್ದರೋರ್ವರಿಗೋರ್ವರುಪಮೆಯೆಂಬಂತೆ ಕಣದಿ ॥ (41)

ಕಕ್ಕಿಯೊಳ್ ಪೆಣಗುತಿರಲನಿತರೊಳ್ ವಾಲಿ ಮೇ।
ಲಕ್ಕಿ ಚಿಮ್ಮಿದ ಪದಾಂಗುಟದಿಂದ ಮಂಬರವ।
ಪೊಕ್ಕಿಳದು ತರಣಿಸುತ ಲಾಗುವೇಗದೊಳೊಂದು ವಿಟಪಿಯನು ಪಿಡಿದು ಬಳಕ॥
ಗಕ್ಕನಮರೇಂದ್ರತನಯನ ಪೊಡೆಯೆ ಶೋಣಿತ್ರವ।
ಕಕ್ಕಿ ಮತ್ತುಕ್ಕಿರುವ ಕರಪವಾಹತಿಗಳಿಂ।
ಕುಕ್ಕಿರಿದನೇನುಸಾಹಸಿಯೊ ಸುಗ್ರೀವನಂ ಕ್ರೋಧದಿಂ ವಹಿಸುವಂತೆ। (42)

ಇಂತು ಕಪಿವೀರರಾಜಿಯೊಳು ಪೆಣಗುತಮಿರಲು।
ಚಿಂತಿಸುತ ರಘುವೀರನಂದು ಪೊದೆಯೊತ್ತಿನೊಳು।
ನಿಂತು ನೋಡುತ್ತಲಿ ಬೆರಗಾದನೀರ್ವರ ಲಾಗುವೇಗಸಾಹಸನ ಕಂಡು॥
ಅಂತಕಾಂತಕರೊ ಕಲ್ಪಾಂತದನಿಲಾನಲರೊ।
ಚಿಂತಿಸಲಶಕ್ಯಮೆನುತಿರೆ ನೋಡಿ ಶಿವ ವೀರ।
ಸಂತಸಂತತಿಯೊಳಂತಿವರನೆಂತು ಕಾಣಲ್ವೇಳ್ಕುಮೆನುತಾಗ ಬೆರಗಾದನು। (43)

ಅನಿತರೊಳು ವಾಲಿಗತಿಕೋಪ ಪೆರ್ಚುತ ಬರಲು।
ಕಿನಿಸಿಂದ ತರಣಿಸುತನಂ ಪಿಡಿದು ಭೂತಳದಿ।
ವನಜನಾಳವ ಮದಕರೀಂದ್ರನೆಳೆವಂದದಿಂ ದೊರಸುತಿರೆ ರಘುವೀರನಾ॥
ಮನಕೆ ತೋರ್ದುದು ಚಿಂತೆ ಕೋದಂಡಮಂ ಪಿಡಿದು।
ಕನಲಿ ಕಿಡಿಗರೆವ ಶರಮಂ ತೊಡಿಸಿ ತನ್ನ ಪದ।
ವನಜಕಿಂಕರನಿಗಪಕಾರಿಯಂ ಗುರಿಗೈವ ತೋರ್ದೆಚ್ಚನಾ ಕ್ಷಣದೊಳು॥ (44)

ನಂಬದರಿಗೆಡರಡಸಲೀಕ್ಷಿಸುತ ಸೈರಣೆಯು।
ಕೊಂಬನೆ ರಘೂತ್ತಮಂ ವಿಷ್ಣುಚಕ್ರಪ್ರತಿಮ।
ದಂಬಿನಿಂ ದಂಭಾರಿಸುತನ ತನುಶೈಲಮಂ ಭೇದಿಸಲ್ಕನಿಮಿಷದಿ॥
ಕುಂಭಿನಿಗೆ ಕೆಡೆದನಸುರೇಂದ್ರ ವಿಜಯಪತಾಕ।
ವೆಂಬಂತಮೋಘ ಶರದುಪಹತಿಗೆ ವಾಲಿ ಹಾ।
ಶಂಬರಾಂತಕ ಹರ ನಮಶ್ಶಿವಾಯಯೆನುತ ಕುಗ್ಗಿದಂ ಧರಣಿತಳಕೆ॥ (45)

ಬೆದರಿದನೆ ಬೆಚ್ಚಿದನೆ ಹೃದಯದೊಳ್ ಕಲಿತನದ।
ಮದವನುಡುಗಿಸಿದನೇ ಮಹಾಶರದ ವೇಗಕ್ಕೆ।
ಮದಿದುರಿದನೆ ರಣಭೀಮಸುತ್ರಾಮನಂದನಂ ವೀರಾಸನವನು ಬಲಿದು॥
ಅದಿರಿದಿಲ್ಲದೆಡಬಲನ ನೋಡಿ ಯೋಧರದೊರ್ವ।
ರಿದಿರೊಳಗೆ ಕಣ್ಗೆಸೆಯದಿರಲು ಕಂಗಳ ಮುಚ್ಚಿ।
ಮದನಾಂತಕನ ಪದಪಯೋಜಮಂ ಧ್ಯಾನಿಸಿದನೇಂ ಕಲಿಗಳಗ್ರಭವನೊ॥ (46)

ರಾಮಬಾಣಾಗ್ನಿಯಿಂ ಬೆಂದುದೊಡಲಾಗ ಸು
ತ್ರಾಮದಯದಿಂದಿತ್ತ ಮಾಲಿಕಾಮಹಿಮೆಯಿಂ।
ದಾ ಮಹಾಬಲಿ ಯಸುಗಳುಳಿದು ಶರಹತಿಯಿಂದ ಕುಗ್ಗಿತಗ್ಗಿತಮನಿತರೊಳ್।
ಭ್ರಾಮಕಂಗೊಳುವ ಕರಣಗಳಂದಮೆಡಬಲನ।
ಸೀಮೆಯಿಂ ನೋಡುತಿರೆ ತೋರಿತನ್ನೆಗಂ ಮಣಿ।
ಶ್ಯಾಮರಾಮಾಕೃತಿಯು ಕರಕಲಿತ ಕೋದಂಡಧರ ಸಟೋದ್ದಂಡದಿಂದೆ (47)

ರವಿಯಂತೆ ಸೌಮಿತ್ರಿ ಬಲದಲಿರೆ ಸುಗ್ರೀವ ।
ನವಕಮೆನಲೆಡವಂಕದಲ್ಲಿ ರಾಜಿಸೆ ತಾರ ।
ಪವನಸುತನೀಲನೆಲ್ಲರುಂ ಮುಂದೆ ಕರಗಳಂ ಮುಗಿದು ನುತಿಗೈವುತಿರಲು ।
ಲವಲಿಕೆಯಿಂದೊಂದುಶರವ ಕರದೊಳ್ ತಿರುಪು ।
ತವಿರಳಶರಾಸನವನಿತರಕರದೊಳ್ ಪಿಡಿದು ।
ಕುವಲಯದಳಶ್ಯಾಮ ರಾಮ ಗೋಚರವಾಗೆ ಕಂಡ ಸುರರಾಜಸುತನು ॥ (48)

ಧೃತಶಿಲೀಮುಖಶರಾಸನದಿಂದ ವೀರ ಸ ।
ನ್ಮತಮೆನಿಪ ಮನುಜಾವತಾರದಚ್ಯುತ ಕಣ್ಗೆ ।
ಕ್ಷಿತಿಯೊಳಂ ಕಂಗೊಳಿಸೆ ಕಾಣುತಸುರೇಂದ್ರಸುತನತುಳಕೋಪಾವೇಶದಿಂ ॥
ಖತಿಗೊಂಡು ನಿಷ್ಠುರದಿ ಧರ್ಮಸಂಹಿತೆಯಿಂದ ।
ಹಿತವಾದ ನುಡಿಗಳಂ ಮೂದಲಿಸಲನುಗೈದ
ಕ್ಷಿತಿಪತಿ ಧನುರ್ವಿದ್ಯಯಾರ ದೆಸೆಯಿಂ ಕಲಿತುದಾವುದೆನಗುಸುರೆಂದನು । (49)

ಪೊಂಚಿ ಪೊದೆಗಳ ಮರೆಯ ಪ್ರಾಣಿಗಳ ಕರವಲಾ ।
ಕುಂಚನಂಗೈದು ಕಂಡಪನೆಂಬ ಭೀತಿಯಿಂ ।
ಚಂಚಲಿಪ ನೇತ್ರಗಳನೊಮ್ಮನದಿ ನಿಲಿಸುತಂ ತಗ್ಗಿ ಕುಗ್ಗುತಲಿ ನಡೆದು ॥
ಕಿಂಚಿದೆತ್ತುತ ತನುವ ತ್ರಿಣಾತ್ರದಿಂ ಬಾಣವನು ।
ವಂಚನಂಗೈದು ಮೋಸದೊಳಸುಗಳಂ ಕೊಂಬ ।
ವಂಚನಾವಿದ್ಯ ಮತ್ತಾರದೆಸೆಯಿಂ ನಿನಗಮುಪದೇಶವಾದುದಹಹಾ ॥ (50)

ಕಾಳಗದಿ ಮಾರ್ಮಲೆತ್ತ ಕಲಿಗಳಿದಿರೊಳು ತನ್ನ ।
ತೋಳ ಬಲುಹಂ ತೋರಿ ಸೀಳಟ್ಟ ಕೀರ್ತಿಯಂ ।
ತಾಳುವದು ಕ್ಷತ್ರಮತ ವಿಮತ್ರಹರಣಂಗೈದು ಶರಣಾಗತರ ಪೊರೆವುದು ।
ಜಾಳುಮತಿವಿಡಿದು ಖೂಳರ ಸಂಗತಿಯ ತಳೆದು ।
ಪಾಳುನೆಲನಂ ಪಿಡಿದು ಪೌರುಷಗಳಂ ತೊರೆದು ।
ನಾಳೀಕದಿಂದೆಚ್ಚು ದೌರ್ವ್ಯಾಜದಿಂ ಪೆರರ ಚುಚ್ಚುವುದಿದಾವ ಧರ್ಮ ॥ (51)

ಪೊಡವಿಪತಿಕುಲ ಸತ್ವಬಲದಿ ನೀಂ ಕರುಣೆಯಿಂ ।
ಪಡಿಗಡಿಗೆ ಪ್ರಜೆಗಳುಂ ಪೊಗಳುವಂದದಿ ರೂಹ ।
ತೊಡಿಗೆಯಂ ಶೃಂಗರಿಸಿ ಧರ್ಮಿಷ್ಠನೆನಿಪ ಪೆಸರಾಂತು ಭೂತಳದಿ ಚರಿಸಿ ॥
ಪಿಡಿದು ಕರಚಾಪವ ಪರಾಕ್ರಮವ ತೋರ್ಪಡಿಸೆ ।
ಕಡೆಗೆ ಶಾಖಾಮೃಗ ಪರಾಙ್ಮುಖದ ವಧೆಗೈದೆ ।
ನುಡಿ ಪುರಾತನ ನಡೆ ಕಿರಾತನೆಂಬ ಗಾಧೆಗಾದೆ ನೀಂ ಲಕ್ಷ್ಯಮಕಟಾ ॥ (52)

ಪೊರಗೆ ಸಾಧುಗಳ ಚಿಹ್ನೆಯನಾಂತು ಮಾನಸದೊ ।
ಳಿರಿಸಿ ಹಿಂಸಾತತಿಯ ನೋಳ್ಪರಿಗೆ ಸಾಧುತೆಯ ।
ಪೊರಪತಾಕೆಯ ತೋರುತೊಳಗಧರ್ಮಸ್ಥಿತಿಯ ಬೇರೆಳಿಸಿ ನಿರ್ವ್ಯಾಜದಿ ।
ಮರೆಯೊಳಡಗೆಲ್ಲರುಂ ತಿನುವ ವಿಷಕೂಪದೊಳ ।
ಗಿರುವಗ್ನಿಯಂದದಿಂ ಚರಿಪ ಪಾತಕಿಯೆನುತ ।
ಮರೆಯದಾದೆನಾ ರವಿಯ ಕುಲದ ಧಾರ್ಮಿಕನೆಂದು ತಿಳಿದು ಮರುಳಾದೆನಕಟ ॥ (53)

ಜಡೆಗಳನು ಕಟ್ಟಿ ಮರನಾರಸೀರೆಯನುಟ್ಟು ।
ಬಿಡುತ್ತಶನಮುಂಬುದಂ ಮುನಿವೇಷಕೆಳಸಟ್ಟು ।
ಪೊಡವಿಯೊಳು ಪುಣ್ಯನದನದಿಗಳಂ ಸಂಚರಿಸಿ ಧರ್ಮೋಪದೇಶದಿಂದ ॥
ನಡೆದು ಫಲಮೂಲಾಶನಂಗಳಂ ಸಾತ್ವಿಕದ ।
ನುಡಿಗೊಳಿಸಿ ಮರೆಗೊಂಡು ಕುಟಿಲದಿಂ ಕೋತಿಯಂ ।
ಕೆಡಪಿದ ಮಹಾಬಲ ಪರಾಕ್ರಮಿಯು ನಿನಗಾರು ಸರಿ ಕುಲೋತ್ತುಂಗನನಹಹಾ ॥ (54)

ಸಾಮದಾನಕ್ಷಮಾ ಧರ್ಮಧೃತಿ ವಿಕ್ರಮಂ ।
ಪ್ರೇಮ ಸತ್ಯಂ ದಯಾಚಾರ ಸರ್ವಪ್ರಾಣಿ ।
ಕಾಮಿತಾರ್ಥತೆ ಮುಖ್ಯ ಸದ್ಗುಣಗಳುಂ ಧೊರೆಗಳಂಗೆ ತಾರೆನಿಸಿರ್ಪುವು ॥
ಕಾಮವೃತ್ತರ ಸಿಕ್ಷೆಗೈದಪುದು ಕುಲಧರ್ಮ ।
ಈ ಮಹಾಟವಿಯೊಳಹ ಕಪಿಯುವಂಚಿಸಿ ಬಡಿವ ।
ನೀ ಮಹತ್ವವ ಗಳಿಸಲನುಗೈದೆ ಪ್ಲವಗವಧೆ ಯಾವ ಧರ್ಮದಿ ಪೇಳ್ದಪುದು ॥ (55)

ಕಾಮವೃತ್ತಿಯನುಳಿದು ಕ್ರೋಧಂಗಳು ಪಳಿದು ।
ನೇಮದಿಂ ನಯವಿನಯನಿಗ್ರಹಾನುಗ್ರಹಗ ।
ಳಾ ಮಹಾರಾಜಕುಲಧರ್ಮ ಮತ್ತೆಲ್ಲಮಂ ಪರಿಹರಿಸಿ ನಾಮವೊಂದ ॥
ಪ್ರೇಮದಿಂ ಪಿಡಿದು ಯಿಂದ್ರಿಯ ಪಾರವಶ್ಯತೆಯ ।
ಕೋಮಲಿತಹೃದಯದಿಂ ನೃಪನೀತಿಯಂ ತಳೆದು ।
ನೀ ಮಹತ್ಪಾತಕದ ವಿಕ್ರಮವನಾರೊಡನದೆಂತು ಪೇಳುವೆ ಸೂಚಿಸು ॥ (56)

ಸೂಚಕ ಕದರ್ಯ ಮಿತ್ರಘ್ನ ಸಂತತ ವೃಥಾ ।
ವಾಚಕಂ ಗೋಘ್ನ ಬ್ರಹ್ಮಘ್ನ ನಾಸ್ತಿಕ ಕೃಪಣ ।
ನೀಚ ಚೋರತ್ವದಿಂ ಪ್ರಾಣಿಗಳ ವಧೆಗೈವ ಪರಿವೇತ್ತೃ ಗುರುತಲ್ಪಗಾತ ॥
ಭೂಚಕ್ರದೊಳು ನಿರಯಗಾಮಿಗಳೆನುತ್ತಿವರ ।
ವಾಚಿಪುವು ಧರ್ಮಗಳು ಜಗದುತ್ಪವಿತ್ರಂ ವಿ ।
ರೋಚನನ ಗೋತ್ರಸಂಭೂತನಾದಡೆ ನಿನಗೆ ಮತಿಜನಿಸಿತೆಂತಿದಕಟಾ ॥ (57)

ಸಗರಂ ದಿಳೀಪ ರಘು ವಂಬರೀಷಂ ಕುತ್ಸ ।
ಮಿಗೆ ಭಗೀರಥನಜಂ ಪಂಕ್ತಿರಥ ಮೊದಲಾದ ।
ಖಗಕುಲೋದ್ಭವ ನೃಪರು ಧರ್ಮಸ್ವರೂಪಿಗಳು ಭೂತಹಿತಪರರೆನುತ್ತ ॥
ಜಗತಿಯೊಳು ಸಾಧುಗಳು ಪಾಡಿ ಪೊಗಳುತ ಸರ್ವ ।
ರಗಣಿತಗುಣಗಳಂ ಸತ್ಕುಲದಿ ನೀಂ ಧೀರ ।
ನೊಗೆದು ಕಪಿಯಂ ಗೆಲಿದು ವಂಶಾನುಚರಿತೆಯಂ ಪಾಲನಂಗೈದೆಯಕಟ ॥ (58)

ಪುಲಿ ಗಜಂ ಹರಿಣ ಛಾಗಾದಿ ಚರ್ಮಂಗಳ ।
ನೊಲಿದು ಧರಿಸುವುದೊಂದು ವ್ರತಗಳಲಿ ಮತ್ತಮರಿ ।
ಗೊಲಿದು ಕ್ಷತ್ರಿಯರವಂ ತರಿದು ತಂದಿರ್ಪದಿದು ಧರ್ಮದೊಳಗೊರೆದಿರ್ಪುದು ॥
ಪಲವು ಶಾಸ್ತ್ರಂಗಳಂ ಕಲಿತಿರ್ಪ ನೃಪನೀತಿ ।
ಗಳಲಾವ ತಾಣದೊಳಗುಸುರಿರ್ಪುದೈ ಕಪಿಯು ।
ಕೊಲೆಯು ತ್ವದ್ಧಾರಣೆಯು ಪೇಳೆನಗೆ ಸಂಶಯಂ ಪೋಪಂತೆ ಮುದವನಾಂತು ॥ (59)

ಶಶಕ ಶಲ್ಯಕ ಕೂರ್ಮ ಗೋಧ ಶ್ವಾವಿಟ್ಟೆಂಬ ।
ಪೆಸರಿಂತಯ್ದುಮೃಗಗಳ ಪೂರ್ವರರಸುಗಳು ।
ರಸೆಯಲುಣ್ಣಲ್ವೇಳ್ಕುಮುಳಿದ ಪಲಭಕ್ಷಣೆಯು ಪಾತಿತ್ಯಕರಮೆನಿಪುದು ॥
ಪೊಸಶಾಸ್ತ್ರವೊಪ್ಪಿದ ನಾವು ಪಂಕ್ತಿಯ ಕೊನೆಯೊ ।
ಳಿಸೆದಿಹುದು ಕಪಿಮಾಂಸಭಕ್ಷಣಾವಿಧಿಯೆನುತ ।
ಮುಸುಂದೊಡೆ ಧರ್ಮವಚನವ ಕೇಳಿ ಸುಖಿಯಪ್ಪೆ ನೃಪರ ಮಸ್ತಕದ ಮಣಿಯೆ ॥

ಭೂತಳದೊಳುಳ್ಳಖಿಳಧರ್ಮಶಾಸ್ತ್ರವ ಗಳಪೆ ।
ತಾತ ದಶರಥನಾ ಮಹೀಪತಿಯ ಗೋತ್ರದೊಳು ।
ನೀತಿತಪ್ಪಿದರುದಿಸರ್ದೈಸೆ ನೀನೆಂತಲ್ಲಿ ಜನಿಸಿದೆ ಶುಭಾಂಶೆಯೊಳಗೆ ।
ಪಾತಕಿ ಜಗತ್ತುಳಿವುದೆಂತು ನೀನರಸುತನ ।
ಜಾತಿಯನ್ನನುಕರಿಸಿ ಸಾಧು ಸಜ್ಜನರ ಕುಲ ।
ಭೂತಿಯಂತಿಹುದೆಂತು ಪೇಳದಿನೊಳು ನಿಂತು ಭಯಮಿಲ್ಲ ವೈಸೆಯಿನಿತು ॥ (61)

ಕೆಡೆದು ಭೂತಳಕೆ ಪಣನಂತೆ ಧರ್ಮಶ್ರವಣ ।
ಪಿಡಿವನೆಂದರಿಯದಿರು ರಣಭೂಮಿಯಲಿ ಕಂಡ ।
ರೊಡನೆ ಕೈಸಾಣ ತಿಳಿಪ್ರವರ್ತಿಪರ್ಗೆ ಚರಾಚರದಂತುಜಾಲಂಗಳು ॥
ಪೊಡವಿಯೊಳಗೋರ್ವನಿದಿರಾಂತು ಜೀವದೊಳುಳಿದು ।
ಕಪಿನಾದಹನೆ ಗಿಡಮರೆಪಿಡಿದು ಶರದಿಂದ ।
ಕೆಡಪಿದೆ ಮಹಾಬಲಿ ತಪೋನಿಷ್ಠನೆಂದಾನು ಮರುಳಾಗಿ ಪೋದೆನಕಟಾ ॥ (62)

ತಿಳಪಿಯದಾದೆಯೆನ್ನಯ ಶೌರ್ಯಧುರ್ಯತೆಯ ।
ನೆಲನಣುಗಿಯನ್ನಿಮಿಷದೊಳಗೆ ತಂದಿತ್ತು ಪಶ ।
ಗಳನ ಪಿಡಿತಂದು ದಶದಾಕ್ರಾಂತನಂ ಮೊಳ್ಪೆನೊಮ್ಮೆ ಸೂಚಿಸಿದರೆನಗೆ ॥
ಖಳನಲ್ಪಬಲ ಸೂರ್ಯತನಯ ನಿನಗೋಸುಗಂ ।
ಕಳವಿಂದಮೆನ್ನಿರಿದು ದುಷ್ಕೀರ್ತಿಯಂ ತಳೆದು ।
ಫಲವದೇನುಂಟೆಯಕಟಕಟ ಖದ್ಯೋತಕುಲದುದಿತ ಖದ್ಯೋತ ನೀನು ॥ (63)

ಕೊಳುಗುಳಕೆ ಬರುವ ಸಮಯದಿ ತಾರೆಯೆನ್ನ ಪದ ।
ಗಳ ಪಿಡಿದು ಸುಗ್ರೀವನಿಗೆ ದಯದಿ ನೀನಿತ್ತು ।
ಖಲವಚನಗಳನೆಲ್ಲ ಬಿತ್ತರಿಸಿ ಪೇಳಿದಳ್ ಕೇಳ್ದಾನು ನಸುನಗುತಲಿ ॥
ನಳಿನಮುಖಿ ನೀಂ ಬಾಲೆ ತಿಳಿಯದಲೆ ಚಾಪಲ್ಯ ।
ದಳಿದೆನ್ನ ಬೆದರಿಸುವೆ ಸರಸಿಜಾಸನಗೊಲಿದು ।
ಇಳೆಯ ರಕ್ಷಿಸ ಬಂದ ಪರಬೊಮ್ಮ ಶ್ರೀರಾಮನೆಂದರಿಯದಾದೆ ನಕಟ ॥ (64)

ಗೀರ್ವಾಣವಂದಿತಪದಾಬ್ಜ ನೀ ಜಗತಿಯೊಳು ।
ಸರ್ವರಂತರ್ಯಾಮಿ ಯತಿ ದಯಾಪರನುತ ।
ಗೋರ್ವರಮಿತ್ರರ್ ಹಿತವರೆಂಬ ಭೇದಮುಮುಂಟೆಯೆನುತುತ್ತರವನೀವ್ರತ ।
ನಿರ್ವಾಣಪತಿ ನಿನ್ನ ನಿಟ್ಟಿಸಲ್ಬಂದುವಕ ।
ಪೂರ್ವಸಾಹಸವ ಕಂಡೆನು ತಿಳಿಯದ್ಯೆದಿದು ।
ಗರ್ವದಿಂ ಮಾಡಿದಾತನಲ್ಲಿ ನಿಜಬುದ್ಧಿಯಿಂದಲ್ಲದೆ ಕೇಳೆನ್ನ ಸೊಲ್ಲ ॥ (65)

ಕಾಲಕರ್ಮಂಗಳಂ ಕಳೆದು ಬದುಕುವರುಂಟೆ ।
ಶೀಲಸದ್ಗುಣ ದಯಾಪರ ನಿನಗೆ ದೌರ್ಜನ್ಯ ।
ಜಾಲವೆಂಬುದದುಂಟೆ ಕಪಿ ಚಂಚಲತೆಯಿಂದಮಾ ಶರದ ಬಾಧೆಪಿಡಿದು ।
ಬಾಲಿಶದ ನಿಷ್ಠುರದ ನುಡಿಗಳಂದಾಡಿದುದ ।
ಕೇಳಿಸದೆ ಚಿತ್ತದೊಳ್ ಮರೆವುದೆಂದೊರೆದಾಗ ।
ವಾಲಿ ನಿಜಮಾರ್ಗಮಾರ್ಗಣಪನರಸುತಮಿರ್ದ ತನ್ನೊಳಗೆ ಕಣ್ಮುಗಿಯುತ್ತ ॥
ಭೀಮ ವಿಕ್ರಮ ಮಹಾದಾಮಹತ್ತರ ಕೀರ್ತಿ ।
ರಾಮ ಸುತ್ರಾಮ ಸುತನತಿಕ್ರೂರತರದಿಂದ ।
ಮಾ ಮಹಾನಿಷ್ಠುರದಿ ನುಡಿದ ನುಡಿಗಳನೆಲ್ಲ ಚೆನ್ನಾಗಿ ಲಾಲಿಸುತ್ತಲಿ ॥
ರಾಮಪುರದರಸ ಕಪಿಯರಸಗಮಿತಸುಧರ್ಮ ।
ಸೀಮೆಯಂ ಬಿತ್ತರಿಸಿ ಪೇಳ್ದನೆಡಬಲದೊಳಗೆ ।
ಸೌಮಿತ್ರಿ ಸುಗ್ರೀವ ಪವನಜಾದಿಗಳೊಲಿದು ಪಾಡಿ ಪೊಗಳುವ ತೆರದೊಳು ॥ (67)

ಸಂಧಿ 6 ಕ್ಕಂ ಪದ 265 ॥

ಏಳನೆಯ ಸಂಧಿ

ಸೂಚನೆ : ಮಾಡಿದಪರಾಧಮಂ ಮನ್ನಿಸುವೆ ನೆಂಬುದಂ ।
ರೂಢಿಜನರರಿವಂತೆ ರಘುವೀರ ಕೃಪೆಯಿಂದ ।
ಕೋಡಗದ ದೊರೆಗೆ ಕೈಗೈದ ಪದವಿಯ ನಿತ್ತ ನಿರ್ಜರಕವಂಬ ನಲಿಯೆ ॥

ಕೇಳು ಪಾರ್ವತಿ ವಾಲಿ ಬಹುವಿಧದ ನಿಷ್ಠುರದಿ ।
ಹೇಳನಂಗೈದ ಪರಿಯಂ ಕಂಡು ರಘುಪತಿಯು ।
ಹೇಳದಂ ಧರ್ಮಾರ್ಥಕಲಿತವಚನಂಗಳಂ ಸಜ್ಜನರು ಹರುಷಿಪಂತೆ ॥
ಕೇಳು ಕಪಿರಾಜ ದುರ್ನೀತಿಯಂ ಕೋಪಮಂ ।
ತಾಳ ಶ್ರಮಗೊಂಡರವರಿಂದೇನು ಫಲವೈ ಕೃ ।
ಪಾಳುವೆನಿಸುತ ಸೂಕ್ಷ್ಮಮತಿಯಿಂದ ತಿಳಿದಾಡು ಮಗುಳುತ್ತರಕ್ರಮವನು ॥ (1)
ಚತುರಬ್ಧಿಪರಿಯಂತಮೆಸೆವ ಭೂತಳದಾಧಿ ।
ಪತಿಗಳಿಕ್ಷ್ವಾಕುವಂಶಜರಖಿಳಜಂತುಗಳ ।
ಹಿತನಿಗ್ರಹಾದಿಗಳನೆಸಗಿ ಪಾಪವನೆರಡು ಧರ್ಮರಕ್ಷಣೆ ಗೈಯುವ ।
ಪತಿಗಳಾ ಸಿಂಹಾಸನವನಾಳ್ವ ಭರತ ಭೂ ।
ಸತಿಯರಸರತಿ ದಯಾಪರ ಧರ್ಮಶೀಲ ಸ ।
ನ್ಮತರೆಂಬುದಂ ಕಂಡು ಕೇಳದೆ ನೀಮುನ್ನಮಖಿಳ ಭೂದಿವಿಜರರಿದೆ ॥ (2)
ಆ ಮಹೀಪಾಲನವನೀಪಾಲನಂಗೈವ ।
ನೇಮದಿಂ ದಖಿಲಧರ್ಮವ ಪೊರೆದು ಧರೆಗೆ ಸು ।
ತ್ರಾಮನಂದದಿ ಪ್ರಜಾಹಿತವ ಬಯಸುತಮಿರ್ಪ ಪರದೇವತಾರೂಪದಿ ॥
ಸೋಮನಂತಾನಂದಕರ ಶತ್ರುವಿಜಯ ರಣ ।
ಭೀಮನಾಜ್ಞೆಯೊಳಖಿಳ ಧರ್ಮಪೋಷಣೆಗೈಯ ।
ಲೀ ಮಹಿಯ ಚರಿಪರಸ್ಮತ್ಸದೃಶದರಸುಗಳನೇಕರಪ್ಪಣೆಯಿಂದಲಿ ॥ (3)

ತಿಳಿದು ಬತ್ತದ ತೊಳಲ ಪಳಯದೆ ಕಪಿತ್ವವಂ ।
ತಳೆದು ಸನ್ಮಾರ್ಗವಂ ಕೈಕೊಳದೆ ದೌರ್ಜನ್ಯ ।
ಕಳೆಯಂ ಕತಂಧರೊಮ್ಮನದಿ ಕೂಪವ ಹೊಕ್ಕ ತೆರದೊಳಗಮರ್ಯಾದೆಯು ॥
ನಿಳಯನಾದೊಡೆ ಪ್ರಾಣವುಳಿವುದೆಂತರಸುಗಳು ।
ಸುಳಿದಾಡುವೆಡೆಯುಲೀಕ್ಷಿಸಿ ಸೈರಿಸುವರೆಂತು ।
ತಿಳಿ ಧರ್ಮಮತವನೆಂದೊರೆದು ರಘುನಾಯಕಂ ವಾಲಿಯೊಡನೀ ಪರಿಯಲಿ ॥ (4)

ಪಿತ್ರಾತನೋರ್ವನಗ್ರಜನೋರ್ವ ವಿದ್ಯಗಳ ।
ತೆತ್ತಾತನೋರ್ವರೀ ಮೂವರುಂ ಗುರುಗಳಿಂ ।
ಪುತ್ರಮುದ ಮಿತ್ರ ತನುಜನಂತೇವಾಸಿಗಳ್ ತನೂಭವರೆಂಬರು ॥
ಮತ್ತೆ ಸೊಸೆ ಸಾದಿನಿಯು ಮಗಳು ಮೂವರು ಸಮ ಮೆ ।
ನುತ್ತ ಬೆಳ್ಪ ಧರ್ಮವನುಸರಣೆಗೈಯೆ ನಿನ ।
ಗುತ್ರಮೋತ್ತರವೃದ್ಧಿ ಸಮನಿಸದೆ ಮರವಕ್ಕೆ ನಿನಗೊದಗುವದೆ ಕಪೀಶ । (5)

ಹಿಂದುಮುಂದರಿಯದಿಂದ್ರಿಯಪರವಶ್ಯವಂ ।
ಪೊಂದಿಯನುಜಾಂಗನಾರತಿಗೆಳಸಿ ದುರ್ಬುದ್ಧಿ ।
ಯಿಂದ ಧರ್ಮತ್ಯಾಗಗೈದೆ ಪರದಾರಾಭಿರತಿಯಿಂದ ಕೆಡೆವರಾರು ।
ಛಂದದಿಂ ನೀನೆಸಗಿದಪರಾಧವನುರೂಪ ।
ಸುಂದರ ಫಲಪ್ರಸರವಹುದನನುಭವಿಸದಾ ।
ರೆಂದರೇನಹುದು ಮಾಡಿದ ಪಾಪ ಕೊಂದರೆಸ್ಮರಿಂದನೇನಪ್ಪುದು ॥ (6)

ಪಾಪವಿದೇಕೆಯು ದಂಡನಗೈಯುವತೆ ಧರ್ಮ ।
ಲೋಪದಿಂ ಬಿಟ್ಟಿಸದೆ ಜಾತಿವರ್ಣಾಶ್ರಮ ವ ।
ಗೋಪಾಯನಂಗೈಯುವತಿಮಾತ್ರತೆಯೊಳಾರ್ತರಕ್ಷಣಂಗೈಯುದಿರುವ ॥
ಭೂಪಾಲನಿಗೆ ನಿರಯಮೆಂದು ಶ್ರೀಮನ್ಮನು ನಿ ।
ರೂಪಗೈದರ್ಥವಂ ಶಿರಸಾವಹಿಸಿ ಬುವನ ।
ದೀಪರಘುವಂಶನೃಪ ಕಳುಹಿರುವ ಭುವನಮಂ ಪೊರೆಯೆ ಮತ್ಸ್ಯವೃಕಜನರ ॥ (7)

ರಾಜಾಜ್ಞೆಯಿಡಿದಾತ್ತ ನಿಖಿಳಪಾತ್ರಿಕೆಗಳ ಸ ।
ಮಾಜವಂ ಸಂಹರಿಸಿ ಗೋವಿಪ್ರಮೃಗಪಕ್ಷಿ ।
ರಾಜಿಯಂ ಪೊರೆವಡೆ ಧರ್ಮಕಾಣೆಯವನುಂ ಕಂಡರಿನಿತೊಪ್ಪುಗೊಳಿವ್ರ ॥ (8)
ಮಾಜವಮಸುರಿವ ಶಾಸ್ತ್ರಪ್ರವೃತ್ತಿಯ ತಿಳಿದು ಕಪಿ ।
ರಾಜ ಚಿತ್ತಾತಂಕವಂ ಪಳ ಭವದ್ವ್ಯಥಾ ।
ಬೀಜ ಮಗಳೊಂಬಿರ್ದದೊರೆವೆನಾಲಿಸು ಪ್ಲವಗ ಚಂಚಲದ ಮನವನುಳಿದು ॥

ಅಕಲಂಕಭಾಸ್ಕರಾತ್ಮಜಗಗ್ನಿಸಾಕ್ಷಿಯೊಳು ।
ಸಕಲಕಪಿಯೂಥಪರ ಮುಂಗಡೆಯುಲಭಯುವಂ ।
ಪ್ರಕಟವೆನಲಿತ್ತೆನೆಮಗಾತ ಸೌಮಿತ್ರಿಗಿಂದಧಿಕ ಸಂದೆಗವಿಲ್ಲವು ॥
ಸಕಲಸಂಪದವಿಪದವೆಮಗವಶ್ಯಕವಾಗೆ ।
ಯುಕುತಿತಂತ್ರಂಗಳಿಂದಾದರೆಯು ನಿಗ್ರಹಿಸಿ ।
ನಿಖಿಲಸಾಮ್ರಾಜ್ಯವಂ ರವಿಸುತಗೆ ಕೊಡಲಾದುದಿದು ಮುಖ್ಯಮತವೆಂದರಿ ॥ (9)

ರವಿಶಶಿಗಳೆಡೆಯಾಟ ನಿಲಲಿ ನೀರಧಿ ಬಂದು ।
ಕುವಲಯಾದಿ ಪಸರಿಸಲಿ ಮೇರುಮಂದರಗಳುಂ ।
ನವಕಮೆನೆ ಚಲಿಸಲನುದಿನದಿ ರಘುವಂಶಭವನೃಪತಿಗಳು ಕೊಟ್ಟನುಡಿಯಂ ।
ಅವಿರಳದ ಸಾಮ್ರಾಜ್ಯಪದವಿ ಕೈಸಾರದಿರೆ ।
ಭುವಿಯೊಳಾರೆಸಿಸುವರು ರಾಜ್ಯಪ್ರದಂಗೈದು ।
ರವಿಸುತನ ಪೊರವೆವೆಂದುದಕೆ ನಿನ್ನಂ ತರಿದು ಬಿಸುಟೆವಾವು ಸತ್ಯವಿಡಿದು ॥ (10)

ಆರಾದರೇನಯ್ಯ ಮಾಡಿದಪಕಾರದನು ।
ಮಾರದಂಡತೆಗೈಯದಿರೆ ದೋಷ ಪೋದಪುದೆ ।
ವಿಚಾರಲಳವೇ ಧರ್ಮವಚನಗಳನಿಕ್ಷ್ವಾಕುಭವರತುಳಧರ್ಮಿಗಳಲೇ ॥
ಧಾರಿಣೀಪತಿಗಳಲಿ ಕೆಲಕೆಲರು ಮನುಜಕೃತ ।
ತೋರಪಾತಕಕೆ ಪ್ರಾಯಶ್ಚಿತ್ತಮೆಸಗೆ ಕಾ ।
ಳೋರಗವು ಕಚ್ಚಿದುದ ಕಸದಿಂದ ತೊಡೆದರದು ಪೊದಪ್ಪುದೆ ಮತಿವಿಕಳತೆ ॥ (11)

ವಿಧಿಯಿಂದ ಪಾತಕದ ದಂಡನಂಗೈದಾವು ।
ಬುಧಜನರ ಮೆಚ್ಚಿನಿಂ ನಡೆದಪೆವು ದುರ್ನೀತಿ ।
ಯುದಿಸದೆಮ್ಮರಸುಗಳ ರಾಷ್ಟ್ರದೊಳಗೆಂದಿಗುಂ ತಿಳಿಯ ಯೋಚಿಸದೆ ಬರಿದೆ ॥
ಒದರಿದರೆ ಕಪಿ ನಿನ್ನ ಮತಿಗದೇನೆಂಬೆನೆವು ।
ಗುದಿಸದೈ ರೋಷಹರ್ಷಗಳು ನಿನ್ನಯ ನುಡಿಯು ।
ಪವನಿಂದಮೆನುತೊರೆದು ಮಗುಳೊಂದು ನೀತಿಯಂ ಪೇಳ್ದ ರಘುನಾಥನೊಲಿದು ॥

ನೆಲದಾಣ್ಮರಿಗೆ ಧರ್ಮ ಮೃಗಯಾಟನಂ ಪೋಗೆ ।
ಬಲೆಜೆಗುರುಶರಮಿಂಟಿಗಳಲಿ ಮೃಗಪಕ್ಷಿಗಳ ।
ನೆಲದಿ ಕೆಡಪುವದು ಸನ್ಮುಖ ಪರಾಙ್ಮುಖ ಮತ್ತ ನಿದ್ರಾಪ್ರಮತ್ತವೆಂದು ॥
ಪಲವು ವಿಧಗಳ ನೆಣಿಸಿ ಬಿಡುವರೆ ಮಹೀಪತಿಗ ।
ಳೆಲೆ ಮರುಳೆ ಶಾಖಾಮೃಗಂ ಪಾತಕಿಯು ನಿನ್ನ ।
ಕೊಲಲವಶ್ಯಕಮಾದುದಾವ ವಿಧದಿಂದಾರ್ಗೆ ಧರ್ಮವಚನಾನುಮತದೆ ॥ (13)

ಬರಿದೆ ರೋಷಕೆ ಸಿಲ್ಕಿ ನರನಾಥರಂ ಜರಿದು ।
ಪರಮಪಾತಕವ ಸಂಪಾದಿಸಲದೇಕೆ ನೀ ।
ನರಿ ಧರ್ಮಸಂಗತಿಯ ತಿಳಿದಾತ್ಮರಕ್ಷಣೆಯನೆಸಗು ಕಪಿತ್ವಯನು ಬಿಟ್ಟು ।
ಹರಿಯೆ ಮನುಜಾಕಾರದಿಂದ ಭೂಮಿತಳದೊ ।
ಳರಸೆನಿಸಿ ಪಾಪಪುಣ್ಯಗಳ ತಿಳಿದವ ಬೆರಸ ।
ಮರೆ ಧರ್ಮರೂಪದಿಂ ಚರಿಪನೆಂದರಿತುಕೋ ದೋಷ ಬಂದಪುದನರಿತು ॥ (14)

ಪರಮಪುರುಷನ ವಚನಸರಣಿಯಿಂ ಮನವನಾ ।
ವರಿಸಿರ್ದ ಕಳ್ತಲೆಯು ಜರಿದು ನಿರ್ಮಲತೆಯಿಂ ।
ಬೆರೆಯಲೀ ಧರ್ಮಗಳು ಕರತಳಾಮಳಕಮೆನೆ ಕಣ್ಗೆಸೆಯೆ ನೋಡಿನೋಡಿ ॥
ಅರಿಶಂಖಲಾಂಛನ ಮಹೇಶ ಸರಸಿಜವಾಸ ।
ನಿರುಗೆಯೀ ಮೂರ್ತಿ ಯೆಂದರಿತು ಸಂತಸದಿಂದ ।
ಹರಿಕುಲೋತ್ತಂಸನಿಂತೆಂದನಾನಂದದಿಂ ಚಿತ್ತನೈರ್ಮಲ್ಯದಿಂದೆ ॥ (15)

ರಮೆಯರಸನೆಂದು ರಾಜೀವಲೋಚನನೆಂದು ।
ದ್ಯುಮಣಿಶತಸಂಕಾಶ ದೀನಪೋಷಣನೆಂದು ।
ಕಮಲಭವರುದ್ರಾದಿಗಳ ಸೃಜಿಸಿ ಪಾಲಿಸುವ ಮುನಿಕುಲೋತ್ತಂಸನೆಂದು ॥
ವಿಮಲವಿಜ್ಞಾನಂದನಿಧಿಯೆಂದು ತ್ರಿಗುಣ ಸಂ ।
ಕ್ರಮವಿಲ್ಲದಪ್ರಮೇಯಾದಿವಸ್ತುವೆನುತ್ತ ।
ತಮಸಃಪರನೆನುತ್ತ ತಿಳಿದಿರ್ಪೆ ರಘುನಾಥ ನೀಂ ಜಗನ್ನಾಥನೆನುತ ॥ (16)

ನಸುನಗೆಯೊಳೊಗೆದ ಮಾಯಾವಿಲಾಸದಿ ಬೊಮ್ಮ ।
ಸಸಿಮೌಳಿ ಬಿಸಜಾಕ್ಷರುದಿಸಿ ನಾನಾಪರಿಯ ।
ಲೆಸೆವಂಡಗಳ ಸೃಜಿಸಿ ಜೀವರಾಸಿಗಳನ್ನು ಪುತ್ಥಳಿಯ ಕುಣಿಸುವಂತೆ ॥
ಹಸವಲ್ಲದಜ್ಞಾನವಸಗೈದರಾ ಬಲೆಯ ।
ಮುಸುಕಿತಾ ಮನಕೂಪದೊಳ್ ಕೆಡೆದು ಕಾಣದಿಹ ।
ಪಶುಗಳೆಂತರಿವರೀ ಚಿನ್ಮಾತ್ರವಿಗ್ರಹವ ಶರಣಜನ ಕಲ್ಪತರುವ ॥ (17)

ಜಗದುದ್ಧರಣೆಗೈಯಲಘಹರನೆ ಮಾನುಷರ ।
ಬಗೆಯಿಂದ ಸಂಚರಿಪಖಂಡತೇಜೋರಾಶಿ ।
ನಿಗಮಮಸ್ತಕಮಣಿಯೆನುತ್ತಾನು ತಿಳಿದಿರ್ಪೆನಿದಕೆ ಸಂದೆಗಮಿಲ್ಲವು ॥
ಜಗತ್ರಿಯೊಳಗಾರಾದೊಡೆಯ ಚರಮಸಮಯದೊಳು ।
ಮುಗುಧತೆಯನಾಂತ ಕರಣಂಗಳಂ ವಿಜ್ಞಾನ ।
ಮೊಗೆಯದೆಂಬುದು ಸಿದ್ಧವಾಗಿರ್ದುದಂ ಮೋಹವಶಮಪ್ಪುರಖಿಲರರಸ ॥ (18)

ಶರಹತಿಯೊಳೀನೊಂದನರಿಯದಜ್ಞಾನದಿಂ ।
ನರನೆಂದು ತಿಳಿದು ವಾನರಬುದ್ಧಿವಿಡಿದಾಗ ।
ಮರುಳುನುಡಿಗಳ ನುಡಿದ ಪರಿಯನೆಣಿಸದೆ ದಯಾಪರನೆಂಬ ಬಿರುದ ಮೆರೆದು ॥
ಪರಿಪರಿಯ ಧರ್ಮಗಳನೊರೆದೊಡೆಯ ಕಳ್ತಲೆಯ ।
ಪರಿಹರಿಸಿ ಪರಮಪಾವನಮೂರ್ತಿಯಂ ತೋರಿ ।
ಪೊರೆದಂತರಾತ್ಮ ಮುನಿಮಾನಸಸರೋಜಾತವಿಕಚಕರದ್ವಾದಶಾತ್ಮ ॥ (19)

ಬೆಗೆದು ಯೋಗದೊಳು ಪ್ರತ್ಯಾಹಾರಜಾಲಮಂ ।
ಸರಭಸವಲೆರಗುವ ಸಮಾಧಿಯೊಳು ಮೌನಿಜನ ।
ರರಿಯದ ಮಹಸ್ಸೈದಿ ನೆಲದಿ ಪುರುಷಾಕಾರವೆತ್ತು ಪರಿಪೂರ್ಣದಯದಿ ॥
ತರುಚರಂಗಜ್ಞಾನ ದುರುಳಿಗೆ ಮಹಾಮೋಹ ।
ತೆರನ ಧರ್ಮಿಗೆ ಪಾಪಿನಾಪಿಗೆ ಪುರಸ್ಫೂರ್ತಿ ।
ಕರನಾದೆ ಪೂರ್ವಪುಣ್ಯಪ್ರಭಾವದಿ ವಿಧಿಭವಾದಿಗಳಗುಂಟೆ ಬಳಕ ॥ (20)

ಕಾಣದೆಸಗಿದ ಪಾಪರಾಸಿ ಕೋಪದಿ ಬಂದು ।
ಗೋಣಪಿಡಿದೊತ್ತಿ ಸಂಕಟಗೊಳಿಸಿ ನಿಲಗೊಡದೆ ।
ಪ್ರಾಣಪ್ರಯಾಣಸಮಯಕೆ ನಿನ್ನ ಗುಣನಾಮವೊಮ್ಮೆ ನಾಲಿಗೆಗೊದಗಲು ॥
ಕೇಣಮಿಲ್ಲದ ದುಷ್ಕೃತಂಗಳೆಲ್ಲಂ ಪೋಗಿ ।
ಕ್ಷೋಣಿಗತಿಶಯದ ಯೋಗೀಂದ್ರರಿಂಗಪ್ಪ ನಿ
ರ್ವಾಣಮಹುದೆನೆ ಕಂಗಳಿಂದ ದಿಟ್ಟಿಸುವೆನ್ನ ಭಾಗ್ಯದೇಳಿಗೆಯದೆಂತೊ ॥ (21)

ನುತಿಸಬಲ್ಲೆನೆ ಭವದ್ಗುಣವ ತಿರ್ಯಗ್ಯೋನಿ ।
ಗತ ನೀಚನಲ್ಪಮತಿಯೆನ್ನ ಗುಣದೋಷಗಳು ।
ಮತಿಯೆನುತ ಬಿನ್ನವಿಪನೊಂದನೆಣಿಸದೆ ಮರೆದು ಕರುಣಾಳುತನವ ಮೆರೆದು ॥
ಪತಿತಪಾವನನೆಂಬ ಬಿರುದ ನೀ ನೆನೆನೆನೆದು ।
ಕ್ಷಿತಿಯ ಜನರರಿವಂತೆ ವಿಜ್ಞಾಪಿಸಿದ ಪರಿಯು ।
ಪತಿಕರಿಸಿ ಪಾವನಾಂಘ್ರಿಯ ಬೆರಸಿ ಕೊಳವೇಳ್ಕುಮೆನುತ ಕರಗಳ ಮುಗಿದನು ॥

ಶರದುರುಬೆಯಿಂದ ತನುತಾಪ ಬೆರ್ಚುತ ಪ್ರಾಣ ।
ತರಹರಿಸದಿದೆ ಜೀಯ ಪರಿಹರಂಗೈದು ತವ ।
ಕರದಿಂದ ಮೈದಡವು ಕಾಯಬೇಕೆಂದೆರಗಿ ಕರಗಳ ಮುಗಿದು ಮಗುಳೆ ॥
ಇರುವೆ ಮೊದಲಾಗೆ ಕಡೆಯಾದ ಜೀವರಹೃದಯ ।
ದಿರವಾದ ದೇವ ಪ್ರಾಣಿಗಳ ಸಂಬಂಧ ಗ ।
ಳರಿಕೆಯುಂಟಾನೇನ ಬಿನ್ನವಿಪೆನೆಂದಮರಪತಿಯಣುಗ ಮಗುಳೆಂದನು ॥ (23)

ಮಾನಿನಿ ಮಹಾರಾಜ್ಯ ವೈಭವಗಳಂ ಗಣಿಸೆ ।
ಸೂನುವತಿಬಲ ತರಳನಂಗದನ ಕೈವಿಡಿದು ।
ಮಾನದಿಂ ಪಾಲಿಸಲುವೇಳ್ಕೆನುತ ಬಿನ್ನವಿಸಲೆಂದಾಸೆಯೊಂದಿರ್ದುದು ॥
ನೀನಖಿಳಜೀವನಾಧಾರ ನೆಂದರಿತ ಬಳಿ ।
ಕೇನ ವಿಜ್ಞಾಪನಂಗೈವುದಿರ್ಪುದೆನುತ್ತ ।
ಮಾನನಿಧಿ ಮಾಕುಳುಮಂ ಕೊಡದು ಶರದುರುಬೆಯಿಂ ಕಂಗಳಂ ಮುಗಿದಿರ್ದನು ॥

ಶರಣಾಗತರ ದೈನ್ಯಭರವನಪಹರಗೈವ ।
ಕರುಣಮೆಂತಟೊ ರಾಮಚಂದ್ರ ಕಪಿದೀನತೆಗೆ ।
ಮರುಗಿ ತ್ವರಿತದೊಳೈದಿ ಶರವನುಂ ಕಡಿಗೊಳಿಸಿ ಕರದಿಂದ ಮೈದಡಹುತ ॥
ತರಳನಂಗದನ ನೀಂ ಚಿಂತಿಸದೆ ಶೋಕಮಂ ।
ಪರಿದುಖಂಡಾನಂದಭಗಿತ ನಪ್ಪುದೆನುತ್ತ ।
ಮೊರೆದರರೆನಿಮಿಷದೊಳ್ ಕಪಿ ಶರೀರವನುಳಿದು ಸುರಪನೊಳ್ ಬೆರೆದನೊಲಿದು ॥ (25)

ರಾಮಚಂದ್ರನ ಕೃಪಾರಸವ ನಿಟ್ಟಿಸಿ ಸುರ ।
ಸ್ತೋಮಮಚ್ಚರಿಗೊಂಡು ನುತಿಸುತಿರೆ ಗಿರಿಜಾತೆ ।
ಸೋಮಶೇಖರನಂಘ್ರಿಗೆರಗಿ ಬಿನ್ನವಿಸಿದಳ್ ದೇವೇಶ ಚಿತ್ರಕಿನಿತು ॥
ತಾಮಸಂ ತೋರುತಿದೆ ಸರ್ವಜ್ಞ ಸರ್ವೇಶ ।
ಕಾಮಿತಪ್ರದ ಕರುಣಿ ಸಮವಿಷಮರಹಿತ ಶುಭ ।
ನಾಮ ಮರೆಗೊಂಡದೇಂ ಕಾರಣಂ ಕಪಿವರನ ಕೊಲೆಗೊಡಂಬಟ್ಟನೆನುತ ॥ (26)

ಅನುಮಾನವೊಂದೆನ್ನ ಮನವ ನಂಡಲೆವುತಿದೆ ।
ಚಿನುಮಯನ ಚರಿತೆಯಂ ಬಿತ್ತರಿಪುದೆಂದಾಗ ।
ಮನುಮೊಗೈದಡೆ ಶಿವಂ ಸಂತಸದಳಿಂತೆಂದ ಸತಿಯೊಳಾನಂದದಿಂದ ॥
ವನಜಮುಖಿ ಕೇಳ್ ಪೂರ್ವದೊಳಗೆ ದೇವಾಸುರರು ।
ವನಧಿಮಥನಂಗೈವ ಸಮರದೊಳು ಸುರಪಸುತ ।
ನಿನತನಯರೀರ್ವರೈತಂದು ಹರಿಯಂಘ್ರಿಗಳಗಭಿನಮಿಸಿ ಕೈಮುಗಿದರು ॥ (27)

ಪ್ಲವಗಾಧಿಪನ ನೋಡಿ ಹರಿ ನುಡಿದ ಪೋಗಿ ವಾ ।
ಸವನೆಡೆಯಲಿರ್ದ ಸುರರಿಗೆ ಸಹಾಯವನೆಸಗಿ ।
ದಿವಿಜರೊಳಗಿಹುದೆನುತ ನೇಮಿಸಲ್ ಕಪಿರಾಜ ಮಗುಳೆ ವಿಜ್ಞಾಪಿಸಿದನು ॥
ಕುವಲಯದೊಳಾಂ ಕಪಿಯು ನಿಸ್ಸಾರ ನಾಂ ಪೋಗಿ ।
ಬವರದೊಳಗೇಂಗೈವೆನೆನೆ ಹರಿಯು ಮಿತ್ರರಹಿತ ।
ಜವಸತ್ವಗಳನಿತ್ತು ಮೊಗನೋಡಿ ನಸುನಗುತವರನಂದು ಕರುಣಿಸಿದನು ॥ (28)

ಧುರದೊಳದಿರಾಗಿ ನನಗಾಪನೈತಹನವನ ।
ವರವಿಕ್ರಮದೊಳರ್ಧ ನಿನಗೆ ಬಂದೊದಗಲವ ।
ಮುರಿದೋಡಲಿದಿರಿಲ್ಲದತಿಸಾಹಸಿಕನೆನಿಪುದೆಂದಭಯಮಂ ಕೊಟ್ಟರೆ ॥
ಸುರಪವೆಡೆಗೈತಂದರೀಕ್ಷಿಸುತ ಪ್ರೇಮದಿಂ ।
ಕೊರಳ ಕಾಂಚನಮಾಲಿಕೆಯ ಗಳಕೆ ತೊಡಿಸಿದನು ।
ತರಳ ಕೇಳರ್ಪನ್ನ ಕರದಿಂದ ಬಲಕಾಂತಿಶೌರ್ಯಗಳ್ ಕುಂದವೆನುತ ॥ (29)

ವಾಲಿಯುರುಹೇಮಮಾಲಿಕೆಯಿಂದ ದೇವತಾ ।
ಜಾಲಕಗ್ಗಳಹಿತವನಾಚರಿಸುತಿರೆ ಸುರಪ ।
ಶ್ರೀಲಲನೆಯಧಿನಾಥಗೆರಗಿ ಬಿನ್ನವಿಸಿದಂ ದೇವ ನಿನ್ನಯ ಕಾರ್ಯಕೆ ॥
ನೆಲದೊಳುದುಭವಿಸೆಂದು ಜಲಜಪೀಠಂ ಪೇಳೆ ।
ಲಲಿತಕಪಿದೇಹದಿಂದಿರೆ ಭವತ್ಕೃಪೆಯಿಂದ ।
ಕಲಿತವಾದು ಮ ಬಲಂ ಪೌರುಷಂ ಮುಜ್ಜಗದೊಳಾರಿದಿರೊಳಂ ನಿಲುವರು॥(30)

ಕೊಂಡಿದಿರು ಸಾಹಸವ ಧರೆಯೊಳಾನೇಸುದಿನ ।
ದಂಡಧರನಂತಿರ್ದರೇನು ಗತಿ ಯೆನುತುಮಾ ।
ಖಂಡಲಂ ಬಿನ್ನವಿಸೆ ಹರಿ ಮೆಚ್ಚಿ ನಸುನಗುತ ಮಾರುತ್ತರಂಗೊಟ್ಟನು ॥
ಪಂಡಿತನೆ ಪೊಡವಿಯೊಳಗವತರಿಸಿ ರಣಕೆ ಮುಂ ।
ಕೊಂಡುಬರೆ ಮರೆಗೊಂಡು ಕಪಿರೂಪಮಂ ಕೆಡಿಸಿ ।
ಗಂಡುಗಲಿ ಪೂರ್ವಾಧಿಪತ್ಯಮಂ ಪಾಲಿಸುವೆ ಭೀತಿಗೊಳಬೇಡೆಂದನು ॥ (31)

ಕಮಲಾಪತಿಯ ನುಡಿಯ ಕೇಳ ಸಂತಸದಿಂದ ।
ಸುಮನಸೋತ್ತಮ ಸುಖದೊಳರ್ದನಂದಿನ ನುಡಿಯ ।
ಕ್ರಮಣೆಗೈಯಲಾರದೆನುತ ಕಪಿಯಂ ಕೊಂದುದಲ್ಲದೆ ಮಹಾಪುರುಷಗೆ ॥
ಭ್ರಮೆಯಜ್ಞಾತಿಗಳುಂಟೆ ಭೇದಿಸುವ ಪರಿಯುಂಟೆ ।
ವಿಮಲವಿಜ್ಞಾನಮಯಮೂರ್ತಿ ರಾಘವನೆನುತ ।
ತಮವ ನಿವಾರಿಸಿದ ಹರನಂಘ್ರಿಗಂ ಮಣಿದು ಹರುಷಿಸಿದಳದ್ರಿಜಾತೆ ॥ (32)

ಪರಿದು ಭೌತಿಕದ ಜಂಜಡವ ನಿಜರೂಪದಿಂದ ।
ವಿರಜಾಂಬರಾಭರಣಗಳನಿಟ್ಟು ಸುರರಾಜ ।
ಮಿರುಪ ಪೊಂದೇರಡರಿ ಪರಿಪರಿಯ ನುತಿಗಳಂಗೈದು ಗಗನದೊಳೈದಲು ॥
ಪರಮ ಭಕ್ತಿಯೊಳು ರವಿಸುತಪವನಸುತರೆರಗಿ ।
ಪರಮಾತ್ಮನೆಂದು ಭಾವಿಸುತ ಶ್ರೀರಾಮಪುರ ।
ದರಸನೆಡೆಯೊಳಗಿರ್ದರಾನಂದಮೂರುತಿಯ ಸಲ್ಲಾಪಮಹಿಮೆಯಿಂದ ॥ (33)

(ಸಂಧಿ 7 ಕ್ಕೆ ಪದ 298.)

ಎಂಟನೆಯ ಸಂಧಿ

ಸೂಚನೆ : ಕಾರಣಿಕರರಸ ರಘುರಾಜೇಂದ್ರಚಂದ್ರಮಂ ।
ಸಾರತತ್ತ್ವಾರ್ಥ ವಚನಗಳಿಂದ ಮಾನಸ ವಿ ।
ಕಾರಮಂ ಪರಿಹರಿಸಿ ತಾರೆಯಂ ಸಂತೈಸಿ ಬೀಳ್ಕೊಟ್ಟ ಕಿಷ್ಕಿಂಧಕೆ ॥

ಪದ ॥ ಮನದನ್ನೆ ಕೇಳ್ ವಾಲಿಯನುವಕಂಡತಿ ಭಯದಿ ।
ತನತನಗೆ ಕಪಿಗಳೋಡಿದರದರೊಳಗೆ ಕೆಲರು ।
ಮನೆಗೈದಿ ತಾರೆಯೊಡನೀ ಪರಿಯ ವಿಸ್ತರಿಸಿ ಪೇಳ ಮಗುಳಂತೆಂದರು ॥
ಇನಕುಲಾಗ್ರಣಿ ಸಹಿತಮಿನತನಯ ಬರ್ಪನಿದ ।
ಕನುಮಾನಮಿಲ್ಲ ನಗರದ್ವಾರವಂ ಬಲಿದು ।
ಮನಗೊಂಡು ಕೊಳುಗಳದೊಳಿಚ್ಚಾಡೆ ಯೂಥಪರ ಕರೆಸಿ ಪೇಳುವುದು ತಾರೆ ॥ (1)

ತಂದೆಗಿಂದಧಿಕಬಲನಂಗದ ಮಹಾರಾಜ ।
ನಿಂದು ಪಟ್ಟಾಭಿಷೇಕಂಗೈದು ಬಿದಿಯ ಕೃಪೆ ।
ಯಿಂದ ಬಂದೀ ಪ್ಲವಗರಾಜ್ಯಮೀ ನಗರಮಂ ರಕ್ಷಿಸಲ್ವೇಳ್ಕು ತಾಯೆ ।
ಕುಂದುಕೊರತೆಗಳೆಣಿಸಿ ಶೋಕಭೀತಿಗಳಿಂದ ।
ಮೊಂದೆರಡು ಘಳಿಗೆ ತಾಮಸಗೈಯೆ ಮುಂಬರಿದು ।
ಬಂದ ಬಳಿಕನುಕೂಲಮಹುದು ದುಸ್ತರಮೆಂದು ಬಿನ್ನಪಂಗೈದರೊಲಿದು ॥ (2)

ಪತ್ರಿಯಳಿದ ವಾರ್ತೆಯಂ ಕೇಳ ತಾರಾದೇವಿ ।
ಯತಿಶಯದ ದುಃಖದಿಂದೆದೆ ಬಾಯ ಬಡಿದು ಬಲು ।
ಖತಿಯಿಂದಮಿಂತೆಂದಳೆಲವೊ ಧೊರೆತನನಗರಭೋಗ ಸುತಭೃತ್ಯರಿಂದೆ ॥
ಯತನದೈಶ್ವರ್ಯದಿಂದೆಮಗೇನು ಧವನಾವ ।
ಕ್ಷಿತ್ರಿಯೊಳಗೆ ಕೆಡೆದಿರ್ಪನಲ್ಲಿಗಾನೈದಿ ಸಂ ।
ಗತಿಯಿಂದ ಸಗ್ಗವತುಲಿತಭೋಗಮಂ ಕೊಂಬೆನೆನುತ ಪೊರಮಟ್ಟಳಾಗಾ ॥ (3)

ಮುಂಗಾರ ಮಿಂಚು ನೆಲನಂ ನೋಡುವಾಸೆಯಿಂ ।
ದಂಗನಾಕೃತಿಯಾಂತು ನಡೆಗೊಂಡುದೆಂಬಂತೆ ।
ಸಂಗದೊರ್ವರ ಬಯಸದತಿವೇಗದಿಂ ಬಂದು ಕಪಿವೀರನಿರವ ನೋಡಿ ॥
ಹಿಂಗದಾತನ ತನುವ ಸೆಳೆದಪ್ಪಿ ಮುದ್ದಿಸಿಯ ।
ಭಂಗುರಸ್ನೇಹದಿಂ ಮೊಗದೊಳಗೆ ಮೊಗಮಿಟ್ಟು ।
ಕಂಗಳೊಳ್ ನಿಟ್ಟುಸುತ್ತ ಮಗುಳೆ ಗುಣಕಥನಗಳ ನೆನೆನೆನೆದು ಬಾಯಾರ್ದಳು ॥

ಪಿಂತೆ ದೇವಾಸುರರ ನೆರವಿಯೊಳು ಬಾಣಬಲಿ ।
ಮುಂತಾದ ಯೋಧರಂ ನೆಗ್ಗಿಸಿ ಮಹಾಯಶವ ।
ನಾಂತಂ ರಮಾಕಾಂತನಿಂದಮಿತವರಗಳಂ ಪಡೆದು ಭೂತಳದಿ ಶೂರ ॥
ಪಂತಿಯಂ ಗಣನೆಗೊಳ್ಳದ ಮಹಾಬಲ ನಿನಗ ।
ದೆಂತುದೋರಣಾಂತಕ ನಿನ್ನರಾಮನೆಂ ।
ಬಂತಕಂ ಮುಳಿದು ಕೆಡೆಪಿದನೆ ಹಾ ! ಸುರಪಸುತ ಹಾ ! ಯೆಂದು ಧರೆಗುರುಳ್ದ ॥ (5)

ಅರುಣನುದಯದೆ ನಾಲ್ಕು ಶರಧಿಯನು ಸುತ್ತಿ ಬಹ।
ಮರುತ ವೇಗವದೆಲ್ಲಿ ಮರೆಯಾಯ್ತು ಕೊಳುಗುಳದಿ।
ಸ್ಮರಿಸಿದೊಡೆ ಶತ್ರುಕುಲಗಿರಿದುರ್ಗಗಳನಡರೆ ಬಾಯುವಿಡುತ ನಡುಗುತಿರುವಾ॥
ಖರಕರೋಪಮವಿಕ್ರಮಂ ಪೋಗಿ ಧೂಳಿಯೊಳ್।
ಪೊರಳ್ವುದಾದುದೆ ಮೇರುಗಿರಿ ಧರಾತಳಕೆ ಬಂ।
ದುರುಳುವರೆನುತ್ತರಿಯದಾದೆ ಹಾಹಾ! ನಾಥನೆನುತ ಚೀರಿದಳಂಗನೆ॥ (6)
ದಶಮೌಳಿಕಾರ್ತವೀರ್ಯಸುತಮುಖ್ಯರೆಡೆಯೊಳುಂ।
ಬೆಸಗೊಂಡ ಮಾತುರದಿ ಕುಗ್ಗಿ ನೆನೆದೊಳ್ಪೈರ್ಯರ್।
ಬೆಸುಗೆಗೆಟ್ಟಳಲುವರು ಸುರರಾಜಮುಖ್ಯರುಂ ನಿನ್ನ ವಿಕ್ರಮವ ಬಯಸಿ॥
ಪೊಸತೆನಿಪ ಸಂತಸಂಗೊಂಬರಾ ಶೌರ್ಯಮಂ।
ಬಿಸಿಲೊಳಗೆ ಬೆರೆದ ಚಂದ್ರಿಕೆಯಂತೆ ಬಯಲಾದು।
ದಸಮಕಾಲದ ಮಹಿಮೆಗೇನೆಂಬೆನೆಂದಳಲಿ ಬಳಲಿದಳ್ ಶೋಕದಿಂದ॥ (7)
ಚಿತ್ತಕಿನಿತೂಣಿಯದ ಸಂಚಲವ ಪುಟ್ಟಿಸದೆ।
ಮತ್ತಕಾಶಿನಿಯುರಂತಿರವನವೇಕ್ಷಿಸದೆ।
ಭೃತ್ಯಾನುಸರಣೆಯಿಂದನುಸರಣೆಗೈದಿಪ ದಾಸಿಯೊಳು ಮುಳಿದು ಮಗುಳೆ॥
ಉತ್ತಮಮೆನುತ್ತಮವನೀಸತ್ರಿಯನಪ್ಪಿ ಬಿಡ।
ದಿತ್ತರದಿ ಬಳಲಿಸುವದುಚಿತವೇ ಕೇಳು ಕಪಿ।
ಸತ್ತಮನೆಯೆನುತಳಲಿತೊಳಲಿ ಬಳಲಿದಳಬುಜನೇತ್ರೆ ದುಃಖಾತುರದೊಳು॥ (8)
ಚಿರಕಾಲ ಸಂಪ್ರೀತಿಯಿಂದವನುಮತಿಸಿರ್ದ।
ಚರಣಸೇವಕಳೆ ದೈನ್ಯವ ಮನದೊಳರಿಸಿ ಬಂ।
ಧುರ ಪ್ರೇಮದಿಂದಪ್ಪಿ ಚುಂಬಿಸದೆ ಬಳಿಕಿಂತು ಸುರರಂಗನೆಯರ ಬಯಸಿ॥
ತೊರೆವುದುಚಿತವೆ ನಲ್ಲ ಕೋಪಮೆಳ್ಳನಿತಿಲ್ಲ।
ದಿರುವ ಕರುಣಾಕಲಿತ ಚಿತ್ತಮೇನೊಂದಲ್ಲ।
ಪೊರೆಯುವೆಳ್ಕೆಂದಾಗ ಚರಣಂಗಳಂ ಪಿಡಿದು ಮರುಗಿದಳ್ ಕುವಲಯಾಕ್ಷಿ॥ (9)
ದೇವ ಕೇಳಂಗದನ ಪ್ರೀತಿಯಿಂದಲಿ ಭವ।
ಜ್ಜೀವಕತಿಶಯಮೆಂದೆನಿಸಿ ನಡೆ [ವೃತ್ತಿದ್ದುನಿ]।
ದ್ರಾವಕಾಶಂ ಜನಿಸದತಿಮೃದುಲಮಾನಸಂ ಪಾದಮೂಲದಲಿ ಕೆಡೆದು॥
ಈವಿಧದೊಳೊರಲುತಿಹುದೇತಕೀಕ್ಷಿಸದೆ ಕರೆ।
ದೋವಿ ತೊಡೆಯೊಳಗಿಟ್ಟು ಮುದ್ದಿಸದೆ ಸುಮ್ಮನಿರ।
ಲಾವ ಪರಿಯಿಂದಣುಗ ಜೀವಸಂಗೈದಪಂ ಗತಿಯಪ್ಪರಾರವನಿಗೆ॥ (10)
ಭುವನದೊಳಗುಳ್ಳ ಮಾನಿಗಳಗ್ರಭವ ನೀನು।
ಯುವತಿಯುಂ ಸುತನ ರವಿಸುತಗೆ ಸೇರಿಸಿ ಕೋಪ।
ಜವಸತ್ವಗಳನುಳಿದು ಮೌನದಿಂದೈದಿದರದೇನೆಂಬರೈ ಕೂರರು॥
ಕುವಲಯಾಧಿಪ ಶೋಕಸಾಗರದೊಳೆಲ್ಲರಂ।
ತವಕದಿಂ ಕೆಡಪಿ ಪೋಗುವದುಚಿತಮಲ್ಲೆನುತ।
ಮವಿರಳದ ಶೋಕದಿಂದಳುತ ಕೆಡೆದಂಗನೆಯ ಪವನುಸುತ ಸಂತೈಸಿದಂ॥ (11)

ಜಲಬುದ್ಬುದೋಪಮಿತವಾದ ಶರೀರಸಂ ।
ಕಲಿತದಿಂದೆಸಗಿದ ಶುಭಾಶುಭಗಳಂ ಕೊಂಡು ।
ತೊಲಗುವರು ಜಂತುಗಳು ಜ್ಞಾನೀನಮಿದು ನವ್ಯಮಲ್ಲಮದರಿಂ ಬಲ್ಲರ್ ॥
ಕೆಲಸಾರಿಸುತ ಬಂದ ದುಃಖಂಗಳಂ ಶುಭಗ ।
ಳೊಲವ ಬಯಸುತಮಿರ್ಪರದರಿಂದ ಸುಕುಮಾರ ।
ಬಲಿಯಂಗದನ ನೋಡಿ ತಾಯ ದುಃಖವಮರೆದು ಕಾಯೆನ್ನ ಪ್ರೀಯದಿಂದ ॥(12)

ಮೂರುಲೋಕಂಗಳಂ ಜಯಿಸಿ ಜಸಮಂ ಗಳಿಸಿ ।
ಧಾರಿಣಿಯೊಳುಳ್ಳ ಭೋಗಂಗಳನ್ನನುಭವಿಸಿ ।
ವೀರರೈದುವ ನೆಲೆಗೆ ನಡೆದ ಕಪಿವಲ್ಲಭನ ನೆನೆದಳಲದೇನು ತಾಯೆ ॥
ಶೂರರಿಹರಮಿತಸಿರಿಸಂಪದಂ ರಾಜ್ಯಂ ಕು ।
ಮಾರನಂಗದನಿರ್ಪನೀ ತರಳಗಂ ಧರಾ ।
ಭಾರಮಂ ಪೊರಿಸಿ ಸುಖದಿಂದಮಿರವೇಳ್ಕಲ್ಲದಿಲ್ಲದುದನೆನೆದರೇನು ॥ (13)

ಧೃತಿಯುಳದು ನೀನಳಲುತಿರೆ ನೋಡಿ ತನಯ ಸಂ ।
ಗತಿವಿಡಿದು ಬಳಲುತಿಹನುಭಯರುಂ ನೆನೆನೆನೆದು ।
ಜತೆಗೊಂಡು ಸಂಕಟದೊಳಿರುವದಣ್ಣಂ ಪೋದ ಪರಿಯು ಕಂಡಳ್ಕ ಬಳ್ಕ ॥
ಕ್ಷಿತಿಗೊಡೆಗಿ ಸುಗ್ರೀವನಿರ್ಪನಾತನ ಕಂಡು ।
ಕತಿಪಯ ಕಪೀಂದ್ರರುಂ ಮರುಗುತಿಹರವ್ವೆ ನಿಜ ।
ಮತಿಯಿಂದಮೆಲ್ಲರಂ ಪೊರೆದು ಧೀರೆತನವ ನೀಂ ಧರೆಯೊಳಿರಿಸುವುದು ತಾಯೆ ॥
ಅಂಗದನ ಮುಂದಿಟ್ಟು ರಾಜ್ಯಪಾಲನೆಗೈಯು ।
ವಂಶವಣೆಯಂ ನೆನೆದು ಪಟ್ಟವಣೆಯೊಳು ಸುತನ ।
ಸಿಂಗರದಿ ಕುಳ್ಳಿರಿಸೆ ಕಂಡು ಶೋಕಾತುರಂ ಶಾಂತಿಯಾದಪುದು ತಾಯೆ ॥
ಹಿಂಗಿಸಲು ದುಃಖಶೋಕವನೆಂದು ಪರಿಪರಿವಿ ।
ಧಂಗಳಂ ವಾಯುಸುತನುಪಚರಿಸೆ ಕೋಪದಿಂ ।
ದಂಗನೆ ಹನೂಮಂತನೊಡನೆ ರೋಷಾವೇಶದಿಂ ನುಡಿದಳುತ್ತರವನು ॥ (15)

ಲೇಸನಾಡಿದೆ ಹನುಮ ಸುಗ್ರೀವನೊಡನೆ ನೀ ।
ನೀಸುದಿನ ಸಂಚರಣೆಗೈದ ಬುದ್ಧಿಯನೆಲ್ಲ ।
ಬೇಸರದೆ ಪೇಳ್ದೆ ವಾಸವಸುತನ ಪೋಗಾಡಿ ರಾಜ್ಯಭಾರವನು ವಹಿಸಿ ॥
ಕೂಸನೋಡುತ ತರಣಿಸುತನ ವೈಭವದಮಿತ ।
ರಾಸಿಯಂ ನಿಟ್ಟಿಸುತ ಶೋಕಮಂ ಮರೆದು ಮಗು ।
ಳ್ವಾಸಿ ಬಿಟ್ಟುಪುದೆನುತ ಬೋಧಿಪುದು ನಿನಗುಚಿತವಾಗಿಹುದೆ ಪವನತನಯಾ ॥
ತರುಣನಂ ಮುಂದಿಟ್ಟು ಧೊರೆತನವನನುಭವಿಸಿ ।
ತರಣಿಸುತನಂ ನೋಳ್ಪ ಸಿರಿಗಿಂತ ವಾಲಿಯಂ ।
ಪರಿರಂಭಣಂಗೈದು ಪೋಗಿ ಸಗ್ಗದ ಸುಖವನೆರವಿಲ್ಲದನುಭವಿಸುವ ॥
ಹರುಷಕೆತರಮದುಂಟೆ ತರಳನಂಗಜಗಾತ ।
ಕಿರಿಯಯ್ಯ ಹಿತಮಿರ್ದರೆತ್ತಿಕೊಂಡೊಯ್ದು ಪ್ರಿಯು ।
ವರನ ಪೊರೆದು ಸುತನಮನ್ನಿತ್ತು ಪತಿಕರಿಸಿ ನಿಟಸತಿ ಸಂತಸಹನು ॥ (17)

ಬಲುಕಾಲ ತಪಮಿರ್ದು ಬಯಸಿ ಸಿರಿ ಸಂಪದವ।
ನೊಲಿಸಿಕೊಳಲೆಂದಣ್ಣನಂ ಕೊಂದ ಸುಗ್ರೀವ।
ನೆಲನಾಳಕೊಳಲಿನ್ನು ಸಕಲ ಸಾಮ್ರಾಜ್ಯದಿಂ ಬಾಳಲೆಮಗೇತಕೆನುತ॥
ಲಲನೆ ವಾಲಿಯನಪ್ಪಿ ಬಳಲುತಿರಲಂಗದಂ।
ಸುಲಭವಲ್ಲದ ಶೋಕದಿಂ ತೊಳಲುತಿರೆ ಕಂಡು।
ಜ್ವಲಿತಾಂಗನೆನಿಸಿ ಸುಗ್ರೀವನಳಲಿದನಣ್ಣನಂ ನೆನೆದು ಮರುಗಿ ಮರುಗಿ॥ (18)
ಅತ್ತಿಗೆಯ ಮಾತಿನಿಂದಂಗದನ ದೈನ್ಯದಿಂ।
ಚಿತ್ತಮಂ ಕರಗಿಸಿದನಾಗ ಸುಗ್ರೀವನಳು।
ಕುತ್ತ ಮೈತಂದಣುಗನಪ್ಪಿ ಶೋಕಂಗೈದ ಕಲ್ಮರಂ ಕರಗುವಂತೆ॥
ಮತ್ತೆ ವಾಲಿಯ ಗುಣಪರಾಕ್ರಮಂಗಳ ನೆನೆದು।
ಬಿತ್ತರದಿ ತನ್ನ ದುರ್ವೃತ್ತಂಗಳಂ ಪೇಳ।
ತತ್ತರದ ಶೋಕಾಬ್ಧಿಯೊಳಗಾಳಮುಳುಗಿದಂ ಸಹಜಾತ ಪ್ರೇಮವೆಂತೊ॥ (19)
ಮೂವರೊಂದೇ ಸಮದಿ ಮೋಹದಿಂದಳುತಮಿರ।
ಲಾವ ಪರಿಯೊಳಗಾರು ತಿಳುಪಿದರೆ ತೀರದಿರೆ।
ದೇವರಾಘವ ಮನಸ್ತಾಪದಿಂದೈತಂದು ಸಂತೈಸವೇಳ್ಕುಮೆನುತ॥
ಆ ವನಿತೆ ಕಾಣುತಂಬುಜದಳಾಕ್ಷನ ಬರವ।
ತೀವಿದತಿ ದುಃಖದಿಂ ಮೂದಲಿಸಲನುಗೈದ।
ಳೋವಿ ಶೋಕಾತುರದ ದುರವಸ್ಥೆಗಳ ಪರಿಯ ವಿಸ್ತರಿಸಿ ವಿನಯದಿಂದ॥ (20)
ದೀನರಕ್ಷಕ ದಯಾಪರ ದುಃಖಹರ ಸುಕರ।
ಭೂನುತಚರಿತ್ರನೆಂದಖಿಳ ವೇದಂಗಳನು।
ಮಾನಿಸದೆ ಪೇಳುತಿವೆಯದರಿಂದ ಸತ್ಯಸಂಕಲ್ಪ ಸಕಲಾಗಮಜ್ಞ॥
ವಾನರನ ತರಿದೆನಗೆ ವೈಕಲ್ಯಮಂ ತಂದು।
ದೇನು ಕಾರಣ ದೇವ ಸ್ತ್ರೀ ಪುರುಷರಗಲಿಸಿದ।
ಮ್ಲಾನಮಲ್ಲವೆ ಧರ್ಮಕನಘ ನಿನ್ನಯಚಿತ್ತವರಿಯದಂತೇನಿರ್ಪುದು॥ (21)
ಪತಿಯು ಬಿಟ್ಟರೆನಿಮಿಷ ಜೀವಧಾರಣಗೈವ।
ಮತಿಯಿಲ್ಲವೆನಗೆ ಮಾನವನಾಥನಾವ ಶರ।
ಹತನಾದನೀಶಾನಮದರಿಂದಮೆನ್ನೆಚ್ಚು ಕೆಡಪಿದರೆ ಸಾಲೋಕ್ಯದ॥
ಗತಿಯಪ್ಪುದೆನ್ನ ಯಾಚನೆಯು ಸಫಲಂಗೈಯು।
ಲತಿಶಯದ ಕೀರ್ತಿ ಸಮನಿಪ್ಪುದರಸನುಳ್ದಾನು।
ಕ್ಷಿತಿಯೊಳರೆ ಕರುಣಾನಿಧಿ ಕಾಯಬೇಕೆಂದೆರಗಿ ಬೇಡಿದಳನೇಕ ವಿಧದಿ॥ (22)
ಅನಿತರೊಳು ಸುಗ್ರೀವನೈತಂದು ಹರಿಯ ಪದ।
ವನಜಂಗಳಗೆ ಬಿನ್ನಪಂ ಗೈದ ಶ್ರೀಯರಸ।
ಮನದ ಮಾಲಸ್ಯದಿಂ ಹಂಕಾರವಶನಾಗಿ ರೋಷದಾವೇಶ ವಿಡಿದು॥
ಸನುಮಾರ್ಗಮಂ ಬಿಟ್ಟು ಶಠಮತಿಗೊಡಂಬಟ್ಟು।
ಯೆನಗಯ್ಯನಾದಣ್ಣನಂ ಕೊಲಿಸಿ ಪಾತಕದ।
ಮನೆಯಾಗಿ ದುಷ್ಕೀರ್ತಿಯಾಂತೆ ಜೀವಿಸಿ ಮುಂತೆ ಫಲವೇನನಾಥನಂತೆ॥ (23)

ಯಾತಕೆನ್ನಯ ಜೀವಗತಿ ಸಮನಿಸುವುದಯ್ಯ ।
ಯಾತಕೆನ್ನಯ ಪ್ರಾಣವಖಿಲ ನಿರಯದ ತಾಣ ।
ಯಾತಕೆನಗಿನ್ನಿರವು ಲೇಸೆನಿಪುದೈ ಸಾವು ಸಾಧುಸಜ್ಜನರೆಡೆಯೊಳು ।
ಪಾತಕೆಯದೆಂತಿರುವೆ ಪದರಿಸಲದೇನೊರವೆ ।
ಜಾತಿಚಪಲತೆವೆರದ ಜಂಜಡದ ಮತಿಗರೆದೆ ।
ಭೂತಳದಿ ದೇಹದಿಂದಿರೆ ಸಲ್ಲ ಪೋದಲ್ಲದರುಗವೀ ಪಾಪವೆಲ್ಲ ॥ (24)

ತರಳಸುಕುಮಾರನಂಗದ ಮಹಾಶೋಕದಿಂ ।
ಧರಣಿಯೊಳ್ ಕೆಡೆದು ಪೊರಳುವ ಪರಿಯ ಕಂಬನಿಯ ।
ನಿರದೆರೆದು ಜಂಬಾಲತೆಯನೆಸಗೆ ತಾರೆ ತಜ್ಜಳದಿ ಮುಳುಗಿರುವಳೆರೆಯ ॥
ನೆರೆದ ಬಾಂಧವರೆಲ್ಲ ನಯನ ವಾರಿಗಳಿಂದ ।
ಕರಗುತೆನ್ನಂ ಜರೆದು ನುಡಿಯ ತರವಾರಿಗಳ ॥
ಲರಿದಿಡಲದೆಂತಯ್ಯ ಪೊರೆವೆನಸುಗಳ ಜೀಯ ಕೃಪೆಯಿಂದ ಪಾಲಿಸಯ್ಯ ॥ (25)

ಹಲವು ಮಾತಿನ್ನೇನು ಪಂಕನಿಷ್ಕೃತಿಯಿನ್ನು ।
ಕಲಿತವಾಗದು ದೇವ ನಿಲಿಸಲೆನ್ನಯ ತನುವ ।
ಕೊಲದೆ ಬಿಡುವನೆ ಕಾಲತಿಳದು ನೋಡದೆ ಮೋಲಜಾತ್ಯಾಂಧನಂತೆಸೆಯಲು ॥
ಕೊಲೆಗೆಡುಗನೆಂದೆನ್ನ ಕೊಸರದುಳವರೆ ಮುನ್ನ ।
ಕಲಿತ ಮತಿಯಘವಾಯ್ತು ಕೀರ್ತಿಕಳ್ತಲೆಯಾಯ್ತು ।
ಸುಲಭವಲ್ಲದ ನರಕರಾಸಿ ಸಮ್ಮುಖವಾಯ್ತು ಬದುಕಿ ನಿಷ್ಫಲಮದಾಯ್ತೂ ॥(26)

ಶೂರನೌದಾರಕಪಿವೀರನಗ್ರಜಗೆಡರ ।
ಹಾರೈಸಿ ಸತಿಸುತರ ದುಃಖಭಾಜನಗೈದು ।
ಧಾರುಣಿಯೊಳುಳ್ಳ ನಿಜಕುಲವಿಗರ್ಹತೆಯೊಡೆದು ವಿಪುಲಪಾತಕವ ತಳೆದು ॥
ಶಾರೀರಸುಖಕೆಳಸಿ ಜಸವ ನಾಶನಗೊಳಿಸಿ ।
ಕ್ರೂರವೈವಸ್ವತನ ಕೊಲೆಗಡಕವಾಗಿ ಮ ।
ತ್ತಾರಾಸೆಯಿಂದಿರುವೆನಾರಿಗೊಡೆಯಂ ಪೊರೆವೆನತುಲದುರ್ಯಶವ ಬೆರೆವೆ ॥ (27)

ಜನನಿಗರ್ಹಿತವಾದ ಸಾಮ್ರಾಜ್ಯ ಸುಖದನುವ ।
ನನುಪಳದು ಮುನ್ನಿನೋಲ್ ಕಾನನದಿ ಮನೆಗೈದು ।
ದಿನದಿನಂ ಕೃಛ್ರ ಚಾಂದ್ರಾಯಣಗಳಿಂದಲುಂ ತನುವಪೋಗಾಡಿಕೊಳುವೆ ॥
ವನಜಾಕ್ಷ ನಂಬುಗೆಯನಿತ್ತಂತೆ ಜಂಭಾರಿ ।
ತನಯನಂ ಕೊಂದೆನ್ನ ರಾಜ್ಯಮಂ ಪಾಲಿಸಿದು ॥
ದನಘಸತ್ಕೀರ್ತಿ ತ್ರಿಜಗದ್ವ್ಯಾಪಿಯಾಯ್ತಖಿಲ ಸಜ್ಜನಾನಂದವಾಯ್ತು ॥ (28)

ಬಿನ್ನಪವ ನವಧರಿಸಿ ಬೇಗದಿಂ ದಯವೆರಸಿ ।
ಬನ್ನಬಡುವಂಗದಗೆ ಪಟ್ಟಮಂ ಪಾಲಿಸುಗೆ ।
ಯೆನ್ನ ಮನದಿಷ್ಟಾರ್ಥವಾದುದಿಂದಿಗೆ ಸಾರ್ಥಮಿದೆ ಚಿಂತಿತಾರ್ಥವೆನಗೆ ॥
ನನ್ನಿಯೆನುತಂ ತಿಳದು ನಯಮಾರ್ಗಮಂ ತಳೆದು ।
ಖಿನ್ನತೆಯ ಪೋಗಾಡಿ ಕೃಪೆಯಿಂದಲುಂ ನೋಡಿ ।
ತನ್ನನುದ್ಧರಿಸೆಂದು ಶರಣಾಗತರ ಬಂಧು ಶಾಶ್ವತಕೃಪೈಕ ಸಿಂಧು ॥ (29)

ಎಂದು ಬಹುವಿಧದುಃಖದಿಂದ ಸುಗ್ರೀವ ರಘು ।
ನಂದನನ ಪದಕೆರಗಿ ಬೇಡುತಿರಲಂಗದಂ
ಕಂದಿದಾನನದಿಂದ ಕರೆಕರೆಗೊಳುತ್ತಮಿರೆ ತಾರೆ ಹಾಯೆಂದಳುತಿರೆ ॥
ಇಂದಿದಕುಪಾಯಮೇನೆಂದು ನಾನಾ ಪರಿಯ ।
ಲಿಂದಿರಾವರ ತನ್ನೊಳಾಳೋಚನಂ ಗೈದು ।
ಬಂಧುರದ ಶೋಕ ಕಡೆಯಹುದು ತತ್ವದೊಳೆನುತ ತಿಳಿದು ತಾರೆ ಯೊಳೆಂದನು ॥
ಯಾತಕೆನಿತಾತಂಕ ತಾಯೆ ಲಾಲಿಪುದೆಂದು ।
ಮಾತಂ ಮರೀಚಿಕಾ ಜಲದ ಜಂಗುಳಿಯೆಂಬ ।
ರೀತಿಯೊತನು ಜರಾಮರಣಾದೇಕಾಯತನ ಜತನಗೈವರಸಾಧ್ಯವು ॥
ಆತಪ್ತ ಲೋಹಸ್ತ ಜಲಕಣೋಪಮಮಾಯು ।
ನೀ ತಿಳಿಯದೆಡರಾಗಳನೇಕವೀ ಮಧ್ಯದೊಳ ।
ದೇತರಿಂದಲಿ ಶರೀರವನುಳುಹಲಳವಹುದು ಹರಸುರಾದ್ಯರಿಗೆ ತಾಯೆ ॥ (31)

ತನುವಧ್ರುವಂ ಜೀವನನುಪಮಾನಂದಮಯ ।
ನೆನಿಸು ಶಾರೀರಂಗಳಾಗಿ ಪೋಗಲು ಸಾಕ್ಷಿ ।
ಯೆನಿಪನಲ್ಲದೆ ಸಾಯನೋಯನೆಂದಿಗು ಪೋಗಿಬರ್ಪುದಿದು ಪೊಲೆಕಾಯವು ॥
ಚಿನುಮಯಾತ್ಮಕ ಜೀವ ಹಂಕಾರದೊಡವೆರದು ।
ಜನನಮರಣಾದಿಗಳನನುಕರಿಸಿದವನಂತೆ ।
ವನಿತೆಸುತಭ್ರಾತ್ರಾದಿ ವೈಭವಗಳಲಿ ಸಿಲ್ಕಿ ರಾಟಾಳದೊಳ್ ತಿರುಗುವಂ ॥ (32)

ಪ್ರಾರಬ್ಧ ವಶದಿಂದಲೆಲ್ಲರೊಂದೆಡೆ ಬಾ ।
ಯಾರುತರವಟ್ಟಿಗೆಯ ಸಾರಿ ತೃಷೆಯಂ ಕಳೆದು ।
ಬೇರೆಬೇರವರವರ ಗತಿಗಳರಸುತ ಪೋಪರೊಂದೆಡೆಯಲಿರರೆಂದಿಗು ॥
ಅಂಗಾರಿಲ್ಲವಭಿಲಾಷೆಯಿಂ ಮರುಳಾಗಿ ।
ಹಾರೈಸಿ ಬಯಲಭ್ರಮೆಯಿಂ ಬಳಲ್ವುದಲ್ಲದೀ ।
ಧಾರುಣಿಯೊಳೀಕಾಯ ನಿಲದೆಂದಿಗಾದರುಂ ಸಾಯನಕ್ಷಯ ಜೀವನು ॥ (33)

ನರನಾರಿಕ್ಲೀಬರೆಂತೆಂಬ ಭೇದಗಳಲ್ಲ ।
ಕರಿದುಬಿಳಿದುಂ ಕೆಂಪುವರ್ಣದೆಣಿಕೆಗಳಲ್ಲ ।
ತರಳ ಜವ್ವನಿಗ ವಾರ್ಧಿಕ್ಯಮೆಂಬಾವಸ್ಥೆಯಿನಿತಿಲ್ಲ ಜನನ ಸಲ್ಲ ॥
ಪರಿಪೂರ್ಣ ನಿರ್ಲೇಪ ನಾಶಮಿಲ್ಲದ ನಿತ್ಯ ।
ಪುರುಷನಂ ಕುರಿತಳುವುದನುಚಿತ ಕಳೇವರಂ ।
ನರಚರ್ಮಮೇಧೋಸ್ಥಿಪಂಜರಂ ನಶ್ವರಮೆನುತ್ತೆಲ್ಲರರಿಪರಬಲೆ ॥ (34)

ಪತಿಯಹಂಬಲಿಸುತಳುತಿರುವೆ ಭಾವಿಸೆ ನಿನಗೆ ।
ಪತಿ ಜೀವನೋ ತನುವೊ ಪೇಳ್ ಜೀವನಿತ್ಯತನು ।
ಕ್ಷಿತಿಯೊಳುಂ ಮುಂದಿದಕೊ ನೋಡದಳಲುತ ಬರಿದೆ ಬಯಲ ಭ್ರಮೆಯಿಂದಳುತ್ತಿಹೆ ॥
ಗತಿಯನರಸದೆ ಮನೋವ್ಯಥೆಯಿಂದ ಸಂಕಟದಿ ।
ಖತಿಗೊಳ್ಳಲೇಂಫಲಮೆನುತ್ತ ರಘುನಾಥಸಂ ।
ಪ್ರತಿನಿರೂಪಿಸೆ ತಿಳಿದು ಮನದ ದುಃಖವನುಳಿದು ಮಗುಳೆ ಬೆಸಗೊಂಡಳೊಲಿದು ॥ (35)

ದೇವಲಾಲಿಪುದೆನ್ನ ಬಿನ್ನಪವ ನಿರ್ಲೇಪ ।
ಜೀವನಾದಂ ಶರೀರಂ ರಾಷ್ಟ್ರಮದೃಢಮು ।
ಮೀ ವಸುಧೆಯೊಳು ಜಂತುಕೃತ ಪಾಪಪುಣ್ಯಗಳದಾರುಂಡು ಹುಟ್ಟುತಳದು ॥
ತಾವಿಲ್ಲದಲೆತಿರುಗಿ ದೈನ್ಯಹರುಷಗಳಿಂದ ।
ವಿವಿಧಮದಾರ್ಗೆ ತಿಳುಪೆಂದು ಬಿನ್ನವಿಸೆ ರಾ ।
ಜೀವಲೋಚನ ದಯದಿ ತತ್ವಮಂ ಬಿತ್ತರಿಸಿ ನಿಜದೊಲವ ನೊರೆದನೊಲಿದು ॥ (36)

ಅಸಮಾನವಿಭವ ನಿರ್ಲೇಪ ನಿತ್ಯಾನಂದ ।
ಶಶಿರವಿಗಳಿಂದಧಿಕಮಾದಖಂಡಮಹಸ್ಸು ।
ಪೊಸತೆನಲದೊಂದಿಹುದು ಪರಬ್ರಹ್ಮವದರ ಸತ್ತಾಮಾತ್ರದನುಸರಣೆಯಂ ॥
ಪ್ರಸಿಧಿಜದ ಮಧ್ಯದೊಳಗೊಸೆದು ಹುಟ್ಟಿದನಾದಿ ।
ರಸೆಯಾದಿಕಾರಣಮನಾದಿಮಧ್ಯಾಂತಗಳ ।
ಪೊಸಗದಿಹ ಮಾಯೆಯೊಂದುಂಟದರ ಸಾಹಸವಿಲಾಸಗಳ ಪೇಳಲಳವೆ ॥ (37)

ನಿಸ್ಸಂಗನೆನಿಪ ಪುರುಷನ ಪೊರೆಯಲಾಮಾಯೆ ।
ತಸ್ಸಮಯ ಬಲದಿಂದ ವೈಚಿತ್ರಕರದಿಂ ನ ।
ಭಸ್ಸವದನದಲಿಟ್ಟು ತೋರ್ಪೇಂದ್ರಜಾಲಕನ ಜಾತಿಯಂದದಿ ನಟಿಸುತ ॥
ದುಸ್ಸಹದ ಗರ್ಭಮಂ ತಳೆದು ಪಡೆದಪುದಾನು ।
ನಸ್ಸಮೊದಲದರಿಂದ ನಿಖಿಳ ತತ್ವಂಗಳನ ।
ಜಸ್ಸಮಂಗೊಳುತ ಸೃಜಿಸುವದು ನಿರ್ವ್ಯಾಜದಿಂ ಕಾಣ್ಬ ಕನಸಿಂಗೆಣೆಯೆನೆ ॥ (38)

ಶುದ್ಧಸ್ಫಟಿಕದೆಡೆಯಲಿದ್ದರ್ಜಪಾಕುಸುಮ ।
ನಿರ್ಧರದ ನಿಜಗುಣವ ನಿರ್ಮಲದಿಮಡಗಿತ ।
ನ್ನುದ್ಧತಿಯ ಮೆರೆವಂತವಿದ್ಯೆ ಪುರುಷನ ಸುತ್ತಿ ಹಂಕಾರಕಲಿತನೆನಿಸಿ ॥
ಬದ್ಧಸಂಗೈದು ಬಲು ಜನ್ಮಕರ್ಮಗಳೆಂಬ ।
ಪದ್ಧತಿಯ ಕೆಡಹಿ ಪ್ರಾಚೀನ ಬಲದಿಂ ಪ್ರಸಿಯ ।
ಬದ್ಧಮೆಂದೆನಿಸುವದನೇಂ ಪೇಳ್ವೆನಾಮಹಿಮೆಯೆಂತುಟೋ ಪೇಳ್ವರಳವೆ ॥ (39)

ಕಾಲಕರ್ಮಾಧೀನದಿಂ ಜೀವನೆಂದೆನಿಸಿ ।
ಮೇಲುಕೀಳಾಗಿ ಪ್ರಸಿಸಗ್ಗನರಕಂಗಳ ವಿ ।
ಶಾಲ ಫಲಗಳನುಂಡು ಕಂಡೆಂದಿಗುಂ ದಣಿಯ ಮಗುಳೆಮಗುಳದ ಬಯಸುವಂ ॥
ಶೀಲಮಿಲ್ಲದುದೆ ನಿಜಮಾಯ್ತು ಭೂತಳದಿ ದು ।
ಶ್ಶೀಲಸಂಸರ್ಗವಿಷಯಗಳನೇಳಿಗೆಗೊಳಿಸೆ ।
ಮೇಲೆ ಸ್ವಪ್ನಂ ಪೆರ್ಚೆ ಧಿಟಮಾದ ಮಾಳ್ಕೆಯಿಂ ದುಸ್ಸಂಗ ಕೇಡದಲ್ತೆ ॥ (40)

ಪರವಶತೆವೆತ್ತು ಹಂಕಾರ ಬಲದಿಂ ನಿಜವ ।
ಮರೆದರದು ಕಿಂಕರತೆಯಹಾಂತಂತೆ ನಿರ್ಲೇಪ ।
ಪರಬ್ರಹ್ಮಸ್ವಾಜ್ಞಾನಬಲದಿಂದ ತಾಂ ಸಿಲುಕಿ ಬರಿದೆ ತೊಳಲುವದೆಂಬುದಂ ॥
ಗುರುಮುಖದಲರಿತು ದೃಗ್ದೃಶ್ಯದಿಂದೇರ್ಪಡಿಸ ।
ಲರುವೆನಿಸಿ ಸುಖದುಃಖಮಿಲ್ಲದಾನಂದಕ್ಕೆ ।
ಸುರುಚಿರಾಲಯಮಪ್ಪೆಯೆನಲು ತಾರಾದೇವಿ ಮಗುಳೆ ಬಿನ್ನಪಗೈದಳು ॥ (41)

ಸ್ವಾಮಿನೇಮಿಸಿದರ್ಥ ಮನಕೆ ಬಂದುದುಸುಖದೆ।
ಸೀಮೆ ಕೈವಶವಾಗಿ ಶೋಕಮೋಹಂ ಪೋಗಿ।
ಬ್ರಾಮಕತ್ವವನೀಗಿ ನಿಜದರುಹೆ ತಾನಾಗಿ ಬಾಳ್ವಪರಿಯಂ ಪ್ರಿಯುದೊಳು॥
ಸಾಮದಿಂ ದಯಗೈವುದೆನುತ ಬಿನ್ನಪಗೈಯ।
ಲಾಮಹಾಪುರುಷ ವಿಸ್ತರದಿ ದೃಗ್ದೃಶ್ಯಗಳ।
ದಾಮವಂ ಕಂಗೊಳಿಸುವಂತೆ ಕರತಕಲಿತಕನ್ನಡಿಯ ಗೈದಿತ್ತನು॥ (42)

ಇದಿರೊಳಗೆ ತೋರುವ ಘಟಂ ದೃಶಮದ ಕಾಣ್ಬ।
ಚದುರನೇತ್ರಂಗಳಂ ದೃಕ್ಕುದೃಶ್ಯಂ ನಯನ।
ಮದ ಕಾಣ್ಬ ಮನ ದೃಕ್ಕು ಮನದೃಶ್ಯನಿಪ್ಪಿಸುವ ಬುದ್ಧಿ ದೃಕ್ಕೆನಿಪುದಬಲೆ॥
ಪದುಳಾ ಬುದ್ಧಿ ದೃಶ್ಯಂ ನಿರೀಕ್ಷಿಪ ವಸ್ತು।
ವದು ಮೂಲದೃಕ್ಕೆಂದು ತಿಳಿದರಾನಂದ ಸಂ।
ಪದವೆ ನಿನ್ನಾಧೀನ ನಿನಗನ್ಯಮೇನಿಲ್ಲದಂತೆಸವುದಬ್ಜಾಂಬಕೆ। (43)

ಪೇಳ್ದರ್ಥವ ಚಿತ್ತದೊಳ್ ಗೋಪನಂ ಗೈದು।
ಸೂಳರಿದು ಚಿಂತಿಸಲು ಸುಖದುಃಖನಿಚಯಗಳ್।
ಪಾಳಾಗಿ ಪೋದಪವು ಮೋಹಾದಿಗಳು ನಿನ್ನ ಸೋಂಕಲಮ್ಮವು ಬಾಲಕೆ॥
ವೇಳಲಸದಳ ಮರ್ಮವರಿದು ಸಂಕೋಚದಿಂ।
ಕೇಳದಾಕ್ಷಣದಿ ಸಂಸ್ಕೃತಿ ಪೋಗದಿರದೆಂದು।
ತಾಳಮಾನಸದಿ ನಿತ್ಯಾನಂದಮಯಳೆನಿಸಿ ಸುಖದಲಿಹುದಂಬುಜಾಕ್ಷಿ॥ (44)

ವಿಧಿಭವಾದಿಗಳಂದ ಕಾಣದೆನ್ನಯಮೂರ್ತಿ।
ಸುದತಿ ನೀಂ ಗೈದ ಪುಣ್ಯಾಧಿಕ್ಯಫಲದಿಂದ।
ಮೊದಗಿತೆನುತರಿತು ಭಾವಿಸುತಮಿರಲಾನಂದ ಕೈಗೂಡಿ ಬರುವುದೆನುತ॥
ಸದಯನೊರೆಯಲ್ ತಾನು ಶಾಂತಮಾನಸದಿ ಹೃ।
ತ್ಸದನದೊಳು ರಾಘವನ ದಿವ್ಯಮೂರ್ತಿಯನಿಟ್ಟು।
ಚದುರದಾನಂದ ಚೈತನ್ಯ ಬ್ರಹ್ಮಾನಂದಮಾಂತಿರ್ದಳಚ್ಚರಿಯೊಳು॥ (45)

ಭಾಮಿನಿಯು ಸಂತಸವನಾಂತುದಂ ಕಂಡಾಗ।
ಸೌಮಿತ್ರಿ ಸುಗ್ರೀವನೊಡನೆಂದ ನಿನಗಿದೇಂ।
ತಾಮಸಂ ಮುಸುಗಿದುದು ಕಾಲವಶಮಂ ಮೀರಿ ಬಾಳ್ದರುಂಟೇ ಜಗದೊಳು॥
ಈ ಮಹಶ್ಶೋಕಮಂ ಬಿಟ್ಟಂಗದಾದಿಗಳ।
ಸಾಮದಿಂದೊಡಬಡಿಸಿ ಕಪಿಸಂಪ್ರದಾಯಕವ।
ನೇಮದಿಂದೆಸಗವೇಳ್ಕೆಂದು ಬಹುವಿಧದಿಂದ ಕುಸ್ತರಿಸಿದಂ ಮುದದೊಳು॥ (46)

ರಾಮಾನುಜಂ ಪೇಳ್ದರಾಗ ಸುಗ್ರೀವ ನಿಜ।
ತಾಮಸೀಮತಿಯ ನೆಗ್ಗೊತ್ತಿ ತರುಣಾಂಗದನ।
ಪ್ರೇಮದಿಂದಮರ್ದಪ್ಪಿ ಸಂತೈಸಿ ಸತಿಯರಂ ಕುಸ್ತರಿಸಿ ಮನೆಗೆ ಕಳುಪಿ॥
ಸಾಮಂತಜನರಿಗಪ್ಪಣೆಕೊಟ್ಟು ಬೇಕಾದ।
ಸಾಮಗ್ರಿಗಳನೆಲ್ಲ ಬೇಗದಿಂ ತರಿಸೆನುತ।
ನೇಮಿಸಿದರಾಕ್ಷಣದೊಳಖಿಳವಸ್ತುಗಳುಮಂ ಸನಿಹದೊಳ್ ತಂದಿಟ್ಟರು॥ (47)

ತರಣಿಸುತನಣ್ಣನಂ ಸಂತೋಷದಿಂದೆತ್ತಿ ।
ಪರಿಮಳಾಂಬುವಿನಿಂದ ಮಜ್ಜನಂ ಗೈಸಿ ಮೇಲಾ ।
ತರದ ಪೊದಕೆಗಳುಡಿಸಿ ಭೂಷಣಂಗಳ ತೊಡಿಸಿ ಸಿಬಿಕಾದಿರೋಹಮೆಸಗಿ ॥
ಪರಿಪರಿಯ ವಾದ್ಯರವ ಕೋಳಾಹಳಂ ಹರಿ ।
ದ್ಭರಿತವಾಗಲು ವಾನರೀಸೇನೆಯೊಡಗೂಡಿ ।
ಕರದ್ಯೊದರಖಿಲ ಬಂಧುಗಳು ಸಾಮಂತರಿಂದೊಡಗೂಡಿದುವ್ಮಾನದಿ ॥ (48)

ಸಿರಿಖಂಡಖಂಡದಿಂ ಸಿಂಗರಿಸಿದರು ಚಿತಿಯೊ ।
ಳರಿಸಿ ಪಿತೃಮೇಧ ಪ್ರಕಾರದಿಂ ಸಂಸ್ಕರಿಸಿ ।
ಕರದಿಂದುರಸ್ತಾಡನೋನ್ಮುಖದಿ ಕ್ರತುಲಿದಾರ್ಪಿತಗೈದು ಬಳಿಕ ಭರದಿ ॥
ತರಳನಂ ಕರವಿಡಿದು ತಟನಿಯೊತ್ತಿಗೆ ನಡೆದು ।
ಚರಣಗಳ ನೆನೆದಾ ಜಳಾಂಜಳಿಗಳಿತ್ತನಾ ಸುಗ್ರೀವ ಶ್ರದ್ಧೆವಿಡಿದು ॥ (49)

ತದನಂತರದಿ ಬಂದು ತಾರೆಯುಂ ಸಂತೈಸಿ ।
ಸದನಕ್ಕೆ ಬೀಳ್ಕೊಟ್ಟು ತನಯನಂ ಪಿಂದಿಟ್ಟು ।
ಹೃದಯದನುತಾಪದಿಂ ಸುಗ್ರೀವನೈತಂದ ಸುತ್ತಬರೆ ಪ್ಲವಗವೃಂದ ।
ಇದಿರಲೆರಗುವರರಿಯ ನೆಡೆಯುಲೈದುವ ಪರಿಯ ।
ಕದಬದಗಳೊಂದರಿಯದುದ್ದಂಡ ಚಿಂತೆಯಿಂ ।
ಮದವಿಳಿದ ಮತ್ತೇಭದಂತೆ ಮಸ್ತಕಬಾಗಿಬಂದು ಬನದೊತ್ತಿಗಾಗಿ ॥ (50

ಪವನಸುತತಾರಜಾಂಬವರೆಲ್ಲ ಸಂತೈಪ ।
ವಿವಿಧ ವಾಕ್ಯಗಳೊಂದನಾಲಿಸದೆ ನಡೆಗೊಂಡು ।
ತವಕದಿಂ ಸುಗ್ರೀವ ಶ್ರೀರಾಮುಪುರದರಸನಸೌಮಿತ್ರಿಯಿಪ್ಪೆಡೆಯನು ॥
ಪವಣಿಂದಮರಸಿ ತನುತಾಪಮಂ ಪರಿಹರಿಸಿ ।
ಭವಬಂಧಮಂ ಪರಿದು ಬಾಧಿಸುವ ಚಂಚಲವ ।
ನವರಿ ಕೃತಕೃತ್ಯನಹ ಹುಕದಾಸೆಯಿಂ ಬೇಗಲೈತಂದ ಹರುಷದಿಂದ ॥ (51)

(ಸಂಧಿ 8 ಕ್ಕಂ. ಪದ 349.)

ಒಂಭತ್ತನೆಯ ಸಂಧಿ.

ಸೂಚನೆ ॥ ಶರಣಾಗತತ್ರಾಣಬಿರಿದಾಂತ ರಾಘವಂ ।
ತರಣಿ ತನಯಂಗೆ ಪಟ್ಟಾಭಿಷೇಕಂಗೈದು ।
ತರುಣ ಲಕ್ಷ್ಮಣಗೆ ತತ್ತ್ವಾರ್ಥಬೋಧೆಗಳೊರವೃತಿಸಿದನಾ ಗಿರಿತಟದೊಳು ॥

ಪದ ॥ ಹೈಮಗಿರಿಯಣುಗಿ ಕೇಳ್ ಸುಗ್ರೀವ ಶೋಕದಿಂ ।
ತಾಮಸವನಾಂತಿರ್ಪ ಪರಿಯನಿಟ್ಟಿಸುತ ಸೌ ।
ತ್ರಾಮತನಯನ ಬಗೆಯನರಿದು ಪವನಾತ್ಮಭವ ಮನದೊಳಾಲೋಚಿಸುತಲಿ ॥
ತಾಮರಸನಯನನೆಡೆಗೈತಂದು ರಾಜಕುಲ ।
ಸೋಮವಿಜ್ಞಾಪನೆಯನವಧರಿಸಿ ಮಿತ್ರನಲ ।
ಪ್ರೇಮಗೊಳಸಲ್ವೇಳ್ಕುಮೆನೆ ಹರುಷದಿಂ ರಾಮನಸುನಗುತಲಿಂತೆಂದನು ॥ (1)

ಕಂದ ತಂದೆಯು ನೆನೆದು ಕಂದಿಕುಂದುತ್ತ ದುಃಖ।
ದಿಂದ ಮಂದೀಭವಿಸಿ ಸುಕುಮಾರತನುತಾಪ।
ಮೊಂದಿರುವದಿಷ್ಟ್ಯಸುತ ಸುಮ್ಮನಿರಲನುಚಿತಂ ಸೂರ್ಯಸುತ ಪ್ರೇಮದಿಂದ॥
ಬಂದಪ್ಪಿ ಮೈದಡಹಿ ಬಾಷ್ಪಂಗಳಂ ತೊಡೆದು।
ಛಂದದಿಂ ಕುಸ್ತರಿಸಿ ಹರುಷಗೊಳಸುತ್ತಮಿವರ।
ಮುಂದಿಟ್ಟು ರಾಜ್ಯಮಂ ಪರಿಪಾಲನಂಗೈದು ಸುಖವಪಡೆ ಕಪಿಕುಲೇಶ॥ (2)

ಅಂಗದಕುಮಾರ ಮಾತಂಗಸಮಬಲ ದೇವ।
ಪುಂಗವನ ತನಯಗಿಂದಧಿಕಸಾಹಸ ಬಾಲ।
ಮುಂಗಡೆಯು ಲೀಲೆಯಂ ನೋಳ್ಪ ಪುಣ್ಯಂ ತೊಲಗಿ ಪೋಗುವವಸರದಿ ವಾಲಿ॥
ಕಂಗಳೊಳು ಜಲಗರೆವುತೆನ್ನನಂದನನು ಭವ।
ದಂಗಭವನೆಂದರಿತು ಸಲಹಬೇಕೆನುತಂ ಪ್ಲ।
ವಂಗಪತಿಯಾಚನಂ ಗೈದರಾನೊಡಂಬಟ್ಟು ಪಾಲನಂ ಗೈವೆನೆನುತಾ॥ (3)

ಬಿಸಿಲಿನಿಂ ಮಾಲತೀಕುಸುಮ ಕಂದಿದ ತೆರದಿ।
ಪಸುಗೂಸು ಚಿಂತೆಯಿಂ ಬಾಡಿದಾನನದಿಂದ।
ಮೆಸವನಂ ಕಂಡೆಲ್ಲ ಮನಕಾದ ದುಃಸ್ಥಿತಿಯು ಪೇಳಲಳವೆಂತಪ್ಪುದು॥
ವಸುಮತೀಯರಸನಸುವಳಿದುದಂ ದಶಕಂಠ।
ರಸೆಯಸುತೆಯೊಯ್ದುದಂ ರಾಜ್ಯಹತ್ತಿಯಾಮದೀ।
ಪಸುಳೆಯಂ ನೋಳ್ಪ ಕ್ಲೇಶದೊಳೊಂದು ಭಾಗಮಂ ಪೋಲದಾಯ್ತೆನ್ನ ಮನಕೆ॥

ಎನಿತು ಸಂಕಟಗಳೆನಗಾದರಪರಾಧಗಳ।
ನೆನಿತನೆಸಗಿದರಾನು ಸೈರಿಸುವೆನೆನ್ನ ಸರಿ।
ಗಿನಿತು ದುಃಖಂ ತೋರಲಾರಿಂದಮುಪಕಾರ ಜನಿಸಲಾಂ ಸಮ್ಮತಿಸೆನು॥
ಧನಕನಕದಾಯಾದ್ಯಜೀವನಂ ಶರಣಜನ।
ರೆನಗೆನುತ ಕಾದಿರ್ದನೆಂದರಿತು ಬಂಧುಜನ।
ರನುಮತಿಸಲಾ ವಾಲಿತನಯನಂ ಸಂತೈಸುತೆಮ್ಮ ಹರ್ಷಂಗೊಳ್ಪುದು॥ (5)

ನುಡಿದೆರಡನಾಡೆನೆನ್ನವರೆಡರುಗಳ ನೋಡೆ।
ಪಿಡಿದಮತ್ತವನ್ನು ಬಿಡೆ ಪಿಂತೆಸವರ್ಗೆ ಕೂಡೆ।
ನಡೆನುಡಿಯುನೋಡೆ ಕೈವಿಡಿದ ಬಳಿಕಾರಾದರೆನ್ನ ಜೀವನಮೊಂದಿಹೆ॥
ಪೊಡವಿಯೊಳಗೆನ್ನ ಭಕ್ತರಿಗೆಸಗಿದುಪಕಾರ।
ಮೊಡನೆನಗೆ ಮತ್ತವರಿಗಾದ ಸಂತಾಪಗಳು।
ತುದುರುವವು ಪಿಡಿದೆನ್ನ ಶರಣಜೀವನಮೆನಗೆ ಜೀವನಂಕಪಿಲಲಾಮ॥ (6)

ಅಂಗದನ ಕರವಿಡಿವುತನುಮಾನವನ್ನುಳಿದು।
ಮಂಗಳಸ್ನಾನಮಂ ಗೈದು ಭೂಷಾಂಬರವ।
ಸಿಂಗರಿಸಿ ಮಣಿಮಕುಟಕುಂಡಲಾಂಗದಮುಖ್ಯಭೂಷಣಮಲಂಕರಿಸುತ॥
ಭೃಂಗಾರಮಯಪೀಠಮಧ್ಯದೊಳು ಕುಳ್ಳಿರ್ದ।
ರಂಗನೆಯರೆಡಬಲದಿ ಚಾಮರವ ಪಿಡಿದೆಸೆಯ।
ತಿಂಗಳುದದೊಳೆಸೆವ ಬೆಳ್ಗೊಡೆಯು ನೆಳಲೊಳಗೆ ಕಪಿರಾಜಪದದೊಳಿರಲು॥ (7)

ನೋಡಿ ಸಂತಸಗೊಂಬೆ ಮನವೇಣಿಕೆನಿಂದೆ ಕೈ।
ಗೂಡಿ ಪಿರಿದಾನಂದಗೊಳುವೆ ಬೇಳ್ದುದನು ಪ್ರಿಯು।
ಗೂಡಿವಾಳ್ವುದೆನುತ್ತ ಕರಣಾಳುಗಳ ದೇವ ಬೆಸಸೆ ಕಪಿವರರೆಲ್ಲರು॥
ಮೂಡುವಾನಂದದೊಳಗಾಡಿ ಹರ್ಷದಳಿ ನಲಿ।
ದಾಡಿ ಪರಿಪರಿಯಿಂದ ಪಾಡಿ ಪೊಗಳುತ್ತಲಿ ಕುಣಿ।
ದಾಡಿ ಬ್ರಹ್ಮಾನಂದದಿಂ ಭುಲ್ಲವಿಸಿದೇನದನೆಂಬೆ ನಚ್ಚರಿಯನು॥ (8)
ಚಿತ್ತದನುರಾಗದಿಂದೀ ಪರಿಯು ಪೇಳ್ದ ರ।
ಘೋತ್ತಮನ ಪದಕೆರಗಿ ವಿಜ್ಞಾಪನಂಗೈದ।
ಮತ್ತೆ ಬ್ರಹ್ಮಾಂಡಂಗಳಖಿಳ ಭೂತಾವಾಸ ಭಕ್ತರಿಂಗೀವೆ ಲೇಸ।
ಚಿತ್ತಜೋಪಮ ಭವಚ್ಚರಣದಾಧೀನವಿೂ।
ಪತ್ತನಂ ಸತಿಕೋಶರಾಷ್ಟ್ರದುರ್ಗಾದಿ ಸಂ।
ಪತ್ತುಮದ್ದೇಹಂಗಳೆಲ್ಲಮಿದನರಿವುದೈ ದಿವ್ಯಮಾನಸದೊಳನಘ॥ (9)
ಮಾನಧನ ಜೀವನದೊಳೆಲ್ಲರುಂ ಪಾದದಾ।
ಧೀನಮಾಗಿರ್ದ ಬಳಕನುವೋದದಿಂದೈದಿ।
ದಾನಂದದಿಂದ ಪಟ್ಟಾಭಿಷೇಕವನಾಳ್ದು ಸಿಂಹಾಸನದೊಳೊಪ್ಪಿರೆ॥
ಆನಂಗದಂತಾರೆರುಮೆಯರೊಡಗೂಡಿ ಸು।
ಮ್ಮಾನದಿಂ ಚರಣದೊಳಗದಿ ಕೃತಿಯವ್ಪೆವೈ।
ಭಾನುಕುಲತಿಲಕ ಸೇವಕನ ಬಿನ್ನಪವನವಧರಿಸಿ ಪಾಲಿಪುದೆಂದನು॥ (10)
ನೀನೆಗತಿಯೆಂದೆರಗಿ ಮರೆಯೊಕ್ಕ ಮನುಜರಿ।
ಸ್ನೇನೆನ ಬೇಡಿದುದನಿತ್ತು ಮನ್ನಿಪ ಬಂದ।
ನಾನಾವಿಧದಿ ಕ್ರುತಿಗಳೊರಲುತಿವೆ ದೇವ ತಿಳದಾನುಡಿಯು ಸತ್ಯಮೆನಿಸಿ॥
ಪಾನೆರನ ನುಡಿಯು ಪತಿಕರಿಸಿ ಬಿಜಯಂಗೈವು।
ದೀನಗರ ವೈಭವವ ನಿಟ್ಟಿಸುತಮೆನ್ನ ಸ।
ನ್ಮಾನಗೊಳಸುವದೆಂದು ಪದಗಳಂ ಪಿಡಿದಂದು ರವಿತನಯ ಬಿನ್ನವಿಸಿದಂ॥ (11)
ಭಾನುನಂದನನ ಬಿನ್ನಹವನಾಲಿಸಿ ರಾಮ।
ನಾನಂದದಿಂದವಿಂತೆಂದ ನೇಹಿತರೊಡೆಯ।
ನೀನೊರೆದುದುಚಿತ ಸಂದೆಗಮಿಲ್ಲ ನಿನ್ನೊಳನಿಸೆರವಿಲ್ಲ ಕೇಳು ಸೊಲ್ಲ॥
ಮಾನವೋತ್ತಮಪಿತನ ನುಡಿಯಿಂದಮೂರುಳದು।
ಕಾನನವ ಪೊಕ್ಕು ಪದಿನಾಲ್ಕು ಸಂವತ್ಸರಗ।
ಳೇನೊಂದು ವಸ್ತುವಂ ಬಯಸದೆ ಮುಮುಕ್ಷು ಜನವೃತ್ತಿಯೊಳಾಂತೈತಂದೆವು॥ (12)
ಪೊಡವೀಶನಿದಿರಿನಲಿ ಪ್ರತಿಜ್ಞೆಗೈದೈತಂದು।
ನಡುವೆ ಭೋಗಾಪೇಕ್ಷೆ ಗೈದರಾರೊಪ್ಪುವರು।
ನುಡಿಪುಸಿಯೆ ಪೊದ್ದಲರಿದೆಂಬುದಂ ನೀಂ ಬಲ್ಲೆ ತ್ರೈಲೋಕ್ಯರುಂ ಬಲ್ಲರು॥
ಕಡುಗಲಿಯೆ ಮೌರ್ಖ್ಯಮಂ ಬಿಟ್ಟು ಕಪಿರಾಜ್ಯಮಂ।
ನಡೆಗರದೊಳಾಳುತ್ತಲಿ ಮಡದಿಮನೆಮನವಾರ್ತೆ।
ಯೊಡನಿರಲ್ಕಾಂ ನೋಡಿ ಸಂತಸಂಗೊಳುವೆ ನುಡಿ ಸಫಲಮೆನೆ ರಾಜಿಸುವುದು॥ (13)

ತರಣಿಶಶಿತಾರೆಗಳು ಮೇರುಮಂದರಶರಧಿ।
ಮರಿಯಾದೆ ದಪ್ಪಿದರೆ ಭಾಷೆಗೂಣಿಯುಮುಂಟೆ।
ಕರುಣದಿಂದೆನಗಿತ್ತನುಡಿ ಸಫಲವಾಯಿತರಸ ರಾಜ್ಯಸಿರಿ ಕೈಸಾರಿತು॥
ತರಳನಂಗದಗೆ ಪಟ್ಟವ ರಚಿಸಿ ಸಂಭ್ರಮದಿ।
ಚರಣಸನ್ನಿಧಿಯುಲಾನಿರೆ ಪರಮಪದವೆನಗೆ॥
ದೊರೆದುದೆಂದರಿದಿರ್ದನಿದಕಪ್ಪಣೆಯನಿತ್ತು ಸಲಹೆನಲು ರಾಮ ನುಡಿದಂ॥ (14)

ಸಖನೆ ನೀಂ ಪೇಳದುದು ಸಹಜ ಸಂಹಯವಲ್ಲ।
ವಕಲಂಕನಾವೆಡೆಯೊಳಿರ್ದರೆನ್ನಲ್ಲಿರ್ದ।
ಪ್ರಕೃತಿಯಲ್ಲವೆ ಮನಸ್ಸಂಗಹು ಸುಸಂಗವುಂ ತನುಸಂಗನನಸಂಗವು॥
ನಿಖಿಲಕಾರ್ಯೋಪರಮ ನಾಲ್ಕುತಿಂಗಳು ಘನ।
ಪ್ರಕರದೆಡೆಯಹುದುವಿದರೊಳು ಸುಮ್ಮನಿರ್ದೇನು।
ರಕುತಿ ಪಟ್ಟಣಕೈದಿ ಸರ್ವಜನ ಸಂತೋಷಗೊಳುವಂತೆ ಸಾತ್ವಿಕದೊಳು॥ (15)

ರಾಜಾಧಿಕಾರವಂ ವಹಿಸಿ ತರುಣಗೆ ಯೌವ।
ರಾಜಪಟ್ಟವನಿತ್ತು ಪ್ರಕೃತಿರಂಜನೆ ಗೈದು।
ಮೂಜಗಂ ಮೆಚ್ಚುವೊಲು ಪರಿಪಾಲನಂ ಗೈದು ವರುಷಾವಸಾನ ಗೈದು॥
ವಾಜಿಯಿಂ ದಶಗಳನ ವಧಿಸುವಡೆ ನಿನ್ನ ಕಪಿ।
ರಾಜಿಯನೊಡಗೊಂಡು ಬರ್ಪುದೆವಗಿಂದಧಿಕ।
ಮಿೂ ಜನೇಶ್ವರ ಸುಮಿತ್ರಾತ್ಮಭವನೈತಪ್ಪ ಪಟ್ಟಾಭಿಷೇಕ ಗೈಯೆ॥ (16)

ಒಪ್ಪುಗೊಳವೇಳ್ಕೆಂಬ ವಾಣಿಯಿಂದೊಡಬಟ್ಟು।
ತಪ್ಪದೈತಂದೆರಗೆ ಸೌಮಿತ್ರಿಯೊಡಗೊಳ್ಳು।
ತಪ್ಪಣೆಯನಾಂತು ನಿಜನಗರಿಗೈದಿದ ಸೂರ್ಯಸುತನತಿಪ್ರೇಮದಿಂದ॥
ಅಪ್ಪಾರ ಕಪಿಸೇನೆಯಡಿಗಡಿಗೆ ಪೊಗಳುತಲಿ।
ಕುಪ್ಪಳಸುತೆಣ್ದೆಸೆಯ ಕೂಗಿನಿಂ ಹೊಳೆಚುತ್ತ।
ಬಪ್ಪನ್ನ ಸುಗ್ರಿವನೊಳಪೊಕ್ಕ ನಿಜಪುರದ್ವಾರವಂ ವೇಗದಿಂದ॥ (17)

ದ್ವಾರದೇಶದಲಿ ಕಪಿವೀರರಡಿಗೆರಗತಾ।
ದಾರತರದಿಂದ ಮುಪಚರಿಸುತರ ಮನೆಯೆಡೆಗೆ।
ಸೂರಸುತನೈತರಲ್ಕಖಿಲ ಪ್ರಕೃತಿಗಳೆಲ್ಲ ಸಂತೋಷದಿಂದೆರಗಲು॥
ಕಾರುಣ್ಯದಿಂದವರ ತಾರತಮ್ಯಗಳರಿತ।
ಪೋರವಚನಗಳಿಂದ ಸಂತೈಸಿ ನಿಜಗೃಹ।
ದ್ವಾರದಿಂದೊಳಪೊಕ್ಕು ಶುದ್ಧಾಂತಮನೊಳ್ನೀಟಿ ಶುಭಮುಹೂರ್ತದಲಿ ಬರಲು॥ (18)

ಪವನಸುತಗಜಗವಯಗಂಧಮಾಧನಮೈಂದ।
ದ್ವಿವಿಧಂಗವಾಕ್ಷನಳಜಾಂಬವಾದಿಗಳೆಲ್ಲ।
ರವಿರಳದ ಹರ್ಷದಿಂದಭಿಷೇಕವಂ ಗೈಯಲತಿವೇಗದಾಲೋಚಿಸಿ॥
ವಿವಿದೌಷದಂಗಳಂ ಮತ್ತೆ ವ್ಯತ್ಯಂಕೂರ।
ನವರತ್ನ ಸ್ವೇತಾತಪತ್ರ ಸ್ವೇತವ್ಯಜನ।
ನವಗಂಧಮಾಲ್ಯಪದಿದು ಜವ್ವನೆಯರುಂ ಪಾಡುತಂ ಸ್ವರ್ಣಮಯದ॥ (19)

ಕನಕ ಮಂತ್ರಾಕ್ಷತೆಯು ಮುಂತಾದ ಸಾಮಗ್ರಿ।
ಯನು ತಂದು ಚತುರಾಬ್ಧಿಯುದಕಕಂಗಾದಿ ಜಲ।
ವನಜದರ್ಭಾದಿಗಳ ವ್ಯೆಯಾಘ್ರಚರ್ಮ ಪುಂಗವಶೃಂಗ ಮೇಲಾದವಂ॥
ಅನುಗೈದು ಕನಕಪೀಠದಿ ಲೋಕಬಾಂಧವನ।
ತನಯನಂ ಕುಳ್ಳಿರಿಸಿ ಶಾಸ್ತ್ರಾನುಮತ ವಿಡಿದು।
ಘನವಾಹನನಂಗೆ ವಸುಗಳು ಮಂತ್ರದಭಿಷೇಕಗೈವವೊಲೆಸಗಿದರು ಮುದದಿ॥ (20)

ವಿರಚಿಸಲು ಪಟ್ಟಾಭಿಷೇಕವಂ ಸುಗ್ರೀವ।
ಹರುಷದಿಂದಂಗದಗೆ ಯುವರಾಜಪಟ್ಟವಂ।
ಕರದಿತ್ತರಾಕ್ಷಣಂ ನೆರದಖಿಲ ಜನರೆಲ್ಲ ಪೊಗಳ್ದರ್ಸುಗ್ರೀವನ॥
ತರುಣಿಯರು ಬೀಸುತಿಹ ಚಾಮರದ್ವಯದಿಂದ।
ನೆರಪಿರುವ ಬೆಳ್ಗೊಡೆಯು ನೆರೆದ ಕಪಿ ಸಂತತಿಯು।
ಸುರುಚಿರದ ಸ್ತುತಿಗಳಂ ಸುಗ್ರೀವನುರಪನಂತೆಸದ ಪಟ್ಟವಣಿಯೊಳಗೆ॥ (21)

ಆದುದುತ್ಸವವಮಿತವಮರೇಂದ್ರನಂದದಿಂ।
ಮೇದಿನೀಪತಿಯೆನಿಸಿ ಸುಗ್ರೀವ ಭಕ್ತಿಯಿಂ।
ಪಾದಂಗಳಂ ಪಿಡಿದು ಲಕ್ಷ್ಮಣನ ಪೂಜಿಸಿದ ಪರದೇವತೆಯೆನುತ್ತಲಿ॥
ಮೋದಗೊಂಡಾತನುಪಚರಣೆಯಿಂ ಸೌಮಿತ್ರಿ।
ಯಾ ದಯಾಂಬುಧಿರಾಮನೆಡೆಗೈದೆ ಮನವೆರಸಿ।
ಸಾದರದಿ ಬೀಳ್ಕೊಂಡು ಸತ್ವರದೊಳೈತಂದು ಕಂಡನಗ್ರಜಪದವನು॥ (22)

ಚರಣಂಗಳಗೆ ನಮಿಸಿ ನಗರಿಗೈದಿದಪರಿಯ।
ಹರುಷದಿಂ ಬಿತ್ತರಿಸಿ ಕೇಳ ಸಂಭ್ರಮದಿಂದ।
ಪರಮಪೂರುಷನೆಂದ ಸೌಮಿತ್ರಿ ಕೇಳಿಮಗೆ ಸಾಮ್ರಾಜ್ಯಸಂಪತ್ತಿಯೂ॥
ದೊರತುದಕೆ ಪತ್ತುಮಡಿಯಾನಂದವಾಯ್ತು ಸುಖ।
ನಿರುಗೆ ಸುಖಕರವಾದುದೆಮಗೆ ಶ್ರೇಯಸ್ಕರಂ।
ಬಳಿದುದಿನ್ನೇನೆಂಬೆಯಿತ್ತ ಭಾಷೆಯು ಪೂರ್ತಿವಾನಸೋಲ್ಲಾಸಕರವಂ॥ (23)

ಭಗವತ್ಕಟಾಕ್ಷದಿಂದಾದುದೆಮಗಭ್ಯುದಯ।
ಜಗತಿಯೊಳಗೆಂದೊರೆದು ಮುಂಬರಿದು ಪುಟ್ಟಿಬಹ।
ಮುಗಿಲಬಳಗವಕಂಡು ಪ್ರಸ್ರವಣ ಪರ್ವತದೊಳೊಂದು ತಾಣದಿರವ್ಯಾದಿ॥
ಸೊಗಸಿರುವ ಗುಹೆಯೊಳಗೆ ಸುಖದಿಂದ ಮಂಡಿಸಿರೆ।
ಮಿಗಶೀತಳೋಪಚಾರಗಳಿಂದ ಸತ್ಕರಿಸಿ।
ಮುಗಿದು ಕರಗಳ ನಮಿಸಿ ಲಕ್ಷ್ಮಣಂ ಭಕ್ತಿಯಿಂ ನುತಿಸಿ ಬಿನ್ನಪಗೈದನು॥ (24)

ಪುಸಿಯು ಪೊದ್ದದ ನಿಜಂ ಪಟವನುಳದಿಹ ಚಿತ್ರ।
ವಿಸದಕಲುಶವನುಳದ ಬಾನೆಡೆಯು ಸಂಭ್ರಮದೊ।
ಳೆಸೆವ ನಿಜಮಂ ಬೆರದು ಸರ್ವದೊಳಹೊರಗೆಲ್ಲ ಪರಿಪೂರ್ಣನೆನಿಸಿ ಮೆರೆದು॥
ಉಸುರಬಾರದ ಮಂತ್ರ ಊಹೆಗಬ್ಬಿದ ತಂತ್ರ।
ಮಿಸುಕಲಾರದ ಜನಂ ಬೆಸಸ ಬಾರದ ಹಸಂ।
ಪೊಸತೆನಿಪ ಪರತರಾನಂದ ಪಾವನ ನಮೋಯೆಂದ ದಶರಥನ ಕಂದ॥ (25)

ಜಯ ನಮೋ ಪರಮಪುರುಷ ಸಚ್ಚಿದಾನಂದ ।
ಜಯ ನಮೋ ಪ್ರಕೃತಿರೂಪನೆ ಕಾರ್ಯಗಳ ವೃಂದ ।
ಜಯ ನಮೋ ಗುರುಶಿಷ್ಯ ಪಿತೃ ಮಾತೃ ದಿಗ್ದ್ರವ್ಯರೂಪ ನಿರ್ಲೇಪ ನಿರಘಾ ॥
ಜಯ ಕನಸುಸುಪ್ತಿಜಾಗರಗಳಾಕೃತಿಯನಂತ ।
ಜಯ ಜಗನ್ಮಯ ಜನಾರ್ದನ ಜೀವನಾನಂತ ।
ಜಯತು ನಿಪರ್ಯಾಯ ಪರಾಯಾಮರ ಮಹೇಶಾನ ರಘುಕುಲೇಶಾನ ಜಯತು ॥ (26)

ಪುಸಿಯಾದ ಲೋಕವಿದು ಹಸನಾಗಿ ದಿಟದಂತೆ ।
ರಸೆಜಲಾನಲನನಿಲನಿಭದಾಕೃತಿಗಳಾಂತು ।
ಪೊಸತೆನಿಸಿತೋಱಿ ಭ್ರಮಗೊಳಿಸಿ ಜೀವರನೆಲ್ಲ ಸುಖದುಃಖಕೊಳಗುಮಾಡಿ ।
ಬಸವಳಿಪುದೇನಯ್ಯ ಪೋಗಿ ಬರುತಿಹ ಮಾಯ ।
ಗಸಣೆಯಂ ಪರಿಯಲೆನಗೇನುಪಾಯಂ ಪೇಳ ।
ಸಸಿನಿರ್ವರ್ಗರೆಸಗಪೇಳ್ಕೆಂದು ವಂದನಗೈವ ಲಕ್ಷ್ಮಣನೊಳಿಂತೆಂದನು ॥ (27)

ಜನಿಸಿದವರೆ ಮತ್ತೆಂದಿಗಾವರಂ ಮರಣಿಸಂ ।
ಜನಿಸಲಂದವರ್ಕೊಂದುಪಾಯಮಂ ಘಳಸ ಪೇ ।
ಳ್ಕನಿತು ಸವನಿಸದಿರಲು ಪೋದಬಳಿಕಾದರುಂ ಮರಳಿಬಾರದತೆರದೊಳು ॥
ಘನತರೋಪಾಯಗಳ ಸಲಿಸಲೆಳಸುವ ಮನುಜ ।
ರನುಜ ಕೇಳ್ವೊಡಪೂರ್ವಮಾವುದೀ ಮತಿ ನಿನಗೆ ।
ಜನಿಸಿದಾಕ್ಷಣವೆ ಕೃತಿಯಾದುದೆ ಮಹತ್ಪದವಿಯು ಸಾವಧಾನದೊಳಾಲಿಸು ॥ (28)

ತಿಳಿದು ತಿಳಿವನ್ನೊರೆವ ಪಳೆಮಂತ್ರಗಳಗೆಲ್ಲ ।
ಬಳಸಲಿಲ್ಲವು ಪುರಾಣೇತಿಹಾಸಂಗಳಂ ।
ತೊಳಲಲಿಲ್ಲವು ಸಾಂಖ್ಯಯೋಗ ಸಿದ್ಧಾಂತಗಳ ಪಂಕ್ತಿಗಳನರಸಿಬೆರಸಿ ॥
ಅಳಿಮನದೊಳಡಿಗಡಿಗೆ ಕುಗ್ಗಿ ತಗ್ಗದೆ ನಿಜವ ।
ಕಳೆಯೊಳಗೆ ಕಳೆಯೆನಿಸಿ ಕಳೆದಖಿಳ ಕರ್ಮಗಳ ।
ಸುಲಭದಿಂ ಸುಖದ ಸುಗ್ಗಿಯ ಕಾಣ್ಬ ಮಾರ್ಗಮಂ ಸೂಚಿಸುವೆ ತತ್ಪ್ರವಣನಾಗ ॥ (29)

ಇವನಾವನೆಂಬ ಗೋಪ್ಯದೊಳಗಿತು ಭಾವಿಸುವ ।
ಮುದದೊಳಭ್ಯಾಸಿಸುವನವನಿಗಾನಂದ ಸಂ ।
ಪದವು ಹಸ್ತಾಮಳಕವಾಗಿ ಸಾಯುಜ್ಯಮಂ ಪಡೆವನಿದು ಸಿದ್ಧಮೆಂದು ॥
ಹೃದಯದೊಳ್ತೊಳೆಯುತ್ತ ಶ್ರೀರಾಮಪುರವರನ ।
ನಧಿಕ ಕೃಪೆಯಿಂದ ಲಕ್ಷ್ಮಣಗೆ ಬೋಧಿಸಿದುದಂ ।
ಮೃದುಪದನ್ಯಾಸದಿಂ ಮುಂದೆ ಪೇಳ್ವೆನತಿವಿಲಾಸದಿಂ ಭಾಸದಿಂದೆ ॥ (30)

ಸಂಧಿ 9 ಕ್ಕಂ ಪದ 379 ॥

ಹತ್ತನೆಯ ಸಂಧಿ-

ಸೂಚನೆ ॥ ನಿರತಿಶಯದಾನಂದಕರ ತತ್ವಗೋಪ್ಯವಂ ।
ಕಾರುಣದಿಂದುಪದೇಶ ಗೈದಾತ್ಮಸಾಮ್ರಾಜ್ಯ ।
ನಿರಿಗೆಗೈದಂ ರಾಮಚಂದ್ರ ಸೌಮಿತ್ರಿಯಂ ಸಕಲೋಪಕಾರಮೆನಲು ॥

ಪದ ॥ ತನಯ ಕೇಳ್ ಗುರುಪುತ್ರನೆನಿಪರಹಿತಾಹಿತಗ ।
ಳೆನುವ ಚಿಂತನೆಗೈದು ಮನವ ಸಂತೈಸುತಂ ।
ನಿನಗೆ ತೋರುವವಹಿತ ತೋರದಿಹ ನೀನೆ ಹಿತನೆಂಬುದಂ ಪದುಳಗೈದು ॥
ಜನನಮರಣಾದಿ ಕೋಟಲೆಗಳಂ ಪರಿಹರಿಸಿ ।
ಚಿನುಮಯಾನಂದ ನೀನಾಗಿ ಸುಖದಿಂದಿರ್ಪು ।
ದೆನುತ ಬೋಧಿಸಿ ಮಗುಳ್ ಚಿತ್ತವೃತ್ತಿನಿರೋಧಮಂ ಪೇಳ್ದನಾಗಳಗಜೆ । (1)

ಕರ್ಮಮಾರ್ಗಂಗಳಂ ಕಳೆದಿಟ್ಟು ನೀಂ ಪರ ।
ಬ್ರಹ್ಮನಂ ಜಾನಿಸಲು ಬ್ರಹ್ಮನಂತಹೆಯೆನುತ ।
ನಿರ್ಮಲದ ಶ್ರುತಿಜಾಲ ಬ್ರಹ್ಮವಿದ್ಬ್ರಹ್ಮೈವಭವತಿಯೆಂದೊರೆಯುತಿಹುದೈ ॥
ಮರ್ಮವರಿದಾತ್ಮನೆಂದರಿದಮಾತುರದಿಂದ ।
ದುರ್ಮನಸ್ಸಿನ ಮೋಹಶೋಕಂಗಳಳ್ತೆನುತ ।
ಪೆರ್ಮೆಯಿಂ ವೇದಸಾರುವುದಾತ್ಮವಿತ್ ಶೋಕಮಂತರಿಪನೆನುತಮಣುಗ ॥ (2)

ಬಡಮನವ ನೀಂ ಮಾಡದೇಕಾಂತದೊಳು ಕುಳಿತು ।
ಬಿಡದೆ ಸಿದ್ಧಾಸನವ ಬಲಿದು ಷಣ್ಮುಖಿಯನುಂ ।
ವಿಡಿದು ಮನಮರುತರಂ ದೃಷ್ಟಿಯೊಳಗೊಂದೆನಿಸಿ ಜಾತವೇದಸನೆಡೆಯೊಳು ॥
ತೊಡರಿರುವ ಮನಮರುನ್ನೇತ್ರಂಗಳಂ ಚದರ ।
ಗೊಡದೆ ಹುರಿಗೂಡಿಸುತ ನಡುಕಗೊಳ್ಳದೆ ಚಲಿಸು ।
ತೆಡಬಲಕೆ ಪೋಗಗೊಡದೆ ಶ್ರದ್ಧಾಸಮೃದ್ಧಿಯಿಂದಲ್ಲಿ ನಿಟ್ಟಿಸುವುದಣುಗ ॥ (3)

ನೋಡುತಿರೆ ಖದ್ಯೋತಮದರಿಂದೆ ಕಿರಿವೆಳಗು ।
ಕೂಡೆ ಜಲಬಿಂಬೋಪಮಿತ ಭಾನುಬಿಂಬಮಾ ।
ನಾಡೊಳಗೆ ಶಶಿರೇಖೆಗಳು ತೋರ್ಪವೈಸೆ ಶೃಂಗಾಟಕದ ಮಧ್ಯದೊಳಗೆ ।
ಪೋಡಿಯಿಲ್ಲದ ದೀಪಕಳಿಕೆ ಕಂಗೆಸೆವುದದು ।
ಕೂಡಿದಂದದಿ ನಿಲಲು ಮೈಮರದು ಕರಣದೆಡೆ ।
ಯಾಡದಾತ್ಮಾನಂದ ಮೈದೋರಿ ಬರ್ಪುದಾತ್ಮೈಕ್ಯಮತಿ ಸಂಜನಿಪುದು ॥ (4)

ಶ್ರುತಿಯ ರಂಧ್ರಗಳೆರಡು ನಾಸಾವಿವರಮೆರಡು ।
ಜತೆಯಾದ ನೆಲ ಚತುಶ್ಶೃಂಗಪೀಠಮೆನುತ್ತ ।
ಮತಿಶಯದ ಶೃಂಗಾಟಕದ ಪೆಸರನಿಟ್ಟಾತ್ಮವಿದರು ಕರೆವರು ಬಾಲಕ ॥
ಮತಿಯೊಳಿರೆ ಸಸಿಯಮುನೆಯುನಲಿದಾನಾಡಿ ಸಂ ।
ತತ ಗಂಗೆ ರವಿಯು ಪಿಂಗಳೆಯು ತನ್ಮಧ್ಯ ಭಾ ।
ರತಿಯಗ್ನಿಯೆಸಲಾ ಸುಷುಮ್ನೆಯಾ ತಾಣಕಂ ಪೆಸರೈ ತ್ರಿಕೂಟಮೆನುತ ॥ (5)

ಶೃಂಗಾಟಕಾಗ್ರದೊಳು ಸಿಥಿಲವಾಗದೆನಿಂದು ।
ಬಂಗಾರದಂತೆಸೆವ ದೀಪಕುಡಿವಂದ್ಯೈದೆ ।
ಮುಂಗಡೆಯು ಫಾಲೋರ್ಧ್ವಗೋಲಾರ್ಟ ಪೀಠದೊಳಗಧಿಕಧಿಕಕಾರಾಕೃತಿಯೊಳು ॥
ಕಂಗೊಳಪುದಲ್ಲಿಂದ ಮುಂದೆಸೆವುದತಿಶಯದ ।
ಮುಂಗಾರಮೇಘನಿಭಕಳ್ತಲೆ ತ್ರಿಕೂಟಪಥ ।
ಕಂಗೆಸೆಯುವಂತೆ ಮುಚ್ಚಿದ ಕುಂಡಲಿಯು ಬೆಡೆಯು ಕಾಂತಿಯಿಂದರಿವುದಣುಗ ॥ (6)
ಜಾನಿಪರಿಗೆಲ್ಲ ದುಮ್ಮಾನವನುಮಾನಗಳ ।
ಪೂನಿಸುವ ಕಾರಣಮವೆಂದರಿದು ಯೆಡೆವಿಡದ ।
ಮಾನಮತಿಯಿಂ ಪಿಡಿದು ನೋಡುತಿರಲೊಂದೊಂದು ಶಬ್ದಂಗಳುದಿಸಿಬಹವು ॥
ಯೇನೆಂಬೆ ಮೊದಲು ಚಿಣಿಚಿಣಿಯೆನುತ್ತೆರಡು ।
ಸಾನಂದ ಘಂಟೆಯುಲಿ ಮೂರನೆಯುದಬ್ಧಿರವ ।
ವಾ ನಾಲ್ಕನೆಯುದ್ಯೈದನೆಯದು ತಾಳಂತಂತ್ರಿಯಾರನೆಯು ಸವನವುದಣುಗ ॥ (7)
ಭೇರೀರವಂ ಸಪ್ತಮುದರಿಂ ಮೃದಂಗರವ ।
ತೋರುವದದೆಂಟನೆಯದೊಂಭತ್ತನೆಯದೆ ಪಿಕ ।
ದಾರವಂ ಕೇಳ್ಪಡುವದನಿತ್ತರೊಳ್ ಗರ್ಜಿತಂ ಘನದಿ ಸಂಜನಿಪುದಣುಗ ॥
ಆ ರಾವದತಿಶಯುವ ನೋಡುತಿರಲಾವನಿಯು ।
ತೋರಲೆನಿಸಿತು ಮೊಳಗಿನೊಳು ಮಿಂಚು ಸಂಚರಿಸಿ ।
ತೋರಿಯುಡಗುವಂದದಿಂ ವಿಚಿಗಿಚ್ಚಿಯಾಸ್ಪದದಿ ಕಂಗೊಳಸುತಿಹುದು ತನಯ ॥ (8)
ಮಿಂಚಿನವಲಂ ಬಿಸಿರಲಡಿಗಡಿಗೆ ಕಾಂತಿ ಪ್ರ ।
ಪಂಚ ವಶಮಹುವದರ ಬೆಳಗಿನೊಳು ಪೊಕ್ಕುಬರೆ ।
ಸಂಚಲಿಸಿ ವಿಧುಶಿಲಾಕಾಂತಿಯುದರಿಂವತ್ತ ಶುಭ್ರಾಂಶುಕಳೆ ತೋರ್ಪುದು ॥
ಹಂಚಿನೊಳು ನೀವಾರ ಸೂಕದಂತನುಪಥವು ।
ವಂಚಿಪುದು ಮಾರ್ಗವಿಡಿದ್ಯೈ ಕೋಟಿಸಾಹಸ್ರ ।
ಮಿಂಚಿ ರವಿಶಶಿಕಾಂತಿ [ತೋರುತ್ತಲಾಮಹಾ] ನುಭವಮಪ್ಪುದೆಲೆ ಬಾಲಕ ॥ (9)
ಮೂರುಕೂಟವನು ಕಂಡಾಕ್ಷಣದಿ ಕಳ್ತಲೆಯು ।
ಜಾರುವುದು ಕರಣಗಳು ಕರಗಿ ಯೊಷಣಗಳುಂ ।
ಪಾರುವವು ಮಗುಳೊಂದು ತೋರ್ಕೆ ತೋರದೆ ತದೇಕಾಯುತ್ತಮಾಗಿರ್ಪುದು ॥
ಭಾರಣೆಯು ಬೆಳಗಿನೊಳು ಸಾಸಿರದಳಾಬ್ಜಮೈ ।
ದೋರುವದು ಗುರುಪದವ ಕಂಡನ್ಯಮೇನೊಂದ ।
ಹಾರ್ಯೈಸದತಿ ಸುಖದಲಿರ್ಪನಿದೆ ಪರಮೆನುತ ತಿಳದಿರ್ಪನೈ ಯೋಗಿಯು ॥ (10)
ಕರಚರಣಗಳ ನೋತ ಕಟಕಕ್ರಿಮಿಗಳ ಘಾತ ।
ಕರಣಗಳುಪದ್ರವಗಳಾಟ ಕೋಟಲೆಯೊಂದ ।
ನರಿಯದಾನಂದಲಹರಿಯಲಿ ಮುಳುಗಾಡುತ್ತ ತಾನೆತಾನಾದ ತೆರದಿ ॥
ಮರೆದು ಸುಖದಿಂದಿರ್ಪನಲ್ಲಿಂದ ಮುಂದರುಗೆ ।
ಸುರಪ ಮುಖ್ಯರ್ಬಂದು ಸುರಿದು ಪೂವಿನ ಮಳೆಯು ।
ಪರಿಪರಿಯು ನುತಿಗೈದು ಪ್ರಾರ್ಥಿಸಿದರಾಗೈದೆ ಮತಿಯೊಳಳವಟ್ಟತೆರದಿ ॥ (11)

ಮನ್ನಿಸದೆ ಮುಂದರುಗಲವರು ಕೋಪಿಸಿ ಕರೆವ।
ರನ್ನೆಗಂ ಬರೆ ಸಿಡಿಲು ಪುಲಿಕರಡಿಸಿಂಹಂಗ।
ಳುನ್ನತ ಭಯಂಕರಂ ಕಂಗೊಳಸಲದನೋಡುವವರು ಕೆಲಸಾರುತಿರಲು ॥
ತನ್ನ ಬೆಳಗಿಲಿ ತಾನೆ ನಲಿವುತ ಶಿಖಾಚಕ್ರ।
ವನ್ನುಕಳೆವನ್ನ ಕಿಂಚಿತ್ತರಿವು ಮುಂದರುಗ।
ಲನ್ಯಮೇಗಿಲ್ಲದಾನಂದಸ್ವರೂಪಿಂದಮಿರುವನಾ ಯೋಗೀಂದ್ರನು ॥ (12)

ನದಿಗಳೆಲ್ಲವು ನೀರಧಿಯನು ಪೊಕ್ಕಂತೆ ಬಿಸಿ।
ಲುದರದೊಳ್ ಬಿಸಿಲಡಗಿದಂತಗ್ಗಿಯಂ ಚಂದ್ರ।
ಮುದದಿ ಚುಂಬಿಸಿದಂತೆ ನಭದಿ ನಭನಾದದೊಳ್ನಾದ ಕಲಿತಂತೆ ಬರಿಯ ॥
ಸದನಗತದೀಪದಂತಾನಂದ ವೈಭವದ।
ಸದಮಲಜ್ಯೋತಿಯಿರಲಿದನೆ ವೇದಂಗಳನು।
ವದಿಸುವದು ವಿಜ್ಞಾನಮೇಕಮೇವಾದ್ವಿತಿಯ ಸತ್ಯಸತ್ಸೌವ್ಯಮೆನುತ ॥ (13)

ಅಂಬುಧಿಯ ಮಧ್ಯದೊಳು ಮುಳುಗಿರ್ಪ ಪರಿಪೂರ್ಣ।
ಕುಂಭದಂತೊಳಹೊರಗಖಂಡಮಯಸ್ಫಟಿಕಘಟ।
ಗುಂಭಿತದ ದೀಪದಂತೆಲ್ಲಮಂ ಬೆಳಗುತ್ತವನಾತ್ಮಾನುಭವಶೌಖ್ಯದಿ ॥
ತುಂಬಿ ಪೊರಸೂಸುತಿಹ ಸುಖದಸಾಮ್ರಾಜ್ಯದೊಳ್।
ಗಂಬರದೊಳೆಸೆವ ಪ್ರತ್ಯೂಹಗಳ ಗಣಿಸನಾ।
ಲಂಬವಿರಹಿತನಾದ ನಿಜವೆ ತಾನಾಗಿರ್ಪಕತದಿಂದಮಾಲಿಸಣುಗ ॥ (14)

ನಿರಂತರವಮಾದಾ ಸಮಾಧಿಗತ ಪುರುಷಂಗೆ।
ಪ್ರಾರಬ್ಧವಶದಿಂದಮುದಿತಮೆಚ್ಚರುತದಾ।
ಕಾರವಾದಖಿಲೇಂದ್ರಿಯಗಳಿಂದ ಚೇಷ್ಟೆಯನ್ನನುಕರಿಸಿ ಕಿತವನಂತೆ ॥
ತೋರಪೈಶಾಚಬಾಲಕನಂತೆ ಜವದಿಂದ।
ತೋರುವಂ ದಗ್ಧಪಟದಂತವರಿಗವರಂತೆ।
ಬೇರೆಸದೊಂದರೊಳು ಬೆರಸಿರ್ಪನೆಗಿಸರೊಳು ಪರಿಕಿಸುವಪಾರಿಗಳವು ॥ (15)

ತನಯ ಕೇಳ್ ತತ್ವಸಾಕ್ಷಾತ್ಕಾರಮಾದವಗೆ।
ಜನನವೆಂಬುದು ಪೊದಗದದರಿಂದಮಾತನಂ।
ಮನುಜನೆನಲಳವಲ್ಲಮದರಿಂದ ಕರ್ಮಗಳ ವಿಧಿಸಲೆಂತಹುದಾತ್ರಗೆ ॥
ಇನನುದಯಮಸ್ತಮಯವನುಸರಿಪ ವೈಕರ್ಮ।
ದಿನಪಕ್ಷಮಾಸರ್ತುಗಳ್ ಸುಧಾಲಯದೊಳಹ।
ವನಜಸಖ ಸರ್ವದಾ ಬೆಳಗುತಿರಲೀ ಕೃತ್ಯಗಳ ಬೆಸಗನಿಡುವದೆಂತು ॥ (16)

ಮಗನೆ ಕೇಳಖಿಲ ಪಾತಕಪುಣ್ಯಗಳ ಮನಂ।
ನೆಗಳುವದು ಪುರುಷತದ್ವಶನಾದರಮಿತ ದುಃ।
ಖಗಳನಿತ್ತಪುದು ತಾಂ ಪರವಶತೆಯಾಗಿರ್ಪುದಾರಿಗಿನ್ನೇಂ ಗೈವುದು ॥
ಜಗತಿಯೊಳಗಣ ಮಹತ್ತೆಲ್ಲ ತಾನಾಗಿರ್ಪ।
ಬಗೆಯಿಂದಮನ್ಯಮಿಲ್ಲಾವುದದರಿಂ ಯೋಗಿ।
ಯೊಗುಮಿಗೆಯ ಪುಣ್ಯಪಾಪಗಳ ಹಂಗಿನಿತಿಲ್ಲ ನಿರುಪಮಿತ ನಿರ್ಲೇಪಗೆ ॥ (17)

ಕರಣೇಂದ್ರಿಯಗಳಿಂದ ಪರಿಪರಿಯ ಭೋಗಗಳ।
ನಿರತಮನುಭವಿಸಿ ಯೋಗೀಶಗನುಲಿಪ್ತತೆಯು।
ದೊರಕೊಳುಗು ವರ್ತಿಯಿಂ ತೈಲಮಂ ಭುಂಜಿಸುವ ಜ್ಯೋತಿಗತಿಲೇಪಮುಂಟೆ॥
ಪರುವತದ ಮಾರ್ಗನಿಗೆ ಪಕ್ಷಪಾತದೊಳರ್ಗ।
ದರುಹಿಗುಂ ಪಂಕಗತಕೇಜಸಾರಸನಾಳ।
ಕುರುಲೇಪವುಹುದುಂಟೆ ಪರತರಾನಂದದವು ಸುಯೋಗಿಗುಂ ಲೇಪಮುಂಟೆ॥ (18)
ಕನಕಾಚಲೋಪಮಿತ ಸ್ವರ್ಣದಾನಂ ಗೈದು।
ವನಜಾಕ್ಷ ಶಂಕರಾಲಯಕೂಪಕಾಸಾರ।
ವನತಟಾಕಾದಿಗಳ ರಚಿಸಿ ಷೋಡಶಮಹಾದಾನಗಳನ್ನು ಮಾಡಿ॥
ಮನದಿ ಬೇಡಿದುದಿತ್ತು ಮುಖಸಕಲಯಾತ್ರೆಂಗ।
ಳನುಮಾಡಿ ಕೃಚ್ಛ್ರಾಜಿತವಗಳಿಸಗಿದ ಫಲವು।
ಜನಿಸುವುದು ಕ್ಷಣದೊಳಾತ್ಮಜ್ಞಾನನಿಷ್ಠರಿಗೆ ಸ್ವಸ್ವರೂಪಜ್ಞಂಗೆ॥ (19)
ನಡೆ ದೇವಯಾತ್ರೆ ನಿಂದೆಡೆ ವಾರಣಾಸಿಯುಂ।
ನುಡಿದುದೇ ಮಂತ್ರ ಮನವಿಡಿದುದೇ ಸನ್ಮಂತ್ರ।
ತುಡುಕಿದುದೆ ಸದ್ವೃತ್ತಿ ನಿಟ್ಟಿಸಿದುದೇ ಸುಕೃತ ಸರ್ವಮುಯುವಿತ್ಸಾಕ್ಷಿಗೆ॥
ಕೊಡದ ನೀರೊಳಗೆ ಕೊಚ್ಚೆಯು ಜಲದೊಳರ್ಗದೆರ।
ವಿಡಿದಿರ್ಗದವಿಯಂತೆ ಯೋಗಿ ಪೊಲೆನಿಲಯದೊಳು।
ವ್ಯೃಡನಮಂದಿರದೊಳೊಂದೇ ಪರಿಯುಲಿಸದಿರುವ ಕೇಳುಮೋಲೆಣಿಸನಣಾಗ॥ (20)
ಕುಲ ಪವಿತ್ರವು ಜನನಿ ಕೃತಿ ಯೋಗಿ ಸಂಚರಿಪ।
ನೆಲ ಪಾವನಂ ಸದಾನೆಲಸಿರ್ಪತಾಣಮದೆ।
ಲಲಿತ ವೈಕುಂಠಾದಿ ಲೋಕ ನುಡಿ ವೇದಂಗಳಖಿಳ ಕರ್ಮಗಳು ನಡೆಯು॥
ಸುಲಭಮಲ್ಲದಪಾರ ಚಿತ್ಸುಖಸಾಗರದಿ।
ಮುಳುಗಿರ್ಪ ಮನವು ಪೊರಸೂಸದಲಿ ಮಿಸುಖಿರೆ।
ಜಲಜಪೀಠಾದ್ಯರೆಣೆಯಿಲ್ಲದನುದಿನ ಸಮಾಧಿಯುತಗೇ ಪೇಳ್ವುದು॥ (21)
ತಪಸಿಗಳಗಧಿಕ ಜ್ಞಾನಿಗಳಗುತ್ತಮಮಂತ್ರ।
ಜಪಿತರ ಶಿರೋರನ್ನಯಾ ಯಜಾಕರ ಜಾಲ।
ನೃಪತಿ ಕ್ರಿಯಾಪೂಜೆಮುಂತಾದವರಧಿನಾಥ ವ್ರತತತಿಗಳಂಗೆ ನೇತಾ॥
ಸುಪವಿತ್ರನಾತ್ಮ ಸಾಕ್ಷಾತ್ಕಾರದಿಂ ದಮಿತ।
ಗುಪಿತದೊಳು ಜಾನಿಸುತಮಾನಂತ ನೀರಧಿಗ।
ಳಪರಿಮಿತ ಕ್ರಿಡೆಯುಂ ಚಾಲನಂ ಗೈದನಾ ಯೋಗಿಗೆಣೆಯುಂಟೆ ತನಯ॥ (22)
ಪಾವನಕೆ ಪಾವನಂ ಪರಕೆ ಪರನೆನಗವಂ।
ಜೀವನ ಸ್ಥಾನವಮಾವುದರಿಂದ ನೀಂ ಧ್ಯಾನ।
ಗಾವಲಂಬನಗೈದು ಸುಖದ ಸಾಮ್ರಾಜ್ಯಮಂ ಸುಲಭದಿಂ ಸಾಧಿಸೆನುತ॥
ದೇವನನುಜಂಗೊರೆದು ಮಗುಳೆಂದ ಯೋಗಿಗಳ।
ಪಾವನತೆಯುಂ ಪೊಗಳ ಪೊಗಳೆ ಮತ್ತಿನಿತೆನುತ।
ಮಾನವಿಧದಿಂ ಪೇಳ್ವರಳವಲ್ಲ ಪರಮಾತ್ಮನಪರಾವತಾರಮಣಾಗಾ॥ (23)

ಭೋಗಪೂಗಗಳುಳದು ಬ್ರಹ್ಮದೊಳಗೊಡವೆರದ।
ಯೋಗಿಗತಿಶಯವಿಲ್ಲ ಮೂರ್ತಿಯೊಳು ಚರಿಯಂಗ।
ಳಾಗುಹೋಗುಗಳೆನಿಸಿ ನಿಂದೆ ಗೈಯಲು ಸಲ್ಲ ನಗೆನುಡಿಗಳಾಡೆಸಲ್ಲ॥
ಭೋಗಿಯಾಗಿರಲತಿ ವಿರಾಗಿಯಾಗಿರಲಶುಚಿ।
ಪೂಗವಾಗಿರಲಿ ನಿಷ್ಠಾವಂತನಾಗಿರಲಿ।
ಯಾಗರುವನಿರವೇಣಿಸಿ ನಿಂದಿಸಲ್ ಕುಲನಾಶವಾದಪುದು ಶ್ರುತಿಮತವಿದು॥ (24)

ಅರಿಯದಜ್ಞಾನಿಗಳು ಯೋಗಿಗಳನರರೆಂದು।
ಬರಿದೆ ಭಾಷ್ಯಳಗೆಡದು ನರಕಭಾಜನರಪ್ಪ।
ರರಿತ ಮತಿವಂತರತಿಪ್ರೀತಿಯಿಂ ಲಾಲಿಸುತ ಸುಖದಿ ಸಗ್ಗದಲಿರ್ಪರು॥
ಶರಿರಮಿರ್ಪನ್ನಮೆಸಗಿದ ಪಾಪಪುಣ್ಯಗಳು।
ನಿರತ ಲಾಲನೆಗೈವ ನಿಂದನಂ ಗೈದವರ।
ಪೊರೆಯುಲೊಪ್ಪುಗಿಪನಾ ಯೋಗಿತಾಂ ನಿರ್ಲೇಪನಾವ ಕೆತ್ರದಿಂ ಧರೆಯೊಳು॥ (25)

ತನುವಿರ್ಪ ತನಕ ತಾನೆಸಗಿದ ಮಹಾಕೃತ್ಯ।
ಕನುವ ಚಿಂತಿಸಿ ಜಗದ್ಗುರುಹಿತದ ಕಾರ್ಯಂಗ।
ಳನು ಮಾಳ್ಪರೈ ಯೋಗಿಜನರದಂ ನಿಜಮೆಂದು [ತಿಳಿವದೂ] ಮತಿಗೆ ತಂದು॥
ಮುನಿಗಳಂ ನಿಂದಿಸುವರಲ್ಲ ದ್ವಿಷತಾಂ ಪಾಪ।
ಮೆನುತ ಸುಹೃದಾಂ ಪುಣ್ಯಮೆನುತ ಪೇಳಾವ ವೇದ।
ದನುವರಿತು ಪರಮಪಾವನನೆನಿಸು ಯೋಗಿಗಳನಂದು ಪಾಲಿಪುದು ತನಯ॥ (26)

ಓದಿ ಕಲಿತಖಿಳ ಶಾಸ್ತ್ರಂಗಳಂ ಕಂಡಲ್ಲಿ।
ಕಾದಬೂದಿಯ ಹೊಯ್ದು ಕೊಂಡೇನು ಫಲ ಸುಖದ।
ಹಾದಿಯಂ ಪಿಡಿದು ಸತತಾನಂದನಾಂತತೆಯ ಸಂಪಾದ್ಯವೇಂ ನಾಲ್ದೆ॥
ಭೇದಪೂಜಾವಾದ ಚಿತ್ರನಿಗ್ರಹನಪಾ।
ಮೋದಂಗಳಾತ್ಮಾನುಸಂಧಾನದೊಂದು ಕಳೆ।
ಯಾದರುಂಟೆಂದಪರೆ ಸ್ವಸ್ವರೂಪೋನ್ಮತ್ತನೆಂತಿರ್ಪನೇನುತನಯ॥ (27)

ಎನಿತು ಪೇಳುವದೇನು ಯೋಗಿಗಿಂತಾಧಿಕ್ಯ।
ವಿನಿತುವಸ್ತುಗಳಲ್ಲವೆನುತರಿತು ನಿತ್ಯ ಸುಖ।
ದನುಭವಕೆ ಮನವೆಳಸುತಾಸ್ತಿಕ್ಯಮತಿಯಿಂದಮನುದಿನಂ ಬಿಡದೆ ಪಿಡಿದು॥
ಘನತರದ ಗೋಪ್ಯದಿಂದಭ್ಯಾಸವನು ಮಾಡೆ।
ನಿನಗೆ ಸುಖನೆಲೆದೋರ್ಪುದಾಗಲಾವ್ರು ಪೇಳ್ದುದಂ।
ಮನಕೆ ಹರ್ಷವನಿತ್ತು ಸಂತತಾನಂದವಂ ಸವಿವಂತೆ ಮಾಳ್ಪುದಣಾಗ॥ (28)

ಬೇಸರದೆ ಬೆಂಬಿಡದೆ ವಂಚಕರ ನುಡಿಗಳಂ।
ಮೋಸ ಪೋಗದೆ ಪೆರರ್ಗೆ ಸೂಚಿಸದೆ ಮತ್ತೊಂದೆ।
ರಾಸೆಯಿಂ ಜರೆದಿದಂ ಮರೆದು ಮರುಳಾಗಿರದೆ ಚಿಂತನಂ ಗೈವುತಿರಲು॥
ಲೇಸನಿತ್ತಪುದಾ ವಿಶೇಷಮಂ ಬಿತ್ತರಿಸೆ।
ವಾಸುದೇವಂಗಳವೆ ವಸುಧೆಯೊಳು ಪಾವಿತ್ರ।
ರಾಸಿ ನೀನೆಂದೆನಿಪೆಯೆನುತರಿತು ಪ್ರೇಮದಿಂ ಜಾನಿಪುದು ನಿನ್ನೊಳನಘಾ॥ (29)

ಪರಮತತ್ವರಹಸ್ಯ ಮತ್ತಾರಿಗುಂ ತಪದಿ।
ದೊರೆಯದಿದು ನೀಂ ಗೈದ ಭಕ್ತಿಯಿಂದಾಂ ಮೆಚ್ಚಿ।
ಕರತಳಾಮಳಕವೆನೆ ಕೈಗಿತ್ತೆನೆಂದು ರಘುವರನಿರೂಪಿಸಿದರ್ಥಮಂ।
ಶರಣಾಗ್ರೇಸರಂ ಸೌಮಿತ್ರಿ ತಿಳಿದು ತಾಂ।
ಪರತರಪರಾನಂದ ಸಿರಿರಾಮಪುರದರಸ।
ಗೆರವಲ್ಲವೆನುತರಿತು ಸ್ವಾತ್ಮಾನುಬೋಧೆಯಿಂದಾಮೋದಗೊಳುತಿರ್ದನು ॥ (30)

(ಸಂಧಿ 10 ಕ್ಕಂ ಪದ 409.)

ಹನ್ನೊಂದನೆಯ ಸಂಧಿ

ಸೂಚನೆ ॥ ತರಣಿಸುತ ಸಾಮ್ರಾಜ್ಯವೆರಮ ಸಂತಸದಲಿರೆ।
ಬರಲು ವರ್ಷಾಗಮಂ ರಾಘವಂ ಪ್ರಸ್ರ್ರವಣ।
ಗಿರಿಕಟಕದೊಳಿರ್ದು ಸಂತಸದಿ ಲಕ್ಷ್ಮಣನೊಡನೆ ಪೇಳ್ದ ಕಾರ್ಯಾಂತರವನು ॥

೧॥ ಮಧುಪಸಹಕಾರದಿಂ ಮಂದಾನಿಲಂ ಬೆರಮ।
ಮದುಮುಖರ ಮುಖರಿತದ ಕೆಂಗಣ್ಣವಕ್ಕಿಗಳ।
ಪದವಿಯನು ಸ್ರುತಿಗೈದ ಪುಷ್ಪಿಣಿಯರೊಡಗೂಡಿ ಸರ್ವಭೂತಂಗಳನ್ನು॥
ಕುದಿಗೊಳಿಸಿ ತನ್ನುಷ್ಣತಾಪದಿಂ ದುರ್ಜನಾ।
ಭ್ಯುದಯ ಜಾತಿವಿಹೀನ ಮಧುವೆಂದು ಧಿಕ್ಕರಿಸಿ।
ಮವಮ ಜೀವನವಿತ್ತು ಪೊರೆಯೆ ಪ್ರಾವೃಟ್ಪತಿಯು ಸವಯ ಮೈದೋರ್ದನಗಜೇ॥ (1)
ಅಂಜನಾ ಕಟಿತಟಾದ್ಗಳಿತ ದಾನೋನ್ಮಾದ।
ಗುಂಜಿಂ ಸ್ಕಲಿಂದ ಮದಜಾಂಕರಮುದ್ಯೋದ।
ರಂಜಿತ ಸುಕೇತಕೀಗೀ ಪರೀಣಾಮಧೂಳಿಕಾಧ್ಯತೆಯನಾಂತು ಜವದಿ॥
ಕುಂಜಪುಂಜಗಳನಪ್ಪಳಿಸಿ ಕುಪ್ಪಳಿಸಿ ಭೂ।
ರಂಜನೆಯ ಕೆಡಿಸಿರ್ಪ ಮಧುರಾಗಗಳ ಬೇಗ।
ಭಂಜಿಸಿ ಪ್ರಭಂಜನಂ ಸುಳಿವಘನ ಸಂಸಪ್ತಕವ ವೀರಭಟನೆಂಬೊಲು॥ (2)
ಅಪರಾಂಬುರಾಶಿಯಂ ತುಳ್ಕ ಬಿಕಳಿತೆಗೊಳಿಸಿ।
ವಿಪುಳಕರದಟ್ಟಘಟ್ಟಣೆಯಿಂದ ಕರಣಾತತಿ।
ವಿಪರೀತದಿಂದ ಮುಂಬರಿಮ ಭೂಮಿಯ ವಿಟಪಿಗಳ ಕೆಳ್ತು ನಭವನಡರಿ॥
ತಪನುರುಬೆಯಂ ನಿಲಿಸಿ ತವಕದಿಂ ಮಧುರಾಜ।
ನಪರಿಮಿತ ಪೀಡನಂಗೈಯ ಘನಮದದನೇ।
ಕ ಪಗಲಂ ಬಾಗರೆದು ಸಿರಿಯ ಮುಂದೈತಪ್ಪ ಮತಿಯಂತೆ ಮರುತಸುಳಿದಂ॥ (3)
ಗಗನಗಂಗೆಯೊಳು ಮಿಂದಪ್ಸರಾಂಗನೆಯರುಗ।
ಳೊಗುಮಿಗೆಯ ಕುರುಳ್ಗಳಿಂ ಪರಪಿದಪ್ರೊ ಬಾನೆಡೆಯ।
ಸೊಗಯಿಪ ತಮಾಲಸುಚ್ಛಾಯಮೋ ದಿವಿಜ ಪತಿಗಡಸಿರುವ ಮುನಿಶಾಪಮೊ॥
ಗಗನಮಾತಂಗ ಮದಲೋಭದಿಂದೈತಂದು।
ಮಿಗೆಪರದ ಷಟ್ಚರಣ ತತಿಯೋ ನಭೋಂಗನೆಯ।
ಸೊಗಸಾದನೀಲಪಟಮೊಯೆನಲ್ ಕಂಗೊಳಿಸಿತಾ ಮೇಘಜಾಲ ಕವಿದು॥ (4)

ತರಣಿಶಶಿಗಳ ಪಿಡಿಯಲುವ್ವಳಿಪ ರಾಹುವಿನ ।
ತರುಣಾವ್ರೊ ದೇವತೆಗಳಂ ಬಾಧಿಸುತೆ ಬಂದ ।
ಕರಿಯಖಳನುದ್ದಂಡೆ ಬಲವೊ ಮೇಣಂಧಕಾಸುರನ ಬೆರ್ಬಲದುರುಗಲೋ ॥
ಧರಿಣಿಯಾಗಸವೆಂಬ ಭೇದ ತೋರ್ಪಡದಂತೆ ।
ಮುರಿದು ಮುಚ್ಚಿದ ಕಳ್ತಲೆಯೊಯೆನಲ್ ನೀರದಗ ।
ಳುರವಣಿಯು ಜಗದಾಡ್ಯಕರ ಮಹಾಮಾಯೆಯೊಲು ತೋರ್ದುದಾ ಕಾರ್ಗಾಲದಿ ॥ (5)

ಮುಗುಳಾದವಲ್ಲಿ ಜಾತಿಗಳ್ ಕೇತಕೆಗ ।
ಳೊಗುಮಿಗೆಯು ಪೂದೊಂಬೆಗಳನಾಂತೆಸವಿರ್ದ ।
ವಗಣಿತದ ಕುಟ್ಮಲಗಳಾಂತು ಕರಮೆಸೆದವಾ ಕಾಲದ ಕದಂಬತತಿಯು ।
ಬಗೆ ಗೆಟ್ಟು ಪೊರ್ದವಂಚೆಗಳು ಕಲಕಂಠಂಗ ।
ಳಗೆ ಬೆರ್ಚಿತಾರ್ಭಟಗಳಟ್ಟಗಡಿಗೆ ಮನ್ಮಥಂ ।
ತೆಗದು ಬತ್ತಳಿಕೆಯಿಂ ಶರಗಳಂ ತೀಡಿ ತಾಡಲ್ಕೆಳಸಿದಂ ಪಾಂಥರಂ ॥ (6)

ಕ್ರೂರನಿಸ್ವನ ಚಪಲಮತಿ ನಿರಾಗಸದಿಂದ ।
ತೋರಹತಿಗೆಳಸುವ ಜಡಭರಿತ ತಾಮಸಾ ।
ಕಾರಸಿನಿತುಪಕಾರ ನೆರವೇರದರಸನೆಡೆಯೊಳಗನಿಶಮೊಪ್ಪಿರ್ದಪೆ ॥
ಯಾರುಬದುಕುವರೆನುತಮರಿತು ಹಂಸೆಯು ಬೇಗ ।
ಪಾರಿದವು ಕೃಪಣತಾಮಸರೆಡೆಯು ನಿರ್ಮಲರು ।
ಸಾರಿರುವದೆಂತೆನುತ ಧರೆಗರುಪ್ಪವಂದದಿಂ ಮಾನಸಕೆ ದುಮ್ಮಾನದಿಂ ॥ (7)

ಇದು ಸುರಪಕರಕಲಿತಕುಲಿಶದಗ್ನಿಯ ಬೆಳಗೊ
ಇದು ಸುರೇಶನ ಕರಿಯ ಸೆಳ್ವಂಕುಶದ ಹೊಳಪೊ ।
ಇದುವೆ ಮಧುಸೂದನನ ಖಡ್ಗಧಾರೆಯ ಪೊಳಪೊ ಜಂಚರಕ್ಕಸದಾಡೆಯೋ ॥
ಇದು ಸಗ್ಗಸೌಧಾಗ್ರಕಾಂತಿಯೋ ನೋಡಲಿಂ ।
ತಿದು ಸುರಾಂಗನೆಯರಂಬಕನಿಚಯನೋಟಗಳ ।
ತ್ರಾದಿಯು ತೋರ್ಪುದೊಯೆನಲ್ ಅಡಿಗಡಿಗೆ ಕಂಗೊಳಿಪವಾಗ ಸೌದಾಮಿನಿಗಳು ॥

ಪುಟ್ಟಿತೊಡನಾಗೈದೆ ಘನರವಂ ಘನದಿಂದೆ । (8)
ಜಿಟ್ಟುಬೆಳ್ಗೈಯುವ ನಡಮುಗುಗಧ್ವನಿ ಪೋಲೆ ।
ಕೊಟ್ಟುದಹುದೆಂಬಂತೆ ದಿಕ್ಪಟಲ ಘುಮ್ಮೆಂಡಲ್ ಕಡಲರವಕೆಮ್ಮಡಿಸಿಯೋ ॥
ನಿಟ್ಟಿಸುತ ಚಾತಕಖಗಾದಿಗಳ್ ಸಂಭ್ರಮಿಸಿ ।
ಬಿಟ್ಟು ಮುಗಿಲಂಗಣದ ಮುಂಬಿನೋಳ್ ಮುಂಬನಿಯು ।
ಕುಟ್ಟಿರವಗೊಂಬಂತೆ ಗುಟುಕಿಸುತ್ತಿರುತಿರ್ದವೇಸೆಂಬೆ ಕಾರ್ಗಾಲದಿ ॥ (9)

ಇದು ವೈಜಯಂತ ಸುಷಮೋತ್ಕ್ಷವಿಯೊ ವೈಶ್ರವಣ ।
ಸದನತೋರಣಮಹಾಸ್ವೇಂಥೊಗರ ತೋರಿದುದೊ ।
ಇದು ವರುಣಪಟ್ಟಣದ ಗೋಪುರದ ಮೋಲ್ಕಲಶವೇಂ ಬಳಕ ರಾಜಿಸುವುದೊ ॥
ಇದು ತರಣಿಸುತನಗರಹರ್ಮ್ಯಪ್ರಭಾಪಟಲ ।
ದಧುಭುತವ್ರೊಯೆನಲು ಸಾಲ್ದೆಸೆಯು ಮೇಘಜ್ಯೋತಿ ।
ಮುದವಬೀರಿದುದಂಬರಾಂಗನೆಯ ಕಡೆಗಣ್ಣ ಬೆಳಗಿನತಿಶಯಮೆಂಬೊಲು ॥ (10)

ಉದಧಿಯುದಕವನೆಲ್ಲ ಪೀರ್ದು ಕ್ರೋಧವಸಾರ್ದು ।
ತ್ರುದಿಗಾಗಸದಜಲವ ಕುಡಿಯುತ್ಕೆ ನಾಲಿಗೆಯು ।
ವದಗಿಮತ್ತಂಬರದ ಮೇಘ ಮಧ್ಯದಲಿಡಲ್ಕುಷ್ಣಸಂಹಿತ್ನೆತೆಯೊಳು ॥
ಕದಕದನೆ ನಡುಗೆ ಬಾಯಿಬಿಡಲು ತತ್ಕಾಂತ್ರಿಯುಂ ।
ಚದುರಿಂದ ಕಂಗೊಳಿಸಿ ತೋರುತಡಗುತ ಘನಸ್ಸ ।
ಮುದಯದೊಳಲ್ಲಲ್ಲಿ ಮುಂಗಾರ ಮಿಂಚುಗಳದೇಂ ಮನಂಗೊಳಿಸುತಿಹುವ್ರೋ ॥ (11)

ಚಿರಕಾಲ ವಿರಹಾಸಹಿಷ್ಣುತೆಯುಲಂಬರವ ।
ತರಣಿ ಚಿಂತಿಸುತಿರೆ ಘನಾಗಮವ ಕಂಡಾಗ ।
ಪರಮಹರ್ಷದೊಳು ಬರಸೆಳದು ಬಿಗಿಬಿಗಿವಪ್ಪಿ ಚುಂಬನಂಗೈದ ಭರಕೆ ॥
ಗುರುಕುಚವ ಕುಂಕುಮವಿಲಿಪ್ತ ಹಾರಾವಳಿಯು ।
ಪರಿದುಕೆಲಕೊಂದೊಂದು ಕೆಡವಪವ್ರೊಯನೆ ತೋರ್ಪ ।
ಸುರಪಗೋಪಗಳದೇಂ ನೋಡಕಂಗಚ್ಚರಿಯನಿತ್ತಪವು ತತ್ಕಾಲದಿ ॥ (12)

ಚಪಲ ಖಡ್ಗಗಳಾಂತು ಜಲದಭಟಬ್ಯೆತಂದು ।
ಕುಪಿತದಿಂ ಶರಧಿಯೊಳು ಶರಗಳಂ ತೆಗದು ರಿಪು ।
ಗಪರಿಮಿತಕ್ಲೇಶವಂ ಕೊಡುತ ತದ್ವಿಕ್ರಮಂ ಜಸವಂ ನಿವಾರಗೈದು ॥
ಗುಪಿತ ನಕ್ಷತ್ರಮೆನಿಸಿದ ನೃಪತಿಗೀಪೆಸರ್ ।
ಜಪಿಸವೇಳ್ಕಂಬರದೊಳೆಂದು ನಭವಾಗಿತ್ರ ।
ದ್ಯುಪಮಿತನಭಸ್ಸಿನೊಳು ತೋರ್ದುಪಕಾರಿಗಳ ಪೆಸರನಿಡದುಳವರಾರು ॥ (13)

ಶರಧಾರೆಯಿಂದ ಧರೆಯುಂ ಮುಚ್ಚಿ ಮಿತ್ರಗುಲ ।
ಮರೆಯಾಗಿ ಪಾಲ್ಗೆವ ವಿಧುವನುಂಗುತಲುಷ್ಣ
ಕರಕೃತ್ಯಗಳನೆಸಗುತಿರ್ಪ ಜಡಭರಿತನಿಂಗಾವ ಶ್ರೇಯಸ್ಕರವನು ॥
ಧರೆಯೊಳಾಸ್ವಿಟ್ಟಸುವರೆಂದು ನಾರಾಯಣನೊ ।
ಸರಿಸಿ ಜಾಂಬಕಗಳಂ ಮುಗಿದನೋ ಕೋಪಿಗಳ ।
ಗುರುತರೈಶ್ವರ್ಯಮಿರೆ ನಿಘಗಳು ನಿಟ್ಟೆಸರದೆಂಬಂತೆ ತತ್ಕಾಲದೇ ॥ (14)

ಕರುಣಮಿಲ್ಲದೆ ಶರಾಸಾರಮಂ ಮೇಘಭಟ ।
ಕರೆಯುತ್ತ ಬರಲು ಧರಣೀಧರಗಳುರುಕೋಪ ।
ದುರುಬೆಯಿಂ ಸಿಂಹನಾದಗಳೆಸಗಿ ಭಲ್ಲೆಯವಲನುಗೈದ ಸಮರಕೈದೆ ॥
ಪೊರಮಟ್ಟು ಪೊಡದಾಡಲೆಳಸಿದರೊಯೆನೆ ತೋರ್ಪ ।
ವರರೆ! ಗಿರಿವ್ರಗಳಲ್ಲಲ್ಲಿ ನೆಲಬಿರಿವಂತೆ ।
ಮೊರವ ಮೊಳಗುಗಳದೇನಚ್ಚರಿಯ ತೋರುವವ್ರೊ ಘಾಂಘರೆದೆ ನಡುಗುವಂತೆ ॥ (15)

ತಪನ ಉಪಟಳದಿಂದ ತಾಪದಿಂದಲಿ ಚಂದ ।
ವಿಪುಲ ಭೂಪತಿಯು ಶರೀರದೊಷ್ಣವನೀಗ ।
ಲಪರಿಮಿತ ತಪದಿಂದವಾಕಾಶ ಗಂಗೆಯುಂ ಪ್ರಾರ್ಥನಂ ಗೈದಳೆನಲು ॥
ಕ್ಲಿಪಟಮಡಿಗಳಿಗೆ ಪೆರ್ಚುತ ಸುರಿವುತಲ್ಲಲ್ಲಿ ।
ಗುಪಿತ ಗೈವುತ ಬರಲ್ ತಾಪಗಳ ನೊಂದೆಣಿಸ ।
ದಪುಗಣನೆಗೊಳದ ನಿಚ್ಚಲಪುರುಷರಂದದಿಂ ಗಿರಿಗಳೇಂ ರಾಜಿಸುವವ್ರೋ ॥ (16)

ಶರದತರಣಿಯುಸುಂಗಿ ಧರಿಸಲಮ್ಮದೆ ಬಾಯು ।
ತೆರವನೋಯೆಂಬಂತೆ ತೋರುತಡಗುವ ಚಪಲ ।
ಪೊರೆಯು ಪೊರಬೀಳ್ವ ಕದಿರುಗಳ ಬೆಳಗಿನಲಡರಿ ಪೋಗುತಿಹ ಕಾದಂಬದಾ ॥
ನೆರವಿಯುರ್ಚಿರವಮಾರ್ಗವಿಡಿದೈದೆ ಪೋಗುತಿಹ ।
ಪರಮಹಂಸರ ತೆರದಿ ಬೀಳುತಿಹ ಮಂಡೂಕ ।
ಮುರಗಾದಿಗಳು ಧೂಮಮಾರ್ಗದಿಂ ಭೂತಳಕೆ ಕೆಡವ ಜೀವರೊಳೆಸದವು । (17)

ಶಿವನ ಮೆಚ್ಚಿಸಿ ಧರಣಿ ಸಂತಸದಿ ಘನಪಟಲ ।
ಗವಿರಳದ ಜಡೆಯುಳದು ಕಳುಪಿದನೊ ಸ್ವರ್ಧುನಿಯು ।
ರವಿಯಿಂದಮಿಳನುಬಹ ಜಲಧಾರೆ ಸೂನದಿಯುನೊಡಗೂಡಿ ಭೂತಳವನು ॥
ಕವಿದುದೊಮ್ಮೆಯೆನಲ್ಕೆ ಕಡಲುಮೇಲ್ವರಿದಂತೆ ।
ವಿವಿಧತರಮಿಂಚುಗಳ್ ಮೊಳಗಿಂದಮೆಡೆವಿಡದೆ ।
ದಿವಸರಾತ್ರಿವಿಭೇದ ಗಾಣದಂದದಿ ವೃಷ್ಟಿಗರದುದೇಂ ಬಣ್ಣಿಸುವೆನು ॥ (18)

ಬಗೆಬಗೆಯ ಸೃಷ್ಟಿಗಳ ಮಾಳ್ಪನಂಬುಜಯೋನಿ ।
ಜಗತಿಯೊಳಗದು ವಿಷಮ ಸಮನೆನಿಪುದೆನುತ ತಾ ।
ನಗಜೆಪುರಸನ ಕೃಪೆಯ ಪಡೆದೊಂದ ವಿಧಮಾದ ಸೃಜನೆಯಂ ಮಾಳ್ಪೆನೆನುತ ॥
ಜಗತಿಯಂ ಜಲಧಿ ಸಂಪೂರ್ಣಗೈವನೊಯೆನಲ್ ।
ಮಿಗೆಕರವ್ರದಾಸಾರವರೆನಿಮಿಷವೆಡೆಬಿಡದೆ ।
ದಿಗಿಲುಗೊಳಸುತ್ತಮಾರ್ಭಟೆಗಳಂ ಚಿಣ್ಣೆಬಿಟಲುಮೆಂಬ ಭರಸಿಡಿಳ್ಗಳಂದ ॥ (19)

ಜಾತಿಮಾತ್ರೋಪಜೀವನ ದುಷ್ಟಕಂಟಕ ।
ವ್ರಾತ ನಿಷ್ಠುರದದುರ್ದರಗಳತ್ರಿತಾಮಸದ ।
ರೀತಿಯನ್ನಾಂತದರಿದ್ರೈಶ್ವರ್ಯಬರೆ ಧರೆಯ ಜನರಿರುವದೆಂತೆನ್ನುವ ॥
ಮಾತ್ರನಿಶ್ಚಯಗೈದು ಮದಮುಖದಿ ಕೂಗುತ್ತ ।
ಮಾತಿಮಿರಮಂ ಕಪಿಸುತಶನಿಪಾತಂಗಳಿಂದ ।
ಭೂತಳವ ನೀರೊಳಗೆ ಕಲಪಿದನೊಯೆನೆ ಲೋಕಬಾಧೆ ಹೈತುಕಮದಲ್ತು ॥ (20)

ಸಾಗರದ ಜಲವ ಮನಬಂದಂತೆ ಪೀರ್ದು ಮ ।
ತ್ತಾಗಸವನಡರಿ ತಜ್ವಾಲೆಯಿಂ ನಿರ್ವಹಿಸ ।
ಲಾಗದಲೆ ಕಂಗಳೊಳಗಿಂ ಗಳಗಳಂ ಕರದು ಪೂರ್ವಭುಕ್ತಂಗಳನ್ನು ॥
ಬಾಗಿ ಕಾರಿದ ಗೊರವ ವಿಷವನಕ್ಕಿಸಲುಳದ ।
ಲೋಗರಿಂ ಜೀರ್ಣವಾದಪುದೆ ಶಕ್ತಿಯು ಮಿಂಚೆ ।
ಪೋಗೆ ತನುಮಹಾದೆ ಜಡಮತಿಯ ಲೋಕಕಾಂತೋರ್ದನಭ್ರಂ ಜವದೊಳು ॥ (21)

ಘನಗಜಗಳೆಣ್ದೆಸೆಯನಾಕ್ರಮಿಸಿ ಜೃಂಭಣದಿ ।
ಕಸಮ ಮೇಲ್ವಾಯ್ದುಬರೆ ಕಂಡು ಮಾರುತಸಿಂಹ ।
ಕಿನಿಸಿನಿಂದಿಂದು ಮದನಖಗಳಂದಂ ಪೊಡೆಯೆ ಶಿರಬಿರಿದು ಭೂತಳಕ್ಕೆ ॥
ಬಿನದದಿಂದುದುರ್ವ ಮುಕ್ತಾಫಲಗಳೆಂಬಂತೆ ।
ಘನವಾಗಿ ವರ್ಷೋಪಲಂಗಳುಂ ಚೆಲ್ಲಿದವು ।
ವನಧಿಮೇಖಲೆಗಮರಪತಿ ಸಮರ್ಪಣೆಗೈದ ಮುತ್ತುಗಳ ಸೇಸೆಯೆನಲು ॥ (22)

ವಾರಿವಾಹಂಗಳಂದುದಿತ ಸುಪ್ರಾಣಿಕರ ।
ತೋರಮುಕ್ತಾಫಲಗಳಾರಿಗುಂ ತೋರಿಸದೆ ।
ತಾರುಥಟ್ಟಾಗಿ ಸುರರೈದರೀ ಧಾರುಣಿಗೆ ಕೊಡದೊಂದನೆನುತ ದಯದಿ ॥
ಮಾರುತ ಜಗತ್ಪ್ರಾಣವಾದ ಕತದಿಂ ಕೆಲವ ।
ನಾರೈದು ಭೂಪತಿಗೆ ಸೇಸೆಯಂತಳೆದನೊ ಗ ।
ಭೀರಮತಿಯಿಂದ ಕೆಲಸಾರಿ ಚೆಲ್ಲಿದ ಕರಕತತಿಗಳೇಂ ಕಂಗೊಳಪವೋ ॥ (23)

ಉಂಡುದೇ ಚಾತಕದ ತೆರದೊಳೊಂದರೆವನಿಯು ।
ಕೊಂಡುದೇ ಕುಸುಮ ಸೌರಭವನೀಪದಪಂಙ್ತಿಯು ।
ಕಂಡುದೇ ವೀರುಧಂಗಳಂತಮೃತ ರುಚಿಗಳ ಘನಾಘನದ ಹಂಗಿಲ್ಲದೇ ॥
ಮಿಂಡೆದ್ದು ಕುಣಿದು ಕಂಬನಿಗಳಡುತಲಿ ನಲಿದ ।
ಖಂಡಸುಖದನುಭವದಲಿಹ ನೀಲಕಂಠಗಳ ।
ತಂಡ ಸಾಧುಗಳಹಹ ಪರರ ಶ್ರೇಯಸ್ಸಿಗುಂ ಹಿಗ್ಗಿಹಾರೈಪರಲ್ತೆ ॥ (24)

ಮಿತ್ರಯ್ಯಾಗಪಕಾರಮೆಸಗಿ ಪೋಷಣೆಗೈದ ।
ಮಿತ್ರಮಸುಮಿತ್ರಗುಂ ಶಾಂತಿಗೈದನವರತ ।
ಚಿತ್ರೈಕವೃತ್ತಿಯಿಂದನುಸರಣೆಗೈದ ದ್ವಿಜತತಿಯು ಕಷ್ಟವ ನಿಟ್ಟಿಸೀ ॥
ಮತ್ತೆ ನಿಟ್ಟುರದಿ ಸಂತರ್ಜಿಸುತ ಕಿಡಿಯನುಗು ।
ಳುತ್ತೊಂದು ಪನಿಯ ಜೀವನಮಿತ್ತ ಮಾಳ್ಕೆಯೋ ।
ಳ್ತೆತ್ತಾತ್ರಗೇಂ ಸಂಗಮೃದ್ಧಿಕರಮಾದಪುದು ಕೆಡಿಪ್ಪುದೆಲ್ಲವು ಲೋಭವು ॥ (25)

ನಿರವಧಿತ್ರಮಸ್ಸೃಷ್ಟಿಯಿಂದ ಮಾಯೆಯ ತೆರದಿ ।
ಸುರಚಿರದ ನಾಟ್ಯನಯದೋಲ್ ಘನೋದ್ಭಾಸಿತದಿ ।
ಕರುಣಾಕರನ ಸಿರಿಯೊಲಖಿಲ ಜೀವಾಧಾರಮೆ ನಿಶಾಂತತೆಯ ಬೆರಸೀ ॥
ಪರಮಾರ್ಥಚಿತ್ರದಂತಾಶಾತನೂಕರಣ ।
ದುರು ಧನುಷ್ಕೋಡಿಯೊಲು ನಿಮ್ನೋನ್ನತಾಭಾವ ।
ದೆರೆದು ಪ್ರಾವೃಟ್ಕಾಲ ರಾಜಿಸಿತು ನಿಬಿಡತರ ಮೋದದಿಂದಾ ಸಮಯದಿ ॥ (26)

ರಜನೀಮುಖದ ತೆರದಿ ನೀಲಕಂಠ ಪ್ರೌಢಿ ।
ಯಜನಂತೆ ಕಾದಂಬಡಂಬರಾಮೋದಿ ನಿಜ ।
ವಿಜಯಾರ್ಥ ಕೈತಂದ ಪಾಕಶಾಸನನಂತೆ ಚಾಪರಂಜನೆಯಿಂದಲಿ ॥
ದ್ವಿಜರಾಜನಂತಮಿತ ದ್ವಿಜಕುಲಾಮೋದಕರ ।
ಸುಜನರಂದದಲಮಿತ ಜೀವನಪ್ರದ ದೇವ ।
ವಿಜಯಡಿಂಡಿಮಮೆಂಬೊಲಂಬುದಾಗಮಮುದೇಂ ಸಂಭ್ರಮದಿರಾಜಿಸಿದುದು ॥ (27)

ತಮನಂತೆ ತರಣಿಶಶಿ ಸಂತರ್ಜನೋನ್ಮುಖದಿ ।
ಶಮನಂತೆ ನಿರ್ಘಾತ ಪಾತಭೀಕರ ಕಲ್ಪ ।
ಸಮಯದಂದದೆ ಸರ್ವ ವಸ್ತುಕಬಳೀಕರಣ ಕೀಲಾಲ ಬಾಹುಳ್ಯದೇ ॥
ಸಮರದಂದದೆ ಕಬಂಧಾಢ್ಯನಾಗುತ ರಮಾ ।
ರಮಣನಂದದೆ ತಡಿದ್ಗೌರಾಂಗನೆಯನಪ್ಪ ।
ರಮಣೀಯದಿಂದಂಬುದಾಗಮಮುದೇಂ ಚಿತ್ರಕರದಿ ರಾರಾಜಿಸುವುದೋ ॥ (28)

ಯೆಡೆವಿಡದೆ ಬರ್ಪ [ಘನಮೇಘ] ಗಳಾ ಧ್ವನಿಗಳಂ ।
ದಡಿಗಡಿಗೆ ಸುರಿವ ಪೆರ್ಮಳೆಗಳಂ ಪೊಳೆಗಳಂ ।
ದೆಡೆಗೆಡೆಗೆ ಪೊಳೆವಮಿತ ಮಿಂಚುಗಳ ಸಂಚುಗಳ್ ಕಳದಿಂದ್ರಗೋಪಂಗಳ ॥
ತಡತಡದು ಕೆತವಾನೆಕಲ್ಲುಗಳ ಪಲ್ಲುಗಳ ।
ನೊಡನೊಡನೆ ಪಿಡಿವ ಕಲಕಂಠದುತ್ಕಂಠಗಳ ।
ನಡೆಗೆ ನಡುಗುವ ವಿಪ್ರಲಬ್ಧಾಂಗನಾರಬ್ಧ ಸ್ಮರಯಾಜನ ಕಂಗೆಸೆದವೊ ॥ (29)

ನಲಿನಲಿದು ಕುಣಿಕುಣಿವ ಸೋಗೆಗಳ ಜಂಗುಳಿಯು ।
ಕೆಲಬಲದಲರಳಿದ ಕದಂಬಗಳ ತಿಂತ್ರಿಣಿಯು ।
ಚಲದಮಲ ಪೊಂಗೇದಗೆಯು ಜಾತಿಕುಸುಮಗಳೆಗೆರಗಿ ಬಹ ಬಂಭರಗಳಾ ॥
ಲಲಿತಧ್ವನಿಯುಂ ಕಂಡು ಕಾಂತಾನುರಾಗ ಸಂ ।
ಚಲಿತಮಾನಸದಿಂದ ರಘುನಾಥನಿಂತೆಂದ ।
ನೆಲೆ ಕುವರ ಪ್ರಾವೃಷಾಗಮ ಭಯಾಗಮಹೇತುಕರಮಾಗಿ ಕಂಗೆಸವುದೊ ॥ (30)

ಸತಿಯೊಡನೆ ಬೆರದು ಸಂತಸದಿಂದ ಸೌಖ್ಯ ಸಂ ।
ತತಿಯನನುಭವಿಪ ಭೋಗಿಗಳು ಮೋಕ್ಷಾಲೋಕಕೆ ।
ನತಚಿತ್ತರಂಗನಾನತರಪ್ಪ ಪ್ರಣಯಜನರುಳವ [ವರ್ಷಕಾಲದಾ] ॥
ಕತಿಪಯ ದಿನಂಗಳಂ ಕಳೆಯುವೇಳ್ಕುಮೆನುತ್ತ ।
ವಿತತ ಚಿಂತೆಯೊಳಂಗನೆಯ ನೆನದು ಬಳಲ್ವ ರಘು ।
ಪತಿಯು ನಿಟ್ಟಸಿ ನಮಿಸಿ ಸಮಯೋಚಿತಂಗಳಂ ಸೌಮಿತ್ರಿ ಬಿನ್ನವಿಸಿದಂ ॥ (31)

ದೇವರಾಜ್ಞಾಪಿಸಿದುದು ಚಿತ್ರಮಾವರು ರಾಜ ।
ಭಾವ ಧೈರ್ಯಾಲಂಬಿಯಾದ ಕತ್ರದಿಂ ದುಷ್ಟ ।
ಭಾವದಗರ್ವಿಯುದಲೆ ಕಜ್ಜಮಂ ಬೆಳಸಲಹುದಪರಿಮಿತ ಸೌಖ್ಯವು ॥
ರಾವಣಾಸುರವಧಾ ಸಾಧನಗಳನ್ನು ರಾ ।
ಜೀವ ಮಿತ್ರನ ತನಯನನುಗೊಳಿಪ ಜಾನಕೀ ।
ದೇವ ವಶವಾದಳೆಂದೇ ಚಿತ್ತನಿಲಯದೊಳ್ ಭಾವಿಪುದು ನರವರೇಣ್ಯ ॥ (32)

ಚಿಂತೆಯಾತಕೆ ಪ್ಲವಗಕಾಂತ ವಶವಾಗಿರ್ದ ।
ರಂತರಮದೇನುಂಟು ಕಾರ್ಯ ಕೈಗಂಟಾದು ।
ದೆಂತೆನುತ ತಿಳಿಯವೇಳ್ಕೆಂದು ಲಕ್ಷ್ಮಣಂ ತಿಳುಪಲಾಗ ಸಂತಸಗೊಳ್ಳುತಾ ॥
ಮುಂತಣಾಲೋಚನೆಯನನುಮಾನಮುಳಿದು ಶ್ರೀ ।
ಕಾಂತ ರಾಮಾಪುರನಿತಾಂತ ಶರದಾಗಮವ ।
ಚಿಂತಿಸುತ್ತಿರ್ದನೇಕಾಂತದೊಳು ಗೋಬ್ರಾಹ್ಮಣಾನಂದಕರವ ಮನದೇ ॥ (33)

ಸಂಧಿ 11 ಕ್ಕಂ ಪದ 442 ॥

ಸೂಚನೆ॥ ಸುಲಭದಿಂದಖಿಳ ಜೀವರು ಮಹಾಪುರುಷಾರ್ಥ।
ದೊಲವ ಸಂಪಾದಿಸುವ ಶುಭನಾಮಕೀರ್ತನೆಯ।
ನೊಲಿದು ಲಕ್ಷ್ಮಣಗರುಪಿ ಕೃತಿಯನಿಸಿದಂ ರಾಮಚಂದ್ರ ಕರುಣಾಸಾಂದ್ರನು॥

ಪದ॥ ಮಾನಿನೀಮಣಿ ಕೇಳು ಮನುವಂಶನಾಥ ಸು।
ಮ್ಮಾನದಿಂ ಭದ್ರಕೋಲಾಹಲವ ನೋಡುತಿರೆ।
ತಾನೊಂದು ದಿವಸ ಮನೆಬಂದು ಲಕ್ಷ್ಮಣನೈದಿ ಪದಪದ್ಮಗಳನು ಪಿಡಿದು॥
ಜ್ಞಾನನಿಧಿ ಸರ್ವಜ್ಞ ಸಕಳಾಗಮಜ್ಞಯುಭ।
ಮಾನವಾತ್ಸಲ್ಯದಿಂದೆನ್ನ ಬಿನ್ನಪವ ಸ।
ನ್ಮಾನದಿಂದಾಲಿಸುತಮನುಮಾನವಂ ಪರಿಹರಿಸೆನುತ ಸಂಪ್ರಾರ್ಥಿಸಿದನು॥ (1)
ಜನನಮರಣವ ನೀಗಿ ಸುಖದ ಸಾಮ್ರಾಜ್ಯಗಳ।
ನನುಭವಿಸೆ ರಾಜಯೋಗದ ಪರಿಯನುಪದೇಶ।
ವನುಮಾಡಿ ನಿರುಪಾಧಿಕಂ ಗೈದರಾಪದಾಯಾಸಸಾಧ್ಯಮೆನುತ್ತಲಿ॥
ಮನವಲಸುತಿದೆ ನಿರಾಯಾಸದಿಂದಲಿ ಸುಖವ।
ನನುಭವಿಸುತಾನಂದಗೊಳಲುಪಾಯವನೊಂದ।
ನೆನಗೆ ಕೃಪೆಯಿಂದರುಹವೇಳ್ಕು ಸರ್ವಜ್ಞನಿಧಿ ಸಕಲಕಲ್ಯಾಣವನಧೀ॥ (2)
ಮತಿಯಿಲ್ಲವಾಗಮದ ಗತಿಯನರಿದಪನಲ್ಲ।
ಹಿತವಹಿತವೆಂದೆರಡನರಿತಿಲ್ಲ ಚಿತ್ತ ಸಂ।
ಸ್ಥಿತಿಯಿಲ್ಲ ಧ್ಯಾಯಾಸದಲಿ ಪೊಲ್ಲದಿಹ ಜನಗಳಂತು ಗತಿಸಂಜನಿಪ್ರದು॥
ಅತಿಶಯಾಭ್ಯಾಸ ಪರರಿಂಗಲ್ಲದಾ ಯೋಗ।
ಮತಿಗೊಡಂಬಡದದರಿಂ ಸುಲಭಪಂಥಾನ ಸಂ।
ಗತಿಯ ಸೂಚಿಸಿ ಕೃತಿಯ ಮಾಳ್ಪುದೆನುತೆರಗಿದಂ ಸೌಮಿತ್ರಿ ಭಕ್ತಿಯಿಂದೆ॥ (3)
ಬೆಸಗೊಂಡ ಪರಿಗೆ ಸಂತಸಗೊಂಡು ರಘುನಾಥ।
ನಸುನಗೆಯಲಿ ಬಿಟ್ಟಿಸುತ ಸೌಮಿತ್ರಿ ಕೇಳ್ ನೀಂ।
ವಸುಮತಿಗೆ ಹಿತವನಾಚರಿಪ ಕರುಣಾಶಾಲಿ ಕೃತಕೃತ್ಯನಾದಕತದಿ॥
ಬೆಸಸಲಳವಲ್ಲ ಮೊಪ್ರಶ್ನೆಯಂ ಪ್ರಾರ್ಥಿಸಿದೆ।
ಕುಸುಮ ಸೌರಭವನಳಯರಸಿದಂದದಿ ಸಾರ।
ರಸವನನುಭವಿಸಲನುಗೈದೆ ಕೇಳಾವಡೆಯುಚಿತ್ತರಿವೆನತಿಗೋಪ್ಯಮಂ॥ (4)
ಕಲಿಮಲೋತ್ಕಲಿತ ಕಲ್ಮಷಚಿತ್ತರಿಂಗೆನಿತು।
ವಲವಿನಿಂ ಸಾಧನಗಳೊರದಡಾಗದು ಸುಖಂ।
ಪಲಪುವಿಧಪೂಜಾರ್ಚನಾದಿಗಳಲವರ ಮನ ನಿಲಲರಿದು ಭಕ್ತಿವಿಡಿದು॥
ಹಲವು ಕೊನೆಗಳನರಸಿ ಗಿಳಿ ಕಾಗಿಯಾಪಂತೆ।
ಪಲುಬಿ ಕೆಟ್ಟಪರೆನುತ ತಿಳಿದನಾಯಾಸದಿಂ।
ಸುಲಭದಿಂ ಸದ್ಗತಿಯ ಸೂರೆಗೊಳ್ಳುವ ಪರಿಯ ಸೂಚಿಸುವೆ ಕೇಳು ತನಯ॥ (5)
ಅಲಸನಾಗಲಿ ಸದಾರೋಗಿಯಾಗಲಿ ಮಲಿನ।
ಕಲಿತನಾಗಿರಲಿ ಪಾತಕಿಯಾಗಲುರು ನೀಚ।
ಲಲನಾಸಮೇತನಾಗಿರಲಿ ಪಾನಾಸಕ್ತ ದುಷ್ಟಾನ್ನಭೋಕ್ತನಾಗಿ॥
ಉಳಿಯ ಬಾರದ ಮಹಾಪಾಪಿಯಾದರುಯೆನ್ನ।
ಚೆಲುವ ನಾಮೋಚ್ಚಾರಣೆಯಲಖಿಳಮಂ ಕಳೆದು।
ನಲವಿಂದ ನಿರ್ವೃತ್ತಿಯನುಂಬನಿದಂ ತಿಳಿದೆ ನಜನಿತ್ತವಚನದಿಂದ॥ (6)

ಕಾಲದೇಶವು ಯೋಗ್ಯಲೇಸುಹೊಲ್ಲೆಯುವರ್ಥ।
ಜಾಲನಾಯಾಸ ತನುದಂಡನೆಯು ಮಂತ್ರಾರ್ಥ।
ದಾಲಸ್ಯ ಸ್ವರವರ್ಣಲೋಪ ಕುಲಬಲಕುಶಲಶಾಸ್ತ್ರದಾಳೋಚನೆಗಳು॥
ಮೇಲೆ ಜಪತಪನೇಮಮೆಂಬ ಕೋಟಲೆಯಿಲ್ಲ।
ದೋಲಾಯುಗ್ರದ ಪಾತಕಕೆ ನಾಮಸ್ಮರಣೆ।
ತೂಲಾಗ್ನಿಯುರುಕಣಂ ನ್ಯಾಯದಿಂ ಪರಿಹರಿಸಿ ಮುಕ್ತಿಯಂ ಕೊಡವುದಣಾಗ (7)
ಗೋವಿಪ್ರವಧೆಯು ಗುರುವಂಗನಾಗಮನ ದು।
ರ್ಜೀವಿಗಳಸಂಗ ಸ್ವರ್ಣಸ್ತೇಯ ಚಾಂಡಾಲ।
ಕೈವರ್ತ ಕೈರಾತನಿಲಯಭೋಜನ ಮುಖ್ಯ ಪಾಪೌಘ ಸಮುದಯಮಸು।
ರೂವಿಲ್ಲದಂತೊಯ್ವ ಪ್ರಳಯಾಗ್ನಿಯೋಪಮಿತ।
ಪಾವನಸುನಾಮಮಾಯಾಸವೆಳ್ಳನಿತಿಲ್ಲ।
ಮಾವಗಂ ನೆನೆದು ಯೋಗೀಂದ್ರಪದಮನ್ನಾಳ್ದ ಸಂತಸದಲಿರ್ಪುದಣಾಗಾ॥ (8)
ಜಾತಿವರ್ಣಾಶ್ರಮಾಚಾರ ವಿರಹಿತನೆನಿಸಿ।
ಸೂತಕಿಗಳೊಡೆಗಲಸಿ ನಿತ್ಯನೈಮಿತ್ತಿಕ।
ವ್ರಾತಂಗಳಂ ಪಳಿದು ಯಾವನಾನ್ನಗಳುಂಡು ಲೋಕನಿಂದಿತನಾದರೂ॥
ಮಾತಾಪಿತೃದ್ರೋಹಮೆಡೆಗೊಂಡುದೆಲ್ಲಮಂ।
ಬೀತುಪೋಗುವಡೆ ಪ್ರಾಯಶ್ಚಿತ್ತ ಹರಿನಾಮ।
ಖ್ಯಾತನೆಂದರುಪುವುದು ಶ್ರುತಿಶಿರಗಳನವರತ ನೀ ತಿಳಿದು ಸುಖಿಪುದಣಾಗ॥ (9)
ಸತತ ಶೌಚಾಚಾರ ಕುಲವೇದಶಾಸ್ತ್ರಸಂ।
ಗತಿ ಪೂಜೆ ಜಪತಪ ಧ್ಯಾನದನುಷ್ಠಾನ।
ಮತಿಯುತ ಮಹಾಪುರುಷರಿಂದಪ್ಪ ಪರಮಪದ ಸೌಖ್ಯದಾನಂದದಿರವು॥
ಪತಿತಕಿತವಕಿರಾತಪಿಶುನಸ್ವಪಚಂ ಜೀವ।
ತತಿಹಿಂಸಕಂ ಮಹಾಕ್ರೂರನಾದಡು ಜಗ।
ತ್ಪತಿಯ ನಾಮಸ್ಮರಣೆಯಿಂದ ಪಾವನನೆನಿಸಿ ಯತಿಗಳಂ ಸಾರ್ವ ತನಯ॥ (10)
ದುರ್ದಾನ ದುಷ್ಪ್ರತಿಗ್ರಹ ಧೂರ್ತಮನುಜಸ।
ಮ್ಮರ್ದಪ್ರಕಾಶಪ್ರಚ್ಛನ್ನಪಾತಕವು ತಾ।
ನಿರ್ದಲ್ಲಿ ಗೆರಡೆಣಿಸಿ ಮಿತ್ರವಂಚನೆಗೈದು ಭೂತಹಿಂಸೆಗಳನೆಸಗಿ॥
ಸಾರ್ದರಂಗಪಕೃತಿಯನೆಸಗಿ ಮಧುಸಮುದಯುವ।
ಪೇರ್ದು ಲೋಕಾಪವಾದದಲಾಳ್ದನಿಗೆ ಗತಿಯು।
ಮರ್ದಪುದು ನಾಮಕೀರ್ತನೆಯಿಂದಮಿದು ಸತ್ಯಮೆಂದರಿದು ಸುಖಿಸು ತನಯ। (11)
ಪರಮಪಾವನನಾಮ ಪಾಪಪ್ರಾಯಶ್ಚಿತ್ತ।
ಪುರುಷಾರ್ಥದಾಯಿಯೆಂಬುದಕೆ ದೃಷ್ಟಾಂತ ಮೊಂ।
ದೊರೆವೆ ಮೂಕಗೆ ನುಡಿಗಳಡಸಿ ವ್ರಾತ್ಯಂ ದ್ವಿಜತೆಯಾಂತಪರಿಯನ್ನು ತಿಳಿದು।
ಹರುಷದಿಂ ಸ್ಮರಿಸಿ ಕೃತಕೃತ್ಯನಹುದೆಂದೊರೆದ।
ಪರಿಯ ನಿಟ್ಟಿಸುತಮಚ್ಚರಿಗೊಂಡು ಲಕ್ಷ್ಮಣಂ।
ಚರಣಕಾನತನಾಗಿ ಬೆಸಗೊಂಡ ಮೂಕನೆಂತಾದ ವಾಗ್ಮಿಯೆನುತ್ತಲಿ॥ (12)

ಬೆಸಗೊಂಡರೊರೆದ ರಘುನಾಥ ಪೂರ್ವದಲೋರ್ವ।
ನಸಮುಖಲ ಚಿತ್ರವರ್ಮಕ ಧರಾನಾಯಕನ।
ಬಸುರೊಳುದಿಸಿದ ಕುವರ ಮೂಕನಾಗಿರೆ ಕಂಡು ಚಿಂತೆಗೊಡರಸಿರುತಿರೆ॥
ವಸುಮತಿಗದೊಂದುದಿನ ನಾರದಂ ಬರಲುಮುನ।
ದೆಸಕಮಂ ಬಿನ್ನವಿಸೆ ಮುನಿಪನಾಳಿಸುತಾಗ।
ನಸುನಗುತ ಪೂರ್ವವೃತ್ತಾಂತಮಂ ವಿಸ್ತರಿಸಿ ಪೇಳ್ದನಾ ನೃಪತಿಯೊಡನೆ॥ (13)

ರವಿವಂಶದೊಳ್ಮೊದಲು ಜಾತನಾದರಸೇತ।
ನವಯೌವನೋನ್ಮದದಿ ಬೇಟೆಗೈದಿದ ವಿಪ್ರ।
ನವಸುಧಾಕರವಸಿಷ್ಠಾಶ್ರಮವ ಸಾರಲ್ಕೆ ಬನದ ಗಿಳಿವಿಂಡೆಲ್ಲವು॥
ತವಕದಿಂ ರಾಮನಾಮಸ್ಮರಣೆ ಗೈವುತಿರೆ।
ಲವಲವಿಕೆಯಿಂದೊಂದು ಯಾಚನಂಗೈದು ಬಂ।
ದವಿರಳದ ಹರ್ಷದಿಂ ವಾಚ್ಯಾಯನೀತಂತ್ರಮಂ ಕಲಿಸಿದಂ ಪ್ರಿಯದೊಳು॥ (14)

ನಾಮಾಮೃತವನುಂ ಬದಂ ಕೆಡಿಸಿ ವೈಶಿಕದ।
ಪ್ರೇಮನುಡಿಗಳ ಕಲಿಸಿದಘದಿಂದ ಮೂಕನಂ।
ತೀಮಹಿಯೊಳುದಿಸಿದ ಕುಮಾರನೆಂದೊರೆದದಾ ಮೌನಿಗಾನತನಾಗುತ॥
ಕಾಯಕಲುಷಿತಗೆ ನಿಷ್ಕೃತಿಯನೆಸಗವೇಳ್ಕು।
ಧೀಮಂತ ಸಂತಸದಲೆಂದು ವಿಜ್ಞಾಪಿಸಲು।
ರಾಮನಾಮೋಪದೇಶಂಗೈದರಾಕ್ಷಣದಿ ಪೋಮುದಾ ಮೂಕತನವು॥ (15)

ಮೊದಲು ಮಾಡಿದ ಪಾಪ ತುದಿಯಾದುದಾಕ್ಷಣಕೆ।
ಹೃದಯಸ್ಥಕತ್ತಲೆಯು ಪೋಮುದು ಮುನೀಶ ನಿಂ।
ದುದಿತನಾಮಪ್ರಭಾವದಿ ಚಿತ್ರವರ್ಮಸುತ ಜಯಸೇನ ಫಣಿಪನಂತೆ।
ಮಧುಸೂದನಚ್ಯುತಾನಂತಮಾಧವಯೆನುತ।
ಚದುರಿನಿಂ ಭಜಿಸುತಾನಂದಮಯನಾಗಿರ್ದ।
ಸವಮಲ ಸುನಾಮಕೀರ್ತನೆಯ ಮಹಿಮಾತಿಶಯಮೆಂತೆನುತ ಪೇಳಲಹುದು॥ (16)

ಮಾತ್ರ್ಯಂದರಾತ್ಮಗೋಬ್ರಹ್ಮಘ್ನಕೈರಾತ।
ವ್ಯತ್ಯಸ್ತವರ್ಣದಿಂ ಜಪಿಸಿ ವಿಪ್ರತೆಯನ್ನು।
ಪೇತ್ಯ ಮೌನಿಶ್ರೇಷ್ಠನೆನಿಸಿರ್ದ ಕೇಳ್ತನಯ ನಾಮ ಪ್ರಭಾವದಿಂದ॥
ಜಾತ್ಯಾಂಧಬಧಿರಮೂಕಾದ್ಯನೇಕಾದಿ ದು।
ಷ್ಕೃತ್ಯಗಳನ್ನೆಲ್ಲಮಂ ನಿಮಿಷದೊಳಗೀಡಾಡಿ।
ನಿತ್ಯನಿರ್ಮಲನೆನಿಸಿ ಮುಕ್ತರಾಗುವರೈಸೆ ನಾಮಪ್ರಭಾವದಿಂದೆ॥ (17)

ಅನಕಕರ್ಮಂಗಳನ್ನೆಸಗಿದರು ಮಗುಳೆ ಮಗು।
ಳಾವದಾನಂಗಳಂ ಮಾಡಿದರು ಶ್ರೀ ಹರಿಯ।
ಪಾವನದ ನಾಮಮಂ ಸ್ಮರಿಸಿದಲ್ಲದೆ ಸಾರ್ಥವಾಗಲರಿದಿದುತಥ್ಯವು।
ಮೂವಿಧದ ಜೀವರಘತತಿಗಳಂ ಸ್ಮರಣೆಯಿಂ।
ದೋವಿ ಪರಿಹರಿಸಿ ಜೀವನ್ಮುಕ್ತಿಯಿತ್ತಪುದು।
ಪಾವನಕೆ ಪಾವನಂ ಮಂಗಳಕೆ ಮಂಗಳಂಪರಕೆ ಪರ ಹರಿನಾಮವು॥ (18)

ಪರಿಹಾಸವುಜ್ಞಾನಕೃತ್ತಿಮಾಡಂಬರಂ ।
ಪರಿಪರಿಯುಳಣಕಸಣಕಂಗಳಿಂದಾದಡಂ ।
ಸ್ಮರಣೆಗೈದಡೆ ಮುಕ್ತಿದೊರದವುದು ವೈರದಿಂ ಮೊದಲು ಘಂಟಾಕರ್ಣನು ॥
ಪರಮಪದಮಂ ಸಾರ್ದ ಪರಿಯುನರಿ ಸದ್ಭಕ್ತಿ ।
ವೆರದು ನೆನೆದನವರತ ಪಾಡುತ ಮಹಾಪುರುಷ ।
ರಿರವನೇಂ ವಣ್ಣಿಸುವೆ ನಾಮವಿಧಮಾವರುಂ ನೆನೆಯುಲಹುದಿಷ್ಟಾರ್ಥವು ॥ (19)
ಮಾನಿನಿಯುಳಾಗಲಜ್ಞಾನಮುಳ್ಳವರಾಗೆ ।
ಹೀನಜಾತಿಗಳಾಗಿ ಹಸುಣರಾಗಲಿ ಬಿಡದೆ ।
ನ್ಯೂನವಿಲ್ಲದೆ ನಾಮ ಕೀರ್ತನಂಗೈದಡಾರಾದಡವಧನ್ಯ ಮಾನ್ಯಂ ॥
ಮಾನವೋತ್ತಮನವನೇ ಪಂಕ್ತಿಪಾವನನತುಳ ।
ಜ್ಞಾನಿಗಳಗಧಿಕ ಮತ್ತಲ್ಲಿ ಸುಳದರು ತಿಳವು ।
ದಾನೆಲಮಯೋಧ್ಯ ಮಾಯಾವಾರಣಾಸಿ ಗಯ ಮಧುರೆಯೆಂಬರಿವುದಣಗ ॥ (20)
ನಾಮಕೀರ್ತನೆಗಳನ್ನನವರತ ಮಾಳ್ಪವಗೆ ।
ನೇಮನಿಷ್ಟೆಗಳ ಬಯಕೆಗಳಲ್ಲ ಕಿಲ್ಬಿಷ ।
ಸ್ತೋಮಮಂ ಪೋಗಾಡಿ ಧನ್ಯ ಜೀವನ್ಮುಕ್ತನೆಂದೆನಿಸಿ ಸಂಚರಿಪನು ॥
ಪ್ರೇಮದಿಂದಾಗೆ ನಿಟ್ಟಿಸಲವರು ಕೃತಿಯಪ್ಪ ।
ರಾ ಮಹಾಪುರುಷರಿದ್ದೆಡೆಯಖಿಲ ತೀರ್ಥಗಳ ।
ಧಾಮನೆಂದೆನಿಸುವನದೇನೆಂಬೆ ಮಹಿಮೆಗಳನೆನಿತೆಂದು ಬೆಸರಗೊಂಬೆ ॥ (21)
ದಿವದಿ ಮಾಡಿದ ಪಾಪ ಸವದು ಪೋಪುದು ತಾಪ ।
ಪವಣಿನಿಂದಿರುಳಿಸಗಿದಾ ಪಂಕ ನಿಶ್ಯಂಕ ।
ನವನವಕವೆನಲೊಮ್ಮೆ ಸ್ಮರಿಸಿದೊಡೆ ಶ್ರೀರಾಮ ಮಾಧವಾಚ್ಯುತನೆನುತಲಿ ।
ಭವಭವಾರ್ಜಿತಗಳೆಲ್ಲಂ ಪೋಗಿ ಪುಣ್ಯಲೋ ।
ಕವತಿರಸ್ಕೃತಿಗೈದು ಸೌಖ್ಯದವಿರಳ ಪುನ ।
ರ್ಭವವಿಲ್ಲದಾನಂದ ಪದವದುಂ ಸಾರ್ವರಿದು ಮಿಗೆಸತ್ಯವೀ ಲೋಕದೆ ॥ (22)
ನಾಮಗಳನೇಕಮದರೊಳಗೆ ಸಾಸಿರನಾಮ ।
ಕಾಮಿತಪ್ರದ ಕಲುಷಹರವೆನಿಪುದಮಿತಪಾ ।
ನೇಮದಿಂದಾವದಾವದ ನೆನೆಯವೇಳ್ಕು ಫಲಭೇದವೆಂತೆಂತಪ್ಪವೂ ॥
ಆ ಮಹಿಮೆಯುಂ ತಿಳುಪವೇಳ್ಕೆಂದ ಲಕ್ಷ್ಮಣನ ।
ಪ್ರೇಮದಿ ದಿಟ್ಟಿಸುತ ಸಕಲಲೋಕೋಪಕೃತಿ ।
ಯಾಮಹಿಮೆಯುಂ ನಿರೂಪಿಸಿದ ಶ್ರೀರಾಮಚಂದ್ರನಾನಂದದಿಂದ ॥ (23)
ಆದಡಾಲಿಸು ವತ್ಸ ನಾಮಂಗಳೊಡನೆ ಬಹು ।
ಭೇದಂಗಳುಂಟಾದಡೆಲ್ಲಮಂ ಕರ್ಮಗಳ ।
ಭೇದಿಪವದೊಂದು ಪರಿಯು ಜಪಿಸಿದ ಜನರಿಗಿತ್ತಪವು ಕಾಮಿತಗಳ ॥
ಬಾಧೆಯೊಳು ಸಿಲ್ಕಿರೆ ತ್ರಿವಿಕ್ರಮನ ವಿದ್ಯಾರ್ಥಿ ।
ಮೋದದಿಂ ಪುರುಷೋತ್ತಮನ ಪರಕವಿರ್ ಸುಖಾ ।
ಮೋದಬಂಧನಮುಕ್ತಿಯೆನುತ ದಾಮೋದರನ ಕೇಶವನ ನೆನೆವುದನುನಾ ॥ (24)

ಭೀತಿಯೊಳಗಚ್ಯುತನ ನೇತ್ರರೋಗಾತಂಕ ।
ಬೀತು ಪೋಗಲು ಹೃಷೀಕೇಶನಂ ಭ್ರಾಜಿಷ್ಣು ।
ವಾತಪಕ್ಲೇಶಕುಂ ಕೊಳುಗುಳದಿ ನೆನೆವುದಪರಾಜಿತನ ಕಾಲಜಿತನಾ ॥
ಪಾತಾಳದೊಳಗೆ ನರಸಿಂಹನಂ ಪೇರಡವಿ ।
ಭೂತಳದಿ ವಾಮನನ ಚಕ್ರಿಗಿರಿಖಡ್ಗಿಯುಂ ।
ಯಾತುಧಾನರ ತರಿದ ಶಾರ್ಙ್ಗಿಯುಂ ಚಿಂತಿಪುದು ನಾಲ್ದೆಸೆಯೊಳುಂ ಬಾಲಕಾ ॥ (25)

ಉರಗಬಾಧಾಶಮನ ಗರುಡಧ್ವಜನ ಸ್ಮರಣಾ ।
ಮರಿಭಯಾನಿಕೃಂತನ ನೃಸಿಂಹಕೀರ್ತನಗಳೇ ।
ಪರಿಯಲಖಿಳೇಷ್ಟ ಪ್ರದಾತೃ ಭಗವನ್ನಾಮಕೀರ್ತನಗಳೆಂದರಿವುದು ।
ಮರದೊಮ್ಮೆ ನೆನೆದರಂ ಸುರಧೇನುವಿನ ತೆರದಿ ।
ಕರದೀವುದೆಲ್ಲವುಂ ಕಾರ್ಯಗಳಗೋಸುಗಂ ।
ಪರಮಭಕ್ತಿಯೊಳು ನಿಯಮದಿ ಜಪಿಸಲಿಷ್ಟಾರ್ಥಗಳನೊದಗಿ ಪಾಲಿಸುವದು ॥ (26)

ಸುಲಭಮಾರ್ಗಮೆನುತ್ತ ನಿಯಮಂಗಳಿಲ್ಲೆನುತ ।
ಫಲಗಳೀವುದೆನುತ ನಾಮಕೀರ್ತನೆಯನುಂ ।
ಒಲವಿಂದಮುಪದೇಶಗೈದುದಾಮುನಿ ನಾಮವೊಂದೊಂದು ಕಾರ್ಯದೊಳಗೆ ॥
ನಿಲಲಾದವಖಿಳೇಷ್ಟದಾಯಿಯಲ್ಲದೆ ಪೋದ ।
ವಲಘುನಿಯಮತಗೂಡವಾಯಾಸಮೆಂದು ಮಳ ।
ಚಲಿಸುತಿದೆ ಸಂತತಂ ತಾಪತ್ರಯೋಪಶಮ ಪಾತ್ರಮಂ ಸೂಚಿಸನಘಾ ॥ (27)

ನೇಮನಿತ್ಯಗಳ ಪೊದ್ದರೆ ಪ್ರಯೋಗಂಗಳಿರು ।
ಭ್ರಾಮಕಂ ಸಿಲ್ಕಿರವದಾವ ಪರಿಯಿಂದಾಗೆ ।
ನಾಮಮಾತ್ರವನು ನಾಲಿಗೆಗೊನೆಯೊಳುಚ್ಚಂಸಲಖಿಳ ಪಾಪಗಳು ಪೋಗಿ ॥
ಶ್ರೀಮತ್ಪದವನಾರ್ವ ಸಾರ್ವಕಾಲದಿ ಸುಖಾ ।
ರಾಮನಾಗಿರ್ಪ ನಾಮವ ಪೇಳ್ವುದೆನಲಾಗ ।
ಸೋಮಶೇಖರ ಸಕಲನಿಗಮಾರ್ಥಗಳಲರಸಿ ತೆಗವಂಗನೆ ನೊಳುಸುರ್ದನು ॥ (28)

ಜ್ಞಾನದಿಂದಾಗಲಜ್ಞಾನದಿಂದಾಗೆಮನ ।
ದಾನುಭವದಿಂದಾಗೆ ಮರವೆಯಿಂದಾದಡಂ ।
ನ್ಯೂನವಾದಡು ಕ್ರಮಾಕ್ರಮಗಳಾದರು ನೆನೆವ ಮಾತ್ರದಿ ಭುಕ್ತಿಮುಕ್ತಿ ॥
ತಾನೆ ತನ್ನಿಂದಪ್ಪುದದರಿಂದ ಸಾಸಿರದ ।
ನೂನನಾಮಂಗಳ ಸಮಾನವೆಂದೆನುತ ಸು ।
ಧ್ಯಾನದಿಂ ನಿಜಸತಿಗೆ ಶೂಲಿಯುಪದೇಶಿಸಿದನಕ್ಷರ ದ್ವಯವ ಮುದದೆ ॥ (29)

ಜಾತಿವರ್ಣಾಶ್ರಮಾಚಾರ ವಿರಹಿತಹೀನ ।
ಜಾತಿಸಂಪರ್ಕ ಮಿತ್ರಘ್ನತೆಯು ಮೊದಲಾದ ।
ಪಾತಕಸಮೂಹಗಳು ರಾಮನಾಮಸ್ಮರಣೆಯಿಂದ ಪರಿಹರಮಪ್ಪವು ॥
ಭೂತಳದೊಳುಳ್ಳ ಪುಣ್ಯಕ್ಷೇತ್ರದಟಣೆಯಿಂ ।
ನೀತವಾಗದಲೆ ಪ್ರಾಯಶ್ಚಿತ್ತಮಿಲ್ಲವತಿ ।
ಸೂತಕಗಳೆನಿತಾದದಂ ನೆನೆದ ಮಾತ್ರದಿ ಪೋಗಿ ಶುಚಿಯಪ್ಪ ತನಯಾ ॥ (30)

ದಿನದಿನದ ಪಾಪವಂದಂಜಿಗುಂ ನಿಶಿಯೊಳಗೆ।
ಜನಿಸಿದುದು ರಾತ್ರಿಯೊಳ್ಪ್ರೇಪ್ರದಾರಾತುವರ್ಷ।
ತನುಮನೋವಾಚ್ಞಾತ ಕರ್ಮಗಳ ಜನ್ಮಾಂತರೀಯ ಪಾತಕ ಸಮುದಯಂ
ನೆನೆದ ಮಾತ್ರದಿ ಪೋಗಿ ಯೋಗಿಜನರಾನಂದ।
ವನು ಪಡೆದು ಪ್ರಾರಬ್ಧವಿಪ್ಪನ್ನ ಸುಖಮಿರ್ದು।
ಕೊನೆಗೆ ಸಾಯುಜ್ಯಸಾಮ್ರಾಜ್ಯಮಂ ಸಾರಿಪುದು ಶ್ರೀರಾಮನಾಮವನಘಾ ॥ (31)

ಕ್ರಮದಿ ಜಪಿಸಿದರಖಿಲ ನಾಮಗಳು ಫಲವಿತ್ತು।
ವಿಮಲರೆಂದೆನಿಪರಲ್ಲದಡಫವ ತೋರಿಸುವ।
ವಮೃತದಂದದಿ ಕ್ರಮಂ ಯುತ್ಕ್ರಮಗಳಾದಡಂ ಸೇವಿಪರಿಗಾನಂದವಾಂ ॥
ಶ್ರಮನಿವಾರಣೆಗೈದು ನಿರ್ಮಲತೆಯುಂ ಕೊಟ್ಟು।
ಸುಮನಸೋಪಮ ಗೈವುದದರಿಂದ ಹರನು ನಿಜ।
ಮಮತೆಯಿಂ ಸಾಹಸ್ರ ನಾಮತುಲ್ಯಮೆನುತ್ತ ಮಡದಿಗುಸುರಿದ ಬಾಲಕ ॥ (32)

ಕೃತಯುಗದಿ ತಪದಿಂದ ತ್ರೇತಾಯುಗದಿ ಯಾಗ।
ತತಿಯಿಂದ ದ್ವಾಪರದಿ ಪೂಜಾವಿಧಾನದಪ।
ಚಿತಿಯಿಂದ ಕಲಿಯುಗದಿ ನಾಮಸ್ಮರಣೆಯಿಂದ ಪಾತಕಂ ಪರಿದಪುದಲೇ ॥
ಪತಿತ ಪಾವನನಾಗಿ ಪಾತಕಂಗಳು ಪೋಗಿ।
ಸತಿಸುತರ್ವೆರಸಿ ಸಂತತ ಸುಖವನನುಭವಿಸಿ।
ಮಿತಿಯಿಲ್ಲದಾನಂದಪದವ ಸಾರುವರೆಂದು ತಿಳದು ಕೃತಿಯಾಹುದು ತನಯ ॥ (33)

ಕಲಿತಕಲ್ಮಷದೋಷ ಲೇಶವಾದರು ಕರ್ಮ।
ಚಲಸೆಯರುಪಾತಕಗಳಾದರುಂ ಗೋವಿಪ್ರ।
ಪೊಲೆಯು ವಾಕ್ಕಾಯಮಾನಸಕಿಲ್ಬಿಷಂಗಳುಂ ನಾಮಕೀರ್ತನೆಯುಮಾಳ್ಪ ॥
ಲಲಿತಹೃದಯರಿಗಿಲ್ಲಮಿದು ಸತ್ಯಮಮರಾವ।
ನೆಲದಲಿರಲದುವೆ ವೈಕುಂಠ ಪ್ರಿಯದಿಂದಾರ।
ನೊಲಿದಿಟ್ಟಸಿದರವರು ಕೃತಕೃತ್ಯರಪ್ಪರಿದು ನನ್ನಿಯೆಂದರಿವುದಣುಗ ॥ (34)

ನಾಮಸಂಕೀರ್ತನೆಯ ಪಾಸಟಿಯನಿಡೆ ಸಲ್ಲ।
ತಾಮಸದಮತಿಯಲ್ಲ ಸಕಲ ಪುರುಷಾರ್ಥಗಳ।
ಸ್ತೋಮಮೆಂದರಿದಖಿಳ ಕರ್ಮಕೋಟಿಲೆಯುಳದಖಂಡಪದ ಸಾಮ್ರಾಜ್ಯದ ॥
ನಾಮರಸ್ಯದ ಸುಖವನನುಭವಿಸು ಕಷ್ಟತರ।
ನೇಮಂಗಳಿಂದ ನಿಷ್ಫಲಮಲ್ಲದೇನಿಲ್ಲ।
ಸೌಮಿತ್ರಿ ನಾಮಜಾಪಕನೆ ಸಾಕ್ಷಾದ್ವಿಷ್ಣುವಲ್ಲದವ ಮನುಜನಲ್ಲ ॥ (35)

ಪಳೆವಾತುಗಳ ಜೀವನಾರ್ಥವೆಂಬುದ ನೋಡಿ।
ತಿಳದು ನಾಮಾಮೃತವ ಸವಿಸವಿದು ಸಂತಸದ।
ಲಿಳೆಯ ಜೀವರ ಗಮನಕಾಲದೊಳು ಕರ್ಣೋಪದೇಶ ಗೈದಾನಂದದಿ ॥
ಬೆಳಗುವಂದದೆ ಮಾಳ್ಪ ಫಾಲಾಕ್ಷ ಕಾಶಿಕಾ ॥
ನಿಳಯದೊಳಗನವರತ ನಿಜಸತಿಗೆ ಬೋಧಿಸಿದ।
ನೊಲವಿಂದ ಮುಕ್ತಿಸಾಧನಮೆಂದು ಸರ್ವಜ್ಞನಿಗಮಾರ್ಥವೇತ್ತ್ರಸನಘಾ ॥ (36)

ದೇವರಾಜ್ಞಾಪಿಸಿದ ಮೋಕ್ಷೋಪದೇಶದಿಂ ।
ಪಾವನೀಕೃತ ಚಿತ್ತನಾದೆ ಜಗದಧಿನಾಥ ।
ಸಾವಪುಟ್ಟುವ ಕೋಟಲೆಗಳೀಯದೀ ರಾಮಶುಭಕರಸ್ಮರಣೆಗಳನು ॥
ಆವನಾದರು ಮನಕೆ ಬಂದಂತೆ ಸ್ಮರಿಸುವದೊ ।
ಭಾವನೆಗೆ ಸಂಪ್ರದಾಯಗಳುಂಟೊ ಕೃಪೆಯಿಂದ ।
ಬಾವಜ್ಞ ಪಾಲಿಪುದೆನಲ್ಕೆ ರಘುನಾಯಕಂ ಪೇಳ್ದ ವಿಸ್ತರದಿಂದಲೇ ॥ (37)

ತರಳ ಕೇಳ್ ರಾಮನೆಂಬೆರಡಕ್ಕರವ ಮಹಾ ।
ಗುರುವಿನಿಂದುಪದೇಶವಡೆದು ಹೃತ್ಸಿದ್ಧಿಯುಂ ।
ಬೆರದೆಂಟನೊಂದಾಗಿ ಗಣನೆ ಗೈದನವರತ ಭಕ್ತಿಭಾವನೆಗಳಿಂದಾ ॥
ನಿರತ ಜಪಿಸುತ ಲಕ್ಷವಾಗೆ ಸಂತಸವೆತ್ತು ।
ಧರಣಿ ಸುರಸಂತರ್ಪಣಂ ಗೈದು ತತ್ಫಲವ ।
ಪರಮೇಶನಡಿಗಳ್ಗರ್ಪಿಸುತ ಮಗುಳಿಂದಿನಂತೆ ಜಪಿಸುವದು ತನಯ । (38)

ಈ ಪರಿಯಲೊಂದು ಕೋಟಿ ಸ್ಮರಣೆ ಗೈದವಗೆ ।
ಗೋಪತಿಯ ಸದನಮೆರಡಾಗೆ ಕೈಲಾಸವು ।
ಶ್ರೀಪತಿಯ ಮಂದಿರಂ ಮೂರಾಗಲದರಿಂದ ಪೆರ್ಚೆ ಬರೆ ನಾಮಂಗಳು ॥
ಆ ಪರಮಪುರುಷ ತಾನೇ ಚಿದಾನಂದೈಕ ।
ರೂಪನೆಂದೆನಿಪನಿದು ಸತ್ಯ ಶ್ರುತಿಮತವೆನುತ ।
ನೀ ಪದುಳದಿಂದರಿದು ಜಪಿಸಿ ಸುಖಮಂ ಪಡೆವು ಕಲಿಕಲ್ಮಷವ ಕಡಿವುದೂ ॥ (39)

ಒಂದೊಂದ ನೆಣಿಸಿ ಸಾಸಿರ ಸಂಖೆಗಳಮಾಡಿ ।
ಮೊಂದೊಂದು ಲಕ್ಕಗಳನೆಣಿಸಿ ಕೋಟಿಯಾದಾಗ ।
ಲೊಂದು ಸಮಯದೊಳೀಶ್ವರಾರ್ಪಣಂ ಗೈವುದಿದೊಂದು ಮತಮೀಪರಿಯಲಿ ॥
ಛಂದಛಂದದ ರಿಷಿಗಳಾಚರಣೆಯಿರ್ಪವೆನಿ ।
ತೆಂದು ಪೇಳಲ್ಕಕ್ಕು ಸಾಧ್ಯಮಲ್ಲವು ಮನಕೆ ।
ಬಂದಂತೆ ನಾಮಗಳ ಸ್ಮರಿಸಿ ಜೀವನ್ಮುಕ್ತರಹುದೊಂದು ಮತ ನರೇಶ ॥ (40)

ಮನದ ಬಯಕೆಯೊಳು ಲೋಕಾಂತರವ ನಿಚ್ಚೈಸುವ ।
ರನುಗೈದಂಗೆ ನಾಮಗಳನೊಂದೆರಡನುತ ।
ಲೆಣಿಸವೇಳ್ಕುಮು ಜೀವಮುಳ್ಳನ್ನ ಮಾಳ್ಪೆನೆಂದೆನುತ ಸಂಕಲ್ಪಿಸಿದಗೆ ॥
ಎಣಿಕೆ ಸಣಿಕೆಗಳು ನೇಮಂಗಳೆಂಬುವುದಿಲ್ಲ ।
ವಿನಿರಸ ಸ್ವಾದನದೊಳಾ ನಾಮಗಳ ಬಡದೆ ।
ಯನುದಿನ ಸ್ವಾದಿಪುದೆ ನಿಯಮಮುದಕಾನಂದಸಾಮ್ರಾಜ್ಯಫಲವು ತನಯ ॥ (41)

ಎನಗೆ ಜೀವನ ನಾಮಕೀರ್ತನಂ ಪಿಡಿದೊಮ್ಮೆ ।
ನೆನೆದರೆಯು ಪೊರೆವೆ ಮಗುಳೊಮ್ಮೆ ಸ್ಮರಿಸಿದಡವಗೆ ।
ರುಣಿಯೆನಿಪೆ ನನವರತವೆಡೆಬಿಡದೆ ಜಪಿಸುತಿಹ ಕೃತಕೃತ್ಯರಾದ ಜನರ ॥
ಮನೆಯನರಸುತ ಬರ್ಪೆ ಕರುವನೆಳೆಗಂದಿ ತ ।
ನ್ನನುವಿಂದ ಸ್ಮರಿಸಿ ಬರ್ಪಂತಾತ ನಿರ್ದಲ್ಲಿ ।
ಗನುದಿನಂ ಬರುತಿರ್ಪೆನೀ ನಾಮಕೀರ್ತನಾಪರರಿಗಾಂ ವಶನಪ್ಪೆನೂ ॥ (42)

ಪಾಡುವರ ಸಿರಿಯು ಕಾರ್ಯಸುವೆನು ಮುಗುಳೆ ಕೊಂ ।
ಡಾಡುವರ ಸಂತಸವಿ ನೋಡಿ ಹಿಗ್ಗುವೆ ಶ್ರುತಿಯು ।
ಮಾಡುವರಿಗಾನಂದಗೊಳುವೆ ಮನದೊಲವಿಂದ ಭಜಿಸುವರ ಭಜಿಪೆನೊಲಿದು ॥
ಮೂಡುವಾನಂದದಿಂ ನಾಮಗಳ ಸ್ಮರಿಸಿ ಕುಣಿ ।
ದಾಡಿ ತನುಮನಗಳನ್ನಲ್ಲಿಟ್ಟು ಲಜ್ಜೆಗಳ ।
ನೋಡಿಸಿದ ಪುರುಷರಾನೆನಿಸಿರ್ಪನಿದಕಿನ್ನು ತಪ್ಪಿ ಧಿಟವೆಂದರಿವುದು ॥ (43)

ಪಲವು ಮಾತೇನಿನ್ನು ನಾಮಕೀರ್ತನೆಗಧಿಕ ।
ಲಲಿತ ಪಾವನವಸ್ತುವಿನಿತಿಲ್ಲ ನೀ ನಿದಂ ।
ನೊಲವಿಂದ ತಿಳಿದು ಜೀವನ್ಮುಕ್ತನಾಗೆಂದು ನೇಮಿಸಲ್ ಸೌಮಿತ್ರಿಯು ॥
ಕಲಿತ ಹರ್ಷದೊಳೆರಗಿ ದೇವತೆಗಳಂತಪ್ಪ ।
ಸುಲಭ ಮಾರ್ಗವನುಳಿದು ಸುಗುಣರೆಲ್ಲರು ಕರ್ಮ ।
ಕಲಿತಪಸ್ಸುಗಳೀತಕೆಸಗುವರೊ ಮಯುದಿಂದಮುಸುರವೇಳ್ಕೆಂದೆರಗಿದಂ ॥ (44)

ಅನುಜನಾಡಿದ ನುಡಿಗೆ ಸಂತಸದಿ ರಘುನಾಥ ।
ವನದೊಲವಿಲಿಂತೆಂದ ಪಿಂತೊರ್ವ ವಿಪ್ರಕುಲ ।
ಮನುಜಾಧಮಂ ಬಹಳ ಪಾತಕಂಗಳಮಾಡಿ ಪ್ರಾಣೋತ್ಕ್ರಮಣಸಮಯದೀ ॥
ಮನಬಂದ ತೆರದಲಳುತಳುತ ಬಿದ್ದಿರ್ದಿರವ ।
ಗನುವಿಂದಲೊಮ್ಮೆ ರಾಮಾಯೆಂಬ ನುಡಿಯು ಸಂ ।
ಜನಿತಮಾದುದು ಪೋದವಖಿಲ ಪಾಪಂಗಳುಂ ಮುಕ್ತನಾದಂ ವಿಪ್ರನು ॥ (45)

ಪಿಡಿಯಲೆಳಸುವರೈದಿ ಬಂದ ಜವನವರೆಲ್ಲ ।
ಕಡೆಗೋಡಿ ದೂರೆ ಸಮವರ್ತಿಯತಿ ಕೋಪದಿಂ ।
ದೊಡನೆ ಸರಸಿಜಪೀಠನಂ ಸಾರಿ ದೂರಿದಂ ವಾಕ್ಪತಿಯು ಶಿವನ ಪೊರೆಗೆ ॥
ನಡೆದರೀರ್ವರು ಕೂಡಿ ವೈಕುಂಠಕೈತಂದು ।
ಕಡಲಳಿಯನೊಳು ಪೇಳಲಾತನಿಂತೆಂದ ಕೇಳ್ ।
ಮೃಡ ಸರಸಿಜಾನನ ಪ್ರಮುಖಮುನಿಜನರೆಲ್ಲ ಮನ್ಮತವ ಲೋಕಹಿತವ ॥ (46)

ಪತಿತನಂ ಸೀಕ್ಷಿಸಲ್ವೇಳ್ಕು ಪಾಪದಲದೋ ।
ಗತಿ ಸಮನಿಸಲ್ವೇಳ್ಕುಮೆಂಬುದಿದು ಶ್ರುತಿಮತಂ ।
ಸತತ ಲೋಕಾನುಮತಮೀ ಪರಿಯು ನಿಯಮದಿಂದಪ್ಪುದು ಸನಾತನವಲೇ ॥
ಮತಿಹೀನನೊಂಕುಪಾಮರಜೀವಿಯಾದಡಂ ।
ಹಿತಮಹಿತಲೋಭಹೇಳನಮಾವ ವಿಧಮಾಗೆ ।
ಕ್ಷಿತಿಯೊಳ್ ಪ್ರಯಾಣ ಸಮಯದಲೆನ್ನ ನೆನೆವಡವ ಮುಕ್ತನೆನ್ನಭಿಮತವಿದು॥ (47)

ಪಾತಕೆಗೆ ಪಾತಾಳ ಸುಕೃತಿಗಂ ಸಗ್ಗಮೆಂ ।
ದೀತೆರದಿ ವೇದ ಪೇಳ್ದಪವು ಭಗವನ್ನಾಮ ।
ವ್ರಾತಜಾಪಕರಿಂಗೆ ಸಾಯುಜ್ಯ ಪದಮೆಂದು ನಿಗಮಾಗಮಗಳುಸುರ್ವವು ॥
ಯಾತಕರಿಯದೆ ದುರಾಗ್ರಹದಿಂದ ಶ್ರಮಗೊಳುವ ।
ದೋತು ತಿಳಿದೈದೆನುತ ಸರಸಿಜಾಕ್ಷಂ ಪೇಳ್ದ ।
ಮಾತನಾಲಿಸುತಬ್ಜಯೋಗಿ ಕರಗಳ ಮುಗಿದು ಬಿನ್ನಪಂ ಗೈದನೊಲಿದು ॥ (48)

ದುರುಳರಲ್ಪಜ್ಞರಜ್ಞಾನಿಗಳು ಬಗೆಬಗೆಯ ।
ಉರುತರದ ಪಾತಕಂಗಳ ಗೈದು ಗಮಿಸುವವ ।
ಸರದೆ ಸಕೃದುಚ್ಚಾರಣೆಯನೆಸಗೆ ಸಾಯುಜ್ಯಮಪ್ಪುದೆಂದೆನುತ ದಯದೀ ॥
ಕರುಣಿಸಿದುದಾಯ್ತು ಶಾರೀರಮುಳ್ಳವರ ಗೈ ।
ದುರುಪಾತಕಂಗಳಂ ಕಡೆಗೊಮ್ಮೆ ನಾಮಮಂ ।
ಸ್ಮರಿಸಿ ಮುಕ್ತಿಯನಾಳಿ ಶ್ರುತಿಗಳುಸುರುವ ಧರ್ಮತತಿಗೆ ಗತಿಯೇನು ಜೀಯಾ ॥

ಜಾತಿನೀತಿಗಳು ಗುರುಲಘು ಪಾಪಪುಣ್ಯಗಳು । (49)
ಬೀತು ಸ್ವೇಚ್ಛಾಚಾರ ನಿರತರಪ್ಪರು ಮನುಜ ।
ರೇತರೀ ಶ್ರುತಿಜಾಲ ಧರ್ಮಶಾಸ್ತ್ರಗಳೆನುತ ಕಮಲಭವ ಬಿನ್ನವಿಸಲು ॥
ನೀತಿಯಹುದೆಂದರಿತು ಸರ್ವೋಪಕಾರಮೆನೆ ।
ಲಾತನೊಡನಿಂತೆಂದು ಬೆಸಸಿದಂ ದೇವತಾ ।
ತಾತ ಲಾಲಿಸು ತತ್ವಮಂ ಪೇಳ್ವೆ ಮನದೊಳಹ ದುರ್ಮಾನಮಂ ಸೋಲಿಸು ॥ (50)

ಎನಿತು ಪಾತಕಿಯಾದರೆನ್ನ ನಾಮಸ್ಮರಣೆ ।
ಕೊನೆಗೊದಗೆ ಮುಕ್ತನಹನಿದು ತಪ್ಪಲರಿದು ಕೇಳ್ ।
ವನಧಿಮೇಖಲೆಯೊಳೆನಿತೆನಿತು ವಿಧದಿಂ ಪೇಳೆ ನಾಮಕೀರ್ತನೆಯ ಪಿಡಿಯೇ ॥
ಮನದಿ ನಂಬುಗೆ ಪುಟ್ಟಲಾಗದಾರಾವಡಂ ।
ನೆನೆದ ಮಾತ್ರದಿ ಮುಕ್ತಿ ಸಮನಿಸಲ್ ಪೋಗೆನುತ ।
ವನಜಾಕ್ಷ ವರವೀಯಲೆಲ್ಲರುಂ ಸಂತಸದಲೈತಂದರೊಮ್ಮನದೊಳು ॥ (51)

ಅದರಿಂದಲೆನಿತೆನಿತು ಬೋಧಿಸಲು ಜಾಳೆನುತ ।
ಮೊದಂ ನಂಬದೆ ಕರ್ಮಗಳ ಮಾಳ್ಪರನಿಮಿತ್ತ ।
ತುದಿಗೊಳುವರೀ ಮರ್ಮ ವಾರಿಗುಂ ಗೋಚರಿಸದಂತರುಂ ಮನ ನಂಬದು ॥
ಸದಯ ಗುರುಮುಖದಿಂದ ಸಾತ್ವಿಕಜ್ಞಾನ ಸಾ ।
ಸದಮೊದಗಿ ನಾಮಕೀರ್ತನೆಗೆ ಮನವೆಳಸುವಡೆ ।
ಪದುಮಜಾಸನಮುಖ್ಯ ದೇವತಾನತನಪ್ಪನಿದು ನಿಜ್ಜ ಕೇಳು ತನಯ ॥ (52)

ನುಡಿವಲ್ಲಿ ನಡೆವಲ್ಲಿ ಕುಳಿತಲ್ಲಿ ನಿಂತಲ್ಲಿ ।
ಯೆಡೆಯಾಡುವಲ್ಲಿ ನಗೆಯಿಂದ ಸತಿಪುತ್ರರಲಿ ।
ತೊಡಂ ಸಲ್ಲಾಪ ಗೈವಲ್ಲಿ ಮತ್ತಾಕಳಿಕೆ ತೂಕಡಿಸುವವಸರದೊಳು ॥
ಸಡಗರದ ಸುಖಗಳನುಭವಿಪಲ್ಲಿ ಪಗೆಯ ಕೈ ।
ಯಡೆಯಲ್ಲಿ ಸಿಲ್ಕಿ ತೃಷೆಯಿಂ ಪಸಿದು ದಣಿದಾಗ ।
ಲೆಡೆಬಿಡದೆ ರಾಮನೆಂಬೆರಡಕ್ಕರವ ನೆನೆದು ಸಂತಸಂಗೊಳು ಬಾಲಕ ॥ (53)

ತುಸು ಮಾತ್ರ ಲೋಪ ಮಾಡದೆ ವಿಕಾರವನಿತ್ತು ।
ಸಸಿನೆ ವಲಿದಡೆ ಸಗ್ಗಮಾತ್ರ ಫಲಮಂ ಕೊಡುವ ।
ಪೊಸತರದ ಮಂತ್ರಜಾಲವ ಜಪಿಸಲೇಂ ಫಲ ನಿಷ್ಫಲಾರಂಭಮಲ್ತೆ ॥
ರಸೆಯಮಂದಾರಮೆನಲೊಂದೆ ನಾಮಂ ಫಲದ ।
ಹಸರಂಗಳೊಸಗಿ ಪೋಷಣೆ ಗೈವುತಿಹುದೆನ್ನ ।
ಪೆಸರಕ್ಷರದ್ವಯವ ನೆನೆನೆನೆದು ಸುಖಿಯಾಗಿ ಬಾಳ್ವುದತಿ ಲೇಸು ತನಯ ॥ (54)

ನಿಗಮಾಗಮಂಗಳಭ್ಯಾಸ ಶಾಸ್ತ್ರಾದಿಗಳ ।
ಬೊಗುಮಿಗೆಯ ಭಾವನಂ ಯೋಗಯಾಗಾವ್ರತಂ ।
ಮಿಗೆತೀರ್ಥಯಾತ್ರಾಟನಾಭ್ರಮೆಗಳಂ ಬಿಟ್ಟು ಭಕ್ತಿಭಾವನೆಯನಿಟ್ಟು ॥
ಸೊಗಸಾಗಿ ರಾಮನಾಮಸ್ಮರಣೆಗೈದು ನೀ ।
ಜಗತಿಯೊಳಗಮಿತ ಭೋಗಂಗಳನುಭವ ಗೈದು ।
ಜಗದೀಶನಂಘ್ರಿಯಂ ಸಾರಿ ಕೈವಲ್ಯ ಸಾಮ್ರಾಜ್ಯಮಾಳ್ದಪುದು ತನಯ ॥ (55)

ಈ ಪರಿಯನಾಯಾಸದಿಂದ ನಾಮಂಗಳಂ ।
ಗೋಪಿತದಿ ನೆನೆನೆನೆದು ಮುಕ್ತರಪ್ಪುದು ಪೂರ್ವ ॥
ತಾಪಸವಸಿಷ್ಟದತ್ತಾತ್ರೇಯಸನಕಾದಿಯೋಗಿಗಳ ಮತ್ತ ಬಾಲಕ ॥
ಶ್ರೀಪತಿಯ ನಾಮಾಂಕಿತದಿ ಗುಣಗಣಂಗಳ ।
ನ್ನಾ ಪರಮಪುರುಷನ ಚರಿತ್ರಯುತ ಪದಪದ್ಯ ।
ರೂಪದಾಲಾಪಮದು ನಾಮಕೀರ್ತನೆಯೆನುತ ಪೇಳ್ದಪರು ಕೇಳ್ ಬಾಲಕ ॥ (56)

ಜಗತೀತಳವ ಪೊರೆಯಲಜಭವಾದಿಗಳೆಲ್ಲ ।
ಬಗೆಬಗೆಯ ಪ್ರಾರ್ಥನಂ ಗೈಯಲನುಮತ್ರಿಯಿಂದ ।
ಯುಗಯುಗದೊಳವತರಿಸಿ ಗೋಬ್ರಾಹ್ಮಣರ ಸಲಹಿ ದುಷ್ಟರಂ ಶಿಕ್ಷಿಸಿದುದಾ ॥
ಸೊಗಸಾಗಿ ಪದಪದ್ಯರೂಪನಭ್ಯಾಸಗೈ ।
ದೊಗುಮಿಗೆಯ ರಾಗತಾಳಾನುಮತಿಯಿಂ ಪಾಡಿ ।
ಸೊಗಸಿಂದ ಪರವಶಾನಂದರಾಗಿರ್ಪುದದು ಸಂತೋಷಮೆಮಗೆ ತನಯ ॥ (57)

ತಾನರಾಯಿಸ್ವರಂ ಗೀತ ಪ್ರಬಂಧಸಂ ।
ದಾನಯತಿಲಯಮೆತ್ತು ಶ್ರುತಿಮನೋಹರವಾಗಿ ।
ಗಾನವಂ ಮಾಡಿದರೆ ಗರುವಿಕೆಗೆ ಮೆಚ್ಚುತಾಂ ಕೊಡುವೆನಿಷ್ಟಾರ್ಥಂಗಳಾ ॥
ಗಾನಮೆನಗತಿಪ್ರೀತಿಯಾನಂದಕರ ನಾಮ ।
ಗಾನಪ್ರಿಯನೆನುತಮೊರೆಪಾಗ ಮಂಗಳನೆಲ್ಲ ।
ನೀನರಿತು ಪಾಡಿ ಸಂತಸಂ ಗೊಳಿಸಿ ಕೃತಕೃತ್ಯನಾಗಿ ಬಾಳುವದು ತನಯ ॥ (58)

ಸೂರನುದಯಿಪ ಮುನ್ನ ಕರಪಾದಗಳ ತೊಳದು ।
ಚಾರು ತಂಬೂರಪೀಣಾದಿಗಳ ಶ್ರುತಿಗೈದು ।
ಸಾರಕೀರ್ತನೆಗಳಂ ಮಾಡಿ ತತ್ಸುಖವನೆನಗರ್ಪಿಸಿ ಕೃತಾರ್ಥನಹುದು ॥
ಧೀರ ಕೇಳೀ ಪರಿಯ ರಾತ್ರಿಯೊಳ್ ಪಾಡುವದು ।
ನಾರದಂ ಗಾಂಧರ್ವತುಂಬುರಾದ್ಯಖಿಲ ಸುಕು ।
ಮಾರತರ ಭಾಗವತಮತ್ತ ಸುಲಭದಿಂ ಮೋಕ್ಷಸಾಮ್ರಾಜ್ಯಮಹುದು ತನಯ ॥ (59)

ವೇದಾರ್ಥಭರಿತ ರಾಮಾಯಣವ ಭಕ್ತಿಯಿಂ ।
ಸಾದರದಿ ಪೂಜೆ ಗೈದೋದಿ ಮಗುಳರ್ಚಿಸುತ ।
ಸಾದಿಮಧ್ಯಾಂತವಿರಹಿತಚರಿತ್ರಯ ತಿಳದು ನಿರ್ವಾಣವಂ ಪಡೆವುದು ॥
ಬೋಧಾಯನಂ ಕಪಿಲದುರ್ವಾಸಕಣ್ವ ಮೊದ ।
ಲಾದ ಮೌನಿಗಳ್ ಮತಮೆಂದರಿತು ಮೂವಿಧದ ।
ಹಾದಿಯೊಳಗಾವದೊಪ್ಪಿದರದಂ ಭಜಿಸೆ ಕೃತಿಯಪ್ಪರಿದು ತಪ್ಪದನಘಾ ॥ (60)

ಸೊಗಯಿಸಿತು ಮತಿ ನಿನಗೆ ಮಿಗೆ ತಪಃಫಲವೊದಗೆ ।
ಜಗತಿಯಹಾದುದು ಧರೆಗೆ ಸುಲಭದಿಂ ಸೌಖ್ಯ ಮಿಗೆ ।
ಜಗದುಪಾದೇಯಮಂ ಮಾಡಿ ನಿರ್ಮಾಯಮಂ ನೀಂ ಸುಖವ ಪಡೆದೆಯೆನುತಾ ॥
ಸುಗುಣಖನಿ ರಾಮ ಪುರದರಸನನುಜಾತಂಗೆ ।
ನಿಗಮಾರ್ಥಗೋಪ್ಯಸಾರವನೊರೆದು ಕಲ್ಮಷವ ।
ತೆಗೆದಖಂಡಾನಂದಗೊಳಿಸಿದಂ ವಾತ್ಸಲ್ಯದಿಂದ ಕೇಳದ್ರಿಜಾತೇ ॥ (61)

ಸಂಧಿ 12 ಕ್ಕಂ ಪದ 503 ॥

ಹದಿಮೂರನೆಯ ಸಂಧಿ.

ಸೂಚನೆ ॥ ಮಾರುತಾತ್ಮಜನ ಸವಿನುಡಿಯಿಂದ ಭಾಸ್ಕರ ಕು ।
ಮಾರನೆಚ್ಚತ್ತು ಜಗತೀತಳದಳುಳ್ಳ ಕಪಿ ।
ವೀರರಂ ಕರೆಯೆ ಚರರಂ ಕಳುಪಿ ಸಂತಸವ ತಾಳ್ದ ಶರದಾಗಮದೊಳು ॥

ಪದ ॥ ಇನಿತು ಸಂಪದಮುಖವ ತೋರ್ದ ಮಾತುರದಿ ಧಿ ।
ಕ್ಕನುವಿನಿಂದಾಕ್ರಮಿಸಿ ಲೋಕಬಾಂಧವನಿರವಿ ।
ಗನುಮಾನಮಂ ತಂದು ರಾಜಮಾರ್ಗವನುಳಿದು ತತ್ಸಂತತಿಯನು ಪಳಿದು ।
ಮನಬಂದ ತೆರದಿ ಸಂಚರಿಸಿ ಗರ್ಜಿಸಿ ಕಿಡಿಗ ।
ಳನು ಕರವ ನಿಷ್ಠುರಜಡಾತ್ಮಜೀವನ ಪೋಗಿ ।
ಘನತೆಯುಳಿದತಿ ದೈನ್ಯಕೃಪಣನಂದದಿ ಮೇಘವೆಸವವದ್ರೀಂದ್ರಜಾತೆ ॥ (1)
ಸಂಪತ್ಸಮೃದ್ಧಿಯಂ ಸರ್ವತೋಮುಖವಾಗಿ ।
ಸಂಪಾದನಂಗೈದ ಖರ್ವ ಕಾಮೋನ್ಮೋದ ।
ದಿಂಪಿನಿಂ ಚಪಲಾಂಗನಾಸಕ್ತಿ ವೆಗ್ಗಳಿಸಿ ಸ್ತನಿತಮನಿಗಳತೋರಿ ॥
ಲಂಪಟದ ಭೋಗವ ಶರದ್ಗುರುವಿನುಪದೇಶ ।
ಸಂಪನ್ನತೆಯೊಳುಳಿದು ನಿರ್ಮಲಾಂಗತೆವೆತ್ತು ।
ಸಂಪಿನಿಂದಿಹ ಮೌನಮಾಂತಮೆನಲಲ್ಲಲ್ಲಿ ನಿರ್ಮಲಾಭ್ರಗಳೆಸೆದವೂ ॥ (2)
ಪತ್ರಿಗೆಸಗಿದ ಪ್ರಕೃತಿಯ ಮರದಗಸ್ತ್ಯೋದಯವ ।
ನತಿಶಯಮೆನುತ್ತರಿತು ಸಹಜಜಡಬಾವಸಂ ।
ಗತಿಯುಳಿದು ನಿರ್ಮಲತೆವೆತ್ತು ರಾಜಿಪ ನದಿಗಳಮಲಗುಣಗಣವ ಕೇಳ ॥
ಮತಿಯುತರ ಸಂಗತಿಯ ಮಾಡಿ ಮಾನಸವೃತ್ತಿ ।
ಯತಿಗಳದು ತನುವಿನಂದದಿ ಮನವನನುಕರಿಸೆ ।
ಕ್ಷಿತಿಗೆ ನಡತಂದವೊ ಮರಾಳಸಂಕುಲಗಳೆನಲೆಸೆದವಾವಾವೆಡೆಯೊಳು ॥ (3)
ಮಲಿನಮತಿ ನಿಷ್ಠೂರಿ ಚಪಲ ಕುಲಗೆಡುಕ ತ ।
ನ್ನೊಲುಮೆಯಿಂದಿರ್ದರೆಂದೊರೆವ ನಿಯತರವ ಭೂ ।
ತಳವನಂಟದಲೊಂದು ಕಂದಾಯಬಾಳ್ಕೆಯಂ ಮಾಳ್ಪ ಘನನಾಶ್ರಿತರಿಗೆ ॥
ಗೆಲವದೇನಹುದು ಗರಿಮುರಿಪೋಗಿ ಕಂಠದೊಳು ।
ಸಿಲುಕಿ ಧನಿಪೊರಮಡದೆ ಪೊದೆಪೊದೆಗಳಂ ಪೊಗುವ ।
ವಳೆ ನೀಲಕಂಠತತಿ ಜಗದಿ ನೀಚಾಶ್ರಯರಿಗಹವೆ ಸುಖಸಂತತಿಗಳೂ ॥ (4)

ಘನತಮತ್ಸ್ಯನ್ನದಿಂ ರಾಜಾನ್ನದರ್ಶನಂ ।
ಜನಿಸದಾದುದೆನುತ್ತ ಕ್ಷುತ್ಪಿಪಾಸೆಗಳಿಂದ ।
ಮನುದಿನಂ ತ್ರೊಳಲ್ವ ಜೀವಂ ಜೀವಸಂತತಿಗೆ ಸದ್ಯೋದಯದಿ ತೋರುವ ॥
ಮನಸಿಜನ ಮಾವನ ಕರಂಗಳಿಂ ಪಿಡಿಪಿಡಿದು ।
ತನತನಗೆ ಚುಂಬಿಸಿದವಮೃತವನಿಗಳ್ ಧರೆಯೊ ।
ಳನುವಿಂದ ಕೆಡದವ್ರೋಯೆನಲು ಮಲ್ಲಿಗೆಗಳಲ್ಲಲ್ಲಿ ರಾರಾಜಿಸಿದವ್ರೊ ॥ (5)

ಸತ್ಸಂತತಿಗೆ ಕಳೆಯು ಪೆರ್ಚಿದುದು ದಿಕ್ತತಿಗ ।
ಳುತ್ಸವವು ಸಾರ್ಚಿದುದು ತರಣಿಸಸಿಮಂಡಲಗ ।
ಳುತ್ಸನ್ನತೆಯು ದುರ್ದಿನಂಗಳಾದವು ಸದಿನದಂಗಳಮಲತೆಯಕಾಂತಪ್ರು ॥
ವಾತ್ಸಲ್ಯದಿಂದಂಬುರಾಸಿ ಮಾಂಗಲತೆ ಸಂ ।
ಪತ್ಸಮೃದ್ಧಿಯನಾಳ್ದುದಲ್ಲಲ್ಲಿ ನೃಪರಾ ಕ ।
ರತ್ಸಮಯದೊಳು ವಿಜಯದುತ್ಸುಕದಿ ನಲಿವರಿನ್ನೆಂತೊ ನಿರ್ಮಲದತಿಶಯಂ ॥(6)

ಸರಸಿಗಳ ಸನ್ನಿಧಿಯು ಸಾಧುಭೃಂಗಾಂಗನಾ ।
ವರಗೀತ ಕರಮೆಸದವಲಲ್ಲಿ ವಿಚಕಿಲವ ।
ಸುರಭಿಳತಪವಮಾನ ಸುಳಿದ ದುರ್ದಿನದಾಂಧ್ಯಪರಿಯು ಹಂಸಾಳಿನಗುತ ॥
ಚಲಿಸಲನುಗೈದುದಮೃತಾಂಶುಮಂಡಲ ಜಗ ।
ದ್ಭರಿತ ನಿರ್ಮಲತೆಯಿಂ ರಾಜಿಸಿತು ಭೂತಳಕೆ ।
ಬರೆ ಶರದಭ್ರಮೆ ಸಕಲ ಸಂಪತ್ಸಮೃದ್ಧಿ ಮೈದೋರಿದುದು ಫಲರೂಪದಿ ॥ (7)

ಲೋಕಬಾಂಧವನೆಂಬ ಪೆಸರಿಂದ ರವಿಕರಾ ।
ನೀಕದಿಂ ಲವಣೋದಧಿಯ ಜಲವಗ್ರಹಿಸುತಂ ।
ದಾಕೆವಾಳತೆವೆತ್ತು ಕಾವಚಿತ್ಕವೆನಲೀವ ದಾತೃತ್ವಮೇನೆನುತಲಿ ॥
ಆ ಕಳಾನಿಧಿಯೊಂಟುತಿಂಗಡಲ ದಯದೆ ಭೂ ।
ಲೋಕಕೊಮ್ಮನದಿ ತತ್ಪೃಥೆಯು ಕರವನೊಯನಲ್ ।
ಶ್ರೀಕರದ ಬೆಳ್ದಿಂಗಳೇಂ ಮನಂಗೊಳಿಸುವದೊ ಕ್ಷೀರಾಬ್ಧಿ ಮೇಲ್ವರದೊಲು ॥ (8)

ಮನದ ಚಪಲತೆಯಿಂದ ಕ್ಷಣಿಕೊಂದು ಪರಿಯಾಗಿ ।
ಘನದುರ್ದಿನಾಪಾದಿಯನಿಸಿ ಮಿತ್ರನ ಸಿರಿಗೆ ।
ಕನಲುತಿಹಮಲಿನನಿರ್ದೆಡೆಯು ನಿಜಮಂ ತೋರಿಸಲ್ಬಾರದೆಂದೆನುತ್ತ ॥
ಮುನಿದಿರ್ದ ಕಾಲವಶದಿಂದುಷ್ಣನೈದಲ್ಕ ।
ತನಗೆ ಶ್ರೇಯಸ್ಕರವ ಕರೆವ ದ್ವಿಜಸಂತತಿಗೆ ।
ಮನದಿಷ್ಟಮನ್ನೊಮ್ಮೆ ಕೊಟ್ಟನೋಯೆನೆ ಪರದುಪತಿಸಾಂಪ್ರ ಚಂದ್ರಾತಪಂ ॥ (9)

ಗಗನರಂಗದಿ ಶರದ್ರಮೆಯೆಂಬ ನಟಿಯು ಸಸಿ ।
ಮೊಗತಾರಕೋನ್ಮೇಷಗೈದು ಚಂದ್ರಿಕೆಯೆಂಬ ।
ನಗೆದೋರಿ ಘನಯವನಿಕೋಲ್ಲಂಘನೆಯಮಾಡಿ ಹಂಸಕಧ್ವನಿಗಳಿಂದ ॥
ಬಗೆಗೊಳಿಸಿ ಲಾಸ್ಯರುಚನಂ ಗೈಯಲಿಟ್ಟಸುತ ।
ದಿಗಧಷಾಂಗನೆಯರುಂ ನಗೆಯ ಬೀರುವರೊಯೆನೆ । (10)
ಲೊಗುಮಿಗೆಯ ನಿರ್ಮಲತೆಯಕಾಂತೆಸದುದಾಸಮಯದೊಳಗಂಬಕಂ ಮುದದೊಳು ॥

ಪರಿಪಕ್ವಶಾಳಿಕಾವನಪಾಲಿಕಾಗಾನ ।
ಪರವಶತೆಯಾಂತ ಪಾಂಥರ ಹೃತ್ಕುರಂಗಗಳ ।
ತರಿಯೆ ಸ್ಮರಮಲ್ಲಿಕಾಸುಮ ಸಿಳೀಮುಖದಗ್ರದೊಳು ಭೃಂಗವಿಷಬಿಂದುಮಂ ॥
ತ್ವರಿತದಿಂದಿಡಲಂದಿನಿಂದಮಿಂದಿಂದಿರಗ ।
ಳುರು ಸಿಳೀಮುಖನಾಮ ಮಾಗಿ ಪಥಿಕರ ಕುಲವ ।
ನರೆವಮಾವಿಡೆಯುಲಾರಡಿಗಳಾರಡಿಗಳೀಂ ಮನೋಹರಮಾದುದೋ ॥ (11)

ಜಕ್ಕವಕ್ಕಿಗಳಂಗಹಸ್ಕರೋಪಾಸನೆಯ ।
ಮಿಕ್ಕು ಜೇವಂ ಜೀವರತಿಗೆ ಚಾಂದ್ರಾಯಣವ ।
ಸೊಕ್ಕು ಮಜ್ಞಾನವ ಬಕಂಗಳಗೆ ಹಂಸೀಗಣಕೆ ತೀರ್ಥಯಾತ್ರಾನಿಯಮಮಂ ॥
ಯೆಕ್ಕಿತುಳ ನದಿನದಗಳಗೆ ಗುಹಾವಾಸಮ ।
ನ್ನಕ್ಕರಿಂದುಪದೇಶ ಗೈಯಲ್ ಶರದ್ಯೋಗಿ ।
ಕಕ್ಕುಲಿತೆಯಿಂ ಪಿಡಿದುದಾಸಮಯ ಘನಾಪಾಯಕೃಚ್ಛ್ರವ ಚಾತಕಂ ॥ (12)

ಸರ್ವೌಷಧಿಗಳಿಂದ ಸಕಲ ಫಲಪುಷ್ಪದಿಂ ।
ಗೀರ್ವಾಣರೆಲ್ಲರಂ ಸಂತತಂ ಪಾಲಿಪಳ್ ।
ಸರ್ವಂ ಸಹಿಯೆನುತ್ತಮಿಂದ್ರ ಸಂತಸದಿಂದ ನವರತ್ನಭೂಷಣಗಳ ॥
ಉರ್ವಿಗರ್ಪಿತಗೈದ ತೆರನಂತೆ ಫಲಪುಷ್ಪ ।
ದುರ್ವಾರ ಸಂಪತ್ತಿನಿಂದ ನಿಬಿರೀಸದಿಂ ।
ಸರ್ವಮಂಗಳಮಾಗೆ ತೋರ್ದುದು ಶರತ್ಸಮಯ ಶ್ರೀಕಲಿತ ಸದನದಂತೆ ॥ (13)

ಮರಕತದ ಮಣಿಯ ಭೂಷಣವ ಸಿಂಗರಗೈದು ।
ವರಿಪರಿಯ ಚಿತ್ರವಸ್ತ್ರಗಳಲಂಕೃತಿವೆತ್ತು ।
ಸುರುಚಿರದ ಫಲಗಳನು ಕಂದಿ ಕಾಣಿಕೆವಿಡಿದು ಪುರುಷೋತ್ತಮನ ಚರಣದ ॥
ಪೊರೆಗೈದಿ ಭಕ್ತಿಯಿಂದೆಚ್ಚರಿಸಿ ಲೋಕಮಂ ।
ಪೊರೆಯಲನುಗೈವಳೆ ಧರಾವನಿತೆ ಭುವನದು ।
ದ್ಧರಣೆ ಗೈವರೆನಲ್ಕೆ ತೋರ್ದುದಖಿಲ ಸಮೃದ್ಧಿಯಿಂದಮಾ ಕಾಲದಲ್ಲಿ ॥ (14)

ಜಯ ಹಂಸ ಸಂಸಮುಪಯೋಗಿ ಜೀವನಭದ್ರ ।
ಜಯ ಸಿಂಧು ಜೀವಸಮುದಾಯದ ವಿಲಾಸಕರ ।
ಜಯ ಪುಣ್ಯಶಾಲಿ ಫಲಸಂಪ್ರಾಪ್ತಿಸಾಧನನೆ ಜಯ ದುರ್ಗಸಾಧ್ಯಹರನೆ ॥
ಜಯ ಸದ್ಗುಣಶ್ರೇಣಿ ಶ್ರೀಕರನೆ ಶುಭಕರನೆ ।
ಜಯಯೆನುತ ಕಮಲಾಗುಣಕರಂ ನೃಪತಿಯಂ ।
ದಯದಿಂದ ಪೊಗಳ್ವ ಮಾಗಧರಂತೆ ಭೃಂಗಾಳಿ ಸಲ್ಲಲಿತದಿಂದೆಸೆದವೂ ॥ (15)

ಅಂಬರದ ನಿರ್ಮಲತೆಯಾಗೆ ಹಂಸೋಲ್ಲಾಸ ।
ಮಿಂಚೆನಿಸ ಚಂದ್ರಕಾಂತಗಳಿಂ ಪ್ರವಾಹಗಳು ।
ಸಂಭ್ರಮದೊಳೈತರಲು ಕೋಕನದ ವಿಭವದೋಳ್ ಭೂಚಕ್ರಂ ನಲಿದವು ॥
ಸಂಭ್ರಮಿತ ವಾಹಿನೀ ವೈಶ್ಯದ್ಯ ರಮಣೀಯ ।
ಕುಂಭಪ್ರಫುಲ್ಲ ಮಲ್ಲಿಗಗಳೈಸಿರಿ ಪರ್ಚೆ ।
ತಂಬುದಾಪಾಯದೊಳಗಖಿಲೇಷ್ಟಸಾಧನಗಳಾದುದಾ ಪರರಕುಲಕೇ ॥ (16)

ಸರಿಸಿಜೋದ್ಭವನಂತೆ ಹಂಸಾನುವರ್ತಿನಡೆ ।
ಸರಸಪಾಂಚಾಲನೋಲ್ ಪದ್ಮಿನೀಯನುಸರದೆ ।
ವರಜಪೋಲ್ಲಾಸದಿಂದುರು ಯೋಗಿಯಂದದಲಿ ಸಕಲ ಕಾಲುಷ್ಯಹರದೆ ॥
ಹರಿನಾಮಮೆಂಬಂತೆ ನೀಲಕಂಠದ್ವೇಷ ।
ಕರದಕ್ಷನೆಂಬಂತೆ ಮೆರೆದುದು ಶರತ್ಸಮಯ ।
ನಿರತಂ ಸರಸ್ವತೀ ವೈಭವದಿ ಸತ್ಕವಿಯ ತೆರದಿ ರಾರಾಜಿಸಿದುದು ॥ (17)

ಅತಿಮನೋಹರಶರತ್ಸಮಯದುದಯವನು ಮಾ ।
ರುತಿ ಕಂಡು ಮಂತ್ರಿಜನರೊಡವೆರದು ಕಾರ್ಯ ಸಂ ।
ಗತಿಯ ಕಪಿರಾಜನೊಳು ಪೇಳ ಸಾಧನಗೈಯಲ್ಕೈತಂದನೊಲವಿನಿಂದಾ ॥
ಸತಿಯರೊಳು ಸಲ್ಲಾಪಮೆಸಗುತಂತಃಪುರದಿ ।
ರತಿಯಿಂದಮಿರ್ದ ಭಾಸ್ಕರತನಯನೀವಾರ್ತೆ ।
ಹಿತಮಾಗೆ ಬೇಗ ಪೊರಮಟ್ಟು ಗದ್ದುಗೆಯಲ್ಲಿ ಮಂಡಿಸಿಯೆ ಬೆಸಗೊಂಡನು ॥ (18)

ಯೇನಿರಚ್ಚರಿ ಕಪಿಪ್ರವರರೆಲ್ಲರು ಸಮಯ ।
ದಾನಂದವಿಭವಮನ್ನುಳಿದು ಸಂಗತದಿಂದ ।
ದೇನು ಕಾರಣ ಬಂದುದಾಯಿತೆನಲ್ ಮಂತ್ರಿಗಳ ಮಧ್ಯದೊಳ್ ಮಾರುತಸುತನು ॥
ಜ್ಞಾನನಿಧಿಯಾದ ಕತದಿಂ ಪೇಳ್ ದಾಕ್ಷಿಣ್ಯ ।
ಮೇನಿಲ್ಲದತಿ ನಿಷ್ಠುರಾಂಗತೆಯ ನುಡಿಗಳಂ ।
ತಾನೊರೆಯಲನುಗೈದನಾ ಸಭಾಸದರೆಲ್ಲ ನೋಡುತಚ್ಚರಿಗೊಂಬೊಲು ॥ (19)

ಕಾಲದೇಶಂವರ್ತಮಾನಸ್ವರೂಪಗಳ ।
ಮೇಲುಕೀಳುಗಳ ತತ್ಕಾಲೋಚಿತಂಗಳಂ ।
ನ್ನಾಲಸ್ಯಮಿಲ್ಲದಾರೈದು ಮಂತ್ರಾರ್ಥೈಕಪರನಾಗಿ ಲೋಕವನ್ನು ॥
ಪಾಲಿಸುವನಾವನವನೆಂದಿಗುಂ ಸಿರಿಯು ಸಂ ।
ಚಾಲಿಸದೆ ನಿಲುವುದತಿ ಮತ್ತ ಪಾನಾಸಕ್ತ ।
ಶೀಲನಾದವಗರಸುತನ ನಿಲುವದೆಂತಕಟಮಾಜನಗಳುಳವದೆಂತು ॥ (20)

ತಿಳದು ಕಾರ್ಯಾಕಾರ್ಯ ಸಂಗತಿಯನಾಳ್ದನಗೆ ।
ತಿಳುಪಿ ರಾಜಾರ್ಥ ವ್ಯರ್ಥವನ್ನೈದದಂದದಿಂ ।
ಮಳುಪುವಂ ಬುದ್ಧಿಯುತನಾದ ಸನ್ಮಂತ್ರಿಯವನುಳಿದು ನೃಪಚಿತ್ತವಿಡಿದು ॥
ಖಳಪಿಸುಣರೊಡವೆರದು ಕಾಲವಂ ಕಳೆವನಾ ।
ನೆಲದ ವಿಪ್ರಂಗೆಂತು ಗೆಲವು ಸಮನಿಪುದರಸ ।
ಸುಲಭಮೆನಿಸುತಲಿ ದಾಕ್ಷಿಣ್ಯಮಂ ಹಿತಕರವನುಸುರ್ವೆನಾಲಿಸುವುದೊಲಿದು ॥ (21)

ಘಟ್ಟಬೆಟ್ಟಗಳೊಳಗೆ ತಿರುಗಿ ಬಾಯಾರಿ ಕಂ ।
ಗೆಟ್ಟು ಕಾಕರಮಟ್ಟು ಪೇರಡವಿಯಲಿ ತೊಳಲಿ ।
ಪಟ್ಟಪಾಡುಗಳನೆಲ್ಲ ಮರದು ಸುಖದೊಳ್ ಬೆರದು ಮಾಡಿದುಪಕೃತಿಯ ಮರದು ॥
ಬಿಟ್ಟಾತ್ಮಹಿತವ ವೈಶಿಕರಂಜನೆಗೆ ಮನವ ।
ಕೊಟ್ಟೀ ಕೃತಘ್ನತೆಯನಾಂತನಿಹಪರಮೆರಡು ।
ಕೆಟ್ಟಪುದೆನುತ್ತರಿಯದಾದರೇಂ ಪೇಳುವದು ಬುದ್ಧಿಯಲ್ಲಿಗೆ ಪೋದುದು ॥ (22)

ಹಿತವನಾಚರಿಸಿದರನೆಂದಿಗುಂ ಮರೆಯದಲೆ ।
ಮತಿಯೊಳತಿಶಯದೇವತಾಕಾರಮೆಂದರಿತು ।
ಸತತ ನಾವು ಸೇವಿಪುದು ಸಾಧುಜನಸಾಮಾನ್ಯಧರ್ಮ ಭೂಮಿಪಾತ್ರಳದೊಳು ॥
ಸತಿಸುತಾದಿಗಳು ಸಕಲೈಶ್ವರ್ಯಸಂಪದವ ।
ಕ್ಷಿತಿಯ ಸೆಳೆದತಿಬಳನ ತರಿದು ರಾಜ್ಯವನಿತ್ತ ।
ಕ್ಷಿತಿಪತಿಯ ಕನಸಿನೊಳು ಸ್ಮರಿಸದಿರ್ಪುದಿದಾವ ನೃಪನೀತಿ ಕಪಿವರೇಣ್ಯ ॥ (23)

ಹರುಷಂ ವಿಷಾದಂಗಳೊಂದಲ್ಲದೆರಡಿಲ್ಲ ।
ಶರಿರಮಾತ್ರಂ ಭೇದವೆನುತಗ್ನಿಸಾಕ್ಷಿಯೊಳ್ ।
ಕರವಿಡಿದು ಭವದೀಯಶತ್ರುವಂ ಸಂಹರಿಸಿ ಸಾಮ್ರಾಜ್ಯಸುಖವನಿತ್ತ ॥
ಧೊರೆ ಚಿತ್ತದನುತಾಪದಿಂದಿರುವದಂ ತಿಳಿದು ।
ಪರಿಪರಿಯ ಸುಖವನನುಭವಗೈವ ವಾಂಛೆಗೇಂ ।
ತೆರವಿಲ್ಲದಲೆ ಚಿತ್ತಮೊಪ್ಪಿದುದು ಕಪಿರಾಜವೆಸರದೂಣಯಮಾಂತ್ರಾದು ॥ (24)

ಸಲಹಿದೊಡೆಯಂಗಾದ ಪಲವಗೆಯ ಸಂಬಾಧ ।
ದಾಲಿ ತನ್ನದೆಂದರಿತು ಉಚಿತಮೆನಲೆಚ್ಚರಿತು ।
ಕಳಿತುಪಾಯಗಳೆಸಗಿ ಕಾರುಣ್ಯಗಳು ತೊಲಗಿ ಪೋಗುವಂದದೆ ಮಾಳ್ಪುದು ॥
ನೆಲದಿ ಸಜ್ಜನಕೃತ್ಯ ಸನ್ಮಾರ್ಗಮುಪಹೃತ್ಯ ।
ಕಲಿಧರ್ಮಮನುಸೃತ್ಯ ಕಲಿತೆಮೆತ್ತುದು ಸತ್ಯ ।
ಮಲಘುಮತಿ ರಘುಪತಿಯ ಹಿತವ ಚಿಂತಿಸದಿರ್ದಡೆಂತಹುದು ಸುಕ್ಷೇಮವು ॥ (25)

ಮಾರನಂಬಿನ ಮೊನೆಗೆ ಮರುಗಿ ದುಮ್ಮಾನದಿಂ ।
ನಾರಿಯುಂ ನೆನೆನೆನೆದು ನಡುಗುತಿರೆ ಚಿತ್ತಕುಂ ।
ತೋರಲೀಷತ್ಕೋಪಮುದನು ಸಮ್ಮತಗೊಳಪರಾರುಂಟು ಮಾಲೋಕದಿ ॥
ನೀರು ಪೋಗದ ಮುನ್ನಲೇರಿಯುಂ ಬಲಗೈದು ।
ದಾರಮತಿಯಿಂ ಬದುಕಲಧಿಕಮಲ್ಲದಡೆ ಕೈ ।
ಶೋರಶೇಮುಷಿ ಯಶಶ್ಕಾಂತಾಂಗಲೇಪಮುಷಿ ದೌರ್ಭಾಗ್ಯ ಪುಸಿಯು ಜೀಯ ॥ (26)

ಕೃತಸುಕೃತಪರಿಪಾಕಫಲರೂಪ ರಾಮಮೂ ।
ರುತಿಯು ನಮಗಬ್ಬಿದುದು ಸೌಭಾಗ್ಯ ಮಬ್ಬಿದುದ ।
ಮತಿಗೆಟ್ಟು ಪೋಗಾಡಿ ಮಗುಳಪಯಶವ ಕೂಡಿ ಕಾರ್ಪಣ್ಯತೆಗಳ ನೋಡಿ ॥
ಕ್ಷಿತಿಯೊಳಂ ಬಾಳ್ದೀನು ಸತ್ಯಮಾಳ್ದರೆ ಭಾನು ।
ಸುತನ ಕುಲ ಪೆರ್ಚಿಗೆಯು ಸರ್ವರಿಗೆ ನಚ್ಚಿಗೆಯು ।
ಏತೆರುಪ್ಪುದೆಂದೆನು ಪೇಳ್ದುದಾಲಿಸಿ ಮಾತ ಕಾಯ್ದುಕೋ ಪ್ಲವಗನೇತಾ ॥ (27)

ದೊರಕಿದ ಸಮೃದ್ಧಿಗಂ ಸುಹೃದನುಗ್ರಹವೆ ಫಲ ।
ನರದೇವ ಗಿರಿತಟದಿ ನೀರದಾಪಾಯುವಂ ।
ಪರಿಸುತಬರಲಾದುದೀಗ ಕಾರ್ಯದ ಸಮಯ ಶರದಾಗಮಾದಿ ಜೀಯ ॥
ಸ್ಮರಿಸುವದಕಿಂ ಮುನ್ನ ಪೋಗಿ ರಘುಕುಲರನ್ನ ।
ಪರಮಪಾವನ್ನಪಾದವ ಕಾಂಬುದದು ಚೆನ್ನ ।
ಕರುಣಾಂಬುನಿಧಿ ತಪ್ಪನೆಣಿಸದೆ ಪೊರೆವ ತನ್ನ ಪೊಂದಿದವನೆಂದು ನಿನ್ನ ॥ (28)

ಮತಿಯುತನೆ ಕೇಳ್ ಮೂರುಲೋಕಮಂ ಸೃಜಿಸಿ ಮಗು ।
ಳತಿಶಯದಿ ಪೊರೆದು ಮತ್ತುಪಸಂಹರಣೆಗೈವ ।
ರತಿಬಲಾಢ್ಯರೆನುತ್ತಮರಿವುಂಟು ಭವದೀಯ ಮಾನಸಕೆ ಮೇಣಿವರಿಗೆ ॥
ಇತರ ಸಾಹಾಯ್ಯದಿಂದೇನಹುದು ಕಾಲಸಂ ।
ಗತಿಯನನುಸೃತಿಗೈವಡವರು ಮಾನವರಂತೆ ।
ಕ್ಷಿತಿಯೊಳಗೆ ಸಂಚರಿಪರೆಂಬುದನುಭವಸಿದ್ಧಮಾಗಿ ಕಂಡಿರ್ಪುದರಸ ॥ (29)

ಬೇಗ ರಘುವರನೆಡೆಗೆ ಪೋಗಿ ಕೋಪಾವೇಶ ।
ಮಾಗದಂದದಿ ತಿಳುಪಿ ಕೊಳಲುಚಿತ ಸುಖದುಃಖ
ದಾಗುಹೋಗುಗಳಲಾಂ ಬೆರೆದಿರ್ದ ಕತದೊಳಂ ಭಯವು ದಾಕ್ಷಿಣ್ಯಗಳನು ॥
ನೀಗಿತೋರ್ದುದನೆಲ್ಲ ಬಿತ್ತರಿಸವೇಳ್ಕನು ।
ದಾಗಸವ ಚಿತ್ತದೊಳಗಿಡದೆ ಸಂತತಿಗಧಿಕ ।
ಮಾಗಿ ಶುಭವೊದಗುವಂತಾಳೋಚನಂಗೈವುದೆನುತ ಮೌನದೊಳಿರ್ದನು ॥ (30)

ನೂರಕೊಂದೊಂದೆಣಿಕೆಗೈದಾಣಿಮುತ್ತುಗಳ ।
ಸಾರಂಗಪಾಂತ ಮಾರುತಿಯ ವಚನಗಳಿಂದ ।
ತೋರಸಂತೋಷಮೈದೋರಿ ಭಾಸ್ಕರತನಯನೈತಂದು ಬಿಗಿದಪ್ಪುತ ॥
ಧೀರರಗ್ರೇಸರ ಭವದ್ವಾಕ್ಯದಮೃತದಾ ।
ಸಾರದೊಳಗಾಳ ಶಾರೀರ ಸೌಖ್ಯಾನಂದ ।
ಪೂರದೊಳ್ ಮುಳುಗಿ ಮುಂಗಾಣದಿದೆ ಮಾನಸಂ ಧ್ಯಾನಿಸುವಡರಿದೆಂಬೊಲು ॥ (31)

ದೊರೆದಪರು ಹಿತವನಾಚರಿಸುವರು ಬುದ್ಧಿಗಳ ।
ನೊರೆವ ಜನ ಸಿಲ್ಕರೊಂದೆಡೆಯ ಮತಿ ಹಿತಮೆರಡು ।
ಬೆರೆದಪರು ಸಮನಿಸುವದತಿಶಯವು ರುಚಿರೋಗಹರಮಾಗಿ ಕಂಗೊಳಸುವ ॥
ಪರಮೌಷಧಿಯು ಪೂರ್ವಪುಣ್ಯಪರಿಪಾಕದಿಂ ।
ಮರುತಾತ್ಮಭವರೂಪದಿಂದ ಸಾಕ್ಷಾತ್ಕರಿಸಿ ।
ಪೊರೆವುದೆಂದಾನಂದಗೊಳುವೆನಿದು ಮದ್ಭಾಗ್ಯಧೇಯದ ಕೃಪಾಸ್ಪದವಲೆ ॥ (32)

ಒಲವರಿದು ವಿನಯನಯಗಳಿಂದಮುಪಚರಿಸಿ ।
ಚೆಲುವೆನಲ್ ಚೆಲುವು ನೀಚಗಳೆನ್ನಲತಿನೀಚ ।
ನೆಲದೊಳಲ್ಲಮೆನುತ್ತಮಿರುವರುದರಂಭರಿಗಳಲ್ಲಲ್ಲಿ ನೃಪರೆಡೆಯೊಳು ॥
ಬಲುಸರದ ನುಡಿಗಳಿಂದಾಡಿ ಕಾರ್ಯವ ನೋಡಿ ।
ಗೆಲವ ತೋರಿಸುತೆಡರ ಪೇರಿಸುತ ಮಂತ್ರಿಗಳ ।
ಕುಲಶಿಖಾಮಣಿ ನೀನೆ ಮದ್ವಂಶಮುಂ ಭವದ್ವಶಮಲ್ತೆ ಕಪಿಲಲಾಮ ॥ (33)

ಎನುತ ಮಾರುತಿಯ ಬಹುವಿಧದಿಂದಮುಪಚರಿಸಿ ।
ದಿನಕರಾತ್ಮಜ ರಾಜಕಾರ್ಯದಾಳವ ತಿಳಿದು ।
ವನಚರೋತ್ತಮರ ಕರೆದಾಜ್ಞಾಪನೆಯನಿತ್ತು ಚತುರಬ್ಧಿಪರಿಯಂತದ ॥
ವನನದೀಗಿರಿತಟದಲಿರ್ಪ ಕಪಿಯೂಥಪರ ।
ಮನದ ವೇಗದಲೈದಿ ಕರೆತರುವುದೈ ಪತ್ತು ।
ದಿನಕೆನ್ನ ಪೊರೆಗಿದರೊಳಾವನುಳಿದರು ರಾಜದಂಡನೆಗೆ ಗುರಿಯಪ್ಪನು ॥ (34)

ಸಮಯಕೊದಗಿದಡೆಮ್ಮ ಸಮನೆಂದು ಮನ್ನಿಸುವೆ।
ಮಮತೆ ಯಿಲ್ಲದೆ ನಿಂದಡವರ ಶಿಕ್ಷಿಪೆ ಬೇಗ।
ಶಮನಿಗೊಪ್ಪಿಪೆನೆಂದು ಶಪಥಪೂರ್ವಕವಾಗಿ ಕಪಿವರರಿಗರುಪಿ ಕಳುಪೆ॥
ಸಮದಗಡಗರ್ವಸರ್ವಂಕಷ ಪ್ಲವಂಗಮರು।
ಶ್ರಮದಿಂದ ನಾಲ್ದೆಸೆಗೆ ರಾಜಶಾಸನವಿಡಿದು।
ಗಮಿಸಿದರು ತರತರದ ವೇಗಲಾಂಘನಜಾಂಘಿಕೋತ್ಕರ್ಷಗಮನವಿಡಿದು॥ (35)
ಸಕಲಸನ್ನಾಹದಿಂದ ಪದುಳದಿಂದಲಿ ಪೋಗಿ।
ಸುಕುಮಾರಚಿತ್ತ ಶ್ರೀರಾಮಪುರದರಸನಂ।
ಯುಕುತಿಯಿಂ ಕಾಣ್ಬಂತೆ ಮಾಳ್ಪ ಭಾರಂ ನಿನ್ನದೆನುತ ಮಾರುತಿಗೊಪ್ಪಿಸಿ॥
ಸಕಲಮಂತ್ರಿಗಳಗಪ್ಪಣೆಗೊಟ್ಟು ಸೂರ್ಯಸುತ।
ನಖಿಲಸಂಪದಸುಖವನನುಭವಿಸಲರಮನೆಗೆ।
ಸುಕರದಿಂ ನಡೆತಂದ ರಘುವಲ್ಲಭನ ಪದವ ನೆನೆವು ತಾನಂದದಿಂದ॥ (36)

(ಸಂಧಿ 13 ಕ್ಕಂ ಪದ 539.)

ಹದಿನಾಲ್ಕನೆಯ ಸಂಧಿ.

ಸೂಚನೆ॥ ತಾರೆಯನುನಯದಿಂದ ಬಿನ್ನವಿಸೆ ಲಕ್ಷ್ಮಣಗೆ।
ದಾರುಣಮನಂ ಕೃಪಾನಾರಮಾಯಮೆಂದೆನಿಸಿ।
ಸೂರಿಯನ ಸುತನನುಪಚರಿಸಿ ರಾಘವನೆಡೆಗೆಕರದೊಯ್ದು ಸನ್ಮಾನದೆ॥

ಪದ॥ ವಿಮಲಾಂಬರವನುಟ್ಟು ವಿವಿಧಸೊಬಗಳವಟ್ಟು।
ಭ್ರಮರಾಳಕೊಳಯೊಳು ನವಸುರಭಿಮಲ್ಲಿಕಾ।
ಸುಮಗಳನ್ನಿಟ್ಟು ವಿಧುಮುಖಚಂದ್ರಭಾಸಮಂ ಬೀರುತಂಚೆಯಗಮನದಿ॥
ಸಮತುಕರಿಸುತ ದಿಗುಸಮೂಹಗಳನಾ ಶರ।
ದ್ರಮೆ ಬರಲ್ ಕಂಡು ರಾಘವಗೆ ನಿಜವಲ್ಲಭೆಯ।
ಮಮತೆ ಪುಟ್ಟಲ್ಕನುಜನೊಡನೆ ಪೇಳದ ಮನೋರಥವ ಕೇಳದ್ರಿಜಾತೆ॥ (1)
ಮಲ್ಲಿಗೆಯು ನಸುನಗೆಯು ಮುಗುಳೆ ವಿಕಸಿತಕಸ।
ವಲ್ಲಿಗೆಯು ನಯನಗಳ ಮತ್ತಹಂಸೆಯು ಗಮನ।
ದುಲ್ಲಾಸಮಂ ಬಿಸಿಲ್ವಕ್ಕಿಗಳು ವೃತ್ತಕುಚಯುಗದ ಬೆಡಗುಗಳ ರಜೆಯು॥
ಜಲ್ಲಿ ಭೋರ್ಮೊರೆವ ಭೃಂಗಾಳ ತಂಗಾಳ ಸ್ವರ।
ನುಲ್ಲಸಿತಸಿಂಜನಿಯು ನಿಷ್ಕೃರವ ತೋರಿಸುತ।
ಮೆಲ್ಲಿಯುಂ ನಿಲಲೀಯದಬ್ಜವದನೆಯ ರತಿಯನೀವುತಿದೆಯೇನುಪಾಯ॥ (2)
ದಾರಿಣೀಪತಿಗಳೀ ಸಮಯದೊಳ್ ಕಾರ್ಯಸಂ।
ಭಾರಂಗಳನುಗೈದು ನಿಜಮನೋರಥಗಳನು।
ದಾರವೆನೆ ಪಡೆದಪರು ನಿರ್ಯತ್ನದಿಂದಾವು ನಿರ್ಜನಸ್ಥಾನವಿಡಿದು॥
ಈ ರಾತ್ರಿಗಳ ಕಳದು ವಿವಿಧ ಸಂತಾಪದ ವಿ।
ಕಾರಗಳನನುಭವಿಸಿ ಮುಂದೆ ಸಂಪಾದಿಸುವ।
ಕಾರಿಯವದೇನುಂಟು ಕಪಿಯರಸನೊಳು ನಂಟದಾಯ್ತು ಕನ್ನಡಿಯಗಂಟು॥ (3)

ಸತಿಸುತರವೆರೆದು ಸಾಮ್ರಾಜ್ಯವೈಭವದಿಂದ ।
ಮತಿಮಂದತೆಯೊಳಿಪ್ಪ ಮರೆದು ಪಾನಾಂಗನಾ ।
ರತಿಯಿಂದ ಮಂದಸೌಖ್ಯಾತಿಶಯಗೊಳುತಿರ್ಪ ಸುಗ್ರೀವನತಿದರ್ಪದಿ ।
ಹತವೈರವಾದ ಬಳಿಕಾರ ಬೆಸಗೊಂಡರೇನು ।
ಹಿತಮದಾರಿಂಗೇನು ತನ್ನ ಸುಖ ಲೇಸೆಂಬ ।
ಮತವನಂಗೀಕರಿಸಿ ಕೃತಕೃತ್ಯತನದಿಂದಮೊಂದೆಣಿಸದಿರ್ದ ಗೃಹದಿ ॥ (4)

ಮೊದಲೆ ಕಪಿಗೈಶ್ವರ್ಯ ಸ್ತ್ರೀಸಮೃದ್ಧಿಯು ಪಾನ ।
ಮದವು ಮಸ್ತಕಕಡರೆ ಮದನಾರಿಯಾಗೆ ತನ ।
ಗಿದಿರಿಲ್ಲಮೆಂದರಿದಸಲ್ಲದವ್ಯರು ಮಾಡಿದುಪಕಾರಗಳನೆಣಿಪನೆ ॥
ಸುದತಿಯರ ಮೇಳದಲಿ ಸುಖಕರ ವಿನೋದದಲಿ ।
ಮುದವೆತ್ತು ಮನವ ಮದನಾಗಮೋದ್ಧತಿಗೈಯು ।
ತುದಯಾಸ್ತಮಯಮೆಂಬ ಭೇದಮೆಳ್ಳಿನಿತಿಲ್ಲದಲ್ಲಿ ಸುಖಮಿರ್ಪನನುಜ ॥ (5)

ಜಗತಿಯುದ್ದಂಡರಣಪಂಡಿತ ಸುರೇಂದ್ರಸುತ ।
ನಿಗೆ ಸಿಲುಕಿದೀ ರಾಜ್ಯ ತನಗೆಂತಡಸಿತೆಂಬ ।
ಬಗೆಯನರಿಯದೆ ಪೋದ ಬಾಲಿಶತೆಗೊಳಗಾದನುಪಕೃತಿಯನೆಣಿಸದಾದ ॥
ಸುಗುಣಿ ಗುಣಗಳನೆಣಿಸಿ ಸಂತೋಷಗೊಳುವಂತೆ ।
ಲಗಿಮನರಿವನೆ ಭೃಂಗನಾರನಾಮೋದಕಂ ।
ಸೊಗಸಾಂತರೀತಿಯೊಳು ಭೇಕಂಗಳೇನರಿತು ಸಂಭ್ರಮಂ ಗೊಳುವವೆನಿತು ॥ (6)

ನೀತಿಶಾಸ್ತ್ರಾನುಮತನಿಗಮಾಗಮಂಗಳರಿ ।
ದಾತನಾದಡೆ ಕೃತಜ್ಞತೆಯೆಣಿಸಿ ಭಯದಿಂದ ।
ಸೀತಾಂಗನಾನ್ವೇಷಣಂಗೈದು ಹಿತಮತಿಯೊಳಿಪ್ಪ ಸ್ಮರಿಸುವನಾವಗಂ ॥
ನೀತಿರೀತಿಗಳುಳ್ಳದ ಪ್ಲವಗಗೆಂತೈ ಶಾಸ್ತ್ರ ।
ರೀತಿ ಸಂಭವಮಹುದು ಮಳೆಗಾಲಮಂ ಕಳೆದು ।
ಪಾತಕದ ಮತಿದಳೆದ ಪೆರರುಪಕೃತಿಯನುಳ್ಳದು ಪೆರ್ಚೆ ಸನ್ಮಾರ್ಗಮುಳ್ಳದು ॥ (7)

ಸಾಮದಿಂದೊಡಬಡಿಸಬಹುದು ಸಜ್ಜನರುಗಳ ।
ಕಾಮಿತವನಿತ್ತೊಡಂಬಡಿಸಬಹುದಧಮರ ।
ಸ್ವಾಮದಾಂಧರ ದಂಡನೆಗಳಿಂದ ದುರ್ಮತಿಗಳನ್ನು ಭೇದೋಪಾಯದಿ ॥
ಪ್ರೇಮಗೊಳಸುವಡಕ್ಕು ನಾಲ್ಕುಪಾಯಗಳುಳ್ಳದ ।
ಕಾಮಚರ ವನಚರಂ ನಡಿದರಪಯಶ ಶಾಸ್ತ್ರ ।
ನೇಮಮವಗಿಲ್ಲ ಮುಂದೇಂಗೈವುದಿದಕೆಂತು ಪೇಳುಪಾಯಗಳ ಸೊಲ್ಲ ॥ (8)

ಮಾಡಿದುಪಕಾರಮಂ ಮರಣಾಂತಮೆಣಿಸಿ ಹಿತ ।
ಗೂಡಿ ಸುಖಕಷ್ಟಂಗಳೊಂದೆನಿಸಿ ಭೇದಮಂ ।
ಮಾಡದನುದಿನ ತನುವ ತೆತ್ತು ಬಾಳ್ವಾತನವ ಪುರುಷರೊಳಗುತ್ತಮನಲೆ ॥
ಕೇಡನೆಣಿಸುತ ಕೃತಕ ವಚನರಚನೆಗಳಿಂದ ।
ಮಾಡಿದುದ ದಿಟಮೆನಿಸದಂಬರಕುಸುಮದಂತೆ ।
ಮಾಡುವವ ಪುರುಷಾಧಮನೆನುತ್ತ ಪೇಳುವರು [ರಿ ತು] ನೀತಿಜ್ಞರು ॥ [ಸ ತ ತ] (9)

ಮನುಜರಿಂಗಿದು ನೀತಿ ಮತ್ತೆ ತಿರ್ಯಗ್ಯೋನಿ ।
ಗಿನಿತು ತತ್ವ ದೂರ ತೋಷಾಸರ ಭಕ್ಷಣಂ ।
ಮನುಮಥವಿಕಾರ ಮುಖ್ಯಾಸೇವ್ಯಮೆಂದೆನಿಪುದದನೆಣಿಸಿ ಫಲಮದೇನು ॥
ಯೆನಗೆ ನಂಬುಗೆಯಿತ್ತು ವರುಷಾಸಮಯು ಪೋದು ।
ದಿನಿತಾದರುಂ ನೆನೆಯದಾದ ನಿಜಮಿಲ್ಲಾದ ।
ಗಿನಿತೇನು ದಂಡನಾಯೋಗ್ಯನಲ್ಲದೆ ನೇಹಕನುಚಿತಂ ಸುಗ್ರೀವನು ॥ (10)

ಮಿತ್ರವಂಚಕ ಸಾಧುಮಾರ್ಗದೂಷಕ ತನ್ನ ।
ಗೋತ್ರಾಪಕಾರಕ ಶಠಂ ದುಷ್ಟದುರ್ವಚನ ।
ಮಾತ್ರಾನುಕಾರಿಗಳ ದಂಡಿಸುವುದಿದು ನೀತಿಯಾದರುಂ ಭೂತಳದೊಳು ॥
ಮಿಥ್ಯಪದೇಶಿ ಶರಣಾಗತ ಮಹಾಭೀತಿ ।
ಮಿತ್ರಸ್ಥರೆನಿತಾಪಕೃತಿಗೈದರುಂ ಕೃಪಾ ।
ಪಾತ್ರ ಶಿಕ್ಷಾಯೋಗ್ಯರಲ್ಲವೆನುತಂ ಧರ್ಮಶಾಸ್ತ್ರಾನುಮತ ಲಕ್ಷ್ಮಣ ॥ (11)

ಮದಮತ್ತ ಬಲಿ ಕೃತಘ್ನಂ ಬಲೀಮುಖಕುಲದ ।
ಲುದಿಸಿದತಿನೀಚಂ ವರಾಕನಾತನ ಮುಂತೆ ।
ನದದಿಟ್ಟು ಧರಣಿಸುತೆಯನ್ನರಸಲನುಗೈವುದೆನುತ ನಿಶ್ಚೈಸಿ ಮನದಿ ॥
ಪುದಿದ ರೋಷದೊಳೊರೆದು ಮಗುಳೆಂದ ಕಪಿಯು ಸಂ ।
ಪದದೊಳತಿ ಕೃಪಣ ಮರೆಯೊಕ್ಕರೆಂಬುದ ಚಿತ್ತ ।
ಸದನದೊಳ್ ಸ್ಮರಿಸದಾದವರಾರು ನೋಡಿದ್ದೈ ಲಕ್ಷ್ಮಣ ದುರಾರಾಧ್ಯನ ॥ (12)

ಶರಣೆಂದೆ ನೀನಲ್ಲದೆನಗೆ ಪೆರತಿಲ್ಲೆಂದೆ ।
ಸುರಪಸುತನಂ ಕೊಂದೆ ಪೋದ ಸಿರಿಯಂ ತಂದೆ ।
ಹರಣಭರಣಂಗೈದುದೊಂದಾದರುಂ ಮನಕೆ ತರದಾದ ಪ್ಲವಗನಕಟ ॥
ವರುಷಾಸಮಯ ನಾಲ್ಕು ತಿಂಗಳೊಗೊಳಗಿರ್ದು ।
ಬರುವುದೆಂದಾಂ ಪೇಳ್ದ ಕಳಾಪಲಾ ಪರಿಗಳಂ ।
ಮರೆದನಹಹಾ ಜಲಧಿಕೃತಹೋಮದಂತಾಯ್ತು ಮಾಡಿದುಪಕಾರಮಕಟ ॥ (13)

ಆದೊಡೊಳ್ಳಿತುಗುಣಗಳೆಣಿಸಿ ಫಲವೇನಿಹುದು ।
ಸಾಧಿಸಲಸಾಧ್ಯಮೇನಿಹುದು ಸೌಮಿತ್ರಿ ನೀ ।
ನೈದಿ ಕಂಡಾ ದುರಾತ್ಮನಿಗೀ ಪರಿಯನೆಲ್ಲ ನಿಲ್ಲಿಸದಲೆಚ್ಚರಿಪುದು ॥
ಕ್ರೋಧದಿಂದ ಸುಬಾಹುಮಾರೀಚದುಷ್ಟವೈ ।
ರಾಧಖರದೂಷಣತ್ರಿಸಿರ ಮುಂತಾದವರು ।
ಪೋದ ಹಾದಿಯನೇಕೆ ಬಯಸುವೆ ದುರಾರಾಧ್ಯತೆಯೊಳಾರು ಬಾಳ್ದರಕಟ ॥ (14)

ಕನಕಪುಂಖಾನ್ವಿದಕಣೆ ಯಾವುದಗ್ರಜನ ।
ತನುವ ಕೊಂದುದದೀಗ ನೋಡುತ್ತಮಿದೆ ಬೇಗ ।
ನಿನಗೈಯನಾದವನ ಪೊರೆಗೆ ಕರದೊಯ್ದಿಡುವರಿದಿರ ನೋಡುತಮೊಸದಿದೆ ॥
ಮನದ ಚಂಚಲಮುಳದು ಪತಿತಾನ್ನತಿಯ ಸೂ ।
ಚನೆಯ ಮಾಡದೆ ಪೂರ್ವದುಪಕೃತಿಯ ಜೆನ್ನಾಗಿ ।
ನೆನಸಿ ತನುವಂ ನಿಲಿಸಿಕೊಂಬುದೆಂದಾ ಕ್ಷಣದೊಳುಸುರ್ದಪುದು ಮತ್ತೆ ಕಪಿಗೆ ॥ (15)

ಇನಿತು ಪೇಳ್ದಡರಿತು ಕಾರ್ಯೋಪಯೋಗಂಗ।
ಳೆನುಗೈದು ಬಂದು ಸೀತೆಯನರಸಿ ನೆಲೆಯನರಿ।
ದೆನಗುಸುರ್ದರೊಳ್ಳಿತಲ್ಲದಡೆ ತಮ್ಮಣ್ಣನಿರ್ದೆಡೆಗೈದಲದುವೆ ಲೇಸು॥
ಯೆನುತ ಪೇಳುವುದೆಂದು ಬಿತ್ತರಿಸೆ ಲಕ್ಷ್ಮಣನಿ।
ಗನಿತರೊಳ್ ಕೋಪಾಗ್ನಿರುದ್ರನೆಂದದ ಕೋಪ।
ಘನತೆಯಿಂದಣ್ಣನೊಡನಾಗ ವಿಜ್ಞಾಪನಂಗೈದನತಿರೋಷದಿಂದ॥ (16)

ನೀತಿವಂತರಿಗೆ ಪೇಳುವ ನ್ಯಾಯ ನಿಷ್ಠುರವು।
ಕೋತಿಗೇತಕೆ ಜೀಯ ಮುಂಬರಿದು ಕಾಲ್ವಿಡಿದು।
ಭೂತಳಕ್ಕಪ್ಪಳಿಸೆ ಕುಪ್ಪಳಿಸಿ ಕರುಳ್ಖಂಡೆಗಳನು ಭೂತಗಳಿಗಿತ್ತು॥
ಘಾತಕನ ಪರಿಹರಿಸಿ ಕಪಿರಾಜ್ಯಮಂ ಸುಖ।
ವ್ರಾತಮನ್ನಂಗದಕುಮಾರಗೊಲಿದಿತ್ತು ಸಂ।
ಜಾತಹರ್ಷದಿ ಪ್ಲವಗಬಲವನೊಡಗೊಂಡಾನು ಬರುವೆ ಪದಪದ್ಮದೆಡೆಗೆ॥ (17)

ಯೆಂದು ಕಡುಕೋಪದಿಂದೆರಗಿ ಬೀಳ್ಕೊಂಡು ರಘು।
ನಂದನಂ ಪೊರಡುವದ ನಿಟ್ಟಿಸುತಮೀತ ಕ್ರೋ।
ದಾಂಧತೆಯೊಳಾತನಂ ಗಣಿಸದರೆ ನಿಮಿಷದೊಳು ಕಪಿಕುಲಾಧಿಪನ ಪಿಡಿದು॥
ಕೊಂದಲ್ಲದುಳಿಯು ಶರಣಾಗತನ ಸಂತತಿಯ।
ನಂದಿಸಿದರೆಂಬ ದುರ್ಯಶ ಸೂರ್ಯವಂಶಕುಂ।
ಬಂದಲ್ಲದಿರದೆನುತ ತಿಳಿದು ಕರುಣಾವನಧಿ ಲಕ್ಷ್ಮಣನೊಳಂತೆಂದನು॥ (18)

ಜಲಜದೈಸಿರಿಯನನುಭವಿಸುತೆಡರಡಸಿದರೆ।
ತೊಲಗಿ ಕುಮುದಿನಿಯೆಡೆಯೊಳಿರುಳಿರ್ದು ತನ್ಮಿತ್ರ।
ನೊಲುಮೆಯಿಂ ಸಿರಿ ಬಂದರೆಂದಿಂದದೆ ಕಮಲಗಳ ಪೊರೆಗೆ ಬರೆ ಭೃಂಗಕೆ॥
ಸಲಲಿತದಿ ಸರ್ವಸ್ವವಿತ್ತು ಸಂಭಾವಿಸುವ।
ರಲೆ ಮಹಾಪುರುಷರಾಶ್ರಿತರ ಗುಣದೋಷಗಳ।
ಕಲನೆಗೊಳ್ಳದೆ ಕಾಯ್ದು ನಿಜಕೀರ್ತಿಯಂ ಸಲಹಿಕೊಂಬುದಿದು ನನ್ನಿಯೆನುತ॥ (19)

ಚಪಲತೆಯು ಚೇಷ್ಟೆ ಕ್ಷಣಕೊಂದುಪರಿ ದುರ್ವಿಷಯ।
ಲಪನೆ ವಂಚನೆ ಭೀತಿ ಕಾತರಗಳಾ ಭಂಗ।
ಕಪಿಗೆ ಸಹಜಂ ಮಾಡಿದಪಕೃತಿಗಳಂ ಮರೆದು ನಿಜಸದ್ಗುಣಗಳನು ಬೆರೆದು॥
ವಿಪದಂಗಳಂ ಪರಿದು ವಿನಯದಿಂ ಪೊರೆವಡಿದು।
ನೃಪರ ನೈಜಂ ಪ್ಲವಂಗವನ ಬಲ ಮರೆಯೊಕ್ಕು।
ಕೃಪೆಯನವಲಂಬಿಸಿದು ಕೃಪಣಸುಗ್ರೀವನದ ವಂದನೆಗಯೋಗ್ಯನನುಜ॥ (20)

ಏನುದುರ್ಗುಣಮಿರ್ದರೆಮ್ಮ ನಚ್ಚಿದ ಬಳಿಕ।
ನ್ಯೂನಾಧಿಕಗಳೆಣಿಸದವರ ಯೋಗಕ್ಷೇಮ।
ಕಾನೆ ಕರ್ತನೆನುತ್ತ ಬಿರುದಾಂತು ಲೋಕಮಂ ಪೊರೆದಪುದಿದೆಮ್ಮ ಮತವು॥
ಭಾನುಸುತನೆಮ್ಮ ಪ್ರಾಣಾಯಮಾನಂ ಮಗುಳ।
ದೇನೆಲ್ಲಮಂತರಮೆನುತ್ತರಿತು ಜಸವು ಜಾ।
ನೀನಮುಪ್ಪಂದದಿಂ ತಿಳುಪಿ ಕರತರವೇಳ್ಕುಮೆಂದೊರೆದನೇಂ ಕರುಣಿಯೊ॥ (21)

ಸಂತೈಸಿ ಲಕ್ಷ್ಮಣನ ಕಳುಪಲಾಜ್ಞಾಪಿಸಿದ ।
ಸ್ವಾಂತಾನುರಾಗಮಂ ತಿಳಿದು ಕೋಪಂ ನಿಲದೆ ।
ಮುಂತಕ್ಕೈದಿದ ರೋಷಕಲುಷಿತಾನನದಿಂದ ನಿಟ್ಟುಸುರ್ಗಳ ಬಿಡುತ್ತಲಿ ॥
ಪಿಂತಿರುಗಿ ನೋಡದತಿವೇಗದಿಂ ಪಥದಿ ತರು ।
ಪಂತಿಗಳ ಕಿಳ್ತುಡುತ ತೋಳ ಘಾಳಗಳಿಂದ ।
ನಂತ್ರೋಪಮಿತನಾಗಿ ಪದಘಟ್ಟಣದಿ ನೆಲನನದುರಿಸುತಮೈತಂದನು ॥ (22)
ಪ್ರಳಯಜಂಝಾನಿಲಾಟೋಪ ಕಾಲಾನಿಲನ ।
ಚಳಕ ಕಲ್ಪಾಂತಭೈರವನಥಟು ಸಂವರ್ತ ।
ಕೆಳೆಯ ಭಾಸ್ಕರನಾರುಭಟೆಗಳಿಗಿಮ್ಮಡಿಯೆಂಬ ಕೋಪದಿಂ ಬರಲಜೇಯಂ ॥
ತಳೆಯ ಜಂತುಗಳೆಲ್ಲ ಕಂಡು ಕಳವಳಿಸುತಿರೆ ।
ತಳೆದ ಶರಚಾಪತೂಣೀರಖಡ್ಗಗಳಿಂದ ।
ನಳನಮಿತ್ರನ ತನಯನಿರ್ಪ ಪತ್ತಣದೆಡೆಗೆ ನಡೆತಂದ ಸೌಮಿತ್ರಿಯು ॥ (23)
ಬರುವ ಪಂಥಾನದೊಳ್ ಕಪಿಯ ದುಷ್ಕೃತ್ಯಗಳ ।
ಸ್ಮರಿಸಿ ಪಲ್ಮೊರೆದೌಡನೊತ್ತಿ ಹೂಂಕರಿಸುತ್ತ ।
ಮರಿನಿಕೃಂತನ ಬರುವ ಪರಿಯ ಕಂಡಂಜಿದರು ನಿಟ್ಟಿಸಿದ ಕಪಿಗಳೆಲ್ಲ ॥
ತರಹರಿಸದಲ್ಲಲ್ಲಿ ಕೂಗುತ ಪಲಾಯನದಿ ।
ತರುತರುಗಳಡರಿ ಕೆಚ್ಚುಕೆರಿದು ಪಲ್ಗಿರಿದಾಗ । [ಯೋಲ್ ॥ (24)
ಲೊರಲಿದರು ನಗರಿ ಮೂರ್ದನಿಗೊಡಲ್ ಕಲ್ಲೋಲಕಲ್ಲೋಲವಾಯ್ತುದಧಿ
ಕೆಲರು ಮರಮುರಡಿಗಳ ಪಿಡಿದು ಪೊರವಳಯದೊಳು ।
ಕೆಲರದ್ರಿಗಳ ಪಿಡಿದು ದ್ವಾರದೇಶಂಗಳಲಿ ।
ಕೆಲಕೆಲರು ತೆರೆವಾಯಿಕೋರೆದಾಡೆಗಳಿಂದ ಪ್ರಾಕಾರದೆಡೆಬಲದೊಳು ॥
ಪಲವಗೆಯ ದನಿಗಳಿಂದಂಬರಪ್ರತಿಧ್ವನಿಯ ।
ಮೊಳಗಿನಂದದಿ ಕೂಗಲಾಗ ಕ್ರೋಧಾನಲ ।
ಜ್ವಲಿತವಾಗಲು ಸಿಂಹನಾದದಿಂ ಲಕ್ಷ್ಮಣಂ ಬೊಬ್ಬಿರಿವುತಾರ್ಭಟಿಸಿದಂ ॥ (25)
ಭೂಕಂಪನಂಗೊಂಡುದಖಿಲ ಕಪಿಕುಲವೆಲ್ಲ ।
ಭೀಕರಕ್ಕಂಜಿ ಮೂರ್ಛಿತರಾದರಡಿಗಡಿಗ ।
ನೇಕಕೋಪಂ ಪರ್ಚುತೈತಂದ ಲಕ್ಷ್ಮಣಂ ನಿಟ್ಟಿಸುತಮಾ ನಗರಮಂ ॥
ನಾಕಕಿಂದತಿಶಯದ ಸೌಭಾಗ್ಯದಿಂದಮತಿ ।
ಶ್ರೀಕರಂ ಚಿತ್ರ ಕಿಷ್ಕಿಂಧಮಂ ಕಂಡು ಘೋ ।
ರಾಕಾರದಿಂ ತೋರ್ಪ ಕಪಿಕರಡಿಗಳ ತತಿಯನೋಡಿ ವಿಸ್ಮಿತನಾದನು ॥ (26)
ಬಿರುಘಾಳಿಯಂದದಿಂ ಮೊರೆಯುತ್ತ ನಿಟ್ಟುಸುರ ।
ಉರಗಪತಿಯೆಂಬಂತೆ ಬರುವ ಲಕ್ಷ್ಮಣನಿರವ ।
ತರುಣಂ ಕುಮಾರನಂಗದ ಕಂಡು ಭಯಗೊಂಡು ಭಕ್ತಿಮುಂಕೊಂಡೆರಗಲು ॥
ಕರುಣದಿಂ ಕುಸ್ತುರಿಸಿ ಕಾಕುಸ್ಥತಿಲಕನುರು ।
ಭರದಿಂದ ಕ್ರೋಧವಶನಾಗಿ ಪತ್ತಣದೆಡೆಯೊ ।
ಳಿರುವದೆಂಬುದನು ನಿಮ್ಮಯ್ಯನೊಡನುಸುರೆಂದು ಪೇಳ್ದು ಬೀಳ್ಕೊಟ್ಟನೊಲಿದು ॥ (27)

ಕನಲಿ ಕಿಡಿಗಳ ಸುಗುಳ್ವ ಕೆಂಗಣ್ಣ ಪುರುಷ ತಾಂ।
ಕಿನಿಸಿಂದ ಬೇಳಲಂಗದ ಭೀತಿಯಿಂದೈದಿ।
ಜನನಿರುಮೆಸುಗ್ರೀವರಡಿದಾವರೆಗೆ ಮಣಿದು ದೀನಭಾವದಲೊರೆದನು ॥
ಜನನಾಥ ರೋಷದಿಂ ಬಂದಿರ್ಪನೆಂದೆನುತ।
ಕನಲಿ ಕೂಗಿಟ್ಟರುಂ ಮದಮೋಹಕೆಚ್ಚರುಂ।
ಜನಿಸದಾದುದು ಗಾಢನಿದ್ರಾವಶತೆಯಿಂದ ತಿಳಿಯನೇನೆಂಬುದೊಂದ ॥ (28)

ಅಂಗದನ ನುಡಿಯಿಂದಮಾಗದಿರಲೆಚ್ಚರಿಕೆ।
ಸಂಗಡದೊಳಾ ಕುಮಾರಂ ತೊಳಲುತಿರೆ ಮನುಜ।
ಪುಂಗವಾರ್ಭಟೆಗಂಜಿ ತಲ್ಲಣಿಸಿ ನಡುಗುತಂ ಶಾಖಾಮೃಗಂಗಳೆಲ್ಲ ॥
ಕಂಗಾಣದಲೆ ಕೂಗಲುದಧಿ ಭೋರ್ಗರೆವಂತ।
ಭಂಗುರದ ರೋಷದಿಂದಖಿಳಮಂತ್ರಿಗಳು ಮಾ।
ನಂಗಳಂದೈತಂದು ರಾಜಸದನವ ಪೊಕ್ಕು ಕಂಡರರಸಿರ್ಪ ಪರಿಯ ॥ (29)

ಜಡಬುದ್ಧಿಯಿಂದರಸನೆಡೆವಿಡದ ನಿದ್ರೆಯೊಳು।
ಕೆಡೆದಿರ್ಪನುಷ್ಣಡೆದ ವಿಷಮದಾಯಾಸ ಸಂ।
ಗಡಿಸಿರ್ದುದಿದನಾವಪರಿಯ ಸೈಪಿಡವೇಳ್ಕುವಣರಿಂದಮುಪ್ಪದೆನುತ।
ಪೊಡವಿಪತಿಯನು ಚಮತ್ಕಾರ ಸತ್ಕಾರದಿಂ।
ಅಡಿಗಡಿಗೆ ನುತಿಗೈವುತೆಚ್ಚರಂಗೊಳಸಲಂ।
ದೊಡನೆ ನಿದ್ರಾಕಷಾಯಿತ ನೇತ್ರದಿಂ ನೋಡುತಿಂತೆಂದ ಸಚಿವನೊಡನೆ ॥ (30)

ಆತಂಕಗೊಳುತೆಲ್ಲರೊಮ್ಮನದಲೊಂದೆಡೆಯ।
ಲೀತ್ರಕ್ಕೈ ಗುಮಿಗೂಡಿ ಮೊಗಮೊಗವ ನೋಡುತ್ತ।
ಭೀತಿಗೊಳುತಿಹುದೇನು ಕಜ್ಜವಂ ಚಿತ್ತರಿಪುದೆನಲರಸಗಿಂತೆಂದರು ॥
ಸೀತಾನಿಮಿತ್ತವಿಡಿದಿರ್ಪರರಸುಗಳು ಬಂ।
ದಾತುರದಿ ವಾಲಿಯಂ ತರಿದು ನಿಮಗೈಶ್ವರ್ಯ।
ಜಾತಾನುಮೋದವಂ ಪಾಲಿಸಿದರೆಂಬುದಿದು ಜ್ಞಾತಮುಂಟಲ್ತೆ ಜೀಯ ॥ (31)

ಆ ಪುರುಷರೊಳಗೊರ್ವನದ್ರೀಂದ್ರ ನಿಭಗರ್ವ।
ಕೋಪದಿಂ ನಗರದೆಡೆಗೈತಂದು ಲಯರುದ್ರ।
ತಾಪಗೊಳಪಂತೆ ಕ್ರೋಧಾಗ್ನಿಯಿಂದಖಿಲ ಕಪಿಕುಲರ ದಹಿಸುತ್ತಮಿರುವ ॥
ಈ ಪರಿಯನಃರಿಗೆಚ್ಚರಿಸಲಕ್ಕುಮೊ ಜೀಯ।
ರೂಪಾಂತ ಸಮವರ್ತಿಯಲ್ಲದವ ನರನಲ್ಲ।
ಮೀ ಪುರೀಜನರ ನಿಂ ವಿಪದದಿಂ ಪೆರದೆಗೆದು ಕಾಯ್ವರಾರೈ ಜಗದೊಳು ॥ (32)

ಅದರಿಂದಮೆಚ್ಚರಿಸವೇಳ್ಕಾದುದೆಂದು ಬೇ।
ಳ್ದದುಭುತದ ಹೃಚ್ಛೂಲನಿಭವಾಣಿಯಂ ಕೇಳು।
ತೆದೆ ನಡುಗಿ ಮುಖ ಗುಂದಿ ಸಚಿವನೊಡನಿಂತೆಂದ ರಾಘವನ ಪದಪದ್ಮಕೆ ॥
ಮುದಮುಖದಲಪರಾಧಮೆಳ್ಳನಿತಿದಾದರುಂ।
ಬಿದುರಿದವನಲ್ಲದೇಂ ಕಾರಣದೊಳಾಮರ್ಷ।
ಮುದಯವಾದುದೊ ಪುರಾಕೃತದುಷ್ಕೃತಮದೆನಗೆ ವಿದಿತವಲೆ ಮಂತ್ರಿವರ್ಯ ॥ (33)

ಭಾನುಕುಲಸಂಭೂತ ಭವ್ಯವಿಗ್ರಹದಾತ ।
ಜ್ಞಾನಸ್ವರೂಪ ನಿಗಮಾರ್ಥಗಳ ಬಲ್ಲಾತ ।
ಗಾನದೇನಪರಾಧಮೆಣಿಸಿದುದು ಲೆಕ್ಕಿಸದೆ ತನ್ನ ಸದ್ಗುಣವ ಮೆರೆದು ।
ಮಾನದಿಂ ಪಾಲಿಸಿದನೆಂಬ ಭರವಸಮೆನ್ನ
ಮಾನಸದಿ ದೃಢಮಾಗಿ ನಿಂದಿದೆಕೊ ಕೈವಿಡಿದು ।
ದೀನತ್ವಮಂ ಪರಿದು ಕಲ್ಪಿಸಿದಪದಿಂದ ಲತ್ಯಾಹಿತಂ ಜನಿಕುಮೆ ॥ (34)

ಅಪಕಾರಮಂ ಮಾಡಲಸ್ಮದೀಯರು ಪೋಗಿ ।
ಗುಪಿತದಿಂದೇನಾದರರುಪಿ ಮಾನಸಕದೇಂ ।
ಚಪಲತೆಯ ಪುಟ್ಟಿಸಿದರದರಿಂದ ಕೋಪಮೇನುದಿಸಿದುದೊ ನೃಪವರಂಗೆ ॥
ವಿಪರೀತಮಿದು ಕಾಲವಶದಿ ಸಂಭವಮಾದ ।
ದುಪಮಿಸಲದಾರ್ಗಳವೆನುತ್ತಮತಿಚಿಂತೆಯಿಂ ।
ತಪನಸುತ ನುಡಿದನಾ ಮಾತಿಗುತ್ತರಮಿತ್ತನಾಗ ಪವನಾತ್ಮಭವನು ॥ (35)

ಸಮದರಿಪು ದೋರ್ಗರ್ವಖರ್ವ ದಾರಾಪಹರ ।
ನಮರೇಂದ್ರಸುತನಾರ ದೆಸೆಯಿಂದ ಹತನಾದ ।
ನಮಿತಕಪಿಕುಲದಾಧಿಪತ್ಯಮಾರಿಂದೊಂದು ನಿಮಿಷದೊಳ್ವಶಮಾದುದು ॥
ಕಮಲಾಕ್ಷಿ ಸೀತೆಗೋಸುಗಮಿನಿತು ಸಂಪದಂ ।
ಸಮನಿಸಿತು ನಿಮಗವರೊಳಾಡಿ ಮಾಡಿದ ಕಾರ್ಯ ।
ಸಮಯಮಂ ಸ್ಮರಿಸದಾದುದು ಚಿತ್ತ ಚಿತ್ತದಾನಂದ ಪರವಶತೆಯಿಂದ ॥ (36)

ತ್ರಿಜಗಮಂ ಸೃಜಿಸಿ ಪೊರೆವಳಿಸುವ ಮಹಾಪುರುಷ ।
ಭಜಿಸಿದ ವಯಸ್ಯಭಾವವನೆಂದು ವಿಷಯಗಳ ।
ಗಜಬಜವನುಳ್ಳದಾತಗಿನಿತಾದರುಂ ಹಿತವನೆಣಿಸದಲೆ ಗ್ರಾಮ್ಯಸುಖಮಂ ॥
ಭಜಿಸೆ ಸಮಯಾತೀತಮಾದ ಕತದಿಂ ಶಮಾ ।
ತ್ಯಜಿಸೆಯಾದುದರಿಂದ ಸೌಮಿತ್ರಿ ತಾಂ ಬಂದ ।
ನಜಭವಾದಿಗಳಿಂದ ನಿಲಿಸುವರಶಕ್ಯಮೀ ವಿಗ್ರಹಂ ದುರಾಗಾಹಕಂ ॥ (37)

ಸಾಮವಚನಗಳಿಂದ ಸಂತಸಂಗೊಳಿಸವೇ ।
ಳ್ಕೀ ಮಹಾಪುರುಷ ಕೃಪವೆತ್ತು ರಾಜೇಂದ್ರಂಗೆ ।
ನೇಮದಿಂ ಬಿನ್ನವಿಸಲಪ್ಪುದು ದಯಾದೃಷ್ಟಿಯಲ್ಲದಾರಿಂದಾಗದು ॥
ತಾಮಸವನುಳಿದು ಜಾಗ್ರಂಗೈಯವೇಳ್ಕೆಂದ ।
ರಾ ಮಾತಿಗನುಸಾರನೆನಿಸುತಂಗದ ನುಡಿಯ ।
ತಾಮರಸಬಾಂಧವತನೂಭವಂ ಚಿಂತಿಸುತಮಿರಲಿತ್ತ ಸೌಮಿತ್ರಿಯುಂ ॥ (38)

ಘುಡುಘುಡಿಸಿ ಕೋಪದಿಂ ಗುಹಾದ್ವಾರದೊಳು ಪೊಕ್ಕ ।
ರೆಡಬಲದಿ ಕಾಯ್ದಿರ್ದ ಕಪಿವೀರರತಿಭಯದಿ ।
ಪೊಡಮಟ್ಟು ಕೆಲಸಾರಲಾರನುಂ ನಿಟ್ಟಿಸದೆ ಜವದಿಂದ ಬರುತಮಿರಲು ॥
ಸಡಗರದ ನಂದನಂ ಕಾಸಾರನದಿಗಳುಂ ।
ಬೆಡಗಿನರಮನೆಗಳುಂ ವಿಪಣಿಗಳ ಸಂಭ್ರಮಂ ।
ಬಿಡುಗಣ್ಣರೊಡೆಯನಿಹ ರಾಜಧಾನಿಯದೆಂಬೊಲಚ್ಚರಿಯ ಪುರಮೆಸೆದುದು ॥ (39)

ನವರತ್ನಮಯದ ಸೌಧಂಗಳಾವಾವೆಡೆಯು ।
ಲವಿರಳದ ಸೌವರ್ಣ ವೇದಿಕಾಂತರಗಳುಂ ।
ನವರಸಾಸ್ಪದ ಶುಕಪಿಕಾಂಗನಾ ಮಾಧುರ್ಯರವಕಲಿತದುಪವನಗಳಿಂ ॥
ಶಿವಕರದ ನಗರಿಯು ನಿಜಾವಾಸಕೆಂದೆಂಬ ।
ಲವಲವಿಕೆಯಿಂದವಜ ಮಾನಸದಿ ಸೃಜಿಸಿದನೊ ।
ಭುವಿಯೊಳಚ್ಚರಿಯೆನುತ ವಿಸ್ಮಯದಲೀಕ್ಷಿಸುತ ಲಕ್ಷ್ಮಣಂ ನಡೆತಂದನು ॥ (40)

ದೇವಗಂಧರ್ವಯಕ್ಷಾದಿಗಳು ಪ್ರಿಯದಿ ರಾ ।
ಜೀವಭವನೇಮದಿಂ ನಿರ್ಮಿಸಿದ ಸಂತಾನ ।
ವಾವೆಡೆಯು ಕಂಗೊಳಿಪ ರತಿ ಕಾಮರೂಪಿಗಳ್ ಶೃಂಗಾರರಸಮೆಂಬೊಲು ॥
ಕಾವನಂ ಕೂಬರ ಜಯಂತರಪ್ರತಿಮರತಿ ।
ದೇವಿಯಪ್ಸರೆಯರಂ ಧಿಕ್ಕರಿಸಿ ಬೆಡಗಿಂದ ।
ಮಾ ವಧೂಜನರಿರ್ಪರಾ ನಗರದತಿಶಯವ ಬಣ್ಣಿಸಲದೆಂತಪ್ಪುದು ॥ (41)

ರಾಜಮಂಡಲವನಂಡಲೆವ ಸೌಧಾಗ್ರಗಳ ।
ರಾಜಿಯುರುಕಾಂತಿಗಳಿ ರಾಜೀವಮಿತ್ರ ನುಡು ।
ರಾಜತೇಜಂಗಳಂ ಕೊಡುತಮಿರ್ಪುವು ಸಕಲಸೌಭಾಗ್ಯ ಸಂಭ್ರಮದೊಳು ॥
ರಾಜಿಸುವ ಶೃಂಗಾರತರವಾದ ಸೌಖ್ಯಕರ ।
ರಾಜವೀಧಿಯ ಪೊಕ್ಕು ಕೆಲಬಲದಲಾರೈವ ।
ರಾಜಗತ್ಪತಿಯಿರ್ಪ ವೈಕುಂಠಸದನಮೆನಲೆಸೆದುದಚ್ಚರಿ ಬೀರುತ ॥ (42)

ಅಂಗದಂ ನಳನೀಲಶತಬಲಿಯು ಮೈಂದದ್ವಿವಿ ।
ಧಂಗಳಾಲಯಗವಾಕ್ಷಂ ಗವಯ ಗಜಶರಭ ।
ಸಿಂಗ ವಿದ್ಯುನ್ಮಾಲಿ ಸಂಪಾತಿ ಸೂರ್ಯಾಕ್ಷ ನಳನೀಲ ವೀರಬಾಹು ॥
ಪಿಂಗಾಕ್ಷ ಜಾಂಬವ ಸುಷೇಣ ದಧಿವಕ್ತ್ರರ ಗೃ ।
ಹಂಗಳಂ ನಿಟ್ಟಿಸುತ ವಿಸ್ಮಯಾಕ್ರಾಂತಹೃದ ।
ಯಂಗಮಿತ ಚಿತ್ರಗಳ ನೋಡುತಚ್ಚರಿಗೊಳುತ ನಡೆದನಾ ಸೌಮಿತ್ರಿಯು ॥ (43)

ಮುಂಗಡೆಯಲೆಸೆದುದರಮನೆ ಶರತ್ಕಾಲಮೇ ।
ಘಂಗಳಂದದಿ ಪೊಳೆವ ಸೌಧಂಗಳಿಡಬಲದೆ ।
ಶೃಂಗಾರನಾಯಕಾಮಣಿಗಣವಿರಾಜಿತದ್ವಾರದೇಶಂಗಳಿಂದ ॥
ಸಂಗೀತಮಾಧುರ್ಯ ಕಲರವಗಳಿಂದಂಗ ।
ನಾಗಣ ನೃಪೋದ್ಯಾನದೊಲು ಕ್ರೀಡಿಪ ಬೆ ।
ಡಂಗಿನಿಂದಮರೇಂದ್ರವೈಶ್ರವಣರರಮನೆಯ ಸಿರಿಯಿಂದ ರಾಜಿಸಿದುದು ॥ (44)

ಯೆಲ್ಲರುರುಗಳನೊಂದು ಪಲ್ಲವಿತಗೈವ ತರು ।
ಸಲ್ಲಲೆಯಿಂದೆಸೆಯೆ ಮುಂದಕೈದುತ ಕಂಡೆ ।
ಸಲ್ಲ ಶಾರ್ದೂಲಕೇಸರಿಗಳಂತತಿಭೀಮರೂಪಿಂತ ವಾನರರನು ॥
ಭಲ್ಲೆಯಾಡಿಗಳಿಂದ ಬಹುತರಮರಂಗಳಿಂ ।
ದೆಲ್ಲೆಲ್ಲಿ ನೋಡಲೆಡದೆರಪಿಲ್ಲದರಮನೆಯ ।
ಸುಲ್ಲಸದಿ ಕಾಯ್ದಿರ್ಪ ವೀರಪ್ಲವಗಾಧಿಪರ ನೋಡುತಚ್ಚರಿವಟ್ಟನು ॥ (45)

ಎಡಬಲವ ನೋಡದಾರೊಡನೆ ಮಾತಾಡದಲೆ ।
ಘುಡುಘುಡಿಪ ಕೋಪದಿಂ ಸಪ್ತಕಕ್ಷ್ಯಾಂತರಗ ।
ಳೆಡೆಗೆಡೆಗೆ ನಿಲ್ಲದೊಳಪೊಕ್ಕರಲ್ಲಿರ್ಪರತಿಭಯದಿ ಮೌನದೊಳಿರ್ದರು ॥
ಕಡುವೇಗದಿಂದಮಂತಃಪುರದ ಪೊರೆಗೈದ ।
ಳೆಡೆಗೆಡೆಗೆ ಹೈಮರಾಜಿತವರಾಸನಗಳಂ ।
ದೊಡನೊಡನೆ ಪರಪಿದಾಸ್ತರಣವೈಭವದಿಂದ ತೋರ್ದುದದನೇವೇಳ್ವೆನು ॥ (46)

ಮಿಂಚಿನ ಬಳಗ ನೆಲದಿ ಮೂರ್ತಿಯಾಂತ್ಯೈತಂದು ।
ಸಂಚರಿಪ ತೆರದಲಂಗನೆಯರಡಿಗಡಿಗೆ ಕುಡಿ ।
ಮಿಂಚುಗಳ ಸಂಚುಗಳ ಕಡೆಗಣ್ಣ ನೋಟದಿಂ ತೋರುತ್ತಮೆಡೆಯಾಡುತ ।
ಅಂಚೆಗಮನೆಯರಿರ್ದರತಿಮಧುರಯತಿಲಯದಿ ।
ಸಂಚಿತದ ವಲ್ಲಕೀನಾದಗಳನನುಸರಿಸಿ ।
ಸಂಚಾರಿಗಳ ಪಿಡಿದು ಪಾಡುವ ಮನೋಹರಂ ಕೇಳ್ದುದಾ ಸೌಮಿತ್ರಿಗೆ ॥ (47)

ಮುಂದಕಡಿಯಿಡಲು ಕಿರಿಘಂಟಿ ನೂಪುರರವಗ ।
ಳಂದ ಕೇಳ್ಪಡಲಾಗ ಸೌಮಿತ್ರಿಯತಿಲಜ್ಜೆ ।
ಯಿಂದ ತಲೆಬಾಗಿ ಮುಂದಕೆ ಪೋಗದಲೆ ನಿಂದು ಜ್ಯಾಘೋಷಮನ್ನೆಸಗಲು ॥
ಬಂಧುರಕಠೋರಸಿಡಿಲೋಪಮಿತಕ್ರೂರರವ ।
ದಿಂದ ಸೌಮಿತ್ರಿ ತಾಂ ಬಂದ ಕೋಪದೊಳೆಂದು ।
ಕುಂದಿ ಸುಗ್ರೀವ ಭಯದಿಂದ ಗದ್ದುಗೆಯಿಳಿದು ನೆನೆದನಂಗದನ ನುಡಿಯ ॥ (48)

ತೋರದಾದುದು ಬುದ್ಧಿ ಜಡತೆಯಿಂದಲಿ ಭೀತಿ ।
ತೋರಿತಿದಕೇನೆಂಬೆನೆನುತ ಚಿಂತಿಸಿ ಕರೆದು ।
ತಾರೆಯೊಡನಿಂತೆಂದನತಿಕೋಪದಿಂ ಬಂದ ಲಕ್ಷ್ಮಣನ ಪೊರಗೆ ಪೋಗಿ ॥
ಚಾರುಮೃದುನುಡಿಗಳಂ ಕೋಪಶಾಂತಿಯಗೊಳಸು ।
ವೀರರಂಗನೆಯ ನಿಟ್ಟಿಸಿ ಕ್ರೋಧಮಂ ಗೈಯ ।
ರೋರಂತೆ ಕರುಣಿಸುವರೆನೆ ಕೇಳಿ ತಾರೆ ನಡೆತಂದಳತಿವಿನಯದಿಂದ ॥ (49)

ಕಲಹಂಸಗತಿಯಿಂದ ಮೈತಂದು ಪ್ರೇಮದಿಂ ।
ಕಲಿಗಳಗ್ರೇಸರನ ಮುಂಗಡೆಯ ನಿಲೆ ನೋಡೆ ।
ದಲಘುಮತಿ ಲಜ್ಜೆಯಿಂ ದಿಟ್ಟಿಸದುಪೇಕ್ಷೆಗೈದಿರೆ ಕಂಡು ತಾರೆ ನಯದಿ ॥
ಜಲಜಾಕ್ಷ ಭವದೀಯವಚನದಿಂ ಪೆರತಾರು ।
ಸುಲಭಕೋಪಮಿದೇನುಕತದಿ ಸಂಭವಮಾಯ್ತು ।
ಚಲಿಸಲಾಗು ಪುನಲದ ಪರತ್ವತದಿ (?) ಕಡಿವದೇನತಿಶಯದಿ ಘನತೆ ನಿಮಗೆ ॥ (50)

ಎಡಹಿದರೆ ಪೋಪ್ಪುದಂ ಪೊಡವಿಯನ್ನಗಿದು ತೆಗೆ ।
ದಿಡುವುದು ವೃಥಾಶ್ರಮಂ ಭಯದೈನ್ಯತೆಯೊಳು ಪೇ ।
ರಡವಿಯೊಳು ಚರಿಸುವನಿಗಭಯಮಂ ಕೊಟ್ಟು ಕೈವಿಡಿದು ಪಾಲಸೆಯಗೈದು ॥
ದೃಢತರಾಪ್ತತೆಯಿಂದ ಮಿತ್ರನೆಂದಾಡಿ ಹಿಂ ।
ಗಡೆಯಲೀ ಪರಿಗೈಯಲುಚಿತವೇ ಸರ್ವಜ್ಞ ।
ರೊಡೆಯ ನೀನರಿಯದುದೆ ಕುಲವ ನಿಟ್ಟಪುದೆನುತ ವಿನಯದಿಂ ಬಿನ್ನವಿಸಲು ॥ (51)

ತಾರಾವಚನದಿಂದ ಕರಗಿತಂತಃಕ್ರೋಧ ।
ದಾರುಭಟೆ ನಿಲಲು ನಿಷ್ಠುರವಚನದಿಂದಮತಿ ।
ದಾರುಣವ ತೋರ್ಪಡಿಸುತಿಂತೆಂದ ದುರ್ಮೇಧೆಯಿಂದ ಸುಖಲೋಲನಾಗಿ ॥
ಧಾರಿಣೀಶನ ಮನೋವ್ಯಥೆಯ ನೋಡದೆ ನಿಜ ವಿ ।
ಕಾರಮಂ ಪ್ರಕಟಿಸಿದ ಸುಗ್ರೀವನಂ ಪಿಡಿದು ।
ದಾರ ಶಿಕ್ಷಣೆಗೈಯದುಳಿವುದನ್ಯಾಯಮಿದು ಸಕಲಧರ್ಮಾಶ್ರಯವು ॥ (52)

ಕೆಡಹಿ ಧರ್ಮಾರ್ಥಗಳ ಕಾಮೋಪಸೇವನೆಯೊ ।
ಳೊಡನೆ ಪಾನಾಸಕ್ತನಾಗಿ ಮತಿಯನ್ನೀಗ ।
ತೊಡರಿ ತಾಮಸವೃತ್ತಿಯಿಂದಲುಂ ಹರಿಹಂಗಳರಿಯದಲೆ ಮೂಢನಾದಂ ॥
ಕೆಡುಗು ಪಾನದಲಖಿಲಕಾರ್ಯಂಗಳಾರ್ಯನಿ ।
ರ್ದಡೆಯು ಕಾಣದೆ ನಾಲ್ಕುತಿಂಗಳೂರೊಳಗಿರ್ದ ।
ಕೆಡುಕನಂ ಶಿಕ್ಷಿಸುವೆನೆಂದೊರೆದ ಲಕ್ಷ್ಮಣಂಗಿಂತೆಂದಳಾ ತಾರೆಯು ॥ (53)

ಛಂದವಾದುದು ದೇವರಾಜ್ಞಾಪಿಸಿದ ಪರಿಯು ।
ಮಂದನಾಗಿರಲಿಲ್ಲ ನಿಮ್ಮನುಜ ಸುಗ್ರೀವ ।
ಮುಂದರಿತು ರಾಮಕಾರ್ಯಾರ್ಥಮಾಗೀ ನೆಲದೊಳುಳ್ಳ ಕಪಿಯೂಥರನು ॥
ಒಂದೆರಡುದಶಕೋಟಿಪರಿಯಂತ ನೆರಹಿರ್ಪ ।
ನಿಂದು ಪ್ರಾವೃಟ್ಕಾಲ ಶರದಾಗಮಂ ಬರುವ ।
ದೆಂದಿಗೆಂದಿಗೆನುತ್ತ ಪಥವ ನಿಟ್ಟಿಸುತಿರುವ ಸ್ವಾಮಿ ಕಾರ್ಯಂಗಳೆಣಿಸಿ ॥ (54)

ವಿರತಿಯಿಂದೀಷಣತ್ರಯಗಳಂ ವರ್ಜಿಸಿದ ।
ಪರಮಮುನಿಗಳು ಸರಸಿಜಾಕ್ಷಿಯರ ಕಾಣಲ್ಕೆ ।
ತೊರೆದಪರು ನಿಯಮಗಳನೆಂಬುದಿದು ಪದಿನಾಲ್ಕುಲೋಕ ಜನರರಿತಿರ್ಪರು ॥
ಅರಿಯದಜ್ಞಾನಿ ವಾನರನೆಂತು ಭೋಗಗಳ ।
ಪರಿಹರಿಪನಿದು ಭವಚ್ಚಿತ್ತಮೇನರಿಯದುದೆ ।
ನರದೇವ ಪಾಲಿಪುದನನ್ಯಶ್ರಯೋಲಾಭಮೆಂದು ಚಿತ್ತದೊಳರಿವುದು ॥ (55)

ಸುಗುಣ ಲಾಲಿಪುದೆನ್ನ ಬಿನ್ನಪವ ಸುಗ್ರೀವ ।
ಜಗತ್ರಯೊಳಗುಳ್ಳಖಿಳಯೂಥಪರ ಗುಮಿಗೊಳಿಸಿ ।
ಜಗತೀತನೂಭವೆಯ ನರಸಿತಂದೀವನೀ ನುಡಿಗೆ ಸಂಶಯಮಿಲ್ಲವು ॥
ಪಗೆಯಿಲ್ಲ ತನುಮನಂ ನಿಮ್ಮಡಿದೆ ದಯಗೈದು ।
ಮಿಗೆ ಹರುಷಗೊಳಿಸಿ ಭೀತಿಯ ಬಿಡಿಸಿ ಚಿಂತಿಸುವ ।
ಬಗೆಯನಪಹರಿಸು ಮೈತ್ರಿಯ ಬೆಳೆಸು ಭಜಕ ಭವದೀಯನೆನಿಸು ॥ (56)

ಮನೆಮನೋವಾರ್ತೆತನು ಧನಗಳೆಲ್ಲವು ನಿನ್ನ ।
ವನುಜ ಸುಗ್ರೀವನೆಂತಃಪುರದಲೊಪ್ಪಿರುವ ।
ಜನರಾತ್ಮಜಾತನೆನ್ನನುಮಾನಮನ್ನುಳಿದು ಪ್ರಿಯದಿಂ ಪ್ರವೇಶಗೈದು ॥
ಮನದೊಲವಿನಿಂದಮಾತ್ರನ ಭೀತಿಯಂ ಪರಿದು ।
ಜನನಾಥನೆಡೆಗೆ ಕರದೊಯ್ಯದ್ದಖಿಲಸನ್ನಾಹ ।
ವನು ತೋರೆ ಸುಪ್ರೀತನಪ್ಪನೆಣಿಸಂ ತಪ್ಪ ನುಡಿಯ ಲಾಲಿಪುದು ಬೊಪ್ಪ ॥ (57)

ಸುದತಿಯಾಡಿದ ನುಡಿಗೆ ಸಂತಸದಿ ಸೌಮಿತ್ರಿ ।
ಹೃದಯಾನುಮೋದದಿಂ ಸುಗ್ರೀವನಂ ಕಾಣ್ಬ ।
ರಧಿಕಹರ್ಷದೊಳ್ಪೈದಿ ಕಂಡನಂತಃಪುರದಿ ಕಾಂಚನದ ಗದ್ದುಗೆಯೊಳು ॥
ಉದಯಾಚಲಾರೂಢ ಭಾಸ್ಕರೋಪಮನೆನಿಸಿ ।
ಮದಹಸ್ತಿಗಮನೆ ರುಮೆಮುಖ್ಯರಾದಂಗನೆಯ ।
ರದುಭುತದಲಂಕಾರವೆತ್ತು ಕುಳ್ಳಿರಲಾಗ ಕಂಡನಾ ಸೌಮಿತ್ರಿಯು ॥ (58)

ಅಚ್ಚರಿಯ ವೈಭವವ ಕಂಡರಾ ಲಕ್ಷ್ಮಣಗೆ ।
ಕೆಚ್ಚನಾದುವು ಕಂಗಳಡಿಗಡಿಗೆ ನಟಿಪ ಶ್ಮ ।
ಶ್ರುಚ್ಚಾಲನೆಯು ಮುಖದರೌದ್ರಮುಂ ಕಂಡಳ್ಕಿ ಬಳ್ಕುತಾಸನವನಿಳಿದು ॥
ಬೆಚ್ಚಿ ಪೊಡೆದಂತೆ ಕರಗಳ ಮುಗಿದು ನಿಂದಿರಲ ।
ಮಚ್ಚರಿಗೆ ಕೋಪ ಸಂಭವವಾಗಿ ಬಿರುನುಡಿಗ ।
ಳುಚ್ಚಾವಚಗಳಿಂದ ನುಡಿದು ಲಕ್ಷ್ಮಣನತುಳ ಧರ್ಮಸಂಗತಿವಿಡಿದನು ॥ (59)

ಸಾಧುಪೋಷಕ ಕೃಪಾಕರ ಜಿತೇಂದ್ರಿಯ ಸತ್ಯ ।
ವಾದಿಯು ಕೃತಜ್ಞ ಕಲ್ಮಷಲೋಕಕಹಿತ ಹಿತ ।
ದಾದರಣೆಯುಳ್ಳ ನೃಪ ಚಿರಕಾಲ ಸುಖಿಮಿರ್ಪನಲ್ಲದೆ ದುರಾತ್ಮತೆಯೊಳು ॥
ಆದ ಪರಿಗಪಕಾರಮೆಸಗುತುಪಕೃತಿಯೆಂಬ ।
ಬೋಧೆಯಂ ಮರೆದನೃತಕೊಡಬಟ್ಟ ನರನಾಥ ।
ಪೋದಲ್ಲದಿರಮಿದುವೆ ಲೋಕಾನುಮತ ಶಾಸ್ತ್ರಸಮ್ಮತಂ ವರಕಪೀಶ ॥ (60)

ಒಂದಶ್ವದನೃತಂ ಶತಾಶ್ವಹತಪಾತಕವ ।
ನೊಂದುಧೇನುವಿನ ಪುಸಿ ಗೋಸಹಸ್ರದ ಹತಿಯ ।
ನೊಂದು ಪುರುಷಾನೃತಂ ಕುಲಗೋತ್ರವಾತ್ಮಾನಹತಿಯನಿತ್ತಪುದೆನ್ನುತ ॥
ಛಂದದಿಂ ಪೇಳ್ವ ಶಾಸ್ತ್ರಂಗಳನುಮತಿಯ ನೀಂ ।
ಪೊಂದದಾದೆ ದುರಾತ್ಮ ಶಿಕ್ಷಾರ್ಹನಲ್ಲದೇ ।
ನೊಂದೇಳಿಸ ಸಲ್ಲ ಸಂಭಾಷಣಾಯೋಗ್ಯ ನೀನಲ್ಲ ಪುಸಿಯನಿತಿದಲ್ಲ ॥ (61)

ಪೂರ್ವೋಪಕೃತಿಗೈದ ಪುಣ್ಯಪುರುಷರ್ಗೆ ತಾಂ ।
ಸರ್ವಶಕ್ತಿಯೊಳು ಪ್ರತ್ಯುಪಕಾರಗೈಯದಲೆ ।
ಗರ್ವದಿಂ ಗ್ರಾಮ್ಯಸುಖಕೆಳಸಿ ಶರೀರವಂ ಮರೆದ ಪಾತಕಿಯ ನೋಡಿ ॥
ದುರ್ವಿದಗ್ಧತೆಯಿಂದ ಮರೆದಿಡದೆ ಪೋದವಗ ।
ಖರ್ವದುರ್ಗತಿಯೆನುತ ಶ್ರುತಿವಿಹಿತವೆಂದಾ ಸು ।
ಪರ್ವಾಣರಗ್ರಜ ನಿರೂಪಿಸಿದನಿದು ಸತ್ಯಮೆನುತ ತಿಳಿ ಕಪಿಲಲಾಮ ॥ (62)

ಪಾನ ಗುರುವಂಗನಾಗಮನ ಸ್ವರ್ಣಸ್ತೇಯ ।
ಕಾನನಧ್ವಂಸ ಗೋಬ್ರಹ್ಮಹತ್ಯಾದಿಗಳ ।
ಗೇನಾದರೊಂದು ಪ್ರಾಯಶ್ಚಿತ್ತಸಂಭವಿಪುದಲ್ತೆ ಶಾಸ್ತ್ರಂಗಳಲ್ಲಿ ॥
ಹೀನಶಠದುರ್ಮಾತ್ರಿಕೃತಘ್ನಗೆ ಹಿತಂಗಳಂ ।
ಜಾನಿಸದ ಪಾತಕಿಗೆ ನಿಷ್ಕೃತಿಯದುಂಟೆ ಕಪಿ ।
ನೀನನರ್ಥಕೆ ಪೊಕ್ಕೆಯೆನುತ ಲಕ್ಷ್ಮಣ ನುಡಿದರಿಂತೆಂದಳಾ ತಾರೆಯು ॥ (63)

ಕ್ರೂರಮತಿ ಶಠ ಕೃತಘ್ನಂ ದುರ್ವಿಚಾರಪರ ।
ದೂರನಲ್ಲಂ ಕಪಿಕುಲೇಶ ಪತಿಕಾರ್ಯವಂ ।
ಘೋರುವದೊಳನುಗ್ರೈವ ಕಾಲಾನುಸರಣೆಯಿಂ ನಿಟ್ಟಸುತವೂರೊಳ್ದರ್ದಂ ॥
ಧೀರ ನಿಮ್ಮಯ ವಚನದಲೆ ನಿಟ್ಟುರಂಗಳಂ ।
ದೋರಂತೆ ಬರೆ ಸಲ್ಲ ರಘುಕುಲಾನ್ವಯರೆಲ್ಲ ।
ಕಾರುಣಿಕರತಿಗರಿಮಗಂಭೀರಗುಣಕಲಿತರೆಂಬುದಂ ಸ್ಮರಿಸು ಜೀಯ ॥ (64)

ಅಟವಿಯೊಳು ಚರಿಸುವನ ಕೈವಿಡಿದು ರಾಜ್ಯ ಸಂ ।
ಘಟನೆಗೈದಿತ್ತು ಮಿತ್ರತೆವೆತ್ತು ಮೃದುಲತಾ ।
ತ್ರುಟನೆಗೈದೀ ಪರಿಯ ನಿಷ್ಠೂರಗೊಳಪುದಿದು ಸಾಧುಗಳ ಮತವಲ್ಲವು ॥
ಕುಟಿಲಂ ಕಳಂಕಿ ಮಿತ್ರಾವಸಾನವ ನೋಡು ।
ತಟನೆಗೈದಪನು ದೋಷಾಕರಂ ಹರನವನ ।
ಜಟೆಯ ಭೂಷಣಗೈದನಂಗೀಕರಿಸಿದವರ ಪೊರೆದಪರು ಸುಜನರಲ್ತೆ ॥ (65)

ಅಬಲನೆಂದೆಣಿಸದಿರು ದೇವಾಸುರರ್ಕಳಂ ।
ದಭಯರೆಂದೆನಿಸಿ ಬರೆ ಗಣಿಸಿದವರಂ ಪೊಡೆದು ।
ಕುಬುಬರಿವ ಬಲಿಯೆನುತ ವಾಲಿ ಪೇಳದನೀ ಕಪೀಶಬಲದಧಿಕ್ಯವಂ ॥
ಶುಭವ ತಂದೀವನಂ ಬಿಡನೆಂಬ ಪ್ರೇಮವಿ ।
ತ್ತಭಯಗಳ ಸ್ಮರಿಸಿ ಮೃದುನುಡಿಯಿಂದವುಪಚರಿಪು ।
ದಿಭರಾಜಸಾಸಿರಪರಾಕ್ರಮಿಯ ಚಿತ್ತಾನುಕಾರಿಯಿಂ ಬಲಿಯ ಹರಿಯ ॥ (66)

ಎನುತವಿಾಪರಿ ತಾರೆಯುಂ ಪೇಳ್ದುದಂ ನೋಡಿ ।
ವಿನಯದಿಂ ಸುಗ್ರೀವ ಲಕ್ಷ್ಮಣನೊಳಂತೆಂದ ।
ಜನನಾಥ ನಿವ್ರ್ಯಾಜ ಕ್ರೋಧಮೇಂ ಕಾರಣದಿ ಸಂಭೂತವಾಯ್ತು ನಿನಗೆ ॥
ವನದಲತಿದೀನತೆಯನಾಂತು ತಲ್ಲಣಗೊಳುವ ।
ದನು ಕಂಡು ಕಾರುಣ್ಯದಿಂದ ಶ್ರೀರಘುನಾಥ ।
ಮನೆಯರಸುತನ ಸುಖಾಭೋಗಂಗಳೆನಗಿತ್ತುದಾತನ ಕಟಾಕ್ಷದಿಂದ ॥ (67)

ಹರಿಯಕ್ಷನಿಭಸುರಪಸುತನ ಕರಗತವಾದ ।
ಸಿರಿಯ ಸೆಳೆದರದಾರು ಶರಣರಕ್ಷಕನೆಂಬ ।
ಬಿರುದನಂಗೀಕರಿಸಿ ವಾಲಿಯಂ ಸಂಹರಿಸಿ ಪೊಪ್ಪದಿಂ ಕಪಿರಾಜ್ಯವಂ ॥
ಕರುಣಿಸಿದ ಪರಮಪುರುಷನ ಪದಸ್ಮರಣೆಯಿಂ ।
ಪರಿಪರಿಯ ಭೋಗಗಳನನುಭವಿಸುತಾನಂದ ।
ಭರಿತನಾಗಿರ್ದ ತನುಮನಧನಂ ಸತಿಯರಂ ಚರಣಾಬ್ಜಕರ್ಪಿಸಿದೆನು ॥ (68)

ಶರಮೊಂದರಿಂದ ತಾಳೋದ್ಭೇದನಂಗೈದು ॥
ಧರಣಿಯಂ ಸೀಳ್ದು ಮಗುಳ್ದೈತಂದು ತೂಣೀರ ।
ದಿರವೆನಿಸಿದಪ್ರಮೇಯಾತಿಬಲ ಮುಲ್ಲೋಕನಾಥ ರಘುನಾಥನಿಂಗೆ ॥
ನೊರಜು ನಾನೇಂ ಗೈವೆ ಸಾಹಾಯ್ಯಮೇನ್ಸೈ ಜಗ ।
ದ್ಭರಿತವಿಕ್ರಮಮುನಿಯ ಪದಿನಾಲ್ಕು ಲೋಕಗಳ ।
ಸರಳಗ್ರದೊಳ್ ತರುವ ಪ್ರೀತಿ ಬರೆ ಪಾಲಿಸುವ ಜಗದೇಕವೀರನನಘಾ ॥ (69)

ತಪನಕುಲಪಾವನ್ನನೆನ್ನಪಾಲಿಸಿದ ಪರಿ ।
ಗುಪಕಾರವಮಂ ಮಾಡಿ ಮೆಚ್ಚಿಸುವಡೇಸರವ ।
ಕಪಿ ಚಪಲನಲ್ಪಸಾರಾನ್ವಿತನುಮೆನುತಖಿಲಲೋಕಮೆಲ್ಲಂ ಬಲ್ಲದು ॥
ಕೃಪೆಯಿಂದ ಡಿಂಗರಿಗನೆಂದೊರೆದು ಕರವಿಡಿದು ।
ಕೃಪಣತೆಯು ಪರಿದು ಸಂಪದಮಿತ್ತು ದೇವಗಾ ।
ನುಪಮೆದಾರೆಂದೆನಿಪೆನನುದಿನಂ ಮನ್ಮನೋವಮಂದಿರದಿ ಪೂಜಿಪೆನೆಲೈ ॥ (70)

ಯೆನ್ನಿಂದವುಪಕಾರವಾ ಮಹಾಪುರುಷಂಗ ।
ಮೆನ್ನದನ್ಮವ ಸಫಲಮೆನಿಸಲ್ ಪ್ಲವಂಗಬಲ ।
ವನ್ನು ನೆರಪಿಹೆನರಸ ಮಳೆಗಾಲವಂ ಕಳೆದು ಕಾರ್ಯಕೊದಗುವೆನೆನ್ನುತ ॥
ಸನ್ನಾಹದೊಳಗಿರ್ದೆನಲ್ಲದಾಂ ಮದವತ್ತು ।
ನೆನ್ನಿಸಿರೆನಾದಡಂ ಸೇವಕನ ದೋಷಂಗ ।
ಳನ್ನೆಣಿಸಲೇನುಂಟು ಕರುಣಾರಸನಿ ಪೊರೆಯಬೇಳ್ಕೆನುತ ಕೈಮುಗಿದನು ॥ (71)

ವಿನಯಮೃದುಮಧುರತರವಚನಂಗಳಿಂದಾಗ ।
ಮನಕೊದಗಲಾನಂದವೋವಿ ರವಿನಂದನನ ।
ಬಿನದವೆನಲಪ್ಪಿ ಸಂತೈಸಿ ಸಿಂಹಾಸನದಿ ಕುಳ್ಳಿರಿಸಿ ಮಮತೆಯಿಂದ ॥
ಸನುಮತಂಗೊಳಸಲನುಗ್ರಹದ ಶ್ರೀರಾಮಪದ ।
ವನಜಸಾರಸಭೃಂಗ ಭವದೀಯ ಭಕ್ತಿಬಲ ।
ವನು ಪೊಗಳಲೆನ್ನಳವೆ ಸಾರಾಂಶಮಂ ತಿಳಿದು ಹರುಷಿಸುವುದೆನುತೊರೆದನು ॥ (72)

ಜಗತೀತಳದಿ ರಾಮಗಹನಾಂಕಣಭೀಮ ।
ನಿಗೆ ತಕ್ಕ ಸೇನಾನಿ ನೀಂ ಜಯಶ್ರೀಜಾನಿ ।
ಯುಗಪದಿಟ್ಟಿಸಲಾವ ಕಾರ್ಯವಾಗದು ಜೀವಲೋಕ ನೆನೆದಡೆ ಬಾರದೇ ॥
ಸುಗುಣತಿಳಯದ ಜಾಡ್ಯಮತಿಯೊಳತಿಕ್ರೂರಾಢ್ಯ ।
ದಗಣಿತದ ನುಡಿಗಳಂ ಮರೆಪ್ರದಾರಡಿಗಳಂ ।
ಜಗದೀಶ ದುಮ್ಮಾನಮನ್ನೀವಿ ಸನ್ಮಾನಮುಳದೆನಾಂ ಕಪಿಕುಲೇಂದ್ರ ॥ (73)

ಶರದಾಗಮಮದಾಗೆ ಮೊರೆವ್ರತಾರಡಿ ಕೂಗೆ ।
ಮಿರುಗೆ ಕಾದಂಬಗತಿ ಚಲಿಸಲ್ಕದಂಬತತಿ ।
ಗಿರಿಮಲ್ಲಿಕಾಪ್ರತತಿ ಪರಿಮಳವಬೀರಲತಿರಾಗವೋರ್ವಡೆ ರಘುಪತಿ ॥
ಧರಣಿಜೆಯು ನೆನೆನೆನೆದು ದೈನ್ಯರಸನೊಳ್ ನನೆದು ।
ಪರಿಪರಿಯ ಪಲುಬುತಿರೆ ಪರಿಣಾಮಗೊಳ್ಳದುರೆ ।
ಮರುಗಿತಂತಃಕರಣದಿಂ ಮುಂದೆ ವಿಬುಧಜಣ ಕಾಣ್ಬರಾದುದು ಕಾರಣಂ ॥ (74)

ಬೇಗ ನೀನೈದಿ ಸಂತೈಸದಿರಲಿನ್ನಾರು ।
ಪೋಗಿ ಸಂತಸಗೊಳಪ ವೀರರುಂಟೇ ತೋರು ।
ಭೋಗಜೆಯಮಿರುವ ಪೊಣೆ ನೀನಲ್ಲದಾವನೆಣೆಯಾಗುವಂ ಭೂತಳದೊಳು ॥
ಜಾಗವಹುಡದೆ ನಡೆದು ಜಂಜಡಗಳಂ ಪೊಡೆದು ।
ಶ್ರೀಗರುವನಂ ಪೊರೆದು ಶ್ರಿತವಾಂಛೆಯಂ ಮೆರೆದು ।
ಸಾಗರಾಂತದ ಕೀರ್ತಿಯನ್ನಾಳ್ದುಚಿರಸುಖದಿ ಬಾಳ್ದಪುದು ಕಪಿಕುಲೇಶ ॥ (75)

ಎಂದು ಸೌಮಿತ್ರಿ ಕುಸ್ತರಿಸಿ ಹರುಷೋತ್ಸುಕದೊ।
ಳೆಂದು ಭಾಸ್ಕರತನಯ ಮಂತ್ರಿಗಳಗೊರೆದ ಕಪಿ।
ವೃಂದಮಂ ಪೊರವಳಯದಲ್ಲಿ ಶುಭವೇಳೆಯುಲಿ ಪಾಳೆಯುವ ಬಿಡಿಸಿ ಬೇಗಾ॥
ಇಂದಿರಾವರರಾಮಪುರದರಸನಂ ಕಾಣ್ಬೆ।
ನೆಂದು ಭುಲ್ಲವಿಸಿ ಲಕ್ಷ್ಮಣನ ಪೂಜಿಸಿ ಚಿತ್ತ।
ದಿಂದ ರಘುವರಪದದ್ವಂದ್ವದೆಡೆಗೈದಿದಂ ಪ್ರಬಲಬಲದಿಂದ ಮುಂದೆ॥ (76)

(ಸಂಧಿ 14 ಕ್ಕಂ. ಪದ 615.)

ಹದಿನೈದನೆಯ ಸಂಧಿ

ಸೂಚನೆ॥ ಪ್ರಬಲಬಲ ಸೌಮಿತ್ರಿ ಸಹಿತಮಾ ಸುಗ್ರೀವ।
ವಿಭವದಿಂದೈತಂದು ಶ್ರೀರಾಮಚಂದ್ರಮನ।
ಶುಭಚರಣಗಳಗೆರಗಿ ಸಂತಸದಿ ಪ್ಲವಗಬಲಮೆಲ್ಲಮಂ ತೋರಿಸಿದನು॥

ಪದ॥ ತರಣಿತನಯನ ಮನೋವೃತ್ತಿಯಂ ಕಂಡಾಗ।
ಮರುತಾತ್ಮಭವ ಚಮೂಪತಿ ನೀಲ ಕಪಿಬಲವ।
ಕರೆಸಿ ನಗರಾದ್ಬಹಿರ್ದೇಶದೊಳ್ ಪಾಳಯುವ ಬಿಡಿಸಿ ಜವದಿಂದವೈದಿ॥
ತರಿಸಿ ಬೆಳ್ಗೊಡೆಚಾಮರಂಗಳಂ ಶಿಬಿಕಾದಿ।
ಪರಿಪರಿಯ ರಾಜೋಪಚಾರಗಳನನುಗೈದು।
ಹರುಷದಿಂ ವಿಜ್ಞಾಪನಂಗೈದರಾನಂದಿಯಾದ ಸುಗ್ರೀವನಗಜೇ॥ (1)
ವಂದಿಮಾಗಧನಿಚಯಮುಗ್ಗಡಿಸಿ ಕೇಳ್ದು ರವಿ।
ನಂದನಂ ಲಕ್ಷ್ಮಣನ ಕರವಿಡಿದು ಶುದ್ಧಾಂತ।
ದಿಂದ ಪೊರಮಟ್ಟಿಂದ್ರನಣ್ಣಂಗೆ ವಯದಿಂದಮಿತ್ತ ನವರತುನಮಯದ॥
ಛಂದವಾದತಿಶಯದ ಶಿಬಿಕಾಧಿರೋಹಣವ।
ಬಂಧುರಪ್ರೇಮದಿಂದೈದಿ ಪಿಂದೆಡೆಯಲಾ।
ನಂದದಿಂ ಚತುರಂತಯಾನವೈಭವದಿಂದಮಾಪುರವ ಪೊರಮಂಟನು॥ (2)
ಬಿರುದನುಘ್ಘಡಿಪ ಮಾಗಧವಂದಿಸಂದೋಹ।
ಪುರತ ಸ್ಸುವರ್ಣಮಯಯಷ್ಟಿಕಾಸಾಗಳಂ।
ಊರವಣಿಸ ಪಿಡಿದುಂ (?) ಬರಾಬರಿಗಳಂ ಬಿಡಿಪ ಸೌವಿದಲ್ಲರ ರಭಸದಿ॥
ವರಕಶಾಘಾತಪಾತನದಿಂದ ಮೊಡಬಲದ।
ಹರಿಗಳಂ ಬೆದರಿಸುತ ಬರುತಮಿರಲುಭಯಚಾ।
ಮರತಚ್ಛತ್ರದೈತಂದ ಕಪಿಸಾರ್ವಭೌಮನಾನಂದದಿಂದ [ಭರದಿ]॥ (3)
ಅಂಜನಾಚಲನೀಳರತಿಬಲಾನ್ವಿತಪ್ಲವಗ।
ಕುಂಜರರ್ ಮುಕ್ಕೋಟಿಗಧಿನಾಥ ಹರಿಯು ಕರ।
ಕಂಜಗಳ ಮುಗಿವುತಿಹ ಜೇಯುಪಾಯುವಥಾರು ನಿಟ್ಟಿಪುದು ಬಹುಪರಾಕು॥
ಕಂಜಬಾಂಧವನಸ್ತಮಿಸುವಶೈಲನಿವಾಸ।
ರಂಜಿಸುವ ಹೇಮಾಭದಶಕೋಟಿ ಪ್ಲವಗ ಪ್ರ।
ಭಂಜನೋದ್ಗತಿಯ ಕಪಿತತಿಯು ಕೈಮುಗಿಯುತಿದೆದಯದೊಳೀಕ್ಷಿಪುದು ಜೀಯ॥

ಹರನ ಗಿರಿಯಿಂದಮೈತಂದ ಸಾಸಿರಕೋಟಿ ।
ಹರಿಗಳಾ ಹರಿಕೇಸರಾಭವರ್ಣರು ಭಕ್ತಿ ।
ವೆರೆದವೆನುತಿಹುದು ಕಪಿರಾಯ ಚಿತ್ತವಧಾರು ತುಹಿನಗಿರಿತಟನಿಕಟದಿ ॥
ನಿರತಮಿಹ ಸಾಹಸ್ರಕೋಟಿಸಂಖ್ಯಾ ಕಪೀ ।
ಶ್ವರರು ನಮಿಪರ್ ದೇವ ಧರಣೀಸುತೋಪಮಿತ ।
ದುರುಪರಾಕ್ರಮವೈಂಧ್ಯ ಶತಕೋಟಿ ಸಾಹಸ್ರವೆರಗುತಿದೆ ಕಪಿಲಲಾಮ ॥ (5)

ಕ್ಷೀರೋದಧಿಯ ತಟಿತಮಾಲ ವನವಾಸಿಗಳು ।
ವಾರಿಕೇಳಾದಿಗಳ ನೆಣಿಸಲಳವಲ್ಲ ದಾ
ದಾರ್ಯ ಶಾಖಾಮೃಗೋತ್ತಮರು ಕಾಣಿಸಿಕೊಂಬರಿಷ್ಟಸಾಯುಷ್ಮಂತನೆ ॥
ಧಾರುಣೀತಳದೊಳನಿತುಂಟಾ ಬಲೀಮುಖರ ।
ವೀರರೈತಂದು ಕಾಣಿಕೆಗಾನಿತ್ತೆರಗುತಿದೆ ।
ಸೂರನಂದನ ಪರಾಕೆನುತ ಬಿನ್ನೈಪಗೈದರಾ ವೇತ್ರಹಸ್ತರೊಲಿದು ॥ (6)

ಪ್ಲವಗಾಧಿಪತಿಗಳೈತಂದು ಕಾಣಿಕೆಗೊಡ ।
ಲ್ಕವಿರಳದ ಹರ್ಷದಿಂ ಕೈಕೊಂಡು ಮನ್ನಿಸುತ ।
ಮವರವರ ವಿಧವರಿತು ಸನ್ಮಾನಬಹುಮಾನಗಳನಿತ್ತು ಕುಸ್ತರಿಸುತ ॥
ರವಿಕುಲೇಶನ ಕಾಂಬರತಿಕ್ಷಿಪ್ರದಿಂ ಪೋಪ ।
ಲವಲವಿಕೆಯಿಂದೈದುವವಸರದಿ ಕಹಳೆತತಿ ।
ಸುವಿಮಲದ ಶಂಖಭೇರೀಮೃದಂಗಾದಿರವ ದಶದಿಶಾಕ್ರಮಣಗೈಯೆ ॥ (7)

ರಾಮನೊಪ್ಪಿದ ಪುಣ್ಯಶೈಲದೆಡೆ ಗೈತಂದು ।
ಸೌಮಿತ್ರಿ ಸಹಿತ ಶಿಬಿಕಾವತರಣಂಗೈದು ।
ನೇಮದಿಂ ಫಲಪುಷ್ಪಗಳನು ಕಾಣಿಕೆವಿಡಿದು ನಳನಾಕ್ಷನೆಡೆಗೆ ನಡೆದು ॥
ಸಾಮಗಾನಪ್ರಿಯ ಸನಾತನ ಪರಬ್ರಹ್ಮ ।
ಸಾಮಜಾವನ ಸದಾಶಿವಮಯ ನಿಜಾನಂದ ।
ದಾಮ ರಾಮ ನಮೋಯೆನುತ್ತ ವಂದನಂಗೈದನಾಗ ಸುಗ್ರೀವನೊಲಿದು ॥ (8)

ಎರಗಿದ ಕಪೀಂದ್ರನಂ ಒರಸೆಳೆದು ಬಿಗಿಯಪ್ಪಿ ।
ಹರುಷದಿಂ ಕುಳ್ಳಿರಿಸಿ ಬೆಸಗೊಂಡನಾ ಮಯನ ।
ಪರಿಪರಿಯಲುಪಚರಿಸಿ ಪೊಗಳ್ದಂ ರಘುವೀರ ಭಕ್ತವಾತ್ಸಲ್ಯಮೆಂತೊ ॥
ನಿರತಿಶಯ ಸೌಭಾಗ್ಯ ಕರಕಲಿತಮಾದಂತೆ ।
ತರಣಿಸುತನಾಗಮನಮಾತ್ರದಿಂ ಧರಣಿಜೆಯ ।
ಮರೆದು ಹಿಗ್ಗಿದನದೇಂ ಕರುಣಿಯೋ ನರನಾಥ ಭಜಕಸುರಭೂಜನಲ್ತೆ ॥ (9)

ಕ್ಷಿತಿಯೊಳಗೆ ಕುಳ್ಳಿರ್ದು ಸುಗ್ರೀವನೊಡನೆಂದ ।
ನತಿಶಯದ ಮೃದುಳತರದಿಂದ ನಸುನಗೆಯಿಂದ ।
ಕ್ಷಿತಿಪರಿಗೆ ಗುಣಧರ್ಮಕಾಮಾರ್ಥಮೆನಿಸುವವ ಕಾಲೋಪಸೇವನೆಯೊಳು ॥
ಹಿತಮಿತದಲನುಸರಿಸೆ ಸುಖದಿ ಬಾಳ್ದಪರಲ್ಲ ।
ದತಿಶಯಾಂಗೈಯೆ ಕಾಮವನು ತರುಗೊನೆಯೊಳಗೆ ।
ಮತಿಗೆಟ್ಟು ಮಲಗಿದನ ಪರಿಯಪ್ಪುದಲ್ಲದವ ಪ್ರಥಿತನಾಗನು ಕಪೀಶ ॥ (10)

ಅರಿಗಳಂ ನಿಗ್ರಹಿಸಿ ಪೊರೆದು ನಿಜಬಂಧುಗಳ ।
ಧರಿಣಿಗುಂ ಪ್ರಿಯನೆನಿಸಿ ಮೂರು ವರ್ಷದ ಫಲವ ।
ನರಿತುಂಡು ಧರ್ಮಸಂಕಲಿತಮನನಾದವಂಗರಸುತನ ಚಿರಮಪ್ಪುದು ॥
ಹರಿಕುಲಾಗ್ರಣಿ ನೀತಿಶಾಸ್ತ್ರಂಗಳಲಿ ಪೇಳ್ದ !
ಪರಿಯನೀ ನರಿಯದುದೆ ಶತ್ರುನಿಗ್ರಹ ಜನಕ ।
ತರುಣಿ ಬರುವಡುಪಾಯಮೇನುಂಟದಂ ತಿಳಿದು ಮಾಳ್ಪುದೈ ಮಂತ್ರಿವರದು ॥ (11)

ಪೋದ ಕೀರ್ತಿಯುಂ ಸಿರಿಯುಂ ಪ್ಲವಗರಾಜ್ಯಂ ಸುಖಾ ।
ಮೋದಂತವತ್ಪ್ರಸಾದದಲ್ಲೆನಗೆ ಸಮನಿಸಲ್ ।
ಪಾದಸ್ಮರಣೆವಿಡಿದು ಪಲವುವಿಧ ಸಾಧನದ ಪರಿಕರಗಳನುವಗೈದು ॥
ಮೇದುರ ಪ್ರಯತ್ನದಿಂದೈತಂದು ರಕ್ಕಸನ ।
ಸೂದನಂಗೈವರಿಚ್ಛೈಸಿರ್ದ ಕಪಿಬಲನ ।
ನೀ ದಯದಲೀಕ್ಷಿಪುದು ಬಾನೆಡೆಯುಂ ಮತ್ತಿಳೆಯುಂ ಬೆಸಲಾದೊಲೆಸೆವುದೈಸೆ ॥ (12)

ದೇವಗಂಧರ್ವಋಷಿಪುತ್ರಹರಿಶರಭಗಜ ।
ತೀವಿಯುಳ್ಳತುಲಬಲರೀ ಬಲೀಮುಖರಖಿಲ ।
ಪಾವನಮಹಾಕ್ಷೇತ್ರ ವಾಸಿಗಳು ಭೂತಳದಪರಿಯನೆಲ್ಲರ್ ಬಲ್ಲರು ॥
ದೇವರಾಜ್ಞಾಪಿಸಿದ ಮಾಳ್ಕೆಯೊಳ್ ಕಾರ್ಯವನ ।
ತೀವಜವದಿಂದೈದಿ ಪದದೆಡೆಯಲೊಪ್ಪಗಿಪ ।
ಈ ವಸುಧಯೊಳಗಿವರಿಗಗ್ಗಳದ ವಿಕ್ರಮರ್ ಕಾಣ್ಬುದಿಲ್ಲರಸ ನೆಲದೆ ॥ (13)

ಸಾಮುದ್ರನಾದೇಯ ಪಾರ್ವತೀಯರು ಮಹದ್ ।
ಭೀಮಬಲ ಪ್ರಬಲದಾಡೆಗಳು ಘೋರಾಕೃತಿಯ ।
ಧೂಮರಹಿತಗ್ನಿಯಂತೆಸೆವರತಿಜೀವಿಗಳು ವೈನತೇಯೋಪಮಿತರು ॥
ಸ್ವಾಮಿಕಾರ್ಯಕೆ ತನುವ ತೆತ್ತು ಶಿರದೊಳಗಾಂತು ।
ನೇಮಮಂ ಮನದಿಷ್ಟಮೇನುಂಟದೆಲ್ಲಮಂ ।
ತಾಮಸಂಗೈಯದಲೆ ತಂದೀವರೀ ಪ್ಲವಗಸತ್ತಮರು ಮಿತ್ರಜ್ಞರು ॥ (14)

ಶತಶತ ಸಹಸ್ರ ಸಾಹಸ್ರ ಲಕ್ಷಂ ಲಕ್ಷ ।
ವಿಶ್ರುತಮಯುತಾಯುತಂ ಕೋಟಿಕೋಟಿಗಳು ಮ ।
ತ್ತತಿಶಯಾರ್ಬುದಮರ್ಬುದಂ ಖರ್ವ ಶತಖರ್ವ ಶಂಕು ಸಾಸಿರಶಂಕುಗಳ್ ॥
ಕ್ಷಿತಿಯರೇಣುಗಳೆಣಿಸಬಹುದು ಕಪಿಬಲದ ಸಂ ।
ಗತಿಯ ಗಣಿಸಲ್ಕೂಡದೇಕಂ ಪದಾರ್ಥ ಪರಿ ।
ಗತಲೆಖ್ಖದಿಂದಾಗರಸ ಮತ್ತೀಬಲಂ ತವ ಪದದೊಳಗಂಗೈವುದು ॥ (15)

ಮೇರುಮಂದರನಿಲಯದಮಿತಸಾಹಸಗಳೀ ।
ಧಾರಿಣಿಯನೆಲ್ಲಮಂ ಚರಿಸಿ ಬಲ್ಲರ್ ದೇವ ।
ಚೋರದಶಕಂಧರನ ತರಿದು ಧರಣೀಸುತೆಯ ತಂದೊಪ್ಪಿಸದೆ ಮಾಣರು ॥
ಕಾರಿಯಮೊಳೆಲ್ಲಂ ಭವಚ್ಚರಣಗಳಗೆ ವಿ ।
ಸ್ತಾರವೆನೆ ಗೋಚರಿಪ್ಪುದೆನುತೊರೆದ ಭಾಸ್ಕರಕು ।
ವೀರನಂ ಪುರಸ್ಕರಿಸಿ ರಘುನಾಥನಿಂತೆಂದ ನಸುನಗುತ ವಿನಯದಿಂದ ॥ (16)

ಸುರಪ ಮಳೆಗರೆವುದುಂ ಸೂರ್ಯ ಕಳ್ತಲೆಯನಂ।
ಪರಿದಪುದು ಶಶಿ ಸರ್ವಜಗತಿಯುಂ ಪೊರೆದಪುದು।
ಧರೆಗಿದೇಂ ಚಿತ್ರ ಸನ್ಮಿತ್ರ ಮಿತ್ರಾತ್ಮಜನಂ ನಿನ್ನಿಂ ಸನಾಥನಾಗಿ॥
ಅರಿದಶಾಸ್ಯನ ಕುಲವ ತರಿದು ವೈದೇಹಿಯುಂ।
ಕರವಿಡಿದೆನೆಂದಿರ್ದನಲ್ಲದನುಮಾನ ಮೇ।
ನಿರುವುದೈ ಕಪಿರಾಯ ಸಾಧುಸಜ್ಜನ ಪ್ರಿಯ ಸುಜನಾನಂದದಾಯ॥ (17)

ಯೆನುತ ಸಂತಸದಿಂದ ರಾಘವಂ ಪೇಳುತಿರ।
ಲನಿತರೊಳ್ ಕೆಂದೂಳಡರ್ದು ನಭವುಂ ತುಂಬಿ।
ತಿನಶಶಿಗ್ರಹತಾರೆಗಳ ಗರ್ಭದೊಳಗಾಂತ ಭೂತಳವುದಾಗಿರ್ಪ್ಪಂಬರಂ॥
ವನಪರ್ವತಂಗಳ್ ಕುಲಾಲಚಕ್ರೋಪಮಿತ।
ಮೆನೆ ಭೂಮಿಕಂಪಿಸಿದುದೆಣ್ದೆಸೆಗಳೊಳ್ ಪ್ರತಿ।
ಧ್ವನಿಗೊಡಲು ಕಡಲು ಮೇಲ್ವರಿದಂತೆ ವಾನರೀಶ್ವಾನಿ ನಡೆತಂದುದೊಲಿದು॥ (18)

ತರುಣಾರ್ಕನಿಭವರ್ಣ ಪದ್ಮಕಿಂಜಲ್ಕನಿಭ।
ವರಸುಧಾಕರತೇಜ ಮೇರುಮಂದರಮೆನಿಪ।
ಹರಿಗಳು ಪತ್ತುಸಾಸಿರಕೋಟಿಯೊಡಗೊಂಡು ಶತಬಲಿಯು ಕಂಗೆನೆದನು॥
ಮಿರುಪ ಸೌವರ್ಣಶೈಲಾಭ ದಶಸಾಹಸ್ರ।
ಮೆರಡೊಂದು ಕೋಟಿ ಕಪಿಬಲಸಹಿತವೈತಂದು।
ಕರಗಳಂ ಮುಗಿದ ತಾರೆಯ ಪಿತ್ರನಾತ ಗಜಸಾರನಾ ಕಪಿವೀರನು॥ (19)

ರುಮೆಯ ಪಿತನೈತಂದು ಸಾಸಿರಂಕೋಟಿಯುತ।
ಸಮದಕೇಸರಿದರ್ಪ ಕಪಿವೀರರೊಡವೆರೆದು।
ವಿಮಲಫಲಪುಷ್ಪಗಳ ಕರವಿಡಿದು ಕೈಮುಗಿದು ಕೆಲಸಾರಿದಂ ಮುದದೊಳು॥
ಕಮಲಕಿಂಜಲ್ಕನಿಭದಮಿತಸಾಹಸ್ರಕಪಿ।
ರಮಣೀಯಾಧಿಯುತಂ ವೀರಕೇಸರಿ ಬಂದ।
ನಮಿತಧೀಯುತ ಪರಾಕ್ರಮಿಗಳಗ್ರೇಸರಂ ವೈದೇಹೀರಿದಂ ಮುದದೊಳು॥ (20)

ಬಂದ ಗೋಲಾಂಗೂಲಪತಿ ಗವಾಕ್ಷಂ ಸೇನೆ।
ಯಿಂದಮೊಕ್ಕೋಟಿ ಸಾಸಿರವಾರ ತೋರ್ದೈದೆ।
ಪಿಂದೆ ಋಕ್ಷಂಗಳಧಿನಾಥ ಧೂಮ್ರಂ ಸುಳದ ನಿಕ್ಕೋಟಿಬಲವೆರೆದು॥
ಛಂದದಿಂ ಮುಕ್ಕೋಟಿ ಕಪಿಗಳಂ ಕೈಲಾಸ।
ಮಂದರೋಪಮಮೆನಲ್ ಪನಸ ತೋರಿದ ಮೇಘ।
ದಂದದಿಂ ನೀಲ ದಶಕೋಟಿಮಂಗಗಳೊಳ್ಳೈದಿ ನಿಂದು ಕರಗಳ ಮುಗಿದನು॥ (21)

ಐದುಕೋಟಿ ಪ್ಲವಂಗಮರಿಂದ ಗವಯ ತಾ।
ನೈದೆ ಬಂದನು ದಧಿಮುಖಂ ಕೋಟಿಸಾಸಿರದ।
ಲೈದಿ ಬರಲಶ್ವಿನೀಪುತ್ರರ್ ಮಹಾಬಲರ್ ಮೈಂದದ್ವಿವಿದನಾಮರು॥
ಐದೈದು ಮತ್ತೈದು ಕೋಟಿಸಾಸಿರ ಕಪಿಗ।
ಳೈದಿ ಬರಲೈತಂದ ಮುಕ್ಕೋಟಿ ವಾನರರ।
ನೈದೊಡನೆ ಕರೆದು ಗಜನೆಂಬಾ ಮಹಾಕಪಿಯು ಕಂಗೆನೆದ ಮೋದದಿಂದ॥ (22)

ಅಂಬುಜಾಸನತನಯ ನಿಖಿಲಭಲ್ಲೂಕನಿಕು ।
ರುಂಬದಶಕೋಟಿಯುತನಾಗಿ ನಡೆತಂದನಾ ।
ಜಾಂಬವನು ಬಲಶಾಲಿ ಮತಿಯುತರೊಳಗಗ್ಗಳಂ ಮಾನ್ಯ ಹರಿಮೂರ್ಧನ್ಯನು ॥
ಕುಂಭಜೋಪಮರುಮಣ್ವಾನ್ನಾಮ ವಾನರಂ ।
ಸಂಭ್ರಮದಿ ಕೋಟಿಶತಶಾಖಾಮೃಗಂಗಳಾ ।
ಡಂಬರದಲೈತಂದು ಕಾಣಿಕೆಯನಿತ್ತೆರಗಿ ನಿಂದು ಕರಗಳ ಮುಗಿದನು ॥ (23)

ಮಂದರಂ ಮೇರುವೈತಂದ ಮಾಳ್ಕೆಯೊಳು ನಡೆ ।
ತಂದನಾ ಗಂಧಮಾದನ ಕೋಟಿಶತಶತಗ ।
ಳಂದ ಪದ್ಮಸಹಸ್ರಶಂಕುಶತಮರ್ಬುದಗಳಮಿತಬಲದೊಡನೆ ಬೇಗ ॥
ಬಂದ ಯುವರಾಜನಂಗದನಿಂದ್ರಸಂಭೂತ ।
ನಿಂದಧಿಕಬಲನಾತನೊತ್ತಿನಲಿ ಷಟ್ಕೋಟಿ ।
ಬೃಂದದಿಂ ತಾರ ಮೈದೋರಿದಂ ರಾಘವಂ ಬೆರಗಾಗಿ ನಿಟ್ಟಿಸುವ್ರೊಲು ॥ (24)

ಪನ್ನೊಂದುಕೋಟಿ ಕಪಿವೀರರೊಡವೆರೆದಾಗ ।
ನನ್ನಿಯಿಂದಯೂಥಪನೈತಂದನೆಡಬಲದಿ ।
ಸನ್ನುತಿಸಲಯುತಸಾಸಿರ ಕಪಿಪ್ರವರರುಂ ರಂಭ ನಡೆತಂದನೊಲಿದು ॥
ಭಿನ್ನಗಿರಿಶಕಲಗಳೊಯೆನಲೆರಡು ಕೋಟಿಕಪಿ ।
ಯುನ್ನತರನೊಡವೆರೆದು ದುರ್ಮುಖ ಮಹಾವೀರ ।
ಮುನ್ನೈದಿ ಪೊಡಮಟ್ಟು ಕಾಣಿಕೆಯನಿತ್ತು ರವಿಸುತನ ಕೆಲದೊಳ್ ನಿಂದನು ॥ (25)

ರಜತಾಚಲೋಪಮಿತ ರಮಣೀಯಕರಮಾದ ।
ವಿಜಯಕೋಟಿಸಹಸ್ರ ಕಪಿಗಳೆಡಬಲದೊಳಂ ।
ಭಜಿಸುತಿರೆ ಹನುಮಂತನೈತಂದು ಪದಕೆರಗಿ ವಾನರೀಬಲವ ತೋರೆ ।
ಕುಜಗಿರಿವ್ರಜಹಸ್ತಕಲಿತಪ್ಲವಗಾಧಿಪರು ।
ಗಜರುತ್ತಮೊಕ್ಕೋಟಿ ಶತದೊಳಂ ವಿಶ್ವಕ ।
ರ್ಮಜ ನಳಂ ತಾಂ ಬಂದು ಕರಗಳಂ ಮುಗಿದೆರಗಿ ಕಂಡನಾ ರಘುವೀರನ ॥ (26)

ದಧಿಮುಖಂ ದಶಕೋಟಿ ಕಪಿಗಳಂದೈತಂದ ।
ಸದೆ ಶರಭ ಕುಮುದ ವೈಶ್ವಾನರಂ ಮೊದಲಾದ ।
ಪದಿನೇಳುಕೋಟಿ ಕಪಿನಾಯಕರೊಳಾ ಪೃಥಿವಿ ಕಂಗೆಸೆಯದಾದುದಾಗ ॥
ಇದರಿಂದಮಾಚೆಯೊಳು ಬರುವ ಕಪಿಸಂತತಿಗ ।
ಳುದಯಮಂ ಗಣಿಸಲಾರ್ಗಳವಲ್ಲ ನಾಯಕರು ।
ವಿದಿತಮಾಗಿರುವುದೆಪ್ಪತ್ತೇಳುಕೋಟಿ ಮಗುಳೆನಿತಿರ್ಪರೆನುತರಿಯರು ॥ (27)

ಬಲಮೆಲ್ಲ ಬಂದುದಾಕ್ಷಣದಿ ಸೂರ್ಯನ ಸುತ್ತು ।
ಮುಲಿವ ಮೇಘಂಗಳೆನೆ ಸುಗ್ರೀವನವರುಗಳ ।
ನೊಲಿದು ಮನ್ನಿಸಿ ರಾಘವೇಂದ್ರನಂ ಕಾಣಿಸುತ ಕಾಣಿಕೆಗಳೊಪ್ಪಿಸುತ ॥
ಕಳುಪಿ ಕೈಮುಗಿದು ರಘುವೀರ ಕೇಳೈ ಬಲದಿ ।
ನಳನಭವನಿಂದ್ರಚಂದ್ರಾದಿ ದೇವರ್ಕಳೇ ।
ತಳೆದು ಕಪಿರೂಪುಗಳ ತ್ವಚ್ಚರಣಸೇವೆಗೈತಂದಿರ್ಪರೆಂದರಿವುದು ॥ (28)

ವಿನತಾಸುತನ ಗಮನ ವೀರಮಾರುತನ ಗತಿ।
ಯನು ಮಿಕ್ಕಿರ್ಪರಿಂದಾದಿದೇವರ್ಕಳಿಂ।
ಮನದೊಳಗೆ ಗಣಿಸದ ಪರಾಕ್ರಮಿಗಳೀ ಬಲದೊಳಿರ್ಪರ್ಕೈ ಕಪಿವೀರರು॥
ವನಜಜಾಂಡದ ಕರ್ಪರವನೊಡೆವ ಬಲಗಳುಂ।
ಘನಕಾಮರೂಪಿಗಳು ಜನ್ಮಸಾರ್ಥಕ್ಯವಿಂ।
ದೆನಿಸಿಕೊಳಲೊಳಗಕೆ ಭಕ್ತಿಯಿಂ ಬಂದಿಹರು ಬೆಸನೀವುದಭಿಮತವನು॥ (29)
ಎಂದೊರೆದ ಸುಗ್ರೀವನಂ ತೆಗದು ತಳ್ಕೈಸಿ।
ಬಂಧುರಸ್ನೇಹದಿಂದಾಗ ರಘುನಂದನಂ।
ಛಂದದಿಂ ನುಡಿದ ಸುರತರುವಂಗಣದೊಳಿರ್ದು ಬೇರೆ ಬಯಸುವದದೇನು॥
ಪಿಂದೊರೆದ ಸೌಮಿತ್ರಿಯಾನು ನಿನ್ನಾಧೀನ।
ಮೆಂದು ಬಳಕಡಿಗಡಿಗೆ ಕಾರ್ಯಂಗಳೀನರುಪ।
ಲಂದು ಮುಂದಾಗುವದ ನೀನೆ ಯೋಚಿಸಿ ತಿಳದು ಮಾಡುವದು ಮನವೊಲಿದೊಲು॥
ಧರಣಿಜೆಯ ಪೋಗಾಡಿ ದುಮ್ಮಾನದೊಳು ಕೂಡಿ।
ಬರತಮರುಹಾತ್ಮಜಕಬಂಧಾದಿ ವಚನಗಳ।
ಪರಿವಿಡಿದು ಭಾಸ್ಕರನ ಸುತನ ಕಂಡಾಕ್ಷಣದಿ ಸರ್ವಸ್ವಮನ್ನಾತಗೆ॥
ಕರಕಲಿತ ಗೈದಾಗ ದುರುಳದಶಶಿರ ಪೋದ।
ಧರಣಿಸುತೆಸಿರಿಸಂಪದಂಗಳುಂ ವಶವಾದು।
ದರಿತು ಮಗುಳಾವುದಾನೊರೆವುದುಳಿದೆನು ತಿಳುವುದಿದ ಜಯಕಳತ್ರ॥ (31)
ಹರುಷದಿಂ ರಾಮಪುರದರಸಂ ನಿರೂಪಿಸಿದ।
ಪರಿಯನೆಲ್ಲವಕೇಳಿ ಸುಗ್ರೀವ ಭಕ್ತಿಯಿಂ।
ದೆರಗಿ ಕರಗಳಮುಗಿದು ನಾಲ್ದೆಸೆಗೆ ಕಪಿಬಲವ ಕಳುಪೆ ಬೆಸನಾಂತು ಮುದದಿ॥
ಕರೆದಾ ಬಲಾಢ್ಯರೊಡನೊರೆದನತಿವೇಗದಿಂ।
ಪರಿದು ದಶಕಂಧರನ ತಾಣಮಂ ಕಂಡು ಬಂ।
ದೊರೆವ ಬಲಶಾಲಿಗಳ ಬೆರೆದೆಗವುದೆಂದೆ ಬುತ ನೇಮಿಸಿದನಾಕ್ಷಣದೊಳು॥ (32)

ಸಂಧಿ 15 ಕ್ಕಂ ಪದ 642॥

ಹದಿನಾರನೆಯ ಸಂಧಿ

ಸೂಚನೆ॥ ವಿನುತಂ ಮರುತ್ತನಯಶತಬಲಿಸುಷೇಣಕರ।
ನಿನಸುತಂ ಪ್ರಿಯದಿಂದ ಕರೆದು ನಾಲ್ದೆಸೆಯೊಳಂ।
ಜನಕನಂದನೆಯನರಸುವಡೆ ಕಳುಪಿದ ರಾಮಲಕ್ಷ್ಮಣರ ಸನ್ನಿಧಿಯಲಿ॥
ರಾಮನಪ್ಪಣೆವಿಡಿದು ರವಿತನಯನತಿವಿನಯ।
ಪ್ರೇಮದಿಂ ವಿನತನಂ ಕರೆದು ಪೇಳಿದ ನೀನು।
ಸೋಮಸೂರ್ಯಾತ್ಮಭವ ಮುಖ್ಯಕಪಿನಾಯಕರನೊಡಗೊಂಡು ಮೂಡಗಡೆಗೆ॥
ಸೀಮದಿಂದೈದಿ ನದಿನದಗಳ ಗುಹಾಶಯಗ।
ಳಾ ಮಹಾರಣ್ಯಗಳ ಪೊಕ್ಕು ಶೋಧಿಸಿ ಬೇಗ।
ರಾಮನಂಗನೆಯ ಕುರುಹನ್ನಾಂತು ಬಹುದೆನುತ ಪೇಳ್ದನದ್ರೀಂದ್ರಜಾತೆ॥ (1)

ಗಗನಧುನಿಯುಂ ಸರಯು ಕಾಳಿಂದಿ ಸರಸತಿಯು ।
ನೊಗುವಿಗೆಯು ಸಿಂಧುಶೋಣಾದಿಗಳನುತ್ತರಿಸಿ ।
ಮಿಗೆ ಬ್ರಹ್ಮಮಾಲಾ ವಿದೇಹ ಮಾಳವಕಾಶಿಕೋಸಲಂ ಮಗಧಂಗಳಾ ॥
ಸೊಗಸಾದ ಪತ್ತಣಂ ರಜತಾಕರಸ್ಥಳವ ।
ಮಿಗೆಕೋಶಕಾರ ತಾಣಂಗಳಲಿ ನೀವು ಪೊಕ್ಕು ।
ಜಗತೀತನೊಭವೆಯು ಸರಸುವದು ಕುರುಪಿಡಿದು ಕಾಮರೂಪಂಗಳಿಂದೆ ॥ (2)
ಉದಧಿಯೊಳು ಮುಳುಗಿರ್ಪ ಶೈಲನೆಗರಂಗಳಂ ।
ಕುಧರಕೋಟಿಯೊಳಿರ್ಪ ಘೋರಯವನಾದಿಗಳ ।
ಸದರಕರ್ಣಿಕಮೇಕಪಾದ ಬಳಸಿಹ ಕರ್ಣದುರ್ಜಯುರಯೋಮುಖಿಗಳಾ ॥
ವಿಧುವೈರಿಯನೆ ಕಿರಾತರ್ಕರ್ಣಚೂಡರಂ ।
ಬಾಧಿಯು ಮಧ್ಯದಲಿರ್ಪ ಹೇಮಾಂಗಪುರುಷಾದ ।
ರದುಭುತದ ಪತ್ತಣಗಳನ್ನರಸಿ ನೋಳ್ಪುದೈ ಕಾಮರೂಪಿಂದೆ ಜವದಿ ॥ (3)
ಯೆಡೆಗೆಡೆಗೆ ರತ್ನಮಯಮೆನಿಸುವ ಯವದ್ವೀಪ ।
ಮೊಡನೇಳು ರಾಜ್ಯೋಪಶೋಭಿತಂ ಸೌವರ್ಣ ।
ಮುಡುನಿಕಾಶದ ರೌಪ್ಯ ಸ್ವರ್ಣಮಂಡಿತ ಧರಣಿಯಿಂದ ರಾರಾಜಿಸುವದು ॥
ಕಡೆಗೊಳಸುತಾ ಯವದ್ವೀಪಮಂ ಪೋಗೆ ಮುಂ ।
ಗಡೆಯುಲಂಬರಚುಂಬಿಸಿಸಿರನಗ ಕಂಗೊಳಪು ।
ದೆಡೆಗೆಡೆಗೆ ದೇವದಾನವರು ತೋರುವರಲ್ಲಿ ನೋಳ್ಪುದೈ ಜಾನಕಿಯನು ॥ (4)
ಮುಂದೆ ಲೋಹಿತಜಲಮಗಾಧಭೀಮಾಕೃತಿಯು ।
ಲೊಂದಿರ್ಪ ಸಿಂಧುತೀರವ ಕಂಡು ಬಹುವನಗ ।
ಳಂದಂಗಳಂ ತಿಳಿದು ಪರ್ವತಗಳಿಂದುದಿತ ನದಿಗಳಂ ನಿಷ್ಕುಟಗಳ ॥
ಛಂದಛಂದದ ದರಿಗಳುಪವನಗಳಂ ನೋಡಿ ।
ಸಿಂಧುದ್ವೀಪಂಗಳಂ ಕಂಡು ಚಚ್ಚರಗೊಂಡು ।
ಮುಂದಕೆಡಿಯಿಡುವದೈ ಕಾಣೆ ನೆಳಲಂ ಪಿಡಿವ ದನುಜರೊಪ್ಪಿರುವರಲ್ಲಿ ॥ (5)
ಕಳೆದು ಮುಂದಕ್ಕೈದೆ ಲೋಹಿತದ ಸಾಗರಂ ।
ಪೊಳೆವಧಿಕಕೂಟ ಶಾಲ್ಮಲಿಯುಂ ಮಹಾಗರುಡ ।
ನಿಳಯಮನ್ನುಳದು ಮುಂದಡಿಯಿಡಲ್ಕಂದೇಹನಾಮರಕ್ಕಸಸಮುದಯಂ ॥
ಕಳೆವೆತ್ತ ಶೈಲಶೃಂಗಂಗಳೋಳ್ ಜೋಲ್ದಿರುವ ।
ನಳಿನ ಮಿತ್ರೋದಯಾದಿ ವಿಪ್ರದತ್ತಾರ್ಘ್ಯದಿಂ ।
ಕಳಚಿಬೀಳುವ ರಹನ್ಯಹನಿ ಸಾಗರದೊಳಗೆ ಭೀಮ ದೌರ್ಜನ್ಯಖಳರೂ ॥ (6)
ಅಲ್ಲಿಂದ ಸಡೆಯೆ ಕ್ಷೀರೋದಧಿಯು ಕಂಗೊಳಪು ।
ದಲ್ಲಿ ವೃಷಭಾಚಲಂ ದಿವ್ಯಫಲಪುಷ್ಪಂಗ ।
ಳುಲ್ಲಾಸದಿಂ ರಜತದುಪಪರ್ವತಗಳಿಂದ ರಾಮಣೀಯಕಮಾಗುತೆ ।
ಅಲ್ಲಲ್ಲಿ ರಜತಸೌವರ್ಣಖಚಿತದ ಸರಗ ।
ಳಲ್ಲಿ ಪೊಂದಾವರೆಗಳುಣ್ಮುತಂ ಸುದರ್ಶನದ ।
ಚೆಲ್ವಾಂತ ರಾಜಹಂಸೀಗಣ ಸಮಾಕುಲದಿ ಕಂಗೊಳಪುದಾ ಶೈಲವು ॥ (7)

ಸುರಯಕ್ಷಕಿನ್ನರಾಪ್ಸರಿಯರೆಲ್ಲಂ ಕ್ರೀಡಿ।
ವೆರದಿರ್ಪರಾನೆಲದಿ ಮುಂದಕ್ಕೈದಲ್ತೋರ್ಪುರ್।
ದುರುಭೀಷಣಂ ಸರ್ವಭೂತಭಯದಂ ಜಲೋದಧಿಯಲ್ಲಿ ಕೋಪದಿಂದ ॥
ತುರಗವದನಂ ಪುಟ್ಟ ಸಾಗರದ ನಿಘೋಷ।
ದುರುಭರದಿ ನೋಡಿ ಬಡಬಾಮುಖವ ನಿರ್ವಹಿಪ।
ಡರರೆ ಧೃತಿಯುತರಲ್ಲದುಳ್ಳದರಿಂಗಾಗದಾ ತಾಣಮಂ ನಿಟ್ಟಿಸುವರೆ ॥ (8)

ಸಾಗರೋತ್ತರತಟದಿ ಹದಿಮೂರು ಯೋಜನದ।
ರಾಗಮಯ ಕನಕಪರ್ವತಮೆಸೆವುದದ ಬೇಳ್ವ।
ರಾಗವೊ ಕರುಜಾತರೂಪಶಿಲೆಯೆಂದೆನುತಲಾ ಮಹಾಪರ್ವತದೊಳು ॥
ಮೇಗಿರ್ಪ ಚಂದ್ರನಿಭಪನ್ನಂಗ ಭೂಧರಂ।
ಶ್ರೀಗರುವ ಸಾಸಿರ ಫಣಾವಿಭೂಷಿತ ಮಹಾ।
ಭೋಗತಾಲಾಂಕಂ ದಶೇಶ್ವರನ ಭಕ್ತಿಗಂ ವಶನೆನಿಸಿ ಪ್ರೀತಿವೆರಸಿ ॥ (9)

ಮೆರೆದಿರ್ಪನಲ್ಲಿಂದ ಮುಂದಕ್ಕೈದಲು ಹೇಮ।
ವೆರೆದ ಶ್ರೀಮಾನುದಯಪರ್ವತಂ ಬಾನೆಡೆಯು।
ಶಿರವಿಟ್ಟು ನೂರು ಯೋಜನದಾಯತದಿ ತೋರ್ಪುದದು ಸ್ವರ್ಣಮಯದಿಂದಲೆ ॥
ಪರಿಪರಿಯ ನಂದನದಿ ಸುರಪಾದಿ ಸೇವಿತದಿ।
ಹರುಷಗೊಳಿಸುವದೊಂದು ಯೋಜನದ ವಿಸ್ತಾರ।
ಸಿರಿಕರದ ಶತ ಯೋಜನೋನ್ನತದ ಸೌಮನಸ್ಸಿನ್ನಾರು ಶೃಂಗಮಿಹುದು ॥ (10)

ಮೊದಲು ಪದಮಲ್ಲಿಟ್ಟು ಮತ್ತೆರಡನೆಯ ಪದವ।
ಪದುಳದಿಂದುತ್ತರದ ಮೇರುಮಸ್ತಕದೊಳಂ।
ಪದುಮನಾಭಂ ತ್ರಿವಿಕ್ರಮರೂಪಮಂ ಕೊಂಡಕಾಲದೊಳಗಿಟ್ಟು ನಡೆದಂ ॥
ಉದಯಗಿರಿವಾಲಖಿಲ್ಯಾದ್ಯ ವೈಖಾನಸರು।
ಮುದದೊಳೆಸೆವರು ಸುಧಾಗಿರಿಗೆ ಒರೆಯೆನಿಸಿಹುದು।
ಸದಯಭಾಸ್ಕರಗೈದಿಬರಲುತ್ತರವನುಳದು ದಿವಸವಾದಪುದೂರ್ವಿಗೆ ॥ (11)

ತರಣಿಯುಂಗದರಾಗ ಗಿರಿಯುದೇಹಚ್ಛಾಯ।
ಪೆರದೆರಡು ಪೂರ್ವಸಂಧ್ಯಾಪ್ರವರ್ತನೆಯಪ್ಪ।
ಧರಿಸಿ ಧರಣೀಸುತೆಯ ಕುರುಪರಿದು ತಿಂಗಳೊಳಗೈತರ್ಪುದತಿಜವದೊಳು ॥
ಬರದಾವನುಳದನವ ದಂಡನಾಯೋಗ್ಯನೆಂ।
ದೊರೆದು ಬೀಳ್ಕೊಟ್ಟಗಸ್ತ್ಯಶೆಗಂ ಮಾರುತಿಯು।
ಕರೆದಂ ಗವಾಕ್ಷಗಜಗವಯಮೈಂಧದ್ವಿವಿಧಜಾಂಬವಾದ್ಯರ ಪ್ರೇಮದಿ ॥ (12)

ಪೇಳದಂ ದಕ್ಷಿಣದ ದಿಕ್ಕು ದುಸ್ತರ ದೈತ್ಯ।
ರಾಳದವ ಸಂಚರಿಪನವನ ನೇಮದಿ ಕ್ರೂರ।
ಕಾಳರಕ್ಕಸರಲ್ಲಿ ನೆಲೆಗೈದು ನಿಂದಿರ್ಪರದರಿಂದೆ ಜಾಗ್ರತೆಯನು ॥
ತಾಳ ಮುಂದೈದು ಸಾಸಿರ ಪೆಡೆಯ ವಿಂಧ್ಯದಿ ಲ।
ತಾಳಗುಲ್ಮಾದ್ಯ ತರುಷಂಡಗಳ ನೋಡಿ ಮುಂ।
ದಾಳುಗಳ ಪಂಥಾನಕಂ ಕಳುಪಿ ನಡೆದಪುದು ನರ್ಮದಾತಟಕೆ ಮುದದಿ। (13)

ಭೋಗವತಿಯುಂ ಕೃಷ್ಣವೇಣಿವರದಾನದಿಯು।
ಮೇಗೆ ಬನೆತರು ತುಂಗಭದ್ರೆಯುದರಿಂ ಮುಂದೆ।
ಪೋಗಲ್ವಿದರ್ಭ ಮಾಹಿಷ್ಮಕ ಕಳಿಂಗಮುಂ ಕಳಕಳದು ಬಳಕ ಮುಂದೆ॥
ಬೇಗದಿಂ ದಂಡಕಾರಣ್ಯ ಕೇರಳ ಚೋರ।
ಮಾಗಧ ದ್ರವಿಡಾದಿ ರಾಜ್ಯಗಳ ಶೋಧಿಸುತ।
ಪೋಗಿ ಕಂಡೆಪುದಯೋಮುಖನಾಮಪರ್ವತವ ಸರ್ವತರು ಮಂಡಿತವನು॥ (14)

ಅಲ್ಲಿಂದ ಬೆದಕುತ್ತೈತರೆ ಮುಂದೆ ಕಾಣಿಸುವ।
ದುಲ್ಲಾಸದಿಂದ ಕಾವೇರಿಯು ಮಹಾನದಿಯು।
ಚೆಲ್ವಿನಿಂ ಸೇವಿಸುವ ಸಿದ್ಧಚಾರಣಗಣವ ನೋಡುತ್ತೈದಲ್ಕೆ ಮುಂದೆ॥
ಬಲ್ಲಹನಗಸ್ತ್ಯ ತಾಪಸವರ್ಯ ಸೂರ್ಯನಿಭ।
ನಲ್ಲಿರ್ಪನಾತನಪ್ಪಣೆ ಪಿಡಿದು ಗಿರಿತಟಗ।
ಳಲ್ಲಿ ನೋಡುವದು ಚಂದನವನೋದ್ದೇಶಗಳ ನಮಿತ ಗುಲ್ಮಾದ್ಯಗಳನೂ॥ (15)

ಟಂಕಣಾದಧಿಯನು ಕಂಡಲ್ಲಿ ಮಾಹೇಂದ್ರಗಿರಿ।
ಯಂ ಕಂಡು ಪರಿಪರಿಯುತ್ತದುಗುಲ್ಮಗುಹೆಗಳಲಿ।
ಶಂಕೆಯಿಲ್ಲದೆಯರಸಿ ನೋಡುವದು ಜಾಗ್ರತೆಯೊಳನಿತುನೆಲನಂ ತೊರೆಯದೆ॥
ಬಿಂಕದಿಂದಡಿಯಿಡಲ್ ಸಿಂಹಿಕಾನಾಮದ ಕ।
ಳಂಕಿ ಛಾಯಾಗ್ರಾಹಿಯಿರ್ಪಳಾ ದೇಶಮಂ।
ನೊಂಕದೋರೆಯೊಳೈದಿ ಪುಷ್ಪಿತಕಶೈಲಮಂ ಕಾಣ್ಬುದಲೆ ರಮ್ಯಕಮೆನೆ॥ (16)

ರವಿಶಶಿನಿಭಂಗಳಂತೆಸೆವ ಕೋಡುಗಳಿಂದ।
ತವಕದಿಂದಂಬರವ ಚುಂಬಿಪುದು ಕಾಂಚನದ।
ನವಕಶೃಂಗವನೊಂದ ಸೇವಿಪ ದಿವಾಕರಂ ರಜತವ ನಿಶಾಧಿಪತಿಯು॥
ಪವಣಿಂದ ಭಜಿಪಂ ನೃಶಂಸ ನಾಸ್ತಿಕ ಕೃಪಣ।
ನವಿರಳದ ವಂಚಕರಿಗಾ ಶೈಲ ಕಾಣ್ಬಡದು।
ಸುವಿವೇಕದಿಂದ ವಂದಿಸಿ ಗಿರಿಯೊಳರಸುವದು ಜನಕಜಾತೆಯನು ಬಿಡದೆ॥ (17)

ಅದರಿಂದ ಮುಂದೆ ಪದಿನಾಲ್ಕು ಯೋಜನದಗಲ।
ಪದದಿ ಪೋಪುದು ಕಷ್ಟವಲ್ಲಿಂದ ನಡದರುಂ।
ವಿದಿತಮಪ್ಪುದು ಸೂರ್ಯವಸ್ನಾಮಗಿರಿಯೊಂದು ತತ್ತಟದೊಳರಸಿನೋಡಿ॥
ಪದುಳದಿಂದೈದಿ ವೈದ್ಯುತಪರ್ವತವ ಕಾಣು।
ತದರೊಳಗೆ ಮೂಲಫಲಮಧುಭೋಜನಂ ಗೈದು।
ಪದವಿಯುಂ ಪಿಡಿದೈದೆ ಕಂಜರದ ಪೆಸರಾಂತ ಗಿರಿಯೊಂದು ತೋರ್ಪುದೈಸೆ॥ (18)

ಕಲಶಜನ ಭವನಮದು ದೇವನಿರ್ಮಿತವದರೋ।
ಳೊಲಿದೊಂದು ಯೋಜನದ ವಿಸ್ತಾರಮಂಬರವ।
ನಿಲುಕುವದು ದಶಯೋಜನಾಯತದ ಕೋಡೊಂದು ಕನಕಮಣಿಮಯಖಚಿತದಿ॥
ನಿಲಯು ಸರ್ಪಂಗಳಿಗೆ ವಾಸುಗಿಯು ಸೌಖ್ಯದಿಂ।
ದೊಲಿದಿರ್ಪನದು ಭೋಗವತಿಯೆಂಬನಾಮಸಂ।
ಕಲಿತಮಾಗಿಹುದದರೊಳರಸುವದು ಜನಕಸುತೆಯನು ಕಾಮರೂಪಿನಿಂದೆ॥ (19)

ಭೋಗವತಿಯುಂ ಕಳೆದು ಮುಂದೆ ನೋಡುತ ನಡೆಯು ।
ಲಾಗ ಸರ್ವರ್ತುಮಯ ಸರ್ವರತ್ನಾಢ್ಯತೆಯು ।
ಪೂಗಮೆನೆ ವೃಷಭಪರ್ವತಮದರೊಳೊಪ್ಪಿಹುದು ಚಂದನದ ಬನಮದರೊಳು ॥
ಬೇಗನಿಟ್ಟಿಸುತದಂ ಮುಟ್ಟದಿರಿ ಗಾಂಧರ್ವ ।
ಭೋಗತರವಸ್ತು ರೋಹಿತನಾಮಗಾಂಧರ್ವ ।
ಸಾಗರಂ ಮೊರೆವಂತೆ ಘೋಷಿಸುತ ಕಾಯ್ದಿರ್ಪನಾ ಬನವ ಬಲಸಹಿತಲೇ । (20)

ಗ್ರಾಮಣಿಯು ಶುಷ್ಕಶೈಲೋಪ ಶುಭಬಭ್ರುವೆಂ ।
ದಾ ಮಹಾಪುರುಷರೈವರು ನಿಲಯಕ್ಕೈದಲ್ಲಿ ।
ಸೋಮಸೂರ್ಯಸಮಾನ ವರ್ಣದಿಂ ರಾಜಿಸುವರಾನೆಲದಿ ನೋಡಿಮುದದಿ ॥
ಆ ಮಹಾಧ್ವನದಿಂದ ಮುಂದಕಡಿಯಿಡೆ ಸಲ್ಲ ।
ಸೋಮಯಾಜಿಪ್ರಮುಖಪುಣ್ಯಕರ್ಮಿಗಳೈದಿ ।
ವೈಮಾನಿಕರ ಪುರಿಯು ಸಾರ್ವಪಂಥಾನಮದು ಮಿಕ್ಕ ಜನರಿಂಗಾಗದು ॥ (21)

ತೋರುವದು ಮತ್ತಾಚೆಯೊಳಗೆ ಪಿತೃಲೋಕಪತಿ ।
ದಾರುಣಂ ಯಮಲೋಕತಮಸಾವೃತಂ ನೋಡ ।
ಬಾರದದರಿಂದ ಪಿಂತಿರುಗಿ ಬಪ್ಪುದು ತಿಂಗಳಪ್ಪನ್ನನೀವೆನುತಲಿ ॥
ಆರಿದರೊಳೊಂದು ದಿನ ಪಿಂದುಳಿಯೆ ದಂಡನೆಗೆ ।
ಕಾರಣಮದಹುದೆನುತ ಕಪಿಕುಲಾಗ್ರೇಸರೆಂ ।
ತೋರಿ ನುಡಿದಂಗದಾದಿಗಳಿಗಪ್ಪಣೆಗೊಟ್ಟನಾ ರಘೂದ್ವಹನೆಡೆಯೊಳು ॥ (22)

ಬೇಳ ಜಾಂಬವಮುಖ್ಯಕಪಿಗಳಿಗೆ ಸಂತಸವ ।
ತಾಳ ಕರೆದಾಸುಷೇಣನೊಳೆಂದ ನೀವೈದಿ ।
ಸೂಳರಿದು ಪಶ್ಚಿಮದದೆಸೆಯನರಸುವದಖಿಳ ವಾನರಸಮೂಹವೆರದು ॥
ಕೇಳೀ ಮರೀಚಿಸುತ ಋಷಿಪುತ್ರ ಮುಖ್ಯರಿಂ ।
ದೂಳಗವಕೊಂಡು ಜಾನಕಿಯ ಕುರಹಂ ಕಂಡು ।
ನಾಳೀಕ ಮಿತ್ರನಸ್ತಮಿಪಾದ್ರಿಯಡೆಗೈದಿಬಹುದೆನುತ ವಿವರಿಸಿದನು ॥ (23)

ಮೆರೆವುದು ಸುರಾಷ್ಟ್ರಬಾಹ್ಲೀಕಶೂರ ಭೀಮಮದ ।
ರರುಗಿನಲಿ ಪ್ರಸ್ನಾಗಗಹನಮದರಿಂದೈದ ।
ಉರುತರದ ಕೇತಕೀವಿಪಿನ ಪ್ರತ್ಯಕ್ಸ್ರೋತಮೆನಿಸುವಾ ನದಿಗಳನ್ನು ॥
ಮರುಭೂಮಿಯಂತೆಸೆವುದತ್ಯುಚ್ಚತರಮಾದ ।
ಗಿರಿಯೊಂದು ಶೈಲಂಗಳಿಂದಮತಿಘೋರತರ ।
ಪೆರದಿರ್ಪುದಲ್ಲಿಂದ ಮುಂದೆ ತೋರುವದುದಧಿ ತತ್ತಟಾವಾಸಗಳಲೀ ॥ (24)

ಕೇತಕೀಬನಮಂ ತಮಾಲನಂದನಗಳಂ ।
ಖ್ಯಾತಮೆನಿಸುವ ನಾರಿಕೇಳಬನಮಂ ಶೈಲ ।
ಜಾತಂಗಳಂ ಮುರಲಿಪತ್ತಣದ ಜಟಿಪುರವ ಮತ್ತವಂತೀನಗರಮಂ ॥
ಪೂತುಕಾತಿರ್ಪ ಪುಣ್ಯೋಪವನಗಳಲರಸಿ ।
ಸೀತೆಯಂ ಸಿಂಧುಸಾಗರಸಂಗಮಕ್ಕೈದ ।
ಲಾ ತಟದೊಳೆಸೆದಿರ್ಪುದದು ಮಹಾಮೇರುಗಿರಿ ನೂರು ಕೋಡ್ಗಳಿಂದ ॥ (25)

ಆಗಿರಿಯತಪ್ಪಲೊಳಗತಿ ಘೋರತರಸಿಂಹ ।
ಭಾಗಸಂತತಿ ಮೀನಗಜತಾಣಗೈದಿರ್ದ ।
ವಾಗಮದ ಮಾತಂಗದಾನಜಲಪಂಚ್ಛಲಿತಜೇಂಕರಣ ಕವಿದೆಸೆವುದು ॥
ಸಾಗರದಿ ನೂರುಯೋಜನದಗಲ ಸ್ವರ್ಣಮಯ ।
ಮಾಗಿರ್ಪಪಾರಿ ಯಾತ್ರವ ಪೊಂದಿ ನೋಡುತಿರೆ ।
ಬೇಗ ಕಂಗೊಳಪರ್ಗೆ ಗಾಂದರ್ವರಿಪ್ಪತ್ತುನಾಲ್ಕುಕೋಟಿಯು ಚಿತ್ರದಿ ॥ (26)
ಕಾಮರೂಪಿಗಳು ಭೀಷಣರಗ್ನಿಕಲ್ಪರು ।
ದ್ದಾಮಬಲಪೌರುಷರು ಮತ್ತವರ ಕೆಣಕದತಿ ।
ನೇಮದಿಂದೊಳಪೊಕ್ಕು ಧರಣೀಸುತೆಯನರಸುತಿರೆ ಕಪಿಗಳಿನುತಮವರು ॥
ಭೀಮದಿಂ ಕೋಪಿಸಲು ಮತ್ತೊಂದುತಾಣದಿನಿ ।
ಕಾಮವೈಡೂರ್ಯ ವಜ್ರಾಕರಂ ದಿವ್ಯತರು ।
ಸಾಮರಸ್ಯದೊಳೆಸೆವದೊಂದು ಶೈಲಂ ವಜ್ರನಾಮ ಕೇಳ್ ಕಪಿಲಲಾಮ ॥ (27)
ಆ ಮಹಾಪರ್ವತದ ತಪ್ಪಲುಗುಹಂಗಳೊಳು ।
ರಾಮನಂಗನೆಯನರಸುತ ಪೋಗೆ ಮುಂಗಡೆಯು ।
ತಾಮಸೀಜನವಧೆಗೆನುತ್ತಲಿ ಸಹಸ್ರಾರಮಂ ವಿಶ್ವಕರ್ಮ ಸೃಜಿಸೀ ॥
ಪ್ರೇಮದಿಂದೀಯಲಾ ಚಕ್ರವಾನ್ಪರ್ವತದಿ ।
ತಾಮರಸನಯನ ಹಯಮುಖದ ದಾನವನ ತರಿ ।
ದಾ ಮಹಾಚಕ್ರಮಂ ಪಂಚಜನವಧೆ ಗೈದು ಶಂಖಮಂ ಕೊಂಡನೊಲಿದು ॥ (28)
ಗಿರಿಯಾತಪ್ಪಲುಗುಹಾಶಯಗಳಂ ಬಿಡದರಸಿ ।
ಪರಿಯೆ ಮುಂದಕೆ ವರಾಹಾಖ್ಯಶೈಲಂ ತೋರ್ಪು ।
ದರುವತ್ತುನಾಲ್ಕು ಯೋಜನದುದ್ದ ಸ್ವರ್ಣಮಯಮೆನಿಪ ಶೃಂಗಂಗಳಿಂದ ॥
ಮೆರೆದಪುದು ಕನಕಮಯ ಪ್ರಾಗ್ಜ್ಯೋತಿಷಾಖ್ಯಪುರ ।
ನರಕದಾನವನಿರ್ಪನಾ ತಾಣದೊಳಗಾರು ।
ಚರಿಸಲಸದಳ ಕಾಮರೂಪಿಂದ ನಿಟ್ಟಿಪುದು ಧರಣೀತನೂಜಾತೆಯ ॥ (29)
ಆಗಿರಿಯನುಳಿದು ಮುಂದಡಿಯಿಡಲು ಹರಿಶರಭ ।
ಮೇಗೆ ಶಾರ್ದೂಲಗಜಭೀಕರರವಂಗಳಿಂ ।
ಮೇಘವಾಹಂಸಾಮಗಿರಿಯಿರ್ಪುದಾ ಶೈಲ ರತುನಸೌವರ್ಣಮಯವು ॥
ಶ್ರೀಗವುರಪಾಕಶಾಸನಗಖಿಲ ದೇವತೆಗ ।
ಳಾಗ ಪಟ್ಟಾಭಿಷೇಕಂ ಗೈದರಾಗಿರಿಯ ।
ಮೇಗೆ ತತ್ಶೈಲ ಶ್ರೀಸಂಪತ್ಸಮೃದ್ಧಿಯಿಂದೆಸೆವುದತಿಚಿತ್ರಕರದಿ ॥ (30)
ಅದನರಿದು ಮುಂದೈದದರುವತ್ತು ಪರ್ವತಗ ।
ಳುದಯಿಸುವ ಭಾಸ್ಕರೋಪಮದಿಂದ ರಾಜಿಸುವ ।
ದದುಭುತಂ ತರುಗುಲ್ಮಲತೆಗಳೆಲ್ಲಂ ಸ್ವರ್ಣಮಯದಿ ರಾರಾಜಿಸುವವು ॥
ಅದರಮಧ್ಯದೊಳೊಂದು ಧೊರೆ ಮೇರುಪರ್ವತಂ ।
ಮುದದಿಂದಮಾದಿತ್ಯನಿತ್ತ ವರದಿಂ ದೇವ ।
ಹೃದಯಾನಂದಕಮೆನಲ್ ಮರುತವಿಶ್ವೇದೇವವಸುಗಳಾಕರಮೆನಿಪುದು ॥ (31)

ದೇವಗಂಧರ್ವಯಕ್ಷಾದಿಗಳು ಸಂತಸದೊ ।
ಳಾ ವನೋದ್ದೇಶದೊಳಗಿರ್ಪರಾ ಕಾಂತಿಯುಂ ।
ತೀವಿ ಸ್ವರ್ಗಾಂಗರೆಂದೆನಿಸಿ ನಾನಾಚಿತ್ರಕರ ಭೋಗಗಳ ಭುಂಜಿಸಿ ।
ಸಾವಧಾನದೊಳಿರ್ಪರಾದಿತ್ಯ ಪೂಜೆಯಿಂ ।
ಸೇವಿಸುತಮನುದಿನಂ ತಚ್ಛಿಖರದೊಳಗಿರ್ಪ ।
ರಾ ವಸುಧೆ ಸಾಮಾನ್ಯರಿಂದ ನಿಟ್ಟಿಸುವುದಲ್ಲ ವರುಣನಾಲಯ ಕಪೀಂದ್ರ ॥ (32)

ಗಿರಿಯಗ್ರದೊಳು ವಿಶ್ವಕರ್ಮನಿರ್ಮಿತಮಾದು ।
ದರಮನೆಯದೊಂದಿಹುದು ನವರತ್ನಮಯದಿವ್ಯ ।
ಕರುಮಾಡದಿಂ ಪಾಕಶಾಸನನ ಮಂದಿರಕೆ ನಾಲ್ಕುಮಡಿಯೆನೆ ವಿಭವದಿ ॥
ಮೆರೆದಪುದು ಭವನಮದು ವರುಣನಿಹ ನೆಲೆ ಸೂರ್ಯ ।
ಬರುವಂ ಮುಹೂರ್ತಾರ್ಧದೊಳು ನೂರುಸಾಸಿರದ ।
ನಿರುತಯೋಜನಗಳಂ ಮತ್ತಾರು ಕಾಣದೊಳಗಾ ಗಿರಿಯ ಶಿಖರದೊಳಗೆ ॥ (33)

ಚಿಂತಿಸದೆ ಬಳಸಿನೋಡುತ್ತವಾ ಶೈಲವ ।
ಸ್ತಾಂತರದಿ ಕನಕಮಯ ವೇದಿಕಾಂತರಗಳುಂ ।
ಸಂತನೊಪ್ಪಿಹ ಮೇರು ಸಾವರ್ಗಚತುರಾಸ್ಯಕಲ್ಪನಾಮುನಿವರಂಗೆ ।
ಸಂತದಲಾ ಮಾನಿಗೆರಗಿ ಬೆಸಗೊಂಡು ಭೂ ।
ಕಾಂತೆಯಾತ್ಮಜೆಯು ಪಿಂತಿರುಗಿ ತಿಂಗಳಿಂದಂ ।
ಮುಂತೆ ಬಹುದಸ್ತಗಿರಿಯಿಂದ ತಡೆಯದೆ ಬರ್ಪುದು ರಾಜಾಜ್ಞೆಯದುತಪ್ಪದು ॥ (34)

ಎನುತೊರೆದು ಕಪಿವರರ ನೆರಹಿ ಪಶ್ಚಿಮದಿಶೆಗೆ ।
ವಿನಯದಿಂದಾ ಸುಷೇಣನ ಕಳುಪಿ ಶತಬಲಿಯ ।
ಘನತೆಯಿಂ ಕರೆದು ಕುಸ್ತರಿಸಿ ಪೇಳ್ದ ರಾಜಕಾರ್ಯಸಂಗತಿಯನೊಲಿದು ॥
ನಿನಗೆ ಪಾಸಟಿಯಪ್ಪ ವೀರವೈವಸ್ವತನ ।
ತನಯಾದಿಗಳಕೂಡಿ ಬಡಗತ್ತೈದುತ್ತಮಲ್ಲಿ ।
ಜನಕಜಾತೆಯನರಸಿ ತಹುದೆನ್ನ ಋಣದಿಂದ ಮುಕ್ತನಂ ಮಾಳ್ಪುದನಘ ॥ (35)

ನೋಡುತ್ತೈತರೆಯವನ ಪಾಳಂದ ಪ್ರಸ್ತವರ ।
ನಾಡು ಭರತಂ ಶೂರಸೇನ ಕುರುಮದ್ರಕಂ ।
ಕೂಡಿರುವ ಕಾಂಬೋಜ ಪಾಶ್ಚಾತ್ಯ ಶಕರನಾರಟ್ಟಗಳನು ॥
ನೋಡಿ ಬಾಹ್ಲಿಕ ರಿಷಿಕುಟಂಕಣಂ ಚೀನಗಳ ।
ನಾಡೆಲ್ಲಮಂ ತೊಳಲಿ ಪರಮಜೇನಸ್ವಹತ ।
ಬೀಡುಗಳ ನಿಟ್ಟಿಸುತ ಹಿಮವಂತಶೈಲಮಂ ಸಾರ್ಪುದು ಜವದೊಳೊಲಿದು ॥ (36)

ತಿಳಿದು ಲೋಧ್ರಕಪದ್ಮಷಂಡಸುರದಾರುವನ ।
ಗಳನೋಡಿಯಾಶ್ರಮವ ನಾರಿ ದೇವತ್ರನಿಳಯ ।
ಕಾಳಾಖ್ಯಶೈಲವ ಕಂಡು ಮುಂದೈದಿ ಹೇಮಗರ್ಭವ ಕಾಣ್ಬುದು ॥
ಬಳಲದಾ ಗಿರಿಯೊಳಿಟ್ಟಿಸಿ ಸುದರ್ಶನನಾಮ ।
ಪೊಳೆವಗಿರಿಯಂ ಕಂಡು ದೇವಸಖಗಿರಿಪತಗ ।
ನಿಳಯಮೆಂದರಿತಲ್ಲಿ ಕಾಂಚನೋದ್ಯಾನಗಳ ನಿಟ್ಟಿಪುದು ಪರಿಪರಿಯಲಿ ॥ (37)

ತವಕದಿಂದದರಾಚೆಯೊಳು ನೂರುಯೋಜನವ ।
ಜವದಿಂದಮೈದುವದ ಪಕ್ಷಿಖಗಮೃಗಮಿಲ್ಲ ।
ದವಿರಳದ ಘೋರನೆಲಮದರಿಂದ ಮುಂದೆಸೆವುದೈಸೆ ಕೈಲಾಸಶಿಖರಂ ॥
ನವಕಮೆನೆ ವಿಶ್ವಕರ್ಮನು ರಚಿಸಿಕೊಟ್ಟಿರುವ ।
ಭವನಮೊಂದಿಹುದದರ ತಟದೊಳತಿ ಚಿತ್ರಮೆನೆ ।
ಶಿವನ ಸಖನಿಹ ತಾಣಮತಿಮನೋಹರಮೆನುತಮರಿತು ನೋಳ್ಪುದು ಕಪೀಶ ॥ (38)

ಗಿರಿಯನೆಲ್ಲವಸುತ್ತಿಳದು ನೋಡುತಮುಂದೆ ।
ತೆರಳುವದು ಕೌಂಚಗಿರಿಯೊತ್ತಿಗುಂ ಜಾಗ್ರತೆಯು ।
ಬೆರದು ವಂದಿಸಿ ಕಾಮರೂಪಿನಿಂದೊಳಪೊಕ್ಕು ವೇಗದಿಂ ನೋಳ್ಪುದಲ್ಲಿ ॥
ಪರಮಋಷಿತರಣಿನಿಭರಿರ್ಪರಾ ಗಿರಿತಟದಿ ।
ಸುರರಿಂದ ಪೂಜೆಗೊಳುವತಿತಪೋನಿಷ್ಠರಾ ।
ಗಿರಿಯು ಪೊಗುವರಸಖ್ಯ ಸೇನಾನಿ ಪೂರ್ವದೊಳು ಶರಸಾಧನಂ ಗೈದನು ॥ (39)

ಮೆಲ್ಲನಾ ಶೈಲತಟದೊಳ್ಪುಡುಕಿ ನಡೆತರಲು ।
ಮುಲ್ಲೋಕವಿದಿತಮೈನಾಕಗಿರಿಯೊಪ್ಪಿರುವು ।
ದಲ್ಲಿಮಯನಿಹನದರ ಸಾನುಪ್ರದೇಶಗಳಲಶ್ವಮುಖಿಗಳ ಮನೆಗಳ ॥
ನೆಲ್ಲಮಂ ಶೋಧಿಸುತ ಮುಂದೈದಿ ವೈಖಾನ ।
ರೋಲ್ಲಾಸ ವಾಲಖಿಲ್ಯಾದ್ಯಖಿಳ ಸಿದ್ಧರಿಹ ।
ಚೆಲ್ವಾಶ್ರಮಂಗಳಂ ನೋಡಿ ಜಾಗ್ರತೆಯಿಂದಮರಸುವದು ಭೂಸುತೆಯನು ॥ (40)

ಹೇಮಪುಷ್ಕರಕಲಿತ ತರುಣಬಾಸ್ಕರವರ್ಣ ।
ದಾ ಮರಾಳಗಳು ಕ್ರೀಡಿಪವು ವೈಖಾನಸರ ।
ನಾಮಸರಸಿಯು ತೋರ್ಪುದದರೊಳಗೆ ಕ್ರೀಡಿಸುವರಧಿಕತರ ಸೌಖ್ಯದಿಂದ ॥
ಪ್ರೇಮದಿ ಕರೇಣುಗಳನೊಡಗೊಂಡುಬಹ ಸಾರ್ವ ।
ಭೌಮ ಸಾಮಜಕುಲಗ್ರಾಮಣಿ ವಿನೋದಕಂ ।
ದಾ ಮಹಾಸರಸಿನೊಳಗನವರತ ಮಾಡುತಿಹವಾನಂದ ಮಂಪರದೊಳು ॥ (41)

ಆ ಸರಸ್ಸಂ ಕಳದು ಶೈಲೋದ ನಿಮ್ನಗವ ।
ಲೇಸಿನಿಂ ದಿಟ್ಟಿಸಲು ಕೇಚಕಾಖ್ಯದವೇಣು ।
ರಾಸಿಯುಂ ತೋರ್ದಪುದು ಸಿದ್ಧರಿಂ ಸೇವಿತಂ ಮಗುಳೋರ್ವರಿಂದಾಗದೂ ॥
ಭಾಸಿಸುವಡುತ್ತರದ ಕುರುಪುಣ್ಯಭೂಮಿಯತಿ ।
ಲೇಸೆನಿಪಕನಕಕಮಲಂಗಳಂ ರಾಜಿಸುವ ।
ವೈಸೆ ಸರಸಿಗಳು ವೈಡೂರ್ಯ ಪತ್ರಾಢ್ಯತೆಯೊಳುಂ ನದಿಗಳೆಸೆದಿರ್ಪವು ॥ (42)

ತರುಣಭಾಸ್ಕರವರ್ಣಮೆರೆವ ಕಾಸಾರಗಳ ।
ಪೊರೆಯೊ ನವರತುನಮಯ ಫಲಪುಷ್ಪಪಲ್ಲವದಿ ।
ಭರಿತಸ್ವರ್ಡಾಕಾರಪುಳಿನ ಕನಕಾಭತೆಯುಲಿಸದಪವುಮುದಕಂಗಳು ॥
ಪರಮಚ್ಛಶಾಲೂರ ಚಿತ್ರತರಶೋಭೆಯಿಂ ।
ಮಿರುಮಿರುಗುವಾವರ್ತವೀಚೀಮರೀಚಿವಿ ।
ಸ್ಫುರಣೆಯಿಂ ಕಾಣ್ಬುದಿಸುತಿರುತ್ತಿರ್ದುದೇನೆಂಬೆ ಸಂಭ್ರಮವಿಡಂಬಗಳನು ॥ (43)

ಸತತ ಷಡೃತುಗಳಗಲದಲಿರ್ಪವಾ ಭೂಮಿ ।
ಯತಿಶಯವನೆಣಿಸಲಳವಲ್ಲ ತರುನಿಕರಗಳು ।
ಸತಿಯರಿಗೆ ಪುರುಷರಿಗೆ ಮನದಿನೆನೆದುದನಿತ್ತು ಕ್ರೀಡೆಗೈಸುವವು ಮುದದಿ ॥
ಪ್ರತಿಪದದಿ ಹರ್ಷ ಬೆರ್ಚುಗೆಯಪ್ಪುದಾನೆಲದಿ ।
ಮತಿರೂಪುಡವ್ವನಕ್ಕೊಣೆಯುಂ ಸಂಭವಿಸ ।
ದತಿಶಯದ ತಾಣಮದರಿಂದಖಿಲ ದೇವರ್ಕಳಲ್ಲಿ ಕ್ರೀಡಿಸುತಿರ್ಪರು ॥ (44)

ಸತತ ಸಂಗೀತರಸಮಾಧುರ್ಯಪರವಶತೆ ।
ಯತುಲಶೃಂಗಾರರಸಪೂರಿತ ಪ್ರೌಢ ಸಂ ।
ಗತಿಯಿಂದಮಾನಂದಗೊಳುವರಲ್ಲಿಯ ಜನರ್ಪೇಳ್ವುದೇನಚ್ಚರಿಯನು ॥
ಮತಿಯುತನೆ ಪೇಳ್ವುದೇನುತ್ತರ ಪಯೋನಿಧಿಯ ।
ಜತೆಯೊಳಹುದೈ ಸೋಮಗಿರಿ ಹೇಮಮಯಮೆನಿಸು ।
ತತಿಶಯದಿ ಸುರಲೋಕ ಬ್ರಹ್ಮಲೋಕಗಳಂದ ಬರ್ಪರಿಬ್ಬಪರೆ ಗಿರಿಯ ॥ (45)

ತನ್ನ ಬೆಳಗಿನೊಳಿರ್ಪುದಾಶೈಲಮಾದಿತ್ಯ ।
ನನ್ನು ಬಯಸರು ತಟದಲೇಕಾದಶಾತ್ಮಕಂ ।
ಪನ್ನಗಾಭರಣಶಿವನಿರ್ಪನಲ್ಲಿಂ ಮುಂದೆ ನಡೆಪ್ರದಾರಿಂದಾಗದು ॥
ಇನ್ನಾಗಭೂತಂಗಳದರ ಬೆಸರಂ ಗೊಳರು ।
ಸನ್ನುತಿಪರಖಿಲದೇವರ್ಕಳನುದಿನ ಶೈಲ ।
ವನ್ನುನಿಟ್ಟಿಸಿ ತಿರಿಗಿಬಹುದುತ್ತರಕೆ ಪೋಗದಖಿಲ ಕಪಿವರರ ಬೆರದು ॥ (46)

ತಿಳದನಿತ ಕಂಡನಿತ ಪೇಳದೇಂ ಕಾಣದಿಹ ।
ತಿಳಿಯದಲೆ ಪೇಳದಿಹದಾವುದುಂಟದ ನೀವೆ ।
ತಿಳದು ನೋಳ್ಪುದು ಸೂರ್ಯಕಿರಣಸಂಚರಿಪನಿತ ಕಂಡಿರ್ದನದರಾಚೆಯುಂ ॥
ತಿಳಿಯೆ ನೀಂ ಬುದ್ಧಿಮತಿಯೆಂದಂತು ಜಾನಕಿಯ ।
ಪೊಲಬ ತಿಳದೈತಂದು ಧನ್ಯನೆಂದೆನಿಸೆನ್ನ ।
ಕುಲವನಂತರ್ಯಾಮಿ ರಾಮನ ಸಂತುಷ್ಟಿಗೊಳಪುದೈ ಕಪಿಕುಲೇಂದ್ರ ॥ (47)

ಪೋದಸಿರಿ ಕಪಿರಾಜ್ಯಮೆಲ್ಲಮಂ ತಂದಿತ್ತು ।
ಸಾದರದೊಳೆನ್ನ ಪೊರೆದೀ ಮಹಾಪುರುಷಂಗೆ ।
ಸಾಧಕಮದೇನೆನ್ನ ದೆಸೆಯಿಂದ ಮಾದಪುದು ಜನ್ಮಸಫಲತೆವೆರಸಲು ॥
ಮೇದಿನೀಸುತೆಯ ಕುರುಹಂ ತಂದುಕೊಟ್ಟರಾ ।
ಮೋದಮಪ್ಪುದು ರಾಮಪುರದಸಿರಿಯರಸನಿಗೆ ।
ಬೋದುರದೊಳೆನುತ ಶತಬಲಿಯ ಬೀಳ್ಕೊಟ್ಟನಾ ಸುಗ್ರೀವ ಸಂತಸದೊಳು ॥ (48)

ಸಂಧಿ 16 ಕ್ಕಂ. ಪದ 695.

ಹದಿನೇಳನೆಯ ಸಂಧಿ-

ಸೂಚನೆ ॥ ಮಾರುತಿಯ ಜನನ ವೃತ್ತಾಂತಂಗಳೆಲ್ಲಮಂ ।
ಚಾರುತರದಂಗುಲೀಯ ಪ್ರದಾನಂಗೈಸಿ ।
ಸೂರಿಯನತನಯ ಬೀಳ್ಕೊಡಲ್ಕೈದಿ ಪೊಕ್ಕರಾ ಹೇಮಾಂಗನಾಪುರವನು ॥

ಪದನು ॥ ಅವಧರಿಸು ಪಾರ್ವತಿ ಕಪೀಂದ್ರ ಭೂಮಿತಳದ ।
ವಿವರಗೈದಾಗ ಕಪಿನಾಯಕರ ಬೀಳ್ಕೊಟ್ಟು ।
ಪವನಸಂಭೂತನಂ ಕರೆದು ಕುಸ್ತರಿಸುತ್ತನುತಿಗೈದ ರಾಮನೆಡೆಯ ॥
ಜವತೇಜಧೃತಿಪರಾಕ್ರಮ ಮಹಾಹವ ಸತ್ತ್ವ ॥
ಪವಣಿಲ್ಲದೀಗುಣಗಳೆಲ್ಲ ಭವದೀಯ ನಾ ।
ಮವ ನೆನೆದರಿಂಗಹುದು ಪರಮೇಶನಪರಾವತಾರ ಮಾರುತಕುಮಾರ ॥ (1)

ಗುರುವಚನವಿಡಿದೆನ್ನನುದ್ಧರಿಸವೇಳ್ಕೆಂದು ।
ಪರಮಪುರುಷನ ಪದದ್ವಂದ್ವದಾಶ್ರಯ ಗೈದು ।
ಪರಿಪರಿಯ ಸೌಖ್ಯಮಂ ತಂದಿತ್ತೆ ಮೇಲ್ಪಸವ ಕೃತಕೃತ್ಯತೆಯನು ಗಳಸಿ ॥
ಪೊರೆವ ಕಾರಣ ನೀನೆ ಹರಿಕುಲೋತ್ತಮ ಭವ ।
ಚ್ಚರಿತೆಯಂ ಪೊಗಳಲೆನ್ನಳವೆ ಧರಣೀಸುತೆಯ ।
ಕುರುಹನೆಂತಾದರುಂ ತಂದಿತ್ತು ಕಾಯ್ವುದೆಂದೊರೆದನಾ ಸುಗ್ರೀವನು ॥ (2)

ದಶಮೌಳಯರ್ಪನಾ ದಕ್ಷಿಣಾಸೆಯೊಳು ಹರಿ ।
ಪಶುಪತಿಗಳಾದಡಂ ತತ್ಪತ್ತಣವ ಪೊಕ್ಕು ।
ಮಶಕೋಪಮಾನವೆಂದೆನಿಸಿ ಕೊಂಡಾದರೆಯು ಪ್ರಾಣದಿಂ ಬರ್ಪುದಳವೇ ॥
ವಿಶದಶತಯೋಜನಾಂಬುಧಿಯ ಲಂಘಿಸಿ ದೈತ್ಯ ।
ವಶತೆಯಾಂತಾ ನೆಲನ ನೋಡಿಬರೆ ಕಪಿವರರ ।
ದೆಸೆಯಿಂದಮಾಗದು ಸರ್ವಜ್ಞನೀನೇನ ನುಡಿವೆ ಮಹಾಬಲನಂದನಾ ॥ (3)

ಮನದೊಲವಿನಿಂದ ಮನ್ನಿಸುತಮೆನ್ನಯ ಸೊಲ್ಲ ।
ವನನಿಧಿಯನುತ್ತರಿಸಿ ವಹಿಲಗತಿವಿಡಿದರಸಿ ।
ಜನಕಜಾತೆಯ ಕುರುಹ ತಂದಿತ್ತು ಕೃತಿಯೆನಿಪುದೆನ್ನ ಮಾರುತನಂದನ ॥
ಎನುತ ಸುಗ್ರೀವ ನುತಿಸಿದ ಪರಿಯನಾಲಿಸುತ ।
ವಿನಯದಿಂ ಬೆಸಗೊಂಡ ರಘುವೀರ ಚಾರಿತ್ರ್ಯ ।
ಯನು ಬಿತ್ತರಿಪುದೆನಲು ಸೂರಸುತನರ್ಥಿಯಿಂ ಪೇಳಲನುಗೈದನೊಲಿದು ॥ (4)

ದೇವ ಲಾಲಿಸು ಪೂರ್ವಕೈಲಾಸಶಿಖರದೊಳು ।
ಪಾವನವನೋದ್ದೇಶದೊಳಗೆ ವಾಸಿಷ್ಟಮುನಿ ।
ಪಾವನತ ಪದವಿಗಳ ಪರಮೇಶಗಿರಿಜಾತೆವೆರಸಿ ಕ್ರೀಡಿಸುತಿರಲ್ಕೆ ॥
ಆ ವೇಳೆಯೊಳ್ ಪ್ಲವಗಮಿಥುನ ಮೈಥುನಕೆಳಸ ।
ಲಾ ವಿಧವ ಕಂಡು ಪಾರ್ವತಿ ಯಾಚನಂಗೈಯೆ ।
ದೇವಿಯನುಮತಿಯಿಂದನಿತ್ಯನುತ್ತಮರತಿಯಾನಂದದಿಂ ದೇವನು ॥ (5)

ಆದುದದ್ಭುತಗರ್ಭ ದುರ್ಭರಮದೆಂಬಂತೆ ।
ಭೂಧರಪ್ರತಿಮ ಪಿಂಡೊದ್ಭಾರಮಂ ಧರಿಪ ।
ರಾದುದಾಯಾಸ ನಿರ್ವಹಿಸಲಾರದಲೀಶನೊಡನೆ ವಿಜ್ಞಾಪಿಸಲ್ಕೆ ॥
ಆ ದಯಾನಿಧಿಯುದರಗತಗರ್ಭಮಂ ತೆಗೆಯು ।
ತಾ ಧರೆಯೊಳಡೆ ಧರಣಿ ಧರಿಸಲಾರದೆಯುಷ್ಣ ।
ಬಾಧೆಯಿಂ ತಲ್ಲಣಿಸುತಿರಲು ತತ್ಸಮಯದೊಳಗಾದುದಂ ಬಿನ್ನವಿಪೆನು ॥ (6)

ಆ ಸಮಯದೊಳಗೆನ್ನ ಸೋದರಿಯು ಕೊಳದೆಡೆಯ ।
ಭಾಸುರದ ತಪದಿಂದ ತರಣಿಯಂ ಪ್ರಾರ್ಥಿಸುತ ।
ಲೇಸ ಕರುಣಿಸುವ ಸುತನಂ ಬೇಡುತಿರಲರಿತು ಪರಮೇಶ ನಿಜಚಿತ್ತದಿ ॥
ಆ ಸುವಾಸಿನಿಗೆ ಸುತನಂ ಕೊಟ್ಟುಬಹುದೆನುತ ।
ವಾಸವಾರ್ಚಿತ ಚರಣನು ವಾಯುವಿಂಗರುಪ ।
ಲಾಸತಿಯ ಕರತಳಕೆ ಗರ್ಭಮಾಣುಫಲವ ತಂದಿತ್ತಂ ಜಗತ್ಪ್ರಾಣನು ॥ (7)

ನೇಮದಿಂ ಜಪಿಸಿ ಕಂಗಳ ತೆರದು ಕರತಳದೊ ।
ಳೀಮಹತ್ಫಲಮಿರಲ್ಕಂಡು ಸಂತಸದಿಂದ ।
ಲಾ ಮಾನಿನೀಮಣಿಯು ಭುಂಜಿಸಿದಳಾಕ್ಷಣಂ ಒಂದಂ ವಿಚಾರಿಸದಲೆ ॥
ಪ್ರೇಮದಿಂ ಗರ್ಭಸಂಭವಮಾಯ್ತು ನವಮಾಸ ।
ಸಾಮೆಗಾಗಲ್ ಜನನಮಾದ ಪಟುವೇಷದಿಂ ।
ಶ್ರೀಮದಾಭರಣಭೂಷಿತ ನೀಲಕಂಧರಂ ತಾನೆಂಬೊಲಚ್ಚರಿಯಾಳು ॥ (8)

ಜನನಮಾದಾಕ್ಷಣದೊಳಂಜನೆಯು ನೋಡುತಂ ।
ವಿನಯದಿಂ ಬೆಸಗೊಂಡ ಜನನಿಜನಕರದಾರು ।
ಮೆನಗೆ ಭೋಜನಮೇನೆನುತ್ತ ಕೇಳಲ್ ಮಾತೆ ನಸುನಗುತ್ತಮಿಂತೆಂದಳು ॥
ಜನನಿಯಾನಯ್ಯಂ ಮಹಾಬಲಂ ಭೋಜನವ ।
ದನುರಕ್ತ ಫಲ ವೃತ್ತಿ ಶ್ರೀರಾಮಸೇವೆಯುಂ ।
ನೆನೆದಪುದು ಪೂಜಿಪುದು ಸುಖದಲಾಯುಷ್ಮಂತನಾಗಿರ್ಪುದೆಂದೊರೆದಳು ॥ (9)

ತಾಯ ಮಾತಂ ಕೇಳುತುದಯಿಸುವ ಭಾಸ್ಕರನು ।
ಪಾಯದಿಂ ಫಲವೆಂದು ತುಡುಕಲೈದಲ್ ರವಿಯು ।
ಪಾಯು ಬಂತೆಂದರಿದು ಚರಮಗಿರಿಯಂ ಸಾರ್ದರಾಗ ಕಳ್ತಲೆ ಕವಿಯಲು ॥
ಬಾಯಬಿಟ್ಟುದು ಲೋಕಮಗ್ನಿಹೋತ್ರಂ ಜಪಂ ।
ನ್ಯಾಯಂಗಳಲ್ಲದಲೆ ದೇವತೆಗಳಗೆ ಭಯಾವ ।
ನೀಯುತಿಕಂಗೆಟ್ಟು ಪಾಕಾರಿಯೆಡೆಗೈದಿ ದೂರಿದರ್ನಡೆದ ಪರಿಯ ॥ (10)

ಕೇಳ ವಿಸ್ಮಿತನಾಗಿ ಪುರಹೂತ ಕೋಪಮಂ ।
ತಾಳ ಜವದಿಂದಭ್ರಮಾತಂಗಮನ್ನಡರಿ ।
ಹೇಳಗಪಕೃತಿಯನೆಸಗಿದ ಕಪಿಯನರಿದಿಡುವೆನೆಂದು ಮುಂಬರಿದು ಬರಲು ॥
ಭಾಳಾಂಬಿಕಪರಾವತಾರ ಕಪಿವರ ಚಕ್ರ ।
ವಾಳ ಪರ್ವತದಗ್ರದಲ್ಲಿರಲು ಕಂಡಹಿತ ।
ಕೇಳನಂಗೈದು ಬರುತಿರೆ ಮರುತ್ಸುತ ನೋಡಿ ಹಿಗ್ಗಿದನು ಹರಿಯು ಕರಿಯ ॥ (11)

ಧವಳವರ್ಣದ ಚತುರ್ದಂತಿಯಂ ಕಾಣುತ್ತ ।
ತವಕದಿಂ ಪಿಡಿಯಲವ್ವಳಿಸಿ ಬಹ ಕಪಿವರನ ।
ಜವದಾರ್ಭಟೆಗೆ ಬೆದರುತಿಂದ್ರ ದಂಭೋಳಿಯಂ ತಿರುಹಿ ಧಿಕ್ಕೃತಿಗೈಯುತ ॥
ಕುವರನಂ ಕೆಣಕಲಾದುದು ಸಮರ ದೇವತಾ ।
ನಿವಹ ತಲ್ಲಣಗೊಳುತಲಿರೆ ಕಂಡು ಪಾಕಾರಿ ।
ಯುವಿರಳೋದ್ರೇಕದಿಂ ನೂರಂಚಿನಲಗಿನಿಂ ಪೊಡೆದನಾ ಕಪಿವೀರನ ॥ (12)

ಘನವಾಹನನ ಕರಾಘಾತದಿಂ ಪ್ಲವಗೇಶ ।
ತನುಭಾವಮುಳಿದು ಭೂತಳದಿ ಕೆಡದಿರೆ ಕಂಡು ।
ಕಿನಿಸಿಂದ ಮಾರುತ ರಸಾತಳಕೆ ಪಾರಿದಂ ಸಂಚರಣೆಗೈವುದುಳಿದು ॥
ತನುಭೃತರುಗಳು ಚಿತ್ರಪ್ರತಿಮೆಯಂದದಿಂ ನಿಂದ ।
ರನಿಮಿಷರವಸ್ಥೆಯಂ ಕಂಡು ಮುಮ್ಮೂರ್ತಿಗಳ್ ।
ಮನದೊಲವಿನಿಂದ ಮೈತಂದು ಸುರರಂ ನೋಡಿ ಹರಿ ಕರುಣದಿಂದೆಂದನು ॥ (13)

ಸುರರೆಲ್ಲರುಂ ಕೇಳ ಸುತನಳದನೆಂದರಿತು ।
ಮರುತ ಕೋಪಿಸಿ ರಸಾತಳಕೆ ಗಮಿಸಿದ ಲೋಕ ।
ಬೆರಗಾಗಿ ನಿಂದುದಲೆ ಪ್ರಾಣವಿರಹಿತವಾದರೆಂತು ಚಲನೆಗಳಪ್ಪವು ॥
ಹರುಷಗೊಳಪುದು ಜಗತ್ಪ್ರಾಣನಂ ಬೇಗಯೆಂ ।
ದೊರೆಯಲಿಂದ್ರಾದಿ ದಿಕ್ಪಾಲದೇವರ್ಕಳಾ ।
ತರಳನಂ ಸಂತೈಸಿ ಪರಿಪರಿಯ ವರಗಳಂ ಕೊಟ್ಟರಾಕ್ಷಣದೊಳೊಲಿದು ॥ (14)

ಕುಲಿಶಹತಿಯಿಂದ ಹನುನೊಂದ ಖತ್ರಿಯಿಂದೀತ ।
ನೆಲದಿ ಹನುಮಂತನೆಂಬಭಿದಾನದಿಂದಿರಲಿ ।
ನಲವಿಂದ ವಜ್ರಾಂಗನೆನಿಸಿ ಧೀಯುತನಾಗಿ ಬಾಳಲಿನ್ನಸ್ತ್ರದಿಂದ ।
ಕೊಲೆಯಡಸದಿರಲೆಂದು ಸುರರಾಜವರವಿತ್ತ ।
ನೊಲಿದಗ್ನಿ ತನ್ನಸ್ತ್ರಶಸ್ತ್ರನಿಜಬಲಬಾಧೆ ।
ಕಲಿತವಾಗದೆ ಸುಖದಲಿಹುದೆಂದು ಪೇಳಲಾ ವೈವಶ್ವತಂ ನುಡಿದನು ॥ (15)

ಕೊಳುಗುಳದೊಳೆನ್ನ ಗದೆಯಿಂದೀತಗುಪಹತಿಯು ।
ಸುಳಿಯದಿರಲೆನುತ ನಿರುರುತಿ ನುಡಿದನಾಜಿಯೊಳು ।
ಖಳರೆಸಗುವತಿಮಾಯವೆನ್ನ ಶರದಿಂ ಬಾಧೆ ಸಂಜನಿಸದಿರಲೆನಲ್ಕೆ ॥
ಜಲದೊಳೆನ್ನಯಪಾಶದಿಂದ ಶತವತ್ಸರಂ ।
ಮುಳುಗಿರ್ದರುಂ ದುಃಖಮಿಲ್ಲದಿರಲೆನ್ನಸ್ತ್ರ ।
ಜಲಮೀತಗಂಟದಿರಲೆಂದುಂ ಪ್ರಚೇತಸಂ ತರಳಗಭಯವನಿತ್ತನು ॥ (16)

ಮರುತ ತನ್ನಯ ಜಯೋತ್ತರವ ಶರಬಾಧೆಗುಂ ।
ಪರಿಹರವನೀಯೆ ವೈಶ್ರವಣ ಕೃಪೆಯಿಂದೆಂದ ।
ಸ್ಮರಿಸಿ ಜಡೆಯೊಳಗಮಿತ ಧನರಾಸಿ ಕಂಗೆಸೆಯಲೆನ್ನ ಕರವಾಳಹತಿಯುಂ ॥
ಶರಬಾಧೆ ಸೋಂಕದಿರಲೆನುತ ವರಮಂ ಕೊಡಲು ।
ಹರ ತ್ರಿಶೂಲಂ ಪಾಶಶಕ್ತಿಮುಂತಾದುದಕೆ ।
ಪರಿಹರವ ಭಜಕರಿಂಗಿಷ್ಟಾರ್ಥಗಳನೀವ ಪರಿಯ ಪಾಲಿಸಿದನೊಲಿದು ॥ (17)

ನೆರೆದ ಗಾಂಧರ್ವರಿಷಿಚಾರಣಾದಿಗಳೆಲ್ಲ ।
ಪರಿಪರಿಯ ವರಗಳಂ ಕೊಡುತಮಿರೆ ಪೊಂಬೊಡೆಯ ।
ಚಿರತರಾಯುಷ್ಯಮಂ ಬುದ್ಧಿಯಂ ತನ್ನಸ್ತ್ರಹತಿಯ ಪರಿಹರಿಪ ಪರಿಯ ॥
ಕರುಣಿಸಿದರಾ ವಿಶ್ವಕರ್ಮ ತನ್ನಿಂದುದಿತ ।
ಕರವಾಳಮಾರ್ಗಡಾದ್ಯಾಯುಧಗಳಿಂದಲೀ ।
ಹರಿಯುವಧ್ಯಮೆನುತ್ತ ವರವ ಪಾಲಿಸೆ ನೋಡಿ ಪದ್ಮದೇರಂ ನುಡಿದನು ॥ (18)

ಸರ್ವಾಮರರ ನಿಚಯ ರಿಷಿವಿಪ್ರರುಂ ತಮ್ಮ ।
ಸರ್ವಶಕ್ತಿಗಳತ್ತ ಕಾರಣದೊಳೀತರುಣ ।
ಸರ್ವದೇವಾತ್ಮನೆಂದೆನಿಸಿ ಮತ್ತದೃಶದಿಂ ಭೂತಳವ ಪೊರೆಯಲೆಂದು ॥
ಪರ್ವಿದಾನಂದದಿಂ ವರಮೀಯೆ ಹನುಮಂತ ।
ಸರ್ವಗತನೆಂದೆನಿಸಿ ಸಕಲಮುನಿದೇವತಾ ।
ಗೀರ್ವಾಣಫಲದಾತನಾಗಿ ರಾರಾಜಿಸಿದನಾದುದುತ್ಸವ ಮರುತಗೆ ॥ (19)

ಶುಭಕರಸುಮೂರ್ತಿಯಂ ಮಾರುತಂಗೊಪ್ಪಿಸು ।
ತಿಭರಾಜವರದ ದೇವರ್ಕಳೊಡವೆರದೈದ ।
ಲಭವನೆಡೆಗೈದಿ ಚೌಷಷ್ಟಿ ವಿದ್ಯಗಳರಿತು ಪಾಕಶಾಸನನ ಪೊರೆಯು ॥
ಶುಭಕರದ ವ್ಯಾಕರಣವರಿತು ಭಾಸ್ಕರಸಹಿತ ।
ನಭದಿ ಸಂಚರಿಸುತ್ತಮಾಮ್ನಾಯ ಸಾಸಿರವ ।
ವಿಭವದಿಂ ಕೈಕೊಂಡ ಸುತನ ನಿಟ್ಟಿಸಿ ಮರುತ ಸಂತ್ರದಲಿಂತೆಂದನು ॥ (20)

ಆದುದುತ್ಸವವೆನಗೆ ಭವದೀಯ ಮಾತ್ರೆಯಂ ।
ಮೋದಗೊಳಸುತ ಮುಂತೆ ಶ್ರೀರಾಮ ಕೃಪೆಯನುಂ ।
ಸಾಧಿಸುವುದೆಂದರಿತು ಸಂಭ್ರಮದಲೈದಲೀ ತರುಣ ಗುರುವಚನವಿಡಿದು ॥
ಮೇದುರಪ್ರಿಯದಿಂದಮೆನ್ನ ಪರಿಪಾಲಿಸುತ ।
ಮಾದರಣೆಗೈದ ಕಲ್ಯಾಣಗುಣಗಳದೆಂತು ।
ಬೋಧೆಗಳವಡುವದೆಂದೊರೆದ ಸುಗ್ರೀವನೊಡನಿಂತೆಂದ ರಘುವೀರನು ॥ (21)

ಖಗತನಯ ಲಾಲಿಪುದು ತಿಳಿದಿರ್ದನೀ ಕಪಿಯ ।
ಬಗೆಯನೆಲ್ಲವನದೆಂತೆನೆ ಪೇಳ್ವೆ ನಿರ್ಗುಣವ ।
ಸೊಗಸಿಗೆನ್ನೊತ್ತಿನಲಿ ಸುಳಿವ ಮೂಲಪ್ರಕೃತಿಯೆಂದುದಿತ ಮೂರುಗುಣದ ॥
ಒಗುಮಿಗೆಯ ಮೂರನೆಯ ಗುಣಮೂರ ಶಿವಬ್ರಹ್ಮ ।
ನಿಗೆ ತಾಣಮೆನಿಪ ಗೋಳದೊಳಿರ್ಪ ಭೂಜಲಂ ।
ಪೊಗುವಲ್ಲಿ ಗಗನಾಗ್ನಿಮರುತರೆಂಬೀ ಭೂತ ಮೂರರಿಂದೆಸೆವುದನಘ ॥ (22)

ಅಲ್ಲಿ ಬ್ರಧ್ನಾಖ್ಯ ಬ್ರಹ್ಮನಿಗಾರ್ಯಯಾಗಸದ ।
ಚೆಲ್ವಶರೀರಮುಘ್ರ್ಯಹಾರವಾಯುಗತಿ ।
ಯಲ್ಲಿ ಕಂಗೊಳಪ ಬತ್ತೀಸರ್ಬುದಂ ರುದ್ರರೋಲಗಿಸುತಿರೆ ವಹಿಲದಿ ॥
ಸಲ್ಲಲಿತ ದೇಕಪಾದ್ರುದ್ರ ಜ್ಞಾನಾನಂದ ।
ದಲ್ಲಿರ್ಪ ಪರಶಿವನ ಗುಣಗಳೆನ್ನುತ ತಿಳಿಯ ।
ರುಲ್ಲಾಸದಿಂ ಸದ್ವಿರಾಟ್ಪ್ರಾಕೃತಿವಿಡಿದು ಪೂರ್ವಗೋಪ್ಯದ ಪರಿಯನು ॥ (23)

ಗೋವಿಬುಧರಕ್ಷಣೆಗೆ ನಂಬಿರುವದಕೆ ಮುನ್ನ ।
ಠೀವಿಯಿಂದೇಕಪದರುದ್ರತ್ರ್ಯಂಬಕನಿಂದ ।
ತಾವೆಸಿಸುತಗಜೆಯೊಳು ಮರುತಮೂಲದೊಳೈದುತಂಜನಾತನಯನೆನಿಸಿ ॥
ಈ ವಿಧದ ರೂಪ ಕೈಕೊಂಡು ರಾಜಿಪ ಪ್ರಿಯದೊ ।
ಳಾವನಾದರು ಭಜಿಸಲಾಪದೋದ್ಧರಣೆಗೈ ।
ದೀವ ಬೇಡಿದ ಫಲವ ಭೂರಕ್ಷಣಾರ್ಥಕಾಯಾತ್ತ ಮೂರ್ತಿ ಸೂರ್ಯತನಯ ॥ (24)

ನಾಡೊಳುಳ್ಳಖಿಳ ಸುರಮಂತ್ರಾತ್ಮಮೀ ಮೂರ್ತಿ ।
ಪಾಡಿದರ ಪೊಗಳದರ ಭಜಿಸುವರ ಪ್ರೀತಿಯಿಂ ।
ನೋಡುವರಿಗೊಲಿದು ಬೇಡಿದುದಿತ್ತು ರಕ್ಷಿಸುವ ಪರಬೊಮ್ಮನವತಾರವು ॥
ಮಾನುವಂ ಹರಬೊಮ್ಮಹರಿಗಳಂದಪ್ಪುದಿವ ।
ಗೀಡುಂಟೆ ಸರ್ವಾತ್ಮನೆಂದರಿತು ಸಂತಸವ । (25)
ಮಾಡಿಕೊಂಬುದು ಪೇಳ್ವದೆನಿತು ಸದ್ಗುಣಗಳನು ಗಣಿಸಲಕ್ಕುಮೆ ಕಪೀಶ ॥

ಎನುತೊರೆದ ಗೋಪ್ಯಕರ ವಾರ್ತೆಯಂ ಕೇಳುತ್ತ ।
ತನುಪುಳಕದಿಂದ ಸುಗ್ರೀವ ಕೃತಕೃತ್ಯನೆಂ ।
ದೆನಿಸಿ ಬಿಗಿಬಿಗಿದಪ್ಪಿ ಮುದ್ದಿಸುತ ಸೌಖ್ಯಮಂ ಪಡೆದು ಮೈಮರೆದು ನಿಮಿಷಂ ॥
ಘನತರಾನಂದದೊಳಗೋಲಾಡುವನಿತರೊಳು ।
ಚಿನುಮಯಾತ್ಮಕರಾಮ ತನ್ನ ನಾಮಾಂಕಿತದ ।
ಮಿನುಗುವಂಗುಲಿಯಭೂಷಣವ ಕರದಿತ್ತನಾ ಹನುಮಂತಗತಿಪ್ರೀತಿಯಿಂ ॥ (26)

ಪ್ರೇಮದಿಂದಂಗುಲೀಯಕವ ಹಸ್ತದಿಕೊಟ್ಟು ।
ತಾಮರಸನಯನೆ ಜಾನಕಿಗೆ ಪೇಳುವ ಕುರುಹ ।
ನಾಮಗಳನುಸುರಿ ಬೀಳ್ಕೊಟ್ಟರಂಜನೆಯ ಸುತ ನಮಿಸಿ ರಘುವರನ ಪದಕೆ ॥
ತಾಮರಸಭವತನಯಃನಂಗದ ಪ್ರಮುಖಕಪಿ ।
ಭೀಮಬಲರೊಡಗೊಂಡು ಕಲಶಸಂಭವನಿರ್ಪ ।
ಧಾಮಮನ್ನರಸುತ್ತೈದಿದರಿತ್ತ ಸುಗ್ರೀವ ಕಪಿಬಲವನೆಲ್ಲ ಕರದು ॥ (27)

ಪೇಳದಂ ಮೊದಲಾನು ಪೇಳ್ದ ವಚನಂಗಳಂ ।
ತಾಳ ಮಾನಸಗಳಲಿ ರಘುವೀರಗಂ ಪ್ರೀತಿ ।
ಯೊಳಗವ ಸಂಪಾದನಂ ಗೈದು ತಿಂಗಳೊಳಗೈತಹುದು ಮನ್ನಿಕಟಕೇ ॥
ಆಲಸ್ಯಮಿನಿತಾಗಲಾಂ ಕೊಲುವೆನೆಂದು ಕಪಿ ।
ಜಾಲಕರುಪುತ ಪಲವರೈದಿದರದೇನೆಂಬೆ ।
ಕೋಲಾಹಳಧ್ವನಿಗಳಿಂದ ದಿಗ್ದೇಶಗಳನರಸುತ್ತ ಪೋದರಿತ್ತ ॥ (28)

ರಾಮನಚ್ಚರಿಗೊಂಡು ರವಿತನಯನಂ ಕರೆದು ।
ಪ್ರೇಮದಿಂ ಬೆಸಗೊಂಡ ಕಪಿವೀರನೀ ಪರಿಯ ।
ಭೂಮಿಯೆಲ್ಲವನದೇಂ ಕಾರಣದಿ ಶೋಧಿಸಿದೆ ಕಂಡುದೆಂತೊರೆಯೆಂದನು ॥
ಭೀಮಬಲನಣ್ಣ ಬೆಂಬತ್ತಿ ಬರೆ ಭಯದಿಂದ ।
ಲೀ ಮಹಿಯೊಳೊಂದು ಗೋಪಾದದಗಲವ ಬಿಡದೆ ।
ನಾ ಮರಳಮರಳಸುತ್ತಿದೆನರಸ ನಾ ಚಕ್ರವಾಳಗಿರಿಯೊತ್ತಪಿಡಿದು ॥ (29)

ಎಲ್ಲೆಲ್ಲಿ ಪೊಕ್ಕರೆಡೆಬಿಡದೆ ಬಂದಡಸುತಿರ ।
ಲಿಲ್ಲ ಲೋಕಂಗಳಂ ತಿರುಗಿ ಕಂಗೆಡಲಾಗ ।
ಸಲ್ಲಲಿತವಚನದಿಂದೆಲ್ಲ ಕೋಟಲೆಯುಳಿದು ಸುಖಮಿರ್ದೆ ದೇಶಗಳನು ॥
ಎಲ್ಲಮಂ ಕಂಡ ಕಾರಣದ ಬಿನ್ನಪಗೈವೆ ।
ಮುಲ್ಲಾಸದಿಂದಮವಧರಿಸೆಂದು ಸುಗ್ರೀವ ।
ಸೊಲ್ಲಿಸಿದ ಶ್ರೀರಾಮಗುಣಧಾಮನಿಸ್ಸೀಮಗಾನಂದ ಪೆರ್ಚುವಂತೆ ॥ (30)

ಮೆಚ್ಚಿದಂ ಸಾಹಸವನಾಲಿಸುತ ರಘುವೀರ ।
ಮುಚ್ಚಟಿಯೊಳೈದಿ ಕಪಿಬಲ ಮೂರು ದಿಕ್ಕುಗಳ ।
ನಚ್ಚರಿಯೊಳರಸಿ ವೈದೇಹಿಯಂ ಕಾಣದಲೆ ದೇಶದೇಶದ ಕುರುಹನು ॥
ನಿಚ್ಚಳದಿ ಪಿಡಿದು ನಿಜಶಾಸನದಿನಂಗಳುಂ ।
ಪೆಚ್ಚದಂದದಿ ಬಂದು ಕಾಣಿಕೆಯನಿತ್ತು ಪೇ ।
ಳ್ದಚ್ಚರಿಯುಗಳ ಕೇಳುತಂ ರಾಮನಿರಲಿತ್ತಮನ್ನೆಗಂ ದಕ್ಷಿಣದೊಳು ॥ (31)

ತಾರೇಯಜಾಂಬವ ಪ್ರಮುಖಕಪಿ ಶಾರ್ದೂಲ ।
ವೀರರೈತಂದು ವಿಂಧ್ಯಾಟವೀ ಮಧ್ಯದೊಳು ।
ಸೂರಿಯನ ಸುತ ಪೇಳ್ದ ತಾಣಂಗಳೆಲ್ಲಮಂ ತೊಳಲಿ ಶೋಧಿಸುತ ಬಳಲಿ ॥
ಧಾರುಣೀಸುತೆಯ ಕಾಣದೆ ಮುಂದಕರುಗಿದ ।
ಭೂರಣ್ಣಿಯ ಕಾನನವನೊಳಪೊಕ್ಕು ಬಂದರತಿ ।
ದೂರ ಪಂಥಾನಮಂ ಪಿಡಿದು ಗಿರಿನದಿಗುಹಾಶಯಗಳಂ ಶೋಧಿಸುತಲಿ ॥ (32)

ಶೋಧಿಸುತ ಮುಂದಕ್ಕೈತರೆ ಗುಹಾಗಹನಂಗ ।
ಳಾದಿಯಂ ನೋಡುತ ಬರೆ ನಿರ್ಜನಸ್ಥಾನಮಂ ।
ಭೇದಿಸುತ ಬಳಲಿ ಮುಂದೈತಂದರಾ ಹರಿಗಳತಿಶಯದ ಧೈರ್ಯದಿಂದಂ ॥
ಮೇದಿನಿಯೊಳೊಂದೆಡೆಯ ಫಲಪುಷ್ಪಪರ್ಣಂಗ ।
ಳಾದಿಶೂನ್ಯತೆವೆತ್ತ ಶಾಖೆಗಳ ನಿಶ್ರೇಯ ।
ಮೂದ ವಾಪೀಕೂಪಪದ್ಮಾಕರಂಗಳಂ ಕಂಡರಾ ಕಪಿವೀರರು ॥ (33)

ಪುಲಿಕರಡಿಸಿಂಹಶಾರ್ದೂಲಂಗಳಲ್ಲದಿಹ ।
ಪೊಲಬ ಮೃಗಪಕ್ಷಿ ತರುಗುಲ್ಮವೀರುಧಂಗಳಂ ।
ಕಲಿತಮಾಗದ ಭೂಮಿಯಂ ಕಂಡು ಪ್ಲವಗರತ್ಯಾಶ್ಚರ್ಯಗೊಳುತ ನಿಂದು ॥
ನೆಲಮಿದೇನೆನೆ ಜಾಂಬವಂ ಪೇಳ್ದ ಪೂರ್ವದೊಳ್ ।
ಚೆಲುವಂಡೂನಾಮ ತಾಪಸಾಶ್ರಮಮಿದುವೆ ।
ಕೆಲವುದಿನ ಪೋದಬಳಿಕಾದುದೀಪರಿಯಾದಂ ಬಿತ್ತರಿಪನವಧರಿಪುದು ॥ (34)

ಪತ್ತುವರುಷದ ಕುಮಾರಕನೊರ್ವನಿರ್ದನ ।
ತ್ಯುತ್ತಮದ ಮತಿಯುವನಿಗಡಸೆ ರುಜೆ ಮುನಿದು ಋಷಿ ।
ಯಿತ್ತ ನಿವರ್ಗನುಷ್ಯ ಮೃಗಪಕ್ಷಿತರುಗುಲ್ಮರಹಿತಮಾಗಿರಲೆನ್ನುತ ॥
ಬಿತ್ತರದ ಶಾಪಮಂ ಕೊಟ್ಟು ಪೋದಂದಿಂದ ।
ಮಿತ್ತ ಸಕಲ ಪ್ರಾಣಿಶೂನ್ಯತರುಜಳಸಹಿತ ।
ವೆತ್ತುದೀ ನೆಲಮೆನುತ ಪೇಳುತರಸುತ ನಡೆದರಲ್ಲಿಂದ ಸರಣಿವಿಡಿದು ॥ (35)

ಮುಂದೊಂದು ಭೀಕರದ ಗಹನದೆಡೆಯೊಳು ಲತಾ ।
ಬೃಂದಮಧ್ಯದೊಳೊರ್ವ ಘೋರರಕ್ಕಸನಿರಲ್ ।
ಬಂದಾತನಂ ಜಡಿದು ಕರಪಾದದಿಂ ಬಡಿದು ದಶಗಳೆನುತ್ತಲವರು ॥
ಕೊಂದನಾ ತಾರೇಯನಾ ಭೀಮರಕ್ಕಸನ ।
ಮುಂದೈದಿ ಗಿರಿದುರ್ಗಗಂಹ್ವರಾದಿಗಳೆಡೆಯ ।
ಲೊಂದನುಳಿಯದೆ ಧರಾನಂದನೆಯ ಬೆದಕಿದರ್ ಸಕಲ ಕಪಿವೀರರೊಲಿದು ॥ (36)

ತೊಳಲಿ ಬಳಲಿದರರಣ್ಯಾದ್ರಿ ನದಿನದಗಳಂ ।
ಕಳದರಗಣಿತ ದುರ್ಗ ದುರ್ಮಾಗಳನೆಲ್ಲ ।
ನಿಳೆಯಸುತೆ ಗೋಚರಿಸದಿರಲಂಗದಂ ನುಡಿದ ಸಕಲ ಕಪಿವೀರರೊಡನೆ ॥
ತಿಳಿದೆವಾವಾವೆ ಭೂಮಿಗಳ ಗಿರಿದುರ್ಗಗಳ ।
ತೊಳಲಿದೆವು ಕಾಣದಾದೆವು ಜನಕನಂದನೆಯ ।
ಕೆಳೆಗೊಂಡುದತಿಭೀಕರದ ಕಾಲ ಕಪಿಕುಲಕ್ಕೀಂ ಗೈವುದೆಂದಳಲಿದಂ ॥ (37)

ತರುಣಿಸುತನುಗ್ರಶಾಸನವ ತಿಳಿಪಿಹುದೆಲ್ಲ ।
ಹರಿಕುಲಂ ವೈದೇಹಿ ಗೋಚರಿಸದಿರಲಾತ ।
ತರುವನೇ ಶಾಂತಿಯುಂ ಪರಿಪರಿಯ ಯುಕ್ತಿಗಳೆಲರಸಿ ನೋಡುವದೆನ್ನುತ ।
ಪರಿದು ನಾಲ್ದೆಸೆಗಳಂ ಬೆದಕಿ ಗಂಹ್ವರಗಳಂ ।
ನಿರತಾಂಧಕಾರದಾಲಯಗಳನ್ನೋಡಿದರ್ ।
ತೊರೆದು ದೇಹಶ್ರಮವ ಪಸಿವುನೀರಡಿಕೆಗಳನೊಮ್ಮನದೊಳೆಲ್ಲರೊಲಿದು ॥ (38)

ನೋಡಿ ವಿಂಧ್ಯಾಟವಿಯನೆಲ್ಲಮಂ ಶ್ರಮದಿಂದ ।
ನೋಡಿ ಶರದಭ್ರನಿಭರೌಪ್ಯಗಿರಿಯಂ ಕಂಡು ।
ಕೂಡೆತತ್ಶಿಖರದೊಳು ಸಪ್ತಪರ್ಣಾರಣ್ಯಲೋದ್ರಕಾನನಗಳರಸಿ ॥
ನಾಡೆಲ್ಲಮಂ ತೊಳಲಿ ನಾನಾವಿಧದಿ ಬಳಲಿ ।
ಕೂಡದಾಗಲ್ ಮನೋರಥವಿರಥರೆನಲೊಂದು ।
ಗೂಡಿ ತರುನೆಳಲೊಳರೆನಿಮಿಷ ವಿಶ್ರಮಿಸುತ್ತ ಮುಂದರಸಲೊಡನೈದಿದರ್ ॥ (39)

ತಾರಾಂಗದರ ಕೂಡಿ ವಿಂಧ್ಯಪರ್ವತದಿ ದು ।
ಸ್ಫಾರವೆನಿಸುವ ಕೂಟಗಂಹ್ವರವ ಕೇಸರಿಕು ।
ಮಾರನರಸಿದ ನೆಲದಲೊಗ್ಗಿಣಬಿಡದೆ ಮುದವೇರಿ ತರುಗುಲ್ಮಗಳಲಿ ॥
ವೀರಗಜಗವಯಶರಭಂ ಗಂಧಮಾಧನನು ।
ದಾರಮೈಂದದ್ವಿವಿಧನಳಜಾಂಬವಾದಿಗಳ್ ।
ಧಾರುಣೀಸುತೆಯನರಸಿದರಾ ಮಹಾದ್ರಿಯೊಳಗೊಂದೆಡೆಯುಮಂ ಬಿಡದೆಲೆ ॥ (40)

ಕಾನನಾಂತರಗಳಂ ತಿರಿಗಿ ಶೋಧಿಸಿ ಪರಿ ।
ಮ್ಲಾನಕರಪದರೆನಿಸಿ ಕ್ಷುತ್ಪಿಪಾಸಗಳಿಂದ ।
ಖಿನ್ನರಾಗುತ ಬಳಲಿ ನಾಲ್ದೆಸೆಯ ನೋಡಿದರ್ ಜಲಶೂನ್ಯವಾದ ನೆಲನ ॥
ಯೇನೆಂಬುದಾ ಕಷ್ಟದತಿಶಯವ ಬಳಲುತ್ತ ।
ವಾನರಾಧಿಪರೊಂದು ಬಿಲವ ಕಂಡದರೊತ್ತ ।
ವೈನದಿಂ ಸಾರ್ದಿಟ್ಟಿಸಿದರೆಲ್ಲರೊಂದಾಗಿ ಜಾವಪರಿಯಂತರೊಲಿದು ॥ (41)

ನೀರಿಂದ ನೆನೆದ ಪಕ್ಕಗಳಿಂದ ಪಂಸೆಗಳ್ ।
ಕಾರಂಡಚಕ್ರಗಳ್ ಸ್ವರ್ಣಮಯದತಿರಾಗ ।
ಸಾರಸವಧೂಳಿಗಳ ಬೆರದು ಬಿಲದಿಂ ಪೊರಟು ಬಪ್ಪುದಂ ಕಂಡರೊಲಿದು ॥
ಚಾರುತರ ಸೌಗಂಧ ಸೀತಳಂ ಸುಕುಮಾರ ।
ನೂರುತಂ ಬರೆಕಂಡು ಶಾಖಾಮೃಗಂಗಳಂ ।
ಹಾರೈಸಿ ನೀರಡಿಕೆಯಿಂದ ಪ್ರೈತಂದದಂ ಪೊಕ್ಕರತಿ ಹರುಷದಿಂದ ॥ (42)

ಅತಿಬಲಾನ್ವಿತ ಕಪೀಶರ್ ಪೊಕ್ಕರಾ ಬಿಲವ ।
ನತುಲಕಳ್ತಲೆಯಿಂದ ಭರಿತವಾಗಿರೆ ಕಂಡು ।
ವಿತ್ರತಭಯಂಗೊಂಡು ಕಂಗಾಣದಿರೆ ಹನುಮಂತನಿಂತೆಂದ ನೊಲವಿನಿಂದ ॥
ಧೃತಿಗುಂದಲೇಂ ಪೊಕ್ಕಬಳಿಕ ಧೈರ್ಯದಿ ಪಿಡಿದು ।
ಕ್ಷಿತಿಯನೆಲ್ಲವ ನೋಡಿ ಮನದ ದುಮ್ಮಾನವಂ ।
ಹತಗೊಳಿಸವೇಳ್ಕೆಂದು ಪೇಳಲೋರ್ವರಿಗೋರ್ವರರಸುತ್ತ ನಡೆಗೊಂಡರು ॥ (43)

ಕೆಲನು ನೆಲನಂ ಪೋದರಲ್ಲಿಂದಲುಂ ಮುಂದೆ ।
ಪೊಲಬಕಾಣದೆ ಕರಕರಂಗಳು ಪಿಡಿದು ಮುಂ ।
ದೊಲಿದು ನಡೆದರ್ ಕೆಲವುದೂರಮದರಿಂ ತೀರದೋರ್ವರೋರ್ವರ ತಕ್ಕೈಸಿ ॥
ಕೆಲವು ನೆಲನಂ ಪೋಗಿ ತಿಮಿರಭೂಯಿಷ್ಠದೊಳು ।
ಸಿಲುಕಿ ಮುಂಗಾಣದಲೆ ಜೀವದಿಂ ಚಲನೆಯುಂ ।
ತೊಲಗಿಸಿದನಾಗ ಪವನಾತ್ಮಜಂ ಧೃತಿಯಿಂದಮಾಸುರ್ದನೊಲಿದೆಲ್ಲವರೊಳು ।
ಶ್ರಮನಿಲ್ಲದತಿಪರಾಕ್ರಮಿಗಳೆಲ್ಲರು ಪಥ ।
ಶ್ರಮಖಿನ್ನರೆಂದೆಸಿ ತೃಷೆಯಿಂದ ಪಲವುವಿಧ ।
ಶ್ರಮಗೊಳುವುದನುಚಿತಂ ಪತಿಕಾರ್ಯನಿಷ್ಠರಿಗೆ ಬೆರತವಸ್ಥೆಗಳೊದಗಲು ॥
ತಿಮಿರದುಪಟಳದಿ ಕಪಿತಿಂತಿಣಿಯು ಕಂಗೆಟ್ಟು ।
ಯೆಮಗೆ ನೆರವಾರಿಂದ ಬರುವುದೀ ತಾಣದೊಳು ।
ಸಮಯದೊಳು ಪೋಗಾಡಲೆಂತಹುದು ಗತಿವಿಡಿದು ನಡವುದುತ್ತಮಪದವಿದು ॥ (45)
ಈ ಮಹದ್ಬಿಲವ ಪೊಕ್ಕಗಸದಳ ಪಿಂದಿರುಗ ।
ಲೀ ಮಹಧ್ವಾಂತದೊಳಗೆಲ್ಲಿ ಪೋಪುದೊ ಸರಣಿ ।
ಈ ಮಹಾಪಂಥಾನ ವಿಡಿದು ನಡದರೆ ಮುಂದೆ ಶುಭವಿಭವಮಪಜಯಗಳು ॥
ರಾಮಪುರದರಸನಾಧೀನವೆಂದೊರೆಯಲತಿ ।
ಪ್ರೇಮಗೊಂಡೆಲ್ಲರುಂ ಪೋಗುತಿರೆ ಮುಂದೊಂದು ।
ಧಾಮ ಕಂಗೆಸೆದುದಚ್ಚರಿಯೆನಲ್ ಭಕ್ತರಿಂಗೆಡರುಂಟೆ ಮೂಲೋಕದಿ ॥ (46)

ಸಂಧಿ 17 ಕ್ಕಂ ಪದ 741 ॥

ಹದಿನೆಂಟನೆಯ ಸಂಧಿ-

ಸೂಚನೆ ॥ ಹೇಮಾವಚನ ವಿಡಿದು ಪೊರಮಟ್ಟು ಕಪಿಸಾರ್ವ ।
ಭೌಮ ಚಿಂತಿಸುತಿರಲ್ ಪವಮಾನನಂದನಂ ।
ಸಾಮದಿಂದುಪಚರಿಸುವನ್ನೆಗಂ ನೈದೋರ್ದ ಸೂರಸುತಾತ್ಮಭವನು ॥

ಪದ ॥ ಕತ್ತಲೆಯ ಪೊತ್ತದೊಳ್ ಕಂಗೆಟ್ಟುತೊಳಲಿಪ್ಪವ ।
ಗೋತ್ತಮರ್ ಹರಿಕೃಪೆಯನೈದಿ ನೋವಾದಿತ್ಯ ।
ರಿತ್ತಕಾವ್ಯಧಿಕರಪ್ರಭೆಯು ಗೋಚರವಾಗಲಾಶ್ಚರ್ಯಗೊಳುತ ಮನದಿ ॥
ಮತ್ತೆ ಹರುಷಂಗೊಳುತ ಪಮತೆಯಿಂಬರೆ ರನ್ನ ।
ತೆತ್ತಿಸಿದ ನೆಲಗಟ್ಟಿನಿಂದೆಸೆದುದಾಪೆಡೆಯು ।
ಉತ್ತಮೋತ್ತಮ ಸರಿತ್ಕಾಸಾರಹರ್ಮ್ಯಂಗಳೆಸೆಯಲಿಟ್ಟೆಸಿದರಗಜೇ ॥ (1)
ಅಡಿಗಡಿಗೆ ನವರತುನಖಚಿತ ಭೂಮಿತಳಗ ।
ಳೆಡೆಗೆಡಗೆ ಸೌವರ್ಣಮಯ ಪಾದಪಂಗಳಾ ।
ವೆಡೆಯೊಳುಂ ಲೇಖೋಪಯೋಗ್ಯ ಕರುಮಾಡಗಳ್ ವೈಜಯಂತದೊಳೆಸೆದವು ॥
ಬುಡಿವ ಪಂಡಿತವರ್ಕ್ಕಗಳ ಕಲಸ್ವನ ಮಧುರ ।
ದೊಡನೆ ಕೂಡಿದ ತಾಂಬ್ರತುಂಡಂಗಳುಲಿಗಳಂ ।
ಬೆಡಗಬೀರಿತು ಕಪೀಂದ್ರರ ದೃಕ್ಸಮೂಹಕಂ ಪತ್ತಣ ಮನೋಹರಮೆನೆ ॥ (2)

ಕುಣಿವ ಸೋಗೆಗಳ ಸಮುದಾಯದ ವಿಡಾಯದಿಂ ।
ಮಣಗುತಿಹ ಚಕ್ರತನುಘಾಸದ ವಿಲಾಸದಿಂ ।
ಮಣಿತಮೆನೆ ಮೊರೆವ ಭೃಂಗಾವಳಿಯುಂ ಕಾದ ಅಂಬುಜದ ಜಂಗುಳಿಗಳ ॥
ಪ್ರಣಯ ಕುಪಿತದ ಪಿಕದ ಮಂಗಡದ ಸಂಗಡದ ।
ಭಣಿತೆಯಂತೆಸೆವ ಜೀವಂ ಜೀವಗಳ ಕಾಮು ।
ನುಣಾಧನಿಗೆ ಮೆಚ್ಚಿ ಮೈಮರೆಯದಿಹುದೆನೆ ಮನಂ ಬೆರ್ಚಿಸುವುದಾ ನಗರವು ॥ (3)

ಕನಕಮಯ ತರುನಿಚಯ ಶಾಖಾಗ್ರದೊಳು ರತುನ ।
ಮೆನೆ ಕಿಸಲಯಂಗಳುಂ ಮೌಕ್ತಿಕ ಸ್ತಬಕಂಗ ।
ಳೆನೆ ವಜ್ರಮಯ ಶಲಾಕುಗಳಂದ ಕಲ್ಪತರು ನಿಚಯಮಂ ಧಿಕ್ಕರಿಸುತ ॥
ಬನಮೆಸೆದುದಲ್ಲಲ್ಲಿ ಭಾಸ್ಕರಪ್ರಭೆಯಂತು ।
ಮಿನುಗುತಿಹ ಲತೆಗಳಂ ವೈಡೂರ್ಯಮಯ ಕಮಲ ।
ವನವಿಹಗಸಂಪೂರ್ಣಮಾಗಿ ರಾರಾಜಸಿದುದೇನೆಂಬೆನಚ್ಚರಿಯನು ॥ (4)

ಸುರಚಾಪತೋರಣಗಳೋರಣಗಳಕ್ಕಡೆಯ ।
ಉರುತರದ ಕೇಸರಿಯ ಮೈಸಿರಿಯ ಕಂಗೊಳಪ ।
ಕರಕಲಿತಪಲ್ಲಕಿಗಳಲ್ಲಿ ಕಿವಿಗಿಂಪೆನಿಸಿ ಪಾಡುತಿಹ ಪುತ್ಥಳಿಗಳ ॥
ತರುಣ ಭೃಂಗಾರವಗಳಾರವಕ್ಕನುಮೋದ ।
ವೆರದುಲ್ಲಸಿತಮಾದ ಪಲ್ಲವಾರಿಗಳಂದ ।
ಮೆರೆದುದಳಕಾವತಿಯ ಚಳಕದಮರಾವತಿಯ ವೈಭವಕ್ಕಮ್ಮಡಿಯೆನೆ ॥ (5)

ರತುನಮಯ ಶಯನಮಾನಂಗಳಾವಾವೆಡೆಯ ।
ವಿತತಹೈರಣ್ಯಶಿಬಿಕಾಂದೋಳಕಾಯಾನ ।
ತತಿಗಳಾವಾವೆಡೆಯ ಹೈಮರಾಜತಕಾಂಸ್ಯ ಭಾಜನಗಳೆಲ್ಲೆಲ್ಲಿಯೂ ॥
ಅತಿಶಯಾಗರು ಮೃಗೀಮದ ದಿವ್ಯಗಂಧ ಸಂ ।
ಗತಿಯಮೃತ ಕಲ್ಪಫಲ ಮೂಲಮಧುನಿಚಯ ಸಂ ।
ಭೃತಮೆನಿಸುತಲ್ಲಲ್ಲಿ ನೋಡೆ ಶಾಖಾಮೃಗಗಳುಲ್ಲಾಸಗೊಳುತ ನಲಿಯೆ ॥ (6)

ದೇವತಯೋಗ್ಯಮೆನಿಪಂಬರಗಳಂದ ರಾ ।
ಜೀವ ಭವನೊಲುಮೆಯಂತೆಸೆವ ಕಂಬಲದಿಂದ ।
ಪಾವನಾಜನನಿಚಯಪಾಸಿಕೆಗಳನಾಂತು ತೋರ್ದುದಡಿಗಡಿಗೆ ಶುಭಮಂ ॥
ಆವಾವಕಡೆಯೊಲತಿಶಯಕಾಂತಿ ಫಲಭರಿತ ।
ಪೂವದೆಂದಿಟ್ಟಸುವರತಿಶಯುವ ಪೂಗಳಲಿ ।
ನ್ನಾವನಿಂದಳವಹುದು ಶಿವನಿರವೆನುತ್ತಮಚ್ಚರಿಯಿಂದಮೊಳಪೊಕ್ಕರು ॥ (7)

ನೋಡಿ ವಿಸ್ಮಿತರಾದರಾ ನಗರದತಿಶಯವ ।
ಕೂಡೆಕೂಡತಿಶಯಂ ಬೆರ್ಚಿತೋರ್ವರ ಕಾಣ ।
ದೂಡೆದಲೆ ಫಲಮೂಲಗಳನಮೃತರುಚಿಯೆನಿಪ ಮಧುವ ನಾಸ್ವಾದಿಸದಲೆ ॥
ಆಡಲಮ್ಮದೆ ಬೆದರುನೋಟದಿಂದೆಡಬಲವ ।
ನೋಡುತ್ತಿದಾರ ನೆಲೆಯೋ ಮಹಾದೇವ ನೀ ।
ನಾಡ ನಿರ್ಮಿಸಿದನಾವನೊಯೆನುತಲಚ್ಚರಿಯೊಳೈದಿರರ್ ಕಪಿವೀರರು ॥ (8)

ಮನುಜರಲ್ಲೀ ನೆಲದೊಳಾರನುಂ ಬೆಸಗೊಂಬೆ ।
ವನುವಿಂದ ನಿಟ್ಟಿಸುವುದಸದಳಂ ಕಂಗಳಂ ।
ಗಿನಶಶಿಪ್ರಭೆಗಳಂ ಮಿಕ್ಕು ನೋಳ್ಪರಸಾಧ್ಯಮೆನಿಸುತಿದೆ ಪರಬೊಮ್ಮನ ॥
ಮನೆಯೊಳಾ ಭಾಳಾಂಬಕನ ನೆಲೆಯೊ ಸರಸಿಜಭವನಿ ।
ಗನುವೋದನಿಲಯಮೋ ಮತ್ತಲ್ಲದಿನ್ನಾವ ।
ಮುನಿತಿಲಕನಿರ್ಪನೋ ಕಾಣದೆಂತೆನುತಳಲಿ ಬಳಲಿದರ್ ಕಪಿವೀರರೂ ॥ (9)

ವೈಕುಂಠಮಿತ್ರ ಕೈಲಾಸಕ್ಕೆ ನೇಹಿತ ವಿ ।
ಲೋನಪ್ರಿಯ ಸತ್ಯಮುಳಕಾವಯಾಗ್ಯಸುರ ।
ಲೋಕಕ್ಕೆ ಕೆಳೆಯ ಲಕ್ಷ್ಮೀನಿಲಯಮೀನಗರಮಾರು ನಿರ್ಮಿಸಿದರಕಟ ॥
ಲೋಕಸಂಚರಣೆ ಮಾತ್ರರಮಿಲ್ಲ ತೇಜಸಾ ।
ನೀಕದಿಂದಿಟ್ಟಿಸುವರಳವಲ್ಲ ಚೋದ್ಯವ ಪಿ ।
ನಾಕಿ ತಾನೇ ಬಲ್ಲದರಿತವನಲ್ಲಮೆನುತಮಚ್ಚರಿಗೊಂಡನು ॥ (10)

ಎನಿತು ಬಳಲಿದರೆಮಗೆ ಧೈರ್ಯಮಂ ತಿಳಿಪಿ ಮುಂ ।
ದನುವ ಪೇಳುವರಾರು ಧೃತಿಯಿಂದ ಕಾರಿಯವ ।
ನನುಗೊಳಿಸಬೇಕೆನುತ ಪ್ಲವಗರೊಮ್ಮನೆಯಿಂದಲ್ಲಲ್ಲಿ ಶೋಧಿಸುತಿರೆ ॥
ಯೆನಿತು ದೂರಂ ಪೋದರೆನಿತು ಪಂಥಾನಮಂ ।
ಕೊನೆಗಾಂಬರಿಲ್ಲ ಸುಳಿಸುಳಿದು ಸುತ್ತುತ ಮರಳಿ ।
ಜಿನದದಿಂ ಮೊದಲಿರ್ದ ತಾಣಕೈತಹುವಲ್ಲದಿನ್ನೊಂದು ತ್ರಾಣಮಿಲ್ಲ ॥ (11)

ತಿರುತಿರುಗಿ ಬಾಯಾರಿ ಸುರನೀಲಕಾಂತಿ ಸಂ ।
ಭರಿತಮಾಗಿಹ ಕೊಳದಿ ಜಲಮೊಂಟಿಲರಾಗಲದು ।
ತೆರೆಯಿಸಗಜಿರಲು ಬರಿದೆನುತ ಕೆಲಸಾರುತ್ತ ಬಜ್ಜರದ ಕಾಂತಿ ಮುಂದೆ ॥
ಪರಿವೃತ್ತಮಿರಲೈದಿ ಪರಿಕಲಿಸಿ ರನ್ನಗಳ ।
ಸುರುಚಿಯಿಂ ಲೋಹಿತಾಕೃತಿವೆತ್ತು ಖಳಲಿಸಿದು ।
ದರರ್ ಕಪಿನಾಯಕರ ಮರುಮರೀಚಿಕೆ ಮೃಗವ ಧಾವತಿಯಗೊಳಪಂದದಿ ॥ (12)

ಪಳುಕಿನುಪ್ಪರಿಗೆಗಳ ಕಳಿಯಿಂದ ವಪ್ಪದು ।
ಜ್ವಲದಿಂದವಾವೆಡೆಯ ನೋಡಲೊಂದೇಪರಿಯ ।
ಬೆಳಗಿರ್ಪುದಲ್ಲದಿನಿಕಾದರುಂ ಮುಂದೆಗವುದಿಲ್ಲವಾ ಭೂಮಿಯೊಳ್ ।
ತೊಳಲಿ ಕಂಗೆಟ್ಟು ಕಪಿವೀರರತಿಭಯದಿಂದ ।
ಬಳಲುತ್ತಲೇಂ ಗತಿಯೆನುತ್ತ ಚಿಂತಿಸುತಲ್ಲಿ ।
ಕಳೆಗುಂದಿ ಕುಳ್ಳಿರ್ದರೇನೆಂಬೆ ನಿಜ ಜೀವಿತಾಶೆಗಳನುಳಿದು ॥ (13)

ಎತ್ತ ನೋಡಿದರು ಬೆಳಗುತ್ತಿರುವುದೆಲ್ಲ ತಟ ।
ದೊತ್ತ ಕಾಣುವದಿಲ್ಲ ರಘುಪತಿಯ ಕಾರ್ಯನವು ।
ಗೆತ್ತಣಿಂದಹುದೆಂತು ಪೊರಮಟ್ಟು ಜೀವದಿಂದುಳಿದು ಪೋಗುವುದೆನುತ್ತ ॥
ಚಿತ್ತಚಂಚಲದಿಂದ ಚಿಂತಿಸುತಮಿರಲಾ ಮು ।
ರುತ್ತಸುತನಿಂತೆಂದ ವಿಪದದೊಳಗತಿಧೈರ್ಯ ।
ವೆತ್ತಲ್ಲದಾ ಕಾರ್ಯ ವಶವಾಗದೆಂದೆನುತಮುಸುರಿ ನೋಡಲೈದಿದಂ ॥ (14)

ಬೆದರದಿರಿ ನಾಂ ಪೋಗಿ ಬೆದಕುತೀ ಚಿಂತೆಯಂ ।
ತುದಿಗೊಳಬೆನೆಂದು ಮಾರುತಿಯೈದಿ ಯೋಗಸಂ ।
ಪದದಿಟ್ಟೆಯಿಂದರಿತ ತಾನಾಗ ಕನಕಮಯಗದ್ದುಗೆಯ ಮಧ್ಯದೊಳಗೆ ॥
ಮುದದಿ ದಿವ್ಯಾಭರಣಪಿಟ್ಟು ಮಂಡಿಸಿ ಮೌನ ।
ದುದಯದಿಂ ಧ್ಯಾನಯೋಗದೊಳಪ್ಪ ಯೋಗಿಣಿಯ ।
ಪದುಮನಯನೆಯ ಚೀರವಸನದಿಂ ರಾಜಿಪ ಸ್ವಯಂಪ್ರಭೆಯನಂ ಕಂಡನು ॥ (15)

ಮೆಲ್ಲನಾ ಠಾವ ಕುರುಪಿಡಿದು ಮಾರುತಿಯೈದ
ಲಲ್ಲಿ ಕುಳ್ಳಿರ್ದ ಯೋಗಿಣಿ ಕಂಗಳಂ ನೋಡು ।
ತಿಲ್ಲಿಗೈತಂದುದೇಂ ನೀನಾರು ಕಪಿರೂಪನೆಂತು ಬೆಸಗೊಂಡರಾಗ ॥
ಸಲ್ಲಲಿತನುಡಿಗಳಂ ಹನುಮಂತನಿಂತೆಂದ ಶ್ರೀ ।
ವಲ್ಲಭಂ ದಶರಥಾತ್ಮಜದೂತನಾಂ ಬಂದು ।
ದೆಲ್ಲಮಂ ವಿಸ್ತರಿಪೆನವಧರಿಸು ಸಾಧುಕುಲರನ್ನೆಯೆಂದೊರೆದನೊಲಿದು ॥ (16)

ಕೋಸಲೇಂದ್ರಂ ಪಂಕ್ತಿರಥಗೆ ನಾಲ್ವರು ತನಯ ।
ವಾಸವೋಪಮಿತರೆಸಿರ್ದರದರೊಳು ಪೂರ್ವ ।
ನಾಸಿರದಳಾಕ್ಷಶ್ರೀರಾಮ ಲಕ್ಷ್ಮಣಸೀತೆಸಹಿತ ಪಿತೃವಾಕ್ಯಪಿಡಿದು ॥
ಅಸುರರ ವಧಿಸಲೆಂದಾರಣ್ಯಕೈತಂದ ।
ನೈಸೆ ಧರಣೀಸುತೆಯ ಕದ್ದೊಯ್ದ ದಶಕಂಠ ।
ನಾ ಸುರನ ಪಥಪಿಡಿದು ಬಂದು ಪಂಪಾತಟದಿ ಸುಗ್ರೀವನಂ ಕಂಡರು ॥ (17)

ತರಣಿಸುತನಂ ಪೊರೆಯೆ ವಾಲಿಯಂ ಸಂಹರಿಸಿ ।
ಸಿರಿಯ ಸುಗ್ರೀವಗುಂ ಪಾಲಿಸಿದಡಾತ ಕಪಿ
ವರರ ನಾಲ್ದೆಸೆಗೆ ಕಳುಪಿದ ಜನಕನಂದಿನಿಯ ಕುರುಪರಿಯ ಬಪ್ಪುದೆನುತ ॥
ಬರವಾದುದದರಿಂದ ವಿಂಧ್ಯಾಟವಿಯ ತೊಳಲಿ ।
ಪರಿಪರಿಯ ಗುಹೆಗಳಂ ಶೋಧಿಸುತ ತೃಷೆಯಿಂದ ।
ಮರಿಯದೀ ಕಳ್ತಲೆಯ ಗವಿಯ ಪೊಕ್ಕರ್ ಮಹಾಬಲಜಾಂಬವಾದ್ಯರೊಲಿದು ॥ (18)

ಬರಬರಲ್ ಬೆಳಗು ತಲೆದೋರಿದುದು ಮತ್ತದಂ ।
ಪರಿಕಿಸುತಮಿರೆ ಭವನ ಕಂಗೆಸೆದುದಾಶ್ಚರ್ಯ ।
ಕರಮಿದೆನುತಲ್ಲಲ್ಲಿ ನೋಡುತಿಹರಾ ಕಪಿಗಳವನೀತನುಭವೆಯನು ॥
ಕರುಣದಿಂದೀಪರಿಯನರಿತೊಂದು ಮಾರ್ಗಮಂ ।
ವಿರಚಿಸಲು ಸುಕೃತಮುಂಟೆನೆ ಕೇಳ ರಘುವರನ ।
ಚರಿತೆಗಾನಂದಿಸುತ ಯೋಗಿಣಿಯು ಪೇಳ್ದಳಾ ಮಾರುತಕುಮಾರನೊಡನೆ ॥ (19)

ತೊಳಲಿ ಶಾಖಾಮೃಗಗಳೆಲ್ಲ ಕಂಗೆಟ್ಟಿರುವೆ ।
ರಿಳೆ ಬೆರರದಲ್ಲ ರಘುನಂದನನ ಸಿರಿಯನುತ ॥
ತಿಳದೆಲ್ಲರುಂ ಪಕ್ವಫಲಮೂಲಗಳನುಂಡು ಸಂತಸವತಳೆದುಬರಲು ॥
ತಿಳದನಿತ ಬಿತ್ತರಿಪೆನೆಂದರಾ ಮಾತಿನಿಂ ।
ಕಳೆವೆತ್ತು ಪವನಸುತನೈದಿ ಪ್ಲವಗೇಶರಿಗೆ ।
ತಿಳುಹಲಾನಂದದಿಂ ಫಲಮೂಲಗಳನುಂಡು ಸಂತಸದೆಲ್ಲೈತಂದರು ॥ (20)

ಬಂದು ತೇಜೋಭರಿತವಾದ ತಾಪಸಿಯನತಿ ।
ಭಂ[illegible]ಯಿಂ ನುತಿಸಿ ವಂದಿಸಿ ವಿಸ್ಮಿತರವಾದ ।
ಮಂದಿರಮಿದಾರದಿಲ್ಲೋರ್ವಳೀ ನೀನಿರ್ಪ ಕಾರಣಂಗಳನೆಲ್ಲಮಂ ॥
ಬಂಧುರಪ್ರೇಮದಿಂದೊರೆಯವೇಳ್ಕೆನೆ ಕೃಪಯೊ ।
ಳಂದು ನಿಜವೃತ್ತಾಂತಮಂ ಪೇಳಲನುಗೈದ ।
ಳಿಂದುಶೇಖರನೆಡೆಯ ವಿಶ್ವಕರ್ಮಾತ್ಮಭವೆಯಿರ್ದಳನುದಿನ ಭಜಿಸುತ ॥ (21)

ವಾಮೆಯರೊಳತಿಚತುರೆ ಹೇಮಾಭಿಧಾನದಿಂ ।
ಸೋಮಶೇಖರ ಭಕ್ತೆ ಪೆರ್ಚಿ ನರ್ತನದೊಳಂ ।
ದಾಮಹೇಶನ ತುಷ್ಟಿಗೊಳಿಸಿದಳ್ ದಯದಿಂದ ಹರನಿತ್ತನೀ ನಗರಮಂ ।
ಕಾಮಿತಾರ್ಥಗಳೀವ ಕಲ್ಪಲತೆಗಳಮಣೀ ।
ಧಾಮಮಿಂದ್ರಾದಿಭೋಗಗಳನನುಭವಿಸೆನುತ ।
ನೇಮಿಸಿದರಂಗನೆಯು ಸಂತಸದೆಯಾ ಭವನದೆಡೆಯೊಳಾಗೆಸದಿರ್ದಳು ॥ (22)

ಬಲುವಿಲಾಸಗಳಿಂದ ವರ್ಷಮಯುತೆಯುತ್ತಂ ।
ನೆಲಸಿರ್ದು ತನಗೆ ಪ್ರಿಯಳಾನೆನುತಮೀ ಪುರವ ।
ನಲವಿನಿಂದಿತ್ತಳೆನ್ನಭಿಧಾನಮುಂ ಸ್ವಯಂಪ್ರಭೆಯೆಂದು ಬಳಿಕಮವಳು ॥
ಜಲಜಪೀಠನ ಪೊರೆಗೆ ನಡೆವಲ್ಲಿ ಪೇಳ್ದಳೆನ
ಗೊಲಿದು ತ್ರೇತಾಯುಗದಿ ಮಾನುಷಾಕೃತಿವಿಡಿದು ।
ನಳಿನಪತ್ರಾಕ್ಷನೈತಹ ಭೂಮಿಭಾರವನು ಪರಿಹರಿಸೆ ಪರಬೊಮ್ಮನು ॥ (23)

ಆ ಮಹಾಪುರುಷನಂಗನೆಯು ದಶಶಿರನೊಯ್ಯೆ ।
ರಾಮಸೀತೆಯನರಸುತ ಮಿತ್ರರೈತಪ್ಪ ।
ರೀ ಮಹಾಬಿಲದೊಳಗೆ ಮತ್ತೆ ಶಾಖಾಮೃಗಗಳಂ ಪೂಜೆಗೈದು ಬಳಿಕ ॥
ರಾಮನೆಡೆಗೈದಿ ವಂದಿಸಿ ನುತಿಸಿ ಶ್ರೀಪತಿಯ ।
ನೈಮದಿಂ ವೈಕುಂಠಕ್ಕೈದೆಂದು ಪೇಳ್ದೈದ ।
ಳಾ ಮಾನಿನೀವಚನವಿಡಿದಾನು ಚಿರಕಾಲಮಿರ್ದೆನವ ಜಾನಿಸುತಲಿ ॥ (24)

ಆದುದೆನ್ನಭಿಮತಂ ಪರಬೊಮ್ಮರಾಘವನ ।
ಪಾದಂಗಳಂ ಕಾಣಲೈದುವೆನೆನುತ್ತೊರೆದ ।
ರಾದರಿಸಿ ಮಗುಳೆ ಬಿನ್ನಪಗೈದ ಪವನಸುತ ಪಾವನತಪಸ್ವಿಯೊಡನೆ ॥
ಮಾಧವನ ಪೊರೆಗೆ ನೀಂ ಪೋಪರೆಮ್ಮಂ ಬೇಗ ।
ಮೇದಿನಿಗೆ ಕಳುಪಿ ಧರಣೀಸುತೆಯನರಸುವರೆ ।
ಸಾಧನಗಳಂ ತೋರವೇಳ್ಕೆನಲು ನಸುನಗುತ ಯೋಗಿಣಿಯು ಪೇಳ್ದಳೊಲಿದು ॥ (25)

ಆರಿಂದಮೀ ಮಹಾಬಲವ ನೀರ್ಬಸಲರಿದು ।
ತೀರತಮಸಾವೃತದ ಪಥಮಿಂತು ಬರಲು ಮುಂ ।
ದೋರದೇನಂತೆಂಬುದೀ ನೆಲದಗುಣಂ ಹರಂ ದಯೆಗೈದ ವರಮಹಿಮೆಯು ॥
ಮೀರಿಪೊಕ್ಕರೆ ಪ್ರಾಣಮುಳಿಯದೆಂದರಿತರಿ ।
ನ್ನಾರಾದಡಂ ಪೊಗರು ನೀಮಿಯದೊಳಪೊಕ್ಕು ।
ತೋರದಾದಿರಿ ಕಾರಣಂ ರಾಮನಾಮಪ್ರಭಾವದಿಂದುಳಿದಿರಕಟ ॥ (26)

ಆದರೊಳ್ಳಿತು ಪ್ಲವಗಪತಿಗಳೆಲ್ಲರು ಧರೆಗೆ।
ಪೋದಪೆವೆನುತ್ತ ಮಾನಸದಲಿರೆ ನೇತ್ರಗಳ।
ಸಾದರದಿ ಕರಗಳಿಂದಾಚ್ಛಾದನಂ ಗೈವುದೆನಲು ಬಾಲಕರಂದದೀ॥
ಹಾದಿಗೋಸುಗ ಕರಗಳಲಿ ಕಂಗಳಂ ಮುಗಿಯೆ।
ಮೇದಿನಿಯೊಳರ್ದರಾ ಬಿಲಮುಳಿದು ನಿಮಿಷದೊಳು।
ಪೋದ ಮಾರ್ಗಂ ಕಾಣದಾದುದಚ್ಚರಿಯನೇಂ ಪೇಳ್ವೆನಂದಿನ ಪರಿಯನು॥ (27)

ವಿಪದಮಂ ಕಳದು ಭೂತಳದಿ ಸಂತಸಗೊಳುತ।
ಕಪಿಗಳರೆ ಕಂಡು ತಾಪಸಿ ಪೇಳ ವೇಗದಿಂ।
ತಪನ ವಂಶಜನೆಡೆಗೆ ನಡೆದು ವಂದಿಸಿ ಪೊಗಳ ನೇಮವಿಡಿದೈದಿ ಮುದದಿ॥
ಜಪಿಸುತಲೆ ಶ್ರೀರಾಮನಾಮಗಳ ಬದರಿಕಾ।
ವಿಪಿನದೆಡೆಗೈದಿದಳ್ ಕರುಣಿ ಕಪಿವರರೆಲ್ಲ।
ವಿಪರೀತಕರಚಾರಣೆಗಳೆಣಿಸುತೋರ್ವರೊಳಗೋರ್ವರಿಂತೆಂದರೊಳಿದು॥ (28)

ದಾನವಮಾಯಾಸುರಂ ನಿರ್ಮಿಸಿದ ಕಾಂಚನದ।
ಕಾನನಮದೆಲ್ಲಿ ಪೋದುದು ವಿಶ್ವಕರ್ಮ ಮನ।
ದಾನಂದದಿಂದೆಸಗಿದಿಂದ್ರಭವನೋಪಮಿತಮನೆಯದೇನಾದುದಕಟ॥
ಮಾನಿನೀಮಣಿ ನೃತ್ಯಗೀತ ಚಾತುರ್ಯ ಸು।
ಸ್ಥಾನಿ ಹೇಮಾಸಖಿಯದೆಲ್ಲಿ ಪೋದಳೊ ಕಪಟ।
ಮೇನಿದಚ್ಚರಿ ಕನಸಕಂಡತೆರದೊಳ್ ಪೋದವಕಟ ವಾಸರಗಳೆನಿಸೊ॥ (29)

ಕ್ರೂರಹೃದಯಗೆ ಪ್ರಭುತ್ವಂ ದೊರೆಯಲಾಗೆ ಸರಿ।
ತೋರದಡೆ ಕೊಲದುಳವನೆಂತು ನಾವೈತಂದು।
ಧಾರುಣೀಸುತೆಯ ಕುರುಪರಿಯದಾತನ ಪೊರೆಗೆ ಪೋಗಿ ಶಿಕ್ಷೆಗಳನಾಂತು॥
ಭಾರಣೆಯ ಸಂಬಾಧೆಗೊಳುವದಕ್ಕಿಂದುಮೀ॥
ಧಾರುಣೀಧರದಿ ಪ್ರಾಯೋಪವೇಶಂ ಗೈದು।
ಮಾರುತಾಹಾರವೆರದಿರ್ಪುದೇ ಕ್ಷೇಮಕರಮೆನುತೊರೆದ ಪ್ಲವಗತತಿಗೆ॥ (30)

ತರಣಿಸುತ್ರಯನಗೆ ಯುವರಾಜಪಟ್ಟವನಿತ್ತ।
ಪರಿಯಲ್ಲ ರಘುನಾಥ ಪ್ರಿಯದಿ ಪಾಲಿಸಿದನೆಂ।
ದರಿದಿರ್ಪಿರೆಲ್ಲ ಪೂರ್ವದ ವೈರಮಂ ಸ್ಮರಿಸಿ ಮನದಿ ಬೇರೊಂದನೆಣಿಸಿ॥
ಧರಣಿಜೆಯ ಕಾಣದಲೆ ರಾಜಾಜ್ಞೆಗಂ ಮೀರಿ।
ಚರಿಪನೆಂದರಸಿಗುಂ ಪೇಳ ಕೊಲಿಸದೆ ಮಾಣ।
ನರಿತಲ್ಲಿಗೈದುವದಕೆಂತ ತನುವಂ ತೊರೆವುದತಿಲೇಸು ಮನ್ಮತವಿದು॥ (31)

ಎನುತಂಗದಂ ಪೇಳ್ದ ವಚನವಿದು ಸತ್ಯಮಹು।
ದೆನುತ ಕಪಿವರರೆಲ್ಲ ಕುರುಣದಿಂದಿಂತೆಂದ।
ಇನತನಯನನುಗ್ರಹಿಸನನೆಂದು ಮೂಲೋಕಜನವೆಲ್ಲ ತಿಳದಿರ್ಪುದು॥
ಜನಕಜೆಯ ಕಾಣದಾವೈದಲಾ ಕಪಿರಾಜ।
ಕೆನಿಸಿಂದ ದಂಡಿಸದೆ ಮಾಣ್ದಪನೆ ವಿಷಮಕರ।
ಮನನಾತನಂ ಕಾಣ್ಬುವತಿಗಿಂತ ಸಾವುದೇ ಸುಕ್ಷೇಮಕರವೆಂದರು॥ (32)

ಪ್ಲವಗಾಧಿಪರ ನುಡಿಯ ಕೇಳ ತಾರಂ ಪೇಳ್ದ ।
ಕುವಲಯಾತ್ಮಜೆಯ ಕಾಣದೆ ಪೋಗಲಿಪ್ಪಸುತ ।
ಜವದಿ ಶಿಕ್ಷಿಸುವನಿದು ಸಿದ್ಧವಂಗದಪೇಳ್ದ ನುಡಿ ಸತ್ಯಮಹುದು ನೋಡೆ ॥
ವಿವರದೊಳಗಿಹ ನಗರ ಪತ್ತಣಂ ಭೋಗಕರ ।
ದವಿರಳದ ಹರ್ಷ ಜನರಿಲ್ಲಿಹ ತಾಣವುದ ।
ತವಕಪಿಂ ಸಾರಿ ಶಾರೀರವಂ ತೊರೆವುದೇ ಲೇಸೆಂದು ನುಡಿದನೊಲಿದು ॥ (33)

ಅಂಗದಂ ಪೇಳ್ದುದಕೆ ಪ್ಲವಗಾದಿ ನಾಯಕರ್ ।
ಕಂಗೆಟ್ಟು ಕಳವಳಸಲೀ ಪರಿಯ ನೋಡಿ ಕಪಿ ।
ಪುಂಗವನ ಸಂತೈಸದಿರಕೊಡದಾದುದಾ ಮಾರುತಿಯ ಚಿತ್ತದೊಳಗೆ ॥
ಹಿಂಗಿಸಿವನಷ್ಟಾಂಗಯುಕ್ತಂ ಚತುರ್ಬಲವ ।
ಸಂಗಡದಿ ಪದಿನಾಲ್ಕುಗುಣಗಳಂ ಮೇಣಿವನಿ ।
ಗೇಂ ಗೈವೆನೆನುತಮುಪಚರಿಸಿದಂ ಸುರರಾಜಸುತಸುತನ ವಿನಯದಿಂದ ॥ (34)

ಮೂರುಪಾಯಗಳಿಂದ ನೋಡಿ ವಶವಾಗದಿರೆ ।
ಮೀರಿದಾ ಯುಕ್ತಿಯಂ ಬಳಸುವದು ಯುಕ್ತ ಕಪಿ ।
ವೀರಸುತ ಪಿತೃತುಲ್ಯವಿಕ್ರಮಂ ಧೀಯುತಂ ಚಪಲಕಪಿವಚನವಿಡಿದು ॥
ಈ ರೀತಿಯನುತಾಪ ಗೊಳುತ ರಕ್ಷಣೆ ಗೈದು ।
ಶಾರೀರಮಾತ್ರದಿಂದಿರುವುದಬಲರ ಮತಂ ।
ಸೂರಿಯನ ಸುತನ ಭಯಮೇನಿಹುದು ರಘುಪತಿಯ ಮುದ್ದಿನ ಕುಮಾರ ನಿನಗೆ ॥ (35)

ತ್ರಿಜಗಮಂ ನಿರ್ಮಿಸುವರಿಚ್ಛೆಗೈದರೆ ಕ್ರೋಧ ।
ರುಜೆಯಿಂದ ಕಲ್ಪಾವಸಾನಗೊಳಸುವರದಂ ।
ಸೃಜಿಸುವರು ಮಗುಳೆ ಶ್ರೀರಾಮಲಕ್ಷ್ಮಣರುಗಳು ವಿಪುಲಬಲಯುತರವರ್ಗೆ ॥
ಕುಜನರೆಮ್ಮಿಂದಪ್ಪ ಸಾಹಾಯಮೇನುಂಟು ।
ಭಜಿಸಿದರ ತಪ್ಪನೆಣಿಸದೆ ಪೊರೆವುದುಂಟಲ್ತೆ ।
ದ್ವಿಜರಾಜನಿಭನೃಪರಿಂದಂ ತಿಳದು ಸಂಕ್ಲೇಶಗೊಳುವುದನುಚಿತಮೆಂದನು ॥ (36)

ಎನಿತು ವಿಪರೀತಗಳನೆಸಗಿದರು ಕರವಿಡಿದು ।
ಜನಪತಿಯು ಕೋಪಿಸಂ ಮತ್ತಾವನಲುಪಿದರು ।
ಮನವಲಿಡನಿದು ತಥ್ಯಮೆರಸಂಗಧಿಕಮೆಂದರಿದಿರ್ಪ ರಘುನಾಥನು ॥
ಇನಸುತನ ಭಯಮೇನು ಜನಿಸಲಮ್ಮದು ನೀನು ।
ಕಿನಿಸಿಂದಮುಳಲೇನು ಬರ್ಪುದಧಿಕ ಕೃಶಾನು ।
ವನುವಿಂದ ತನುತನುತೆಯಾಂತು ಕಾರ್ಯಂ ಕೆಡುಗುಮೆನುತ ಮಾರುತಿ ನುಡಿವನು ॥ (37)

ಎಂದು ಮರುತಜ ಪೇಳದಂದಮಂ ಕೇಳ ಮಗು ।
ಳೆಂದನಂಗದ ತಾತ ನೀನೆನಗೆ ದಯದಿಂದ ।
ಮಿಂದೊರೆದುದುಚಿತಮಾದರು ಸೂರ್ಯಸುತನತುಲವೈರಿ ಮತ್ಪಿತಗೆ ಮೊದಲೆ ॥
ಇಂದೆನಗೆ ಯುವರಾಜಪಟ್ಟ ರಘುವೀರನಿಂ ।
ಬಂದುದೊಂದತಿಶಯದ ವ್ಯಥೆಯಾಂತನಿದ ಮನದೊ ।
ಳೊಂದಿಸುತಮೇನಾದರೆಣಿಸಿ ಕೊಲ್ಲದೆ ಮಾಣನೆಂಬುದೇ ದಿಟ ಕಪೀಂದ್ರ ॥ (38)

ಹುಸಿನುಸುಳುಚಾಪಲ್ಯಕ್ರೂರಕಾರ್ಯಗಳಗೆ ।
ಹಸವೂ ಸುಗ್ರೀವನಣ್ಣನಂ ಬಿಲದೊಳಗೆ ।
ಬೆಸರಳಿಸಿ ಬಂದುದಂ ರಘುವೀರನಂ ಪೊಂದಿ ಮತ್ತಗ್ರಜನ ಕೊಂದುವಂ ॥
ಹಸನಾಗಿ ತತ್ಸತಿಯನಾಕ್ರಮಿಸಿಕೊಂಡಿರ್ಪ ।
ಪಸುಘಾತಕಿಗೆ ಧರ್ಮಗುಣಮೆಂತು ಸಂಭವಿಪ್ಪು ।
ದಸುರಗಿಂದಧಿಕಮೆಂದರಿದಿರ್ದೆನವನಿರ್ಪ ನಿಲಯಕಾಂ ಬರಲಮ್ಮೆನು ॥ (39)

ಕರಿಹಸ್ತಕಲಿತಕಮಲವ ಕಳೆದ ಮಾಳ್ಕೆಯೊಳಾ ।
ಸುರಪಸುತಹಸ್ತಗತಸಿರಿಯ ತಂದಿತ್ತ ರಘು ।
ವರನೆ ಮರದುದ ನೀನೇ ಬಲ್ಲೆ ಪಾಪಿಷ್ಟಂ ಕೃತಘ್ನನತಿಚಪಲ ಹೀನಂ ॥
ತರಣಿಸುತ ನಿಷ್ಕರುಣಿಯಾತನೆಡೆಗುಂ ಬಂದು ।
ಪೊರೆವುದೆಂತೊಡಲ ನಿಟ್ಟಿಸಿದ ಮಾತ್ರದೊಳೆನ್ನ ।
ತರಿಯದುಳಿವನೆ ಮರುಳಾತನವೆ ಕಾಣಾತ ಗರ್ತದೊಳಗೆ ಕೆಡದಪ್ಪುದುಕ್ತವೇ ॥ (40)

ಕ್ರೂರ ಶಠನು ನೃಶಂಸ ಪಾಪದಾಗಾರ ನಾ ।
ದಾರ ಕಾಮುಕ ತರಣಿಸುತನೆಡೆಯೊಳಾನಲ್ಪ ।
ಸಾರ ನಿಸ್ಸಹಾಯನಣಾಗ ಸುಳದವನೆಂತು ಬಯಲಭ್ರಮೆಯಿಂದಮೇನು ॥
ಧಾರಿಣೀಸುತೆಯ ದೆಸೆಯಿಂದ ಬಂದಡಸಿತು ವಿ ।
ಕಾರವೀ ಪರ್ವತದಿ ಪ್ರಾಯೋಪವೇಶದಿಂ ।
ಸೂರಿಜನರಸುಗಳೆವಂತೆ ಶ್ರೇಯಸ್ಕರವ ಸಂಪಾದನಂ ಗೈವೆನು ॥ (41)

ಹರುಷದಿಂ ನೀವೆಲ್ಲ ಶ್ರೀರಾಮನೆಡೆಗೈದಿ ।
ಚರಣಾಬ್ಜಗಳಗೆರಗಿ ಕಾರ್ಯಮಂ ಬಿತ್ತರಿಸಿ ।
ತರಣಿತನಯನ ಚಿತ್ತದೊಲವಂತು ತನುಗಳಂ ಸಲಹಿಕೊಳವೇಳ್ಕುಮೆನ್ನ ॥
ಪರಿಯ ಬಿನ್ನೈಸಿ ವಂದನೆಗೈದನೆಂದರುಪಿ ।
ಚರಣಕಭಿನತನಾದನೆಂದು ಸುಗ್ರೀವಗಂ ।
ತರುಣಿರುಮೆತಾರೆಯರಿಗರುಪಿ ಸುಖದಿಂ ಬಾಳ್ವುದೆನುತ ಜವದಿಂ ಪೇಳ್ದನು ॥ (42)

ಬಂದ ಕಾರ್ಯಂ ಪೋಗಿ ಬರಿಗೈಯೊಳಾನು ಕಿ ।
ಷ್ಕಿಂಧೆಗೆಂದಿಗು ಪೋಗೆ ರವಿಸುತನ ಕೈಬಾಧೆ ।
ಗಿಂದವೀ ಪರ್ವತದೊಳಹುದೆ ಲೇಸೆಂದೆನುತ ಪೇಳ್ದು ತಾರೇಯ ಬಳಿಕ ॥
ಛಂದದಿಂ ದರ್ಭೆಗಳ ಪರಪಿ ತನ್ಮಧ್ಯದೊಳ ।
ಗಿಂದಿರೇಶ ಮಹೇಶ ಶ್ರೀರಾಮಚಂದ್ರ ರಘು ।
ನಂದನ ನಮೋಯೆನುತ ಕುಳ್ಳಿರ್ದ ಕಪಿಕಟಕ ಕಳವಳಿಸಿ ಗದ್ಗದಿಸಲು ॥ (43)

ನೋಡಿ ಯುವರಾಜನಿರವಂ ಬಲೀಮುಖರೊಂದು ।
ಗೂಡಿ ಘೋಳೆಂದಳುತ ಸುಗ್ರೀವನಂ ಜರಿದು ।
ಕೊಡೆ ವಾಲಿಯ ಪೋಗಳ ದಶರಥಮಹಾರಾಯನಣುಗನೈತರಲು ಬನಕೆ ।
ಪೋಡಿಖಳ ಜನಕಜೆಯ ಕದ್ದೊಯ್ಯೆ ರವಿಜನೊಡೆ ।
ಗೂಡಲಾಯಿತೆಲ್ಲರಿಗೆ ಮರಣಕಾರಣಮೆನುತ ।
ಮಾಡಿಕೊಂಡಳಲುತಿರಲಾ ಶೈಲ ಮಾರ್ದನಿಯನಿತ್ತುದತ್ಯದ್ಭುತಮೆನೆ ॥ (44)

ಪರಿಪರಿಯಾಲಳಲಿ ಮೃತ್ಯುದಕದೊಳ್ನಿಂದು ಬಂ।
ಧಾರದುಃಖದಿಂ ದರ್ಭೆಯಂ ಪರಪಿ ದಕ್ಷಿಣಕೆ।
ಶಿಕಮಿಟ್ಟು ಪ್ರಾಙ್ಮುಖದೊಳೆಲ್ಲರುಂ ಮಲಗಿದರ್ ಹಂಪಮಂದೊಂದೇಳಿಸದೆ ॥
ನೆರೆಕಲಧ್ವನಿಯಿಂ ಗುಹಾಂತರಾಳದಿ ಸುಪ್ತಿ।
ವೆರದಿರ್ದ ಚಿರಜೀವಿಸಂಪಾತಿಗುಂ ನಿದ್ರೆ।
ಪರಿಯೆ ಮೆಲ್ಲನೆ ಪೊರಟುಬಂದು ನೋಡಿದನಲ್ಲಿ ಮಲಗಿರ್ದ ಕಪಿವೀರರ ॥ (45)
ಚಿರಕಾಲ ಪಸಿದನಾಥನು ತೆರದಿ ಕಡೆಬಿರ್ದ।
ಗರಿಯಿಲ್ಲದೆನಗಶನವೃತ್ತಿಯಂ ಕಲ್ಪಿಸಿದು।
ದರರೆ ವಿಧಿ ಹರ್ಷವಂ ಕೊಡದುಳವೃದೆಯೆನುತ್ತ ಸಂತಸಂಗೊಳುತ ನಿಂದು ॥
ಮರಣವಾದೊಂದೊಂದು ಕಪಿಯ ದೈನಂದಿನದಿ।
ಚರಿಸಿ ಸುಖದಿಂದಿರ್ಪೆನೆನುತ ಬೇಳದ ಕ್ರೂರ।
ತರಪಕ್ಕಿಯಂ ಕಂಡರಾ ಪ್ಲವಗಸತ್ತಮರ್ ಮನದ ದುಮ್ಮಾನದಿಂದ ॥ (46)
ಎನುತ ಶೈಲಾಭಗೃಧ್ರಂ ನುಡಿಯಲಂಗದಂ।
ಹನುಮಂತನೊಡನೆಂದ ಜನಕಜಾಕೃತ್ಯವದೊ।
ಳನತನಯ ವಾನರರ ಕುಲವ ಶಿಕ್ಷಿಸಲೆಂದು ಗೃಧ್ರತೆಯೊಳೈತಂದನೋ ॥
ಘನವಿಪತ್ತಡಸಿತನ್ಯಾಯವಾಳ್ದನ ಕಾರ್ಯ।
ವನು ಮಾಡಿ ಪೋಗಾಡಿ ತನುವ ಜಸಮಂ ಪಡೆಯ।
ದಿನತರಕ್ಷ್ಯಾನೀಕದೊಳಗನಾಯಾಸವಾಗಿ ಪೋಪುದಾಯ್ತೆಕಟೆಂದನು ॥ (47)
ಎಂದಿರ್ದರೊಂದು ದಿನ ಪೋದಲ್ಲದಾಗದೇ।
ನೆಂದರೂರ್ಜಿತವಾದ ಕೀರ್ತಿಯುಂಗಳಸವಲೆ।
ಬಂದಡವಿಯೋಳ್ ನಾಯಿನರಿಗೆ ತುತ್ತಾಯಿತೆಂಬುದೊಂದೆ ಮನದೊಳಗಲೆವುದು ॥
ಇಂದೀವರಾಕ್ಷಿ ಜಾನಕಿಗಾಗಿ ದಶಗಳನ।
ಬಂಧುರಪರಾಕ್ರಮಕ್ಕೆದಿರಾಗಿ ಕಾದಿ ಮಡಿ।
ದಂದಾ ಜಟಾಯು ತಿರ್ಯಗ್ಜಂತು ಮುಕ್ತಿಯುಂ ಗಳಿಸಿದಂ ಲೋಕವರಿಯೆ ॥ (48)
ಸ್ವಾಮಿಕಾರ್ಯಕೆ ತನುವ ತೆತ್ತಂ ಜಟಾಯು ಪೆಂ।
ದೀ ಮಹೀತಳದೊಳುತ್ತಮಕೀರ್ತಿ ಬಂದೊದಗಿ।
ಸೋಮರವಿಯಿರ್ಪನ್ನ ಶಾಶ್ವತದಿ ಬಾಳ್ದಪಂ ಪದಾರ್ದಡುಂ ಧರೆಯೊಳು ॥
ತಾಮಸದಿ ಕಾನನದಿ ಕಾರ್ಯವೊಳ್ಳನಿತಿಲ್ಲ।
ದೀ ಮಹತ್ಕಷ್ಟದನುಭವದಿಂದ ವ್ಯರ್ಥಮೆನೆ।
ನಾಮವಿಲ್ಲದೆ ಪೋಪುದಾಯಿತೆಂದು ಮರುಗಿದಂ ಮಾರುತಸಂಭೂತನೊಡನೆ ॥ (49)
ಧರಣಿಪತಿದಶರಥಂ ಕೊಟ್ಟಪರದಿಂ ರಾಮ।
ಧರಣೀಶ ಬನಕೆ ಬರೆ ಪಂಕ್ತಿಕಂಧರ ಬಂದು।
ಧರಣಿಜೆಯ ಕದ್ದೊಯ್ಯೆ ಸುಗ್ರೀವನೊಳು ನೇಹವಾಗೆ ಜಾನಕಿಯನರಸಿ ॥
ಬರಲು ಪಾತಾಳ ಬಿಲದೊಳಗೆ ತಿಂಗಳುದಿನಂ।
ಪರಿಪೂರ್ಣವಾಗೆ ಭೂಮಿಜೆಯರುಪರಿಯದಾಗೆ।
ಮರಣ ಬಂದೊದಗಿತೀ ಕಪಿಗಳಗೆ ಕೈಕಾಮಹಾತ್ಮೆಯಿಂದೇನೆಂಬೆನು ॥ (50)

ಭೂಮಿಯೊಳಗೇಂ ಕೃತಾರ್ಥನೋ ಜಟಾಯುವು ಧಣದಿ।
ಭೀಮಬಲರಾವಣನ ಕೂಡೆ ಸೆಣಸುತ್ತಲಿ ಸು।
ತ್ರಾಮ ಸಂತೋಷದೊಳ್ ಭೌತಿಕದ ತನುವುಳಿದು ಕೀರ್ತಿದೇಹವಗಳಸಿದಂ॥
ರಾಮಪುರದರಸನಂಘ್ರಿಯುಲಿಮಗೆ ಪ್ರಿಯದಿಂದ।
ಸೇಮಿಸಿದ ಕಾರ್ಯಕೋಣೆಯು ಬಂದು ದುಷ್ಕೀರ್ತಿ।
ದಾಮನಾದೆನೆನುತ್ತ ಮರುತಾತ್ಮಭವನೊಡನೆ ಪೇಳ್ವಮರುಗಿದನಂಗದ॥ (51)

(ಸಂಧಿ 18 ಕ್ಕಂ ಪದ 792.)

ಹತ್ತೊಂಭತ್ತನೆಯ ಸಂಧಿ

ಸೂಚನೆ॥ ಗೃಧ್ರರಾಜನ ವಚನರಚನೆಯಿಂ ಹರ್ಷನಿರ್।
ನಿದ್ರವಾಗಲು ತೆರಳಿ ಶಾಖಾಮೃಗಂಗಳು ಬ।
ಲೋದ್ರೇಕ ದರ್ಪದಿಂದೈತಂದು ಕಂಡರಾ ವಾರಾನ್ನಿಧಿಯ ಬೇಗದಿ॥

ಹಿಮಗಿರಿತನೂಜೆ ಕೇಳ್ ಕಪಿಗಳತಿದುಃಖದಿಂ।
ಕ್ರಮದಿಂದ ಮರುಗುತಿರಲತಿಘೋಷಮದ್ರಿಯಿಂ।
ಭ್ರಮೆಗೊಳಿಸಲಾ ಜಟಾಯುವು ಮಡಿದನೆಂಬುದಂ ಕೇಳ್ದು ಸಂಪಾತಿಗಾಗ॥
ಮಮತೆ ಪುಟ್ಟಿತು ತಮ್ಮನಳಿದ ಕೇಳಲ್ಕೆನುತ।
ವಿಮಲಮತಿ ಮೆಲ್ಲನೈತಂದು ತಾಂ ಬೆಸಗೊಂಡ।
ನಮಿತಸಂಕ್ಲೇಶದಿಂದಾ ಕಪೀಂದ್ರರ ವಿನಯುತತರಮಧುರವಾಣಿಯಿಂದ॥ (1)
ಭಾನುಕರದಗ್ಧಪಕ್ಷದಿ ಬಿರ್ದನಾ ಜನ।
ಸ್ಥಾನದೊಳಗೆ ಜಟಾಯುವಾ ದಶರಥನಿಂದ।
ಮಾನಿತನದೆಂತಾದಸಮದೊಳು ದಶಶಿರನ ಕೆಣಕಿ ತಾನೆಂತು ಮಡಿದಂ॥
ಈ ವಿಧಾನವನೆಂತು ತಿಳಿದಿರ್ದನೆನಗೊರೆದು।
ದೀನತೆಯ ಪರಿಯವೇಳ್ಕೈಯು ಪಕ್ಕಗಳಿಂದ।
ಮಾನು ಬರುವಡಶಕ್ತನೆನುತ ಕೂಗಿಟ್ಟನಾ ಸಂಪಾತಿ ಶೈಲಾಗ್ರದೆ॥ (2)
ಬಲುಕಾಲಕಾದುದು ಕನೀಯಸನ ವಾರ್ತೆಶ್ರುತಿ।
ಕಲಿತ್ರವೊಂದೆನುತಳುತ ಪಲುಬುತಿಹ ಪಕ್ಕಿಯಂ।
ಘಳಲನಿಟ್ಟಿಸಿ ಕಪೀಶ್ವರರೆಲ್ಲ ದಯದಿಂದ ಸಂತೈಸವೇಳ್ಕುಮೆನುತ॥
ಕಲಿಗಳಾಲೋಚನಂ ಗೈದು ಬಂದಾ ಗೃಧ್ರ।
ನಿಳಿಸಿತಂದೊಂದೆಡೆಯಲ್ಲಿಟ್ಟು ನಿಜವೃತ್ತಗಳ।
ಚಳಕದಿಂ ಪೇಳಲನುಗೈದನಾ ವಾಲಿಸುತನಾನಂ ಚಿತ್ತದಿಂದ॥ (3)
ಮುತ್ತಯ್ಯರಿಕ್ಷರಾಜನುಮಿರ್ದ ವಾನರಂ।
ಸತ್ವದಿಂ ಮತ್ತಾತನಣುಗರೀರ್ವರು ಖ್ಯಾತಿ।
ವೆತ್ತರೀ ನೆಲದೊಳಗೆ ವಾಲಿಸುಗ್ರೀವರೆಂಬಭಿದಾನ ಕಪಿವರರಿಗೆ॥
ಉತ್ತಮೋತ್ತಮ ಗುಣಗಣಂಗಳಾಲಯನಾ ರ।
ಘೋತ್ತಮಂ ದಂಡಕಾರಣ್ಯಕೈತರೆ ದೈತ್ಯ।
ಮತ್ತಾತನಂಗನೆಯ ಕಳವಿನಿಂ ಕದ್ದೊಯ್ದರಾ ದನುಜನಂ ಕಾಣುತ॥ (4)

ದಶರಥಪ್ರಿಯಮಿತ್ರನಾ ಜಟಾಯುವು ಬಂದು ।
ಪಿಸುಣಖಳನೊಳ್ ಸೆಣಸಿ ಮಡಿದರಾತನ ನೋಡಿ ।
ರಸೆಯರಸ ರಘುವೀರ ಸಂಸ್ಕರಿಸಿ ಕಳುಪಿದಂ ವೈಕುಂಠಮಂದಿರಕ್ಕೆ ॥
ಬಿಸಜಾಕ್ಷ ರಾಮಗೆನ್ನಯ ಪಿತೃವಿನೊಳಗಾಯ್ತು ।
ಸುಸಖಿತ್ವ ಸುಗ್ರೀವಗಾಗಿ ಪಿತನಂ ಕೊಂದು ।
ಸಸೆಕಪಿರಾಜ್ಯಮಂ ಪಾಲಿಸಿದ ಪಟ್ಟಾಭಿಷೇಚನಂ ಗೈದು ಮುದದಿ ॥ (5)

ಧರಣಿಜೆಯನರಸುವಡೆ ನಾಲ್ಕುಕಡೆಗಂ ಕಪೀ ।
ಶ್ವರರ ನಟ್ಟಿದರಾವು ಸುಗ್ರೀವನಾಜ್ಞೆಯಿಂ ।
ಬರುತ ಬೆದಕುತಮವನಿಜಾತೆಯಂ ಕಂಗಾಣದೊಂದು ಬಿಲಮಂ ಪೊಕ್ಕೆವು ।
ಪರಿದುಪೋದುದು ಮಾಸಮಾ ನೆಲದಿ ಕಾಂತೆ ನಿಜ ।
ಕರುಣದಿಂದವನಿಯಂ ಕಾಣಿಸಿದರಿಂದೆಮ್ಮ ।
ದೊರೆಯ ಶಾಸನಕಂಜಿ ಪ್ರಾಯೋಪವೇಶಮಂ ಕೈಕೊಂಡೆವೀ ಗಿರಿಯೊಳು ॥ (6)

ಎಂದ ವಾನರರ ನುಡಿಗೇಳ ಸಂಪಾತಿ ತನು ।
ನೊಂದಳುತಮಿಂತೆಂದ ತಮ್ಮಂ ಜಟಾಯುವಂ ।
ಕೊಂದ ದಶಕಂಧರನ ತರಿದಲ್ಲದೀ ಶೋಕ ಪೋಗದೆನಗಾದರೀಗಾ ॥
ಕುಂದಿಹುದು ಜರೆಯಿಂದ ತನು ಪಕ್ಷಮಿಲ್ಲದತಿ ।
ಮಂದವಾದದು ಗಮನ ವೈರಮಂ ಪೋಗಾಡ ।
ಲಿಂದಶಕ್ತತೆವೆತ್ತೆನೇಗೈವೆನೆನುತಳಲಿ ಪೂರ್ವವೃತ್ತವನೊರೆದನು ॥ (7)

ಪೂರುವದಿ ಪ್ರತ್ಯವಥೆಯವಸರದೊಳಾವೀರ್ವ ।
ರೋರಂತೆ ಸೂರ್ಯಮಂಡಲವ ನಿಟ್ಟಿಪೆವೆಂದು ।
ತೋರಗಮನದೊಳ್ಪೆದೆ ಭಾನುಕರವಹ್ನಿಯಿಂದಾ ಜಟಾಯುಷ ಬಳಲಲು ॥
ಕಾರುಣ್ಯದಿಂದ ಪಕ್ಷಗಳಲಾಚ್ಛಾದಿಸಲು ।
ಭಾರಣೆಯ ತಾಕೆಂದ ಗರಿಬೆಂದು ಬೇಗದಿಂ ।
ಧಾರಿಣಿಗೆ ಕೆಡೆದೆವಾವ್ರೋರ್ವರೋರ್ವರ ಕಾಣದಂದಿನಿಂದಿರ್ದೆವೈಸೆ ॥ (8)

ಎಂದು ಸಂಪಾತಿ ಪೇಳದರಂಗದಂ ವಿನಯ ।
ದಿಂದ ಕೇಳದ ಭವದ್ಭ್ರಾತೃ ವೃತ್ತಾಂತವಂ ।
ಛಂದದಿಂದಾಂ ಪೇಳ್ದೆ ಧರಣೀತನೂಭವೆಯ ಪೋದ ಸರಣಿಯ ತಿಳದಡೆ ॥
ಬಂಧುರಪ್ರೇಮದಿಂದೊರೆದು ಪೊರೆವುದೆನುತ್ತ ।
ಬೃಂದಾರಕೇಂದ್ರಸುತಸುತನು ಬೆಸಗೊಂಡರಾ ।
ನಂದದಿಂ ಪೇಳ್ದನಾ ಸಂಪಾತಿ ಪ್ಲವಗಾಧಿನಾಥರಚ್ಚರಿಗೊಂಬೊಲು ॥ (9)

ಬಲವಿಲ್ಲ ವೃದ್ಧಗೃಧ್ರಂ ಪಕ್ಕಮೆರಡಿಲ್ಲ ।
ಸುಲಭಮೆನ್ನಿಂದಪ್ಪದೇನಾದಡಂ ಮಹಾ ।
ಬಲರಾಘವೇಶಕಾರ್ಯಕ್ಕೆ ವಾಕ್ಸಹಾಯವ ಗೈವೆ ತೋರ್ದನಿತರೊಳಗೆ ॥
ಜಲಧಿಮಥನದ ತ್ರಿವಿಕ್ರಮನಾದ ಹರಿಯನುಂ ।
ಜಲನಿಧಿಯ ಲೋಕಂಗಳೆಲ್ಲಮಂ ಕಂಡಿರ್ದೆ ।
ಬಲು ಚಿರಂತನದೇಹ ಜೀರ್ಣಮಾಗಿರ್ಪುದೆನುತೊರೆದ ಸಂಪಾತಿ ಮುದದಿ ॥ (10)

ಕಾಳಮೇಘದ ಪೊರೆಯ ಪೊಳೆವ ಸೌದಾಮಿನಿಯು ।
ಲೀಲೆಯಿಂ ಶ್ರೀರಾಮಸೌಮಿತ್ರಿಯರ ಪೆಸರ ।
ನಾಲಸ್ಯಮಿಲ್ಲದಾಲಾಪಿಸುತ ಕೊಟ್ಟಿರ್ದ ಭೂಷಣವ ಕಳೆದಿಡುತಲಿ ॥
ಮೇಲೆ ಪುರಪಥವಿಡಿದು ಪೋಪ ದಶಗಳನೆಡೆಯು ।
ಜೋಲುತಳಾತ್ಯೈದುತಿರೆ ಕಂಡೆ ದಶಮೌಳಿಯು ।
ಪ್ಪಾಲಯುವನವನವನಕುರುಪಂ ಕುಲೋದ್ಭವಗಳಂ ಪೇಳ್ವೆನಾಲಿಸು ಕಪೀಶ ॥ (11)

ದ್ವಿಜಕುಲೋತ್ತಮ ವಿಶ್ರವಸುತನಯನವಗೆ ಪೂ ।
ರ್ವಜನು ವೈಶ್ರವಣ ಲಂಕಾದ್ವೀಪಮಾವಾಸ ।
ವಿಜಯನೆಂದೆನಿಸಿ ರಾವಣನಿರ್ಪ ಮುಲ್ಲೋಕವೀರರಂ ಗಣನೆಗೊಳದೆ ॥
ಅಜನಿಗೋಸುಗ ವಿಶ್ವಕರ್ಮ ನಿರ್ಮಿತಗೈದು ।
ಭಜನೆಯಿಂ ಪೌಲಸ್ತ್ಯ ಕೊಂಡನಾತನ ನಾಡ ।
ಕುಜನರಾವಣನಾಳ್ವ ನಗರ ದೇವಪುರವೆಮ್ಮಡಿಯುಲೆಸದಿರ್ದುದು ॥ (12)

ಬಳಸಿಹುದು ಲವಣಾಂಬುರಾಶಿ ತಡಿಯಿಂ ನೀಳ ।
ದಳತೆ ಶತಯೋಜನಂ ರತುನಮಯ ರಕ್ಕಸರ ।
ಬಳಗದಾಕಾರಮೆಂದೆನಿಸಿರ್ಪುದಾ ನಗರ ಸುರಪತಿಗಸಾಧ್ಯಮೈಸೆ ॥
ಇಳೆಯ ಸುತೆ ಲಂಕೆಯೊಳಗಿರ್ಪಳೆಂಬುದ ನಾನು ।
ತಿಳಿದಿರ್ಪೆ ತಾನಿದುವೆ ಸತ್ಯ ಪ್ಲವಗೇಶರಾ ।
ಜಲನಿಧಿಯ ವೇಗದಿಂ ದಾಂಟಿ ನೋಡಿದಡವನಿಸುತೆಯ ಕಂಗೆಸೆವಳನಘರಾ ॥ (13)

ಜ್ಞಾನದೃಷ್ಟಿಯೊಳಾನು ತಿಳಿದಿರ್ಪೆ ಲಂಕೆಯೊಳು ।
ಜಾನಕಿಯನಿಪ್ಪಕೆ ಸಂದೆಗವಿಲ್ಲವೆಂತೆಂದ ।
ರಾನೊರೆವೆ ಪ್ರಥಮ ಪದವಿಯು ಕಳಿಂಗಾದಿಗಳಿಗೌಧಾನ್ಯ ಜೀವನಗಳು ॥
ಮಾನನಿಧಿಯೆರಡನೆಯ ಪಥವು ಬಲಿಭೋಜನಗ ।
ಳಾನಂದಕರವೆನಿಪ್ಪುದೈ ಕ್ರೌಂಚಭಾಸಗಳ ।
ನೂನಪಥ ಮೂರನೆಯದಾ ಸೇನಪಕ್ಷಿಗಳ ಸರಣಿ ನಾಲ್ಕನೆಯದೈಸೆ ॥ (14)

ಪದ್ದುಗಳಗೈದನೆಯ ಪಂಥಾನವಾರನೆಯ ।
ಪದ್ಧತಿಯು ಮುದ್ದಂಚೆಗಳದೇಳನೆಯ ಮಾರ್ಗ ।
ಮುದ್ಧತಪರಾಕ್ರಮಗರುತ್ಮಂತನದು ಗಗನಗಮನಿಗಳಿಗಿದು ಸಿದ್ಧವು ॥
ಯಿದ್ದನೆಲಕೆನ್ನೂರು ಯೋಜನಂ ಕಾಣ್ಬುದುಗ ।
ಪದ್ದುಗಳ ಪದ್ಧತಿಯು ಲವಣವಾರಾಸಿಯಂ ।
ಬುದ್ಧಿದನ್ನರಿದು ದಾಂಟಿದರೆ ಜಾನಕಿ ನಿನಗೆ ತೋರ್ದಪಳು ಕಪಿಲಲಾಮ ॥ (15)

ತಡಿಯಿಂದ ನೂರು ಯೋಜನದಗಲಮುಂ ದಾಂಟಿ ।
ಲೊಡನೆ ಪಟ್ಟಣಮೆಸೆವುದೊಳಪೊಕ್ಕು ನೋಡಿದರೆ ।
ಪೊಡವಿಯಣುಗಿಯ ಕಾಣ್ಬರಿದಕೆ ಸಂದೆಗವಿಲ್ಲಮಿದು ನನ್ನಿಯೆಂದರಿವುದು ॥
ಕಡಲದಾಂಟುವರುಪಾಯಗಳನಾಳೋಚಿಸುತ ।
ನೊಡನೆ ಪತಿಕಾರ್ಯಮಂ ಸಾಧಿಪುದು ನೀವೆನುತ ।
ನುಡಿದನಾ ಸಂಪಾತಿ ಸಕಲ ಕಪಿನಾಯಕರು ಸಂತಸಂಗೊಳುವಂದದಿ ॥ (16)

ಕರದೊಯ್ದರೆನ್ನ ನೀರಧಿಯೆಡೆಗೆ ಸ್ವರ್ಗತೆಗೆ ।
ವಿರಚಿಸುವೆನುದಕವೆನಲ್ಕೆ ವಾನರರಲ್ಲ ।
ತ್ವರಿತದಿಂ ಕೊಂಡೊಯ್ಯಲಾಗಲಾ ಸಂಪಾತಿ ಸ್ನಾನವುಂ ರಚಿಸಿ ಮನದೆ ॥
ಸ್ಮರಿಸುತ್ತ ಜಟಾಯುಷಗೆ ಜಲವಿತ್ತರಾತನಂ ।
ಕರತಂದು ಗಿರಿಯಗ್ರದೊಳಗಿಟ್ಟು ಕೇಳದರ್ ।
ಧರಣಿಜೆಯನೊಯ್ದುದಂ ನಿನಗೆ ಪೇಳ್ದವರಾರು ತಿಳುಪವೇಳ್ಕುಮಗೆಂದರು ॥ (17)
ತರಣಿಕಿರಣಾದಿಗರಿಗಳುರಿದು ಮತ್ತೀ ಶೈಲ ।
ಶಿರದಿ ಕೆಡೆಯಲ್ ಮೃತಪ್ರಾಯದಿಂ ಕೆಲವು ದಿನ ।
ಮರೆದು ತನುಭಾವಮಂ ಮೂಂಧತೆಯೊಳಂದಾಮದೆಚ್ಚರಿಕೆ ಮೋಣ್ದೇಹಕೆ ॥
ತರುಣಂ ಸುಪಾರ್ಶ್ವನೆನ್ನರಸಿ ಬಂದಂ ನೋಡಿ ।
ಮರುಗಿ ನಿತ್ಯಾಹಾರವುಂ ಕೊಟ್ಟು ಶರೀರ ।
ಭರಣೆ ಗೈವುತ್ತಮಿರ್ದ ಮಗನೊಂದು ದಿನ ಚರಿಸುತಿರ್ದ ನೀರಧಿಯೆಡೆಯೊಳು ॥
ಆ ಸಮಯದೊಳು ಚಂದ್ರರೇಖೆಯುಂ ಪಿಡಿದು ಬರು । (18)
ವಾ ಸಿಂಹಿಕಾಸುತನ ತೆರದಿ ವಿಂಶತ್ರಿಕರಗ ।
ಳಾಸುರಂ ಧರಣಿಜೆಯನಂಕದೇಶದಿ ತಳೆದು ಬಂದನಂಬುಧಿಯ ಪೊರೆಗೆ ॥
ಲೇಸೆನಿಪ ನುತಿಗಳಿಂದನುನಯದಿ ಮಾರ್ಗವುಂ ।
ಬೇಸರದೆ ಯಾಚಿಸುತ ಮಾಗಸದ ಗತಿಯಿಂದ ।
ಮಾ ಸುವಾಸಿನಿಸಹಿತ ಲಂಕಾಪುರವ ಪೊಕ್ಕನೇನೊಂದನೆಣಿಸದಾಗಾ ॥ (19)
ವಿನಯದಿಂ ಯಾಚಿಪರ ವಂದಿಸಲಸಾಧ್ಯಮೀ ।
ವನಧಿಮೇಖಲೆಯೊಳೆಂದರಿತು ಸುತನೈತಂದು ।
ಯೆನಗೊರೆದ ಬಳಿಕಲಾನಿಟ್ಟಿಸಿದೆ ರಾವಣನ ಬನದಿ ವೈದೇಹಿಯನ್ನು ॥
ವನನಿಧಿಯನುತ್ತರಿಸಿ ಪೋದರಾ ಪಟ್ಟಣದಿ ।
ಜನಕಸುತೆಯುಂ ಕಂಡು ಹರುಷದಿಂ ಬೀಳ್ಕೊಂಡು ।
ಮನದೊಳಲವಿನಿಂದೈದಲಹುದೆಂದು ಸಂತೈಸಿ ಪೇಳ್ವನಾ ಸಂಪಾತಿಯು ॥ (20)
ಯೆನ್ನ ವೃತ್ತಾಂತವುಂ ನಿಮಗಾನು ವಿಸ್ತರದಿ ।
ಬಿನ್ನವಿಪೆ ನೀಕಬ್ದಮೇಕಾಗ್ರಬುದ್ಧಿಯಿಂ ।
ಚೆನ್ನಾಗಿ ಲಾಲಿಸುವಂಬುಜಾನನೆಯಿರ್ದ ನೆಲೆಯ ತತ್ವದೊಳರುಪುವೆಂ ॥
ಮುನ್ನನಾಂ ಗರಿಬೆಂದು ವಿಂಧ್ಯಶಿಖರಿಗೆ ಕೆಡೆದು ।
ಬಿನ್ನತೆಯೊಳೈದಾರು ದಿವಸ ಮೈಮರೆದಿರ್ದ ।
ರನ್ನೆಗಂ ಪಾರಬ್ಧಬಲದೊಳೆಚ್ಚರವಾಗಲಿಟ್ಟಿಸಿದೆ ನಾಲ್ದೆಸೆಗಳಾ ॥ (21)
ನಾನಾಪರಿಯ ನೋಡಲೆನಗೆ ಕಾಣಿಸದಾದು ।
ದೇನಾದರೊಂದು ವಸ್ತುವು ಭಯದಲಳುತಿರ್ದ ।
ರಾ ನೆಲದಿ ಕೆಲಕಾಲಕರಿವಾಯ್ತು ಲವಣಾಬ್ಧಿಯನು ತನ್ನ ಮಾನಸಕ್ಕೆ ॥
ಯೇನೆಂಬೆ ಪಕ್ಷಿಗಣವೃಕ್ಷಕಂಧರಕಲಿತ ।
ಮೀ ನಗಾಗ್ರಂ ವಿಂಧ್ಯಮೆಂದರಿತೆ ಸಂಚರಿಸೆ ।
ಜ್ಞಾನಪಕ್ಷಗಳಿಂದ ತೀರದಳಲುತಮಿರ್ದೆನೊಂದು ಮರದೆಡೆಯೊಳಳುತ ॥ (22)

ಪರಮ ಪುಣ್ಯಾಶ್ರಮ ನಿಶಾಕರಮಹಾಮುನಿಯು ।
ಕರುಣಾಮಂದಿರಮಿರ್ದುದಾ ಮಹಾಮೌನಿ ತಾ ।
ಸುರರ ನಗರಿಗೆ ಪೋಗಿ ಪಾಕಶಾಸನನಿರವ ನೋಡಿ ಬಹೆನೆಂದರುಗಲು ॥
ಮರದ ನೆೞಲೊೞಗಷ್ಟಸಾಹಸ್ರ ವತ್ಸರಂ ।
ನರಳುತಾಂ ಕೆಡದಿರ್ದರವ್ನೆಗಂ ತಾಪಸಂ ।
ಧರಣಿಯಂ ನಿಟ್ಟಿಸುವರ್ಕೈತಂದು ಮೋದದಿಂದಾಶ್ರಮದೊಳೊಪ್ಪಿರ್ದನು ॥ (23)

ಬಲುಕಾಲ ಕಷ್ಟದಿಂದಾ ಪುಣ್ಯಪುರುಷನಂ ।
ಗೆಲವಿಂದ ಮೆಚ್ಚಿಸುವೆನೆನುತ ಪೊಗಳುತ ಬಂದು ।
ಫಲಮೂಲ ಸೀತಜಳಪೂರಿತದ ಸರಸಿಗಳ ಕಂಡೆನಾಶ್ರಮದೆಡೆಯಲಿ ॥
ಲಲಿತಸೌರಭಕಲಿತಮರುತ ಸುಳಿಯಲ್ಕಾಯ್ತು ।
ಬಲಮೆನಗೆ ಮೆಲ್ಲನಾ ತಾಪಸನ ಕಾಣ್ಬೆನೆಂ ।
ದೊಲವಿಂದ ಬನವನಾರಿದೆನಲ್ಲಿ ಕೆಲವುದಿನ ಚೇತನಂದಳೆದೆನಯ್ಯ ॥ (24)

ಭಗವಂತ ಮೌನಿತಾಂ ಬರಲು ಸ್ನಾನಕ್ಕೆನುತ ।
ಬಗೆಬಗೆಯ ಮೃಗಪಕ್ಷಿ ಸಂದೋಹ ಪಿಂದೈದ ।
ಲಗಣಿತದ ದಾನಿಯಂ ಜನರು ಕಿವಿದೈಕಪ್ಪ ತೆರದೊಳಿರಲಾ ಮೌನಿಯು ॥
ಮಿಗೆಹರ್ಷದಿಂ ಬರುತ ಕಂಡೆ ತರುನೆೞಲೊೞಗೆ ।
ಚಿಗಿದ ಪಕ್ಕಗಳಿಂದ ಬಿದ್ದಿರ್ದ ಗೃಧ್ರನಂ ।
ದೊಗುಮಿಗೆಯ ಕರುಣದಿಂ ನಿಂದು ನಿಟ್ಟಿಸಿದನರೆನಿಮಿಷಮೆನ್ನಂ ಪ್ರಿಯದೊಳು ॥ (25)

ಪದುರ್ಗಳ ದೊರೆಗಳೀರ್ವರು ಮರುತಜೀವಿಗಳ ।
ತ್ಯುದ್ಧತಪರಾಕ್ರಮಿಗಳಸುರಸುರರಂ ಗಣಿಸ ।
ದಿರ್ದ ಸಂಪಾತಿಯುಜಟಾಯುವೆನೆ ನಾಮಗಳನಾಂತು ಮನುಜಾಕೃತಿಯೊಳು ॥
ಮುದ್ದಾಗಿ ವಂದನಂ ಗೈದಿರಲೆ ನೀನೋರ್ವ ।
ನಿದ್ದಪೆ ಕನೀಯನೇನಾದ ರುಜೆಯಿಂದೇಕೆ ।
ದಗ್ಧಪಕ್ಷಗಳಾದವೆನುತ ಬೆಸಗೊಂಡರಾಂ ಮುನಿಗೆ ವಿಜ್ಞಾಪಿಸಿದೆನು ॥ (26)

ದೇವ ಕೇಳ್ ಬಿನ್ನವಿಸೆ ನಾಚುತಿದೆ ಮನುಕರಣ ।
ದಾವಾನಳದಿ ಬೆಂದು ಕಳವಳದಿ ನಾಚಿಸುವ ।
ತಾವಲ್ಲವಿದೆಯಾದರನಿತಿನಿತು ನಿಜಶಕ್ತಿಯುಳ್ಳನಿತ ಬಿನ್ನವಿಪೆನು ॥
ನಾವೀರ್ವರುಂ ರಜತಗಿರಿಯೊಳಗೆ ಹರನೆಡೆಯ ।
ಕೋವಿದ ಪ್ರೌಢಿಯಂ ಪಣಬಂಧನಂ ಗೈದು ।
ದೇವಭಾಸ್ಕರನೊಡನೆ ಚರಮಗಿರಿ ಪರಿಯಂತ ಪೋಗಿಬರ್ಪೆವೆನುತ್ತಲೆ ॥ (27)

ನಡೆದೆವಾಗಸಕಡರಿ ರವಿಮಂಡಲದ ಪೊರೆಗೆ ।
ನುಡಿಸುತಿಹ ವೀಣೆಗಳ ಪಾಡುತಿಹ ಗಾನಗಳ ।
ನೊಡನೆ ಕೊಂಡಾಡುತಿಹ ಬ್ರಹ್ಮಘೋಷಂಗಳಂ ದೇವತಾನಾಖ್ಯಗಳನು ॥
ಸಡಗರದಿ ನೋಡುತ್ತಮಾದಿತ್ಯಪಥವಿಡಿದು ।
ನಡೆದು ಪುನರಪಿ ನೋಡೆ ಕಂಗಳಗೆ ತೋರ್ದುದೀ ।
ಕಡಲು ಭೂಮಿಗೆ ಬಿಟ್ಟ ಸೂತ್ರಮೆನೆ ಕುಲಗಿರಿಗಳೆಲ್ಲ ಕಿರಿಗಲ್ಲಾದವು ॥ (28)

ಝಳ ಪೆರ್ಚೆತ್ತೀರ್ವರಿಗೆ ಭಾಸ್ಕರನ ಕರಣದು ।
ಜ್ವಳ ಬೇಗೆಯಿಂದ ಕಳವಳಿಸಿ ಮೂರ್ಛೆಯು ಕವಿಯೆ ।
ವಿಳಯಾಂಧಕತಿಭಯಂ ಮುಸುಕೆ ತೀರ್ವರನೊಂದೆಪರಿಯಾಗಿ ಶಕ್ತಿಗುಂದಿ ॥
ತಿಳಿಯದಾದುದು ಪೂರ್ವದಕ್ಷಿಣೋತ್ತರಗಳು ।
ತೊಳಲುತಿರೆ ಭೂಸನ್ನಿಕಾಶ ಭಾಸ್ಕರಬಿಂಬ ।
ಕಳೆಯಿಂದ ಲಕ್ಕಯೊಜನದಗಲ ಕಂಗೆಸೆದುದವಸರದೊಳೇನೆಂಬೆನು ॥ (29)

ಗರಿಗಳೆಲ್ಲವು ಬೆಂದರಾ ಜಟಾಯುವಿಗಾನು ।
ಮರೆಗೈದೆ ಪಕ್ಕಗಳನುರಿದವಾ ಕಿರಣದಿಂ ।
ದುರುಳದೆವು ಭೂತಳಕೆ ತಮ್ಮನೇನಾದನೋ ದೇಹವೆಲ್ಲಿಗೆ ಪೋದುದೊ ॥
ಅರಿಯದಾದೆನು ಮೂರ್ಛೆಯಿಂದವೈದಾರು ದಿನ ।
ಮರೆದಿರ್ದೆವೇನೊಂದನರಿಯದೆ ಮಹಾಶೈಲ ।
ಶಿರಮೆನುತವೆಂಟು ದಿನಕುಂ ತಿಳಿದೆನೊಡನೆ ವಿಜ್ಞಾಪಿಸಿದೆನು ॥ (30)

ಕೇಳ ವಿಸ್ಮಿತನಾಗುತಾ ಮಾನಿಯರೆನಿಮಿಷ ।
ತಾಳದಂ ಮೌನವಂ ದಿವ್ಯನೇತ್ರಗಳಂ ನಿ- ।
ರಾಳಮತಿಯಿಂದರಿದ ಮುಂದಪ್ಪ ಕಜ್ಜಗಳ ನಿಜತಪೋಮಹಿಮೆಯಿಂದ ॥
ಪೇಳದಂ ಪ್ರಿಯದಿಂದ ಸಂತಾಪಗೊಳಲೇಕೆ ।
ಕಾಳಾದುದೆಲ್ಲ ಸುಖಕಾರಣವದಂ ಪೇಳ್ವೆ ।
ಕೇಳು ಚಂಚಲಮುಳದೆನುತ್ತ ಬಿತ್ತರಿಸಿದಂ ಮುನಿಪ ಕೃಪೆಯಿಂದೆನ್ನೊಳು ॥ (31)

ಧರಣಿಪರ ಮಕುಟಮಣಿ ದಶರಥಮಹಾರಾಜ ।
ನರಸೆನಿಪನಾತಗಂ ಪಿರಿಯಮಗನೆರಡನೆಯ ।
ತರುಣಲಕ್ಷ್ಮಣವಿದೇಹಾತ್ಮಜೆಯು ಸಹಿತವಾ ಪಿತೃವಚನವಿಡಿದು ಬನಕೆ ॥
ಬರುವರು ಜನಸ್ಥಾನದೆಡೆಯೊಳುಂ ರಾವಣಂ ॥
ಧರಣಿಜೆಯ ಕದ್ದೊಯ್ದು ಪರಿಪರಿಯ ಉಪಚರಿಪ ।
ನರಸಿ ಕೈಕೊಳ್ಳದಿರಲನಿತರೊಳು ವಾಸವಂ ತಿಳಿದೀವ ಪರಮಾನ್ನವುಂ । (32)

ಸುರರಿಗತಿದುರ್ಲಭವ ಪರಮಾನ್ನಮಿಂದ್ರನಿಂ ।
ಬರಲರಿತು ಸೀತೆಯದ ಪಿಡಿದಗ್ರಭಾಗವುಂ ।
ಧರಣಿಯೊಳಗಿಡಲದು ಶ್ರೀರಾಮಗರ್ಪಿತಮದಾಗಲೆಂದೊರೆವಳೊಲಿದು ॥
ಪರಮ ಪುರುಷನ ಕೃಪೆಯೊಳಾಗಲಾನಂದಕರ ।
ಧರಣಿಸುತೆಯಂದಿನಿಂ ಪಸಿವುನೀರಡಿಕೆಗಳ ।
ಪರಿದು ಸುಖದಿಂದಿರ್ಪಳರಸನಂ ಕಾಣ್ಬನ್ನ ಭೋಜನಂ ಗೈದಂದದಿ ॥ (33)

ದೇವತೋಷಣ ವ್ಯರ್ಥವಾಗದಲೆ ಭೂತಳದಿ ।
ದೇವರಾಮಂಗಿತ್ತ ಪಾಯಸದ ಮಹಿಮೆಯುಂ ।
ಪಾವನಿತನಾಮಾಮೃತಸ್ವಾದನೆಯೊಳಾಗಲಾಕೆಗಂ ಸಂತುಷ್ಟಿಯು ॥
ಆ ವಸುಮತೀಯರಸನೈತಂದು ಪ್ಲವಗಪತಿ ।
ಗೀವನಭಯವ ವಾಲಿಯು ಕೊಂದು ಜಾನಕೀ ।
ದೇವಿಯನ್ನರಸುವಡೆ ಕಳುಪುವರು ಕಪಿಬಲವ ಚರರಿಲ್ಲಿಗೈತಪ್ಪರು ॥ (34)

ಸೀತೆಯಂ ಕಾಣದವರಳಲುತಿರೆ ನೀಂ ಪೇಳ ।
ಶೀತಾಂಶುಮುಖಿಯಿರ್ಪ ನೆಲೆಯು ತತ್ವದಿ ತೋರಿ ।
ದೂತರಂ ಸಂತಸಂ ಗೊಳಸಲವರರುಪುವರು ರಘುಪತಿಯು ಮಹಿಮೆಗಳನು ॥
ಪಾತಕಂ ಪರಿದುಪೋಗಿರ್ಪ ಪಕ್ಷಗಳೆರಡು ।
ಜಾತಂಗಳಾದಪವು ನಿನಗೆನುತ ಮುನಿಯೊರೆದ ।
ವ್ರಾತಸಂಗೀಕರಿಸವೇಳ್ಕಾದುದನಿತರೋಳ್ ಮುನಿವೇಳ್ದನತಿವಿನಯದಿ ॥ (35)

ಎನ್ನಯ ತಪೋಬಲದೊಳತ್ರಪಿಂ ಕೃಪೆಯಿಂದ ।
ಮುನ್ನಿನಂದದಿ ಪಕ್ಷಬಲತೇಜಗಳ ದೇವ ।
ರನ್ನಸಂಪ್ರಿಯ ಸೇವೆಯಿಂದ ತನುಸಾರ್ಥಿಕ್ಯಮೆನಿಸಲೆಂದಾನೊರೆಸೆನು ॥
ಇನ್ನೊಂದ ಯೋಚಿಸದೆ ಕಪಿದೂತರೈತಪ್ಪ ।
ಸನ್ನಾಹಮಂ ನೋಡುತಿಹುದೆನುತಮುಪಚರಿಸು ।
ತೆನ್ನನಾ ಮುನಿವರಂ ಪೊಕ್ಕ ತನ್ನಾಶ್ರಮವನಾನಂದಸಂದೋಹದಿ ॥ (36)

ಅಂದಿನಿಂದಾನು ನೀವೈತಪ್ಪ ಮಾರ್ಗಮಂ ।
ಛಂದದಿಂ ದಿಟ್ಟಿಸುತಮಿರಲಾದುದಾ ವಚನ ।
ಸಂದೋಹ ಪಲಬಗೆದು ನಿಮ್ಮಮುಖದಿಂ ಕೇಳ್ವೆ ಶ್ರೀರಾಮ ಚರಿತೆಗಳನು ॥
ಬಂದಪವು ಪಕ್ಷಂಗಳೆನಗೆ ನೋಡುತಮಿರುವ ।
ದೆಂದರಾ ಮಾತಿಗಚ್ಚರಿಗೊಂಡು ಕಪಿವೀರ ।
ಬೃಂದ ನೋಡುತಮಿರ್ದರನಿತರೊಳು ಮೂಡಿದವು ಗರಿಗಳಾ ಪರ್ದಿಗಾಗ ॥ (37)

ಕುರುಲಿಂದ ದಳಗಳನೆ ಮೊಳೆಯೇರಿ ಮುಂಬರಿದು ।
ಗರಿಯಾಗಿ ಪಕ್ಷಂಗಳೆರಡು ಸಂಭವಿಸಲ್ಕೆ ।
ಮಿರವ ಜವ್ವನಕಾಲದುರಭರಂ ಕೈಸಾರಲಾ ಗೃಧ್ರರಾಜ ನುಡಿದಂ ।
ಪರಮಮುನಿ ನುಡಿದ ನುಡಿಗಿರವ ನಿಟ್ಟಿಪುದು ಶ್ರೀ ।
ಹರಿಯು ಕೃಪೆಯಂ ನೋಳ್ಪುದೆನುತೊರೆವುತಾನಂದ ।
ಭರಿತನಾಗುತ ಗರಿಗಳಂ ಕೊಡಪಿ ತಿರುಗಿದಂ ಕಪಿವರರ ಮುಂಗಡೆಯೊಳು ॥ (38)

ಎಂದಿಗೈದಿದ ಪಕ್ಷವೆನಗೆ ಬಂದವು ನೋಡಿ ।
ಬೃಂದಾರಕೇಂದ್ರನುತ ರಾಘವನ ಸನ್ಮಹಿಮೆ ।
ಯಿಂದೆನುತಮೊರೆದು ಮಗುಳಿಂತು ಕಪಿವೀರರೊಳು ಸಂಪಾತಿ ವಹಿಲದಿಂದ ॥
ಎಂದಿಗಾದರು ರಘೋತ್ತಮನ ಪದಪದ್ಮಗಳ ।
ಪೊಂದಿದರಿಗೆಡರುಂಟೆ ಪೋದ ಪಕ್ಕಗಳೆನಗೆ ।
ಬಂದುದಂ ದೃಷ್ಟಾಂತಮಾಗಿ ತಿಳದಾನಂದಗೊಳುವುದೈ ನೀವೆಂದನು ॥ (39)

ರಾಮಸಂಪ್ರಧ್ಯಾನ ಗೈದರಿಗೆ ಸೌಖ್ಯಗಳ ।
ಸ್ತೋಮ ಸಂಭವಮಹುದೆನಲ್ಕೆ ತಚ್ಚರರಿಂಗೆ ।
ತಾಮಸೀಚರರೆನಿತು ಕಜ್ಜಮೆನಿತುಂಟವನ ಜವದಿಂದ ನೀವೈದುತ ॥
ಭೂಮಿಜೆಯ ಕಂಡು ಕುರುಪಿಡಿದೈದವೇಳ್ಕೆಂದು ।
ಪ್ರೇಮದಿಂ ಪೇಳ ಬೀಳ್ಕೊಂಡಾಗ ಗೃಧ್ರನೃಪ ।
ರಾಮನಾಮವ ಜಪಿಸುತಂಬರಕೆ ಪಾರಲಾಗಖಿಲ ಜನಮಚ್ಚರಿಗೊಳೆ ॥ (40)

ಸಂಪಾತಿಪೇಳ್ದ ವಚನಗಳಿಂದ ಕಪಿಗಳ್ಗಳುಂ ।
ಸೊಂಪಾಂತು ಗರ್ಜಿಸಿದರಖಿಳ ಲೋಕಂ ನಡುಗೆ ।
ಮುಂಪಾಸ್ವಗಮೆನುತ್ತಮತಿವೀರತನದಿಂದಮೈದಿ ಮತ್ತಾ ವಾರ್ಧಿಯಂ ॥
ತಂಪಾದ ಸುಚ್ಛಾಯದೊಳು ಕುಳಿತು ಕಲ್ಲೋಲ ।
ಗುಂಪುಗಳ ನಿಟ್ಟಿಸುತಮಾಶ್ಚರ್ಯಗೊಳುತಿರ್ದ ।
ರಿಂಪಿನಿಂ ಶ್ರೀರಾಮಪುರದರಸನಂಘ್ರಿಗಳ ಮಹಿಮೆಗಳ ನೆನೆದುನೆನೆದು ॥ (41)

(ಸಂಧಿ 19 ಕ್ಕಂ ಪದ 834.)

ಇಪ್ಪತ್ತನೆಯ ಸಂಧಿ.

ಸೂಚನೆ ॥ ವಾರಧಿಯನುತ್ತರಿಸಿಯಂಭೋಜಸಂಭವಕು ।
ಮಾರ ನುತಿಸಲು ಹರುಷಗೊಂಡು ಸಂತಸದಿಂದ ।
ವೀರಮಾರುತಿ ಮಹೇಂದ್ರಾದ್ರಿಯಡರಿದನಖಿಲ ದೇವತಾನೀಕಯು ನಲಿಯೆ ॥

ಪದ್ಯ ॥ ರಾಜ ಹಸ್ತಾಗ್ರಹೋತ್ರವವನಾರ್ಜಿಸಿ ವಿಭವ ।
ರಾಜಿಸುವ ಶ್ರೀನಿವಾಸಸ್ಥಾನಮೆಂದೆನಿಸಿ ।
ರಾಜರಾಜಪ್ರಮುಖರೈತಂದು ಸೇವಿಸುವ ಚಕ್ರವರ್ತಿತ್ವಮಾಂತು ॥
ಓಜೆಯಿಂದ ಮಹೇಂದ್ರಪದವಿಯಂ ಮಿರ್ದ ಸಂ ।
ರಾಜಿಸುವ ಸರ್ವತೋಮುಖಗಿರಿಯೊಳಂದಬ್ಧಿ ।
ರಾಜ ಕಂಗೆಸೆದನಾ ಕಪಿಸಾರ್ವಭೌಮರಿಂಗಗಜೆ ಕೇಳ್ಕಾಕ್ಷಣದೊಳು ॥ (1)
ಬಾಡಬದ ಪಾನಶಾಲೆಯೊ ನವೀನವಗಳ್ಗೂಲಿ ।
ದಾಡುವಾಲಯವೊ ಲಕ್ಷ್ಮೀಜನ್ಮಮಂದಿರವೊ ।
ಬೀಡಾರವೊ ವರುಣರಾಜಂಗೆ ದೇವತಾಸಮುದಯಕ್ಕಿದು ಸತ್ರವೊ ॥
ನೋಡಲು ಗ್ರಹಂಗಳಗೆ ಮಜ್ಜನದ ಮನೆಯೊ ಸಿರಿ ।
ನಾಡೊಡೆಯನಾರಾಯಣಂಗೆ ಶಯ್ಯಾಗೃಹವೊ ।
ಬೇಡಿದೈಶ್ವರ್ಯ್ಯಾತ್ತರಂಗಿತವ ಕಲ್ಪತರುವೆನಿಪ್ಪುದಧಿಯು ಕಂಡರು ॥ (2)
ತರಣಿಯುತನಾಗಿ ಚಂದ್ರೋಲ್ಲಾಸಕರ ಚಪಲೆ ।
ಗಿರವೆನಿಸಿ ಸ್ಥಿರಸುಪ್ರಸಾದ ರಸವಿದ್ರುಮಾ ।
ಕರಮೆನಿಸುತಂ ಜಿನವ ಸಮುದಯೋಲ್ಲಾಸದಿಂ ಮುಕ್ತಾವಿಹಾರವಾಗಿ ॥
ವರವಿಕ್ರಯಾದಾರವಾಗಿ ಲಾವಣ್ಯಾ ಭವ ।
ದರೆ ಪುಣ್ಯಜನಸೇವ್ಯವಾಗಿ ಬಾಡಬಭರಣಾ ।
ಕರಧಿಯಾಶ್ಚರ್ಯ ನಿರವಧಿಯೆನಿಸಿ ತೋರ್ದುದಾ ಕಪಿಸಾರ್ವಭೌಮರಿಂಗೆ ॥ (3)
ಗುರುಚರಣಕರುಣಾಜಿಂವನಿಮಿಷೋಪಾಸ್ತಿಯೋಳ್ ।
ಬೆರದಾ ತ್ರಿಕೂಟವ ಸಮುದ್ರತೆಯನಾಂತು ಶಂ ।
ಕರದ ಮೃಡಪರಿಪೂರ್ಣನೆಂದೆಸಿ ಬಾಹ್ಯದೋಳ್ ಜಡಭಾವಮಂ ತೋರುವ ॥
ನಿರತಿಶಯ ರಾಜಯೋಗಿಯ ತೆರದಿ ಗಂಭೀರ ।
ಕರನಬ್ಧಿರಾಜ ಕಂಗೊಳಸಿದಂ ಕಪಿವರರ ।
ಸರಿಸದೋಳ್ ತಿರೆಯುಟ್ಟ ನೀಲಪಟದಾಶ್ಚರ್ಯಮಡಿಗೆಯಂದದಿ ತೋರ್ದನು ॥ (4)

ಲಲಿತೋರ್ಮಿತಾಯುತದಿ ಧನದ ಪ್ರಾಕೃತನಂತೆ ।
ಚೆಲುವ ಹಂಸಾವತಂಸದೆ ಸತ್ಯಮಂಬರದ ।
ಸುಲಭಮೆಸಲು ಕಬಂಧಯುತಮಾಗಿ ರಣಭೂಮಿದಂಡಕಾರಣ್ಯದಂತೆ ।
ಕಲಿತಾನಿಮಿಷಸೇವ್ಯನಾಗಿ ಕಾಮುಕಹೃದಯ ।
ಸಲೆಸಗ್ಗಮೆಂಬಂತೆ ಪರಪುರುಷಸಂಗಮುದ ।
ಬಲುಹಿಂದ ಸಾಂಖ್ಯನೆಯು ಕುಲಟಾಸಮೂಹದಂತಾದಧಿ ರಾರಾಜಿಸಿದುದು ॥ (5)
ಬಾಡಬೋಜ್ವಳದಿಂದ ವೇದರಾಸಿಯ ತೆರದಿ ।
ಕೂಡಿ ಪ್ರಸಾಧಮಂ ಸತ್ಕಾವ್ಯಮೆಂಬಂತೆ ।
ನೋಡೆ ಗಾಂಭೀರ್ಯಯುತನಾಗಿ ಧೀರೋದ್ಧಾತನಾಯಕನ ಮಾಳ್ಕೆಯಿಂದೆ ।
ಬೀಡೆನಿಸಿ ಬಹುಜೀವನಂಗಳಗೆ ನಗರಮೆನೆ ।
ಕೂಡೆ ಮರ್ಯಾದೆಲಂಘನೆಗಳಲ್ಲದೆ ಸತೀ ।
ನಾಡೆಂಬೊಲುದಧಿ ಕಂಗೆಸೆದುದಂಗದಮುಖ್ಯ ಶಾಖಾಮೃಗಂಗಳಂಗೆ ॥ (6)
ಶಿವಲೋಕದಂತೆ ಶೈವಾಲಾಪದಿಂ ಬಹುಳ ।
ದ್ರವಿಡಭಾಷೆಯೊಳಗಸ್ಥ್ಯಾಲೀಢ ಕೃಪಣನಂ ।
ತವಿರಳದ ಚಂದ್ರಾವಲೋಕ ಮಾತ್ರೋಲ್ಲಾಸಮಾಗಿ ಖಲಹೃದಯದಂತೆ ।
ವಿವಿಧ ಭಂಗಾಶ್ರಯಣಮೆನಿಸಿ ಪೆರರ್ಕೈಸಿರಿಗೆ ।
ಕವಿಪನೆನಲೊಡಲ ಕಿಚ್ಚಿಂದ ತೋರಿದನಬ್ಧಿ ।
ಭವನ ಭೀಕರರವದಿ ಕಂಗೆಸದನಾ ಕಪಿಪ್ರವರರಚ್ಚರಿಗೊಂಬೊಲು ॥ (7)
ಸುಳಸುಳದು ತೋರ್ಪ ನೀರಾನೆಗಳ ಮೀನುಗಳ ।
ಪೊಳಪೊಳದು ಚೀರ್ಪ ಘನಚಕ್ರಗಳ ನಕ್ರಗಳ ।
ಬೆಳಬೆಳದು ಬರ್ಪ ಪೆರ್ತೆರೆಗಳಂ ನೊರೆಗಳಂದಡಿಗಡಿಗೆ ಭುಲ್ಲವಿಸುತ ॥
ದಳದಳನೆ ಬರ್ಪ ಪೆರ್ದೊರೆಗಳಂ ಹರಿಗಳಂ ।
ಕಳಕಳನೆ ನೆಗದ ಪೇರ್ಘನಗಳಂ ಪನಿಗಳಂ ।
ಪೊಳಪೊಳದುದುದಧಿ ಭೂವಲಯಕಂ ಪ್ರತಿನಿಧಿಯೆನಲ್ಕೆ ಕಪಿವರರೆಡೆಯೊಳು ॥ (8)
ಪಡದೇಂ ಘನಾನುಗ್ರಹಂಗಳಂ ಲಾವಣ್ಯ ।
ಮಡುವೆನಿಸಿ ಫಲಮದೇನಮೃತರಾಸಿಯ ಪೆತ್ತು ।
ಬಿಡುಗಣ್ಣವರಿಗಿತ್ತು ಕಾರ್ಯಮೇನಿಂದ್ರಂಗೆ ಸಿರಿಯ ಕೈಗೈದದೇನು ॥
ಬಡಬನುಘ್ಘುಡಬಾಧೆಯಡಿಗಡಿಗೆ ಪೆರ್ಚುತ್ತ ।
ಮೊಡಲ ಬಾಧಿಪಡುಳದಾಯ್ತು ಸಂಚಿತವಾರ ।
ಬಿಡದೆನುತ ಲೋಕಕಚ್ಚರಿಪಂತೆ ಸಾಗರದ ಘೋರರವ ತೋರ್ದುದಾಗ ॥ (9)
ಸಂಗರಾಂಗಣಭೀಮ ಬಲಿ ಸಾರ್ವಭೌಮಸುರ ।
ಪುಂಗವನೆನುತ್ತಾತ್ಮಭವೆಯಿತ್ತರಾತಂಗೆ ।
ಪೆಂಗೊಲೆಯು ಪುಣ್ಯಜನಹತ್ಯದುರುಪಾತಕಂ ಬೆಂಬಿಡದೆ ಬಂದಡಸಲು ।
ಕಂಗಳುಂ ತಾವರೆಗಳಾಗಿದ್ದೈದಂದಿನ ಭು ।
ಜಂಗಮಾ ಭೋಗಭೋಗಾಸಕ್ತಿಯಾದುದಿದ ।
ಕೇಂಗೈವೆನೆನುತಬ್ಧಿ ಸುಯಿವನೋಯೆನೆ ಘೋರರವದಿ ರಾಜಿಸುತಿರ್ಪುದು ॥ (10)

ಚಿತ್ರನಿಪ್ಪತ್ತೇಳು ತಾರೆಗಳ ದಕ್ಷ ಸಸಿ।
ಗಿತ್ರ ದಿಕ್ಪಾಲಕರ ನೋಡದಾದಂ ದೇವ।
ತೋತ್ರಮಗಸೇಕ ನಕ್ಷತ್ರಮಾಲಿಕೆಗಳಂ ಪಡದೀವೆನೆಂದಬ್ಧಿಯು॥
ಬಿತ್ತರದ ತೆರೆಗೈಗಳಂದಲೇಂ ಬೇಡುವನೊ।
ಮುತ್ತುಗಳ ಸೇಸೆಗಳ ತಳದನೊ ಸುರಾಂಗನಾ।
ಮೊತ್ತಕೆನಲಂಬರವ ಚುಂಬಿಸುವ ಕಂಕಣಗಳಂದೇಂ ಮನಂಗೊಳಿಪವೊ॥ (11)

ಎಡೆಯಡೆಯೊಳುತ್ತರಂ ನಕ್ರಮಕ್ರಮದಿ ಬಾ।
ನೆಡೆಯನಂಚಿರೆ ಬಲಿಗಳಲ್ಲಲ್ಲಿ ಹಂಸೆಗಳು।
ನಡೆಯಲೊಪ್ಪಿರೆ ಸತ್ಯಲೋಕವಂ ಪೋಗುವರೆ ಪಟಿಕ ಸೋಪಾನಗಳನು॥
ಬಿಡುಗಣ್ಣರೊಡೆಯನೇಂ ನಿರ್ಮಿಸುವ ಮುಕ್ತಾಳಿ।
ಗೊಡನೆ ಪಂಥಾನವಂ ತೋರಿದನೊಯೆಂಬೊಲೇಂ।
ಯೆಡೆಬಿಡದೆ ತೋರುವ ಮರಾಳತತಿ ನೋಟಕರ ಕಂಗೆಸೆದವತಿಚಿತ್ರದಿ॥ (12)

ಸಗರನಂದನರು ನಿಜಕರತಳದೊಳು ನೆಲನ।
ನಗಿದಿಂಬುಗೈದಿತ್ತು ಸಾಗರನ ವೆರ್ಚಿಸಿದ।
ಬಗೆಯಿಂದಮವರ ಕೀರ್ತಿಗಳು ಮೂರ್ತೀಭವಿಸಿ ಸ್ವರ್ಗಾದಿಲೋಕದೊಳಗೆ॥
ನಗುತ್ತೈದುತಿರ್ಪವೋಯೆನಲು ತೆರೆತೆರೆಗಳಲಿ।
ನೆಗೆನೆಗೆದು ಗಮಿಸುತಿಹ ಹಂಸಸಂತತಿಗಳೇಂ।
ಸೊಗಸನಿತ್ತಪವೊ ವ್ಯೋಮಂಕಶದಿ ನೋಡಲ್ಕೆ ಸನ್ಮಾರ್ಗದಜ್ಞರಿಯೊಳು॥ (13)

ಹರಿಯು ನೋಡಲ್ಕಳಿಯ ಮಹಲಕ್ಷ್ಮಿನಂದನೆಯು।
ಗಿರಿಯಣುಗ ಮೈನಾಕನಾಶ್ರಿತಂ ಘನರಾಜ।
ಪರಿಪರಿಯ ವಾಹಿನಿಸಮಿಕ್ರದಿಂದೆನಗಿರ್ದು ಭಂಗಬಿಡದಂಡಲೆವುದು॥
ಬರಿದೆ ರತ್ನಾಕರನವೆಂದೆನ್ನ ಕರೆದಪರ।
ಹರಸಖಾಸ್ಥಳದಂತೆ ಶಿವಗಣಾಂ ತೋರ್ದೆನು।
ಗುರುವತನಕೊಣೆಯುಂ ಬಂದಡಸಿತೆಂದಬ್ಧಿ ಕೊರಗುವೊಲು ಮೊಳಗೆಸದದು॥ (14)

ನವರಸಪ್ರೀತ ಜೀವನದಾತ ಘನನೇತ।
ಕುವಲಯಪ್ರಿಯ ಸಿರಿನಿಕಾಯ ಸಂಪದದಾಯ।
ವಿವಿದ ಚಿತ್ರಂಗಳಗೆ ನಿಲಯ ನರುವಿನಯಂಗಳಾಲಯ ಸಮುದ್ರಮೆನುತ॥
ತವಕದಿಂ ನವಕಮೆನಲವನೀಸರಿದ್ರೂಪ।
ಯುವತಿಯರ್ ಮೋಹಿಸುತ ಬಂದು ದಣಿವರೊಯೆನಲ್।
ಜವದಿಂದತತ್ತಟದೊಳಾಡುತಿಹ ಘನರಾಜಿ ಕುರುಳ್ಗಳೆನೆ ಮೋಹಿಸುವವು॥ (15)

ಹರಿಯ ವೈರಿಯ ಗಿರಿಯನಿರಿಸಿಕೊಳೆ ನಿನಗಿದುವೆ।
ತರವಲ್ಲಮಿದು ಪೊಲ್ಲ ಸುಖಮಲ್ಲ ಬಿಡುಬಿಡೆಲೊ।
ಶರಧಿ ನಿರವಧಿಪರಾಕ್ರಮಿಗೆ ನೀನಿದಿರಾಗಿ ನಿಲ್ವೆಯಾಯೆನುತ್ತಮೊರೆದು॥
ಮಿರುಗಿಸುತ ಚಪಲಕರವಾಳಗಳ ಸಿಡಿಲೆನಲ್।
ಬಿರುನುಡಿಗಳಂದ ಧಿಕ್ಕರಿಸದಕ್ಕರಿಸುತಿದೆ।
ಧುರವಿಜಯ ಜೀವನನೀವನಲ್ಲದೆ ಬೆದರಿ ಮರೆಯೊಕ್ಕರನ್ನೀವವೇ॥ (16)

ಬಲುಘನಾಶ್ರಯಣಿವನು ಕಂಡು ಮತ್ತೊರ್ವನಾಂ ।
ಪಲಬಗೆದೆಂತೀವೆನೆನುತ ಪ್ರಯೋಜಕದಿ ।
ಕಲಿತಜಡಧಿಯೊಳರದೆಘೋಟಿಕದಿ ಜೀವನಗಳತ್ತು ಸಂತೈಸಿ ಬಳಿಕ ॥
ಕಲಶಭವ ಚಳುಕೀಕೃತಂಗೈದ ಕಾಲದೊಳು ।
ನಲವಿಂದ ಯಾಚಿಸುವಡಾರು ಬರ್ಪರುಯೆನು ।
ತ್ತುಲಿವ ಮೇಘಾಳಿ ಸಂಭ್ರಮಗಳಾವಾವೆಡೆಯು ತೋರ್ಪವಚ್ಚರಿಗಳೆಸಲು ॥ (17)
ನೀರಾಟಕೆಳಸಿರ್ಪ ನೀರಾನೆಗಳು ಬಡಬಿ ।
ತೋರೆ ಶಿಖಿರನ್ನಪುಷ್ಪಿತವಿಟಪಿಗಳ ಪಿಡಿದು ।
ದೂರಕೆಡುತಿರಲಚ್ಚರಿಯು ಬೀರ್ದುದುದಧಿಯುಂ ದೇವತತಿಯಾಚಿಸಿದಡೆ ॥
ಸಾರಕಲ್ಪದ್ರುಮತುರಂಗವೈರಾವತವ ।
ಕಾರುಣ್ಯದಿಂದ ತೆರೆಗೈಗಳಂದ ಪರಿಯು ।
ಲೋರಂತೆ ತೆತ್ತೆನೆನುತೌದಾರ್ಯಮಂ ತೋರುವಂತದೇಂ ಶೋಭಿಸುವದೊ ॥ (18)
ತಡಿಯೊಳೆಡೆಗೊಳ್ಳದಲ್ಲಿಗಲ್ಲಿಗುಂ ರವಗಳುಂ ।
ಕೊಡುವ ಘನತುಂಬಿಗಳ ಕಂಡು ನೀರಾನೆಗಳ್ ।
ಮುಡುಮುಡಿಸಿ ವೈರದಿಂ ಬಂದಿರಿಯೆ ಜೀಮೂತದಿಂದ ಝಲ್ಲೆಂದುದುರುವಾ ।
ಬಿಡುಮುತ್ತುಗಳದೇನು ಚಿತ್ರಮೆಂದೆನಿಸುವದೊ ।
ಕೊಡುತ ಜೀವನವ ಪೊರೆದು ದಧಿರಾಜಗೆ ಕಾಣ್ಕೆ ।
ಗೊಡಲೆನುತ ಮುಕ್ತಾಫಲಂಗಳಂ ಚೆಲ್ಲಿದನೊ ಘನನೆಂಬೊಲೇಂ ತೋರ್ಪುದೊ ॥ (19)
ಮುನಿಮುನಿದು ನುಂಗಿದಂ ಮುನ್ನೊಮ್ಮೆ ಮತ್ತೊಮ್ಮೆ ।
ಕನಲಿ ಕಡುಗೋಪದಿಂ ಭಾರ್ಗವಂ ಕೊಡಲಿಯಿಂ ।
ತನಗೆತ್ತಿ ಒತ್ತರಿಸಿಕೊಂಡ ಭೂಮಂಡಲವನಿಂದೀಗರುವನಾತ್ಮಜ ॥
ಮನದಹಂಕಾರದಿಂ ದುಲ್ಲಂಘಿಸೆನ್ನನುಂ ।
ಮನತರವ ಕಿಂದೆನಿಸಿ ದಾಂಟಲ್ಕೆ ಬಂದಿಹಂ ।
ಎನುತಬ್ಧಿ ನೆನೆದು ಮನಕವಡಿ ನಿಂದಿಹನೆನಲ್ ತೆರೆಗಳಂ ಕದಡಿರ್ದುದು ॥ (20)
ಮೀನಕರ್ಕಟನಕ್ರಚಕ್ರಗಜಕಮಠ ಸು ।
ವ್ಯಾನದಿಂ ಸುಳವ ಜನಮಾನಸಾಂಗನೆಯರ ನ ।
ವೀನ ಸಲ್ಲಾಪಗಳ ಬೆಪ್ಪೊಡೆದು ಪುಟಿಲೆಗವ ಸುಪ್ಪಾಣಿ ಮುತ್ತುಗಳನು ॥
ಆನಂದದಿಂದಿಟ್ಟಸಿ ಪಿ (ಡಿ ಯು ಲ್ಬ) ರ್ಪ ಸುರ ।
ಮಾನಿನೀ ಗಣವ ಕಂಡಂ ಭೋಧಿ ಗಹಗಹಿಸಿ ।
ತಾ ನಗುವನೋ ಯೆನಲ್ ಸಳ್ನೊರೆಗಳಲ್ಲಲ್ಲಿ ಸಂಕಲಿತದಿಂ ತೋರ್ದವು ॥ (21)
ಮೋಲುವರಿದೈತಪ್ಪ ತೆರೆಗಳಂ ನೆನದು ।
ಮೇಲಕಡರುವ ಮರಾಳಂಗಳುರು ಪಕ್ಷ ಸಂ ।
ಚಾಲನೆಯೊಳುದುರ್ವ ತುಂತುರ್ವನಿಗಳ ಭ್ರಗಜಮನ್ಯೋನ್ಯಕಲಹದಿಂದ ॥
ಸೀಳೆ ಕುಂಭಸ್ಥಲೋಚ್ಚರಿತ ಮುಕ್ತಾಫಲದ ।
ಜಾಲಂಗಳೆನಲಚ್ಚರಿಯುಲಿಸದುದಂಬುಧಿಯು ।
ಮೇಲೆ ಸುರಪತಿಹಸ್ತಮುಕ್ತ ಮುಕ್ತಾಕ್ಷತಾವ್ರಾತದ ಬೆಡಂಗಿನಿಂದ ॥ (22)

ಉಡುರಾಜಗಪಕೃತಿಯನೆಸಗುವ ದಿವಾಕರನ ।
ಬೆಡೆಗಳಂ ಪಿಡಿದು ತಡಿಯೊಳಗೆ ಸೆರೆಯಿಟ್ಟನೋ ।
ಕಡಲೊಡೆಯನೆನಲು ಲಾವಣ್ಯನಿಧಿಯೆಂದೆನುತ ಮೋಹಿಸಿ ನದೀಸತಿಯರು ॥
ಕಡುಮುಮತಿಯಿಂ ಪೊಗಳೆ ಕರವನಾರ್ಚಲು ಬೆರಳ್ಗ ।
ಎಡೆಗೆಡೆಗೆ ತೋರುವವೊ ಕೆಂಜಡೆಗಳಂ ಕೆದರಿ ।
ಕಡಲದೇಂ ನಿದ್ರಿಪನೊಯೆನಲು ವಿದ್ರುಮಲತೆಗಳಾ ತಳಿಸಿ ಕರಮುಸೆದವು ॥ (23)

ದಿನಪನುಪಟಳಕಂಜಿ ಕಳ್ತಲೆಯ ಜಂಗುಳಿಯು ।
ವನರಾಸಿಯೊತ್ತ ಸಾರಿರ್ಪದೋ ತಾಮಸೀ ।
ಜನರಂಗಕಾಂತಿ ಪರಕಲಿಸಿ ಕಣಿಯಾದುದೋ ನಿಸಿಗಳೇನಡರಿರ್ಪವೋ ॥
ಎನಲು ನೀರಂಧ್ರತರನೈಲ್ಯದಿಂದ ತಮಾಲ ।
ವನಮಪ್ಸರಾಂಗನಾಭೋಗಪ್ರಯೋಗ್ಯಕರ ।
ಮೆನಿಸಿ ತೋರ್ದುದು ಪರ್ದುದೇರನತರುಚ್ಛಾಯ ವಿನಯಾನುಕಾರದಿಂದ ॥ (24)

ಮಾತುಳುಂಗ ಲವಂಗ ಖರ್ಜೂರ ಪಿಪ್ಪಲೀ ।
ವ್ರಾತಮೇಲಾಲತಾಕುಂಜಪುಂಜಗಳೆಡೆಯ ।
ಲಾತಪಶ್ರಮನಿವಾರಣಗೈವ ಸುರಸಿದ್ಧಚಾರಣಗಂಧರ್ವರಾ ॥
ಮಾತನನುಸರಿಸುವರೆ ಗಿಳಿಗಳ ವಿಲಾಸಪತಿ ।
ನೂತನತೆ ಗಹಗಹಿಸಿ ನಲಿವ ಪಿಕಸಂತತಿಯ ।
ರೀತಿಗಳ ನಿಟ್ಟಿಸುತ ಸಂತಸಂಗೊಳುವ ಸುರಕಾಮುಕರದೇಂ ತೋರ್ಪರೋ ॥ (25)

ಹರಿಯಂತೆ ಶಂಖಚಕ್ರಾಬ್ಜಲಾಂಛನದಿಂದ ।
ಹರನಂತೆ ಕೆಂಜಡೆಗಳುರಗಭೂಷಣದಿಂದ ।
ಸರಸಿಜೋದ್ಭವನಂತೆ ಹಂಸಗಣಸಂಸೇವ್ಯಮಾಗಿ ಸುರನಾಥನಂತೆ ॥
ನಿರತಾನಿಮಿಷ ಸೇವ್ಯಮಾಗಿ ಕೃತಾಲಿಹನಂತೆ ।
ಹರುಷದ ವಿಪೋಷಣದೊಳಾಗಸಮೆನಲ್ಕಡುಪ ।
ತರಣಿಶೋಭಿತಮಾಗಿ ತೋರ್ದುದಂಭೋರಾಸಿ ಪ್ಲವಗಾದಿನಾಥರಿಂಗೆ ॥ (26)

ಮುಗಿಲನೊಳಪೊಕ್ಕು ಶಂಪಾಲತೆಯನೊಡಗೊಂಡು ।
ಗಗನತಳದಿಂದಿಳಿದು ವಾರಾಸಿಯುದರದೊಳು ।
ಸೊಗಯಿಸುವ ರಿಷಿಗಳಂ ಕೈಕೊಂಡು ಭಯಪಕ್ಷಪಾತದೆಗ್ಗಳದಿಂದಲಿ ॥
ಸೊಗಸತೋರುವೆನಬ್ಧಿರಾಜಗೆಂದೆನುತ ಪುಟ ।
ನೆಗದು ನೀರೊಳ್ಪೊಕ್ಕು ಮುಗುಳಾಗಸವನಡರಿ ।
ಬಗೆಬಗೆಯ ಚೋದ್ಯಮಂ ತೋರ್ಪ ಕೆಮ್ಮೀನ್ಗಳೆನೆ ಲಕ್ಷ್ಮೀಕಟಾಕ್ಷಮೆನಲು ॥ (27)

ಕರಿತುರಗಧೇನುಮಣಿಚಿತ್ರರುದಿವ್ಯನಾರಿಯರ ।
ಪರಿಪರಿಯ ಭೋಗಗಳ ಪಾಕಶಾಸನಗಿತ್ತು ।
ನರಸುತನನಿಂದಮಮರಾವತಿಯೊಳಿರ್ಪುದಂ ನೋಡಿ ಸಂತಸವ ತಾಳ್ದು ॥
ಬರುವೆನೆಂದಾಗಸವನಡರಿ ಸಂತೋಷದಿಂ ।
ದೆರಪಿಲ್ಲವಾದಂತೆ ಮುತ್ತುಮಾಣಿಕಗಳಾ ।
ತೆರೆಯಿಂದ ಪರಕಲಿಸಿ ತಾರಾಗಣಗಳಂತದೇನಚ್ಚರಿಯ ತೋರ್ಪವೊ ॥ (28)

ಕೊಳದುರ್ಕಮನೆವಿದೇನಾಗಸವೊ ಪಾದಗಳ ।
ಚಳಕವಸಿಯಾಡದೇಂ ಭೂತಳವೊ ಮಾತುಗಳು ।
ಬಳಸಲರಿದಾಗಿರುವದೇಂ ಭಾನುಮಂಡಲವೊ ಕಪಟಿಗಳ ಹೃದಯಂಗಳೊ ।
ಸಳಸಪೀಠನ ಸೃಷ್ಟಿಗವಧಿಭೂಮಿಯೊ ವರುಣ ।
ನುಳುಮೆಗಿದು ಸರ್ವಸ್ವಮೋಯೆನ್ನುತಾಶ್ಚರ್ಯ ।
ಗೊಳುವೊಲಂಭೋರಾಸಿ ತೋರ್ದುದಾ ಜಾಂಬವಾದ್ಯಖಿಲ ವಾನರರ ಕಣ್ಗೆ ॥ (29)
ಗಗನದಂತೆಸೆವ ದುಷ್ಪಾರದಂಭೋನಿಧಿಯು ।
ಮಿಗೆ ನೋಡಿ ಖಿನ್ನತೆಯನಾಂತ ಕಪಿಸಂದೋಹ ।
ಬಗೆಬಗೆಯ ಸಂಬಾಧಕಲಿತನುಡಿಗಳನಾಡುತಲ್ಲಲ್ಲಿ ನೋಡುತಿರಲು ॥
ನಗುತ ಜಾಂಬವನಖಿಲರುಪಚರಿಸಿ ಯುವರಾಜ ।
ನಿಗೆ ಪೇಳ್ದುಮುಂದೈದುವಾಳೋಚನೆಯೊಳಾವ ।
ಬಗೆಯೊಳಾದರು ನೀರಧಿಯ ನೆಗೆವ ಯತ್ನಮಂ ಕಾಣೆನುತ ನುಡಿದನೊಲಿದು ॥
ಎನುತ ಜಾಂಬವ ಪೇಳಲಂಗದಂ ಬೇಗದಿಂ । (30)
ಮನವೊಲಿದು ಕಪಿಗಳಂ ಕರದು ಕುಸ್ತರಿಸುತ್ತ ।
ವಿನಯದಿಂ ಬೆಸಗೊಂಡ ವಾರ್ಧಿಯನ್ನುತ್ತರಿಸಿ ವಾನರಾಧಿಪನೈಸಿರಿಯ ॥
ಘನವೆನಿಪರಾರೆಮಗೆ ಪೇಳ ಶ್ರೀರಾಮಪದ ।
ವನಜಹಿತಕಾರಿಗಳು ಮುಂಬರಿದು ಬಹುದೆನುತ ।
ವಿನಯರಸಭರಿತದಿಂ ಕೇಳುತಂ ನುತಿಗೈದನಾ ಬಲೀಮುಖತತಿಯನು ॥ (31)
ಬಲವಂತರತಿನಿಪುಣರತುಲಗಮನೋನ್ಮಾದ ।
ಕಲಿತರಾಳೋಚನಾಪರರಮಿತ ಜನವುಳ್ಳ ।
ರೆಲೆ ವಾನರಶ್ರೇಷ್ಠರೆಲ್ಲ ಪತಿಕಾರ್ಯದೋಳ್ ನಿಷ್ಠೆಯಿಂ ಮುಂಬರಿವುತ ॥
ಜಲನಿಧಿಯನುಂ ದಾಂಟಿ ಸೀತಾಂಗನೆಯ ಕಂಡು ।
ಪಲವುಪಾಯಗಳಂದ ಕುಲವರಕ್ಷಣೆ ಗೈವ ।
ನೆಲವುಳ್ಳರಾರೆನುತಮಂಗದಂ ಬೆಸಗೊಂಡನಾಗ ಕಪಿಸತ್ತಮರನು ॥ (32)
ಯುವರಾಜನೀ ಪರಿಯ ಬೆಸಗೊಳಲ್ ತವಕದಿಂ ।
ಪ್ಲವಗಶತಿಗಳು ತಮ್ಮತಮ್ಮ ಬಲಚ್ಛ್ರಯುವ ।
ವಿವರಣಂಗೈದರಾ ಕ್ಷಣದಿ ಶಾಖಾಮೃಗಗಳಧಿನಾಥಗಂ ಪ್ರೇಮದಿ ॥
ಗವಯಗಜನುಗವಾಕ್ಷಶರಭಮೈಂಧದ್ವಿವಿಧ ।
ರವಿರತ ಸುಷೇಣಜಾಂಬವಮುಖ್ಯರೆಲ್ಲ ।
ಜವಗಳಂ ಬಿತ್ತರಿಸಲನುಗೈದರಂಗೆದನ ಮುಂಗಡೆಯಲನುಮೋದದಿ ॥ (33)
ಪತ್ತುಯೋಜನವನು ಗವಾಕ್ಷ ದಾಂಟುವೆನೆನಲು ।
ಮತ್ತೆ ಪದಿನೈದ ಗವಯಂ ನೆಗೆಯಲಿಚ್ಛೈಸ ।
ಉತ್ತರದಿ ಶರಭ ಮೂವತ್ತು ಯೋಜನವನೆನೆ ಗಂಧಮಾದನ ನುಡಿದನು ॥
ಉತ್ತರಿಪೆನೈವತ್ತು ಯೋಜನವನೆನೆ ಮೈಂಧ ।
ಮತ್ತೆ ಆನರವತ್ತು ಪೋಪೆನೆನಲಾ ದ್ವಿವಿಧ ।
ನುತ್ತರಪನಿತ್ತನೆಂಭತ್ತುದಾಂಟುವೆನಿದಕೆ ಸಂದೇಹಮಿಲ್ಲವೆನುತ ॥ (34)

ಪೇಳದ ಸುಷೇಣನದರಿಂದೈದು ಪೆರ್ಚಿಗೆಯು ।
ನೀಳ ಮತ್ತಾ ಸಮಯದೊಳಗೆ ಜಾಂಬವ ನುಡಿದ ।
ಕೇಳರೈ ಕಪಿಗಳಿರ ಪೂರ್ವವೃತ್ತಗಳೊರೆದು ಫಲವಿಲ್ಲದಾದರೀಗ ॥
ಪೇಳಬೇಕಾಯ್ತು ಜವ್ವನ ಪೋದ ಬಳಿಕ ಮ ।
ತ್ತಾಳುತನವೆಲ್ಲಿಯದು ರಘುನಾಥನೊಳಗವ ।
ತಾಳ ಮಕಟದೊಳು ತೊಂಬತ್ತು ಯೋಜನವ ನಾಂ ದಾಂಟ ಬಂದಪೆ ಮೆಲ್ಲನೆ ॥ (35)

ಬಲಿಯು ಬಂಧಿಸೆ ತ್ರಿವಿಕ್ರಮು ಬರ್ಪನೆಂದೆನುತ ।
ನೆಲವ ಸುರರಿಗೆ ಪೇಳ್ವೊಡಾರು ಮತ್ತೊಂದಾಗಿ ।
ಲಲಿತಗಮನದಿ ಕನಕಶೈಲಮಂ ಬಳಸಿದೆನು ಜವ್ವನದ ದುರುಭರದೊಳು ॥
ತೊಲಗಿತಾ ಬಲಮುಷ್ಟ ಬಲಿವುದೇನ್ಯೈ ಚಪಲ ।
ಕಲಿತಮಾನಸಮಂದಗತಿಯೆನುತ ರಿಕ್ಷಪತಿ ।
ಯುಲಿಯೆ ಕೇಳ್ದಂಗದಂ ತನ್ನ ವೃತ್ತಾಂತಮಂ ಪೇಳಲುಜ್ಜುಗಗೊಂಡನು ॥ (36)

ನೂರು ಯೋಜನದುದಧಿಯಂ ದಾಂಟಲಾಪೆನಾ ।
ನೋರಂತೆ ಬರಲಮ್ಮೆನೆನಲು ಜಾಂಬವನು ಕು ।
ಮಾರನಂ ಕುಸ್ತರಿಸಿ ಕಪಿರಾಜತನಯ ನೀನತುಳ ಸಾಹಸಿಯೆಂಬುದಾ ।
ಧಾರಿಣಿಯೊಳಾರರಿಯರಕಟ ಪರಿವೃಢ ಪೋಪ ।
ಚಾರರಂ ಕಳುಪಿ ಮೇಲಾರೈದುಕೊಂಬುದಾ ।
ದಾರ ಪೌರುಷಮಲ್ಲದೈದಿಬಹದೇನಧಿಕ ನೃಪರೀತಿ ನೀತಿಯಲ್ಲ ॥ (37)

ನೀನೋರ್ವ ಸುಖದಲಿರಲಹವು ಕಾರ್ಯಗಳೆಲ್ಲ ।
ನ್ಯೂನಮೇನಿದಕೆ ನಾವೆಲ್ಲ ಭವದಾಶ್ರಯಾದ ।
ಧೀನರಾಗಿದ್ದೇನು ಫಲ ಬೆಸಸಿದನಿತನಂ ಮಾಡಿ ತಂದೊಪ್ಪಿಗಿಪೆವು ॥
ಧ್ಯಾನಿಸದೆ ಮನಬಂದ ತೆರದೊಳಾಜ್ಞಾಪಿಸುವ ।
ದೇನು ಮತ್ತನುಮಾನವೆನುತ ಜಾಂಬವ ನುಡಿಯ ।
ಲಾನಂದದಿಂದಮಂಗದ ನುಡಿದ ಮನದಿಷ್ಟದಭಿಮತವ ವಿಸ್ತರದೊಳು ॥ (38)

ಎಲ್ಲರ ಬಲಂ ಪರಾಕ್ರಮಗಳುಂ ಕಾಣ್ಬಟ್ಟ ।
ವಿಲ್ಲನಾಸ್ಯೈದದಿರಲೀ ಕಾರ್ಯದೊಳು ಪ್ರಾಣ ।
ನಿಲ್ಲುವದದೆಂತಯ್ಯ ಕಾರ್ಯಮಂ ಕಂಡವಲ್ಲದೈಯ್ಯನೆಡೆಗೈದೆ ಸಲ್ಲ ॥
ಅಲ್ಲದಿರಲೆಲ್ಲ ಪ್ರಾಯೋಪವೇಶವ ಮಾಳ್ಪ ।
ನೊಲ್ಲನಂಗೀಕರಿಪುದೆಂದಂಗದಂ ಪೇಳ್ದ ।
ರುಲ್ಲಾಸದಿಂದ ಜಾಂಬವ ನುಡಿದನಖಿಲ ಕಪಿವೃಂದಮಾನಂದಗೊಳಲು ॥ (39)

ಮಗನೆ ಕೇಳ್ ಕರದೊಳಗೆ ಚಿಂತಾಮಣಿಯನಿಟ್ಟು ।
ಸುಗುಣಸುರಧೇನುಮಂ ನಿಳಯದೊಳಗಿಂಬಿಟ್ಟು ।
ಮಿಗೆನಿಲಿಂಪದ್ರುಮವನಂಗಳದೊಳಂಬಿಟ್ಟು ನಿಜಮನೋರಥದೇಳ್ಗೆಗೆ ॥
ಬಗೆವರೇನನುಮಾನಗಳನುಂ ಪ್ರಭಂಜನನ ।
ಮಗ ನಿನ್ನಸಂಗಡಿಗನೆನಿಸಿರ್ದ ಕಾರ್ಯಗಳ ।
ಬಗೆಯದಂತಿಹುದೆನುತ್ತೆಣಿಸುತಿಹೆ ಕಂಕಣವ ನೋಡೆ ಕನ್ನಡಿಯು ಬೇಕೆ ॥ (40)

ಇಂದೆಮ್ಮ ಹರಿಕುಲವ ಪೊರೆದೀ ವಿಪತ್ತುಗಳ ।
ಬಂದೀಕರಣಗೈದು ಸಕಲಜನದಾನಂದ ।
ಕೊಂದೆನಿಪರೀ ಜಗತ್ಪ್ರಾಣನಂದನ ವಿಪದ್ಬಂಧುವೆಂದೊರೆದು ಬೞಿ ॥
ಛಂದದಿಂದಂಗದನ ಸಂತೈಸುತಾ ರಿಕ್ಷ ।
ಬಾಂಧವಂ ಮಾರುತಿಯು ನೋಡಿ ಮೃದುಮಧುರನುಡಿ ।
ಯಿಂವ ನುತಿಗೈದನಾ ಕಲ್ಯಾಣಗುಣಗಣಗಳೆನಿಸಿ ಸಂತೋಷವೆರಸಿ ॥ (41)
ಬಲಪರಾಕ್ರಮದಿಂದ ರಾಮಲಕ್ಷ್ಮಣರುಗಳ ।
ಚೆಲುವ ಜವಸತ್ವದಿಂ ಖಗಪತಿಯು ಖಗಸುತನ ।
ಗೆಲಿದಿರ್ಪ ಬಾಹುಬಲಶಾಲಿ ತಾರಾಮಾಲಿಯುಪರಾಪತಾರನೆನಿಸಿ ॥
ಸಲಲಿತ್ರದಿ ಸರ್ವ ದೇವಾತ್ಮನಾಗಿರ್ದನಿ ।
ನ್ನೊಲವ ಸಂಪಾದಿಸಿದರಿಂಗಖಿಲ ಸಂಪದಗ ।
ಳೊಲಿದಪವೆನಲ್ಕೆ ಸಾಕ್ಷಾತ್ತಾಗಿ ನೀನಿರ್ದು ಕುಲದೈನ್ಯತೆಗಳೇತಕೆ ॥ (42)
ತರಣಿಮಂಡಲಕೆ ನಡೆದಾ ಮಹಾಜವಗಳಂ ।
ಸುರಚಿರದ ಕುರುಹ ಪಶ್ಚಿಮನಗಗಳಗ್ರದೊಳ್ ।
ಗಿರಿಸಿ ಪದಗಳ ನಿಗಮಗಳ ಕಲಿತ ಸಾಹಸಂ ಮೊದಲಾದ ಗುಣಗಣಗಳ ॥
ಶರಣಜನದಿಷ್ಟಾರ್ಥವಿತ್ತಾಪದೋದ್ಧರಣ ।
ವೆರಸಿರ್ಪ ಪರಿಪರಿಯ ವಿಸ್ಮಯಂಗಳನೆಲ್ಲ ।
ಮರಸಿ ಮನದೊಳರ್ದರೀ ಪ್ಲವಗ ಸಂತತಿಗೆ ಗತಿಯಾರು ಕಪಿವರೇಣ್ಯ ॥ (43)
ಇನಸುತನ ಭಯದಿಂದ ಕನಲಿ ಕಪಿವರರೆಲ್ಲ ।
ತನುಗಳಂ ಬಿಡಲೆಳಸಿ ತತ್ತರಂಗೊಳುತಮಿ ।
ರ್ದನುವ ನಿಟ್ಟಿಸಿ ಸುಮ್ಮನಿರ್ದಡಾರ್ಕೈ ಪೊರೆವರೀ ದೀನ ಸಂತತಿಯನು ॥
ನೆನೆದವರಿಗಿಷ್ಟಾರ್ಥಗಳ ಕೊಡುವ ಶ್ರೀಮೂರ್ತಿ ।
ಯನು ಸನ್ನಿಧಾನದೊಳಗಿಟ್ಟು ಕಾರ್ಪಣ್ಯಗೊಳಿ ।
ನಿನಗೆ ಬಹುದಪಕೀರ್ತಿಯಲ್ಲದಾರ್ಗೇನುಂಟು ವಿಫಲನುಡಿ ಬರಿದು ಗಂಟು ॥ (44)
ಶರಧಿಯೆನಿತುಂಟು ಗೋಷ್ಪದಿಯಲ್ಲದಿದು ನಿನಗೆ ।
ಮರುತಪಿನತಾತನಯಜವಗಳೇಂ ನೀಂ ಚಿತ್ರ ।
ವೆರಸಿದಡೆ ವಿಕ್ರಮತ್ರಿವಿಕ್ರಮಭವನ್ಮೂರ್ತಿ ಸನ್ನಿಕಾಶಮೆನಿಪ್ಪುದೆ ॥
ನೆರದ ಕಪಿವರರೆಲ್ಲ ಸಾಹಸವ ನಿಟ್ಟಿಪರೆ ।
ಪರಿಪರಿಯ ಪ್ರಾರ್ಥನೆಗಳಂ ಮಾಳ್ಪ ಬಾಂಧವರ ।
ಹರುಷಗೊಳಸುವದನಾಥರ ದೇವ ಭಕ್ತಜನಜೀವ ಕೇಳ್ ಸಮಯಕಾವಾ ॥ (45)
ಎಂದು ಬಹುವಿಧದಿಂದ ಜಾಂಬವಂತಂ ನುತಿಸ ।
ಲಂದಾ ಜಗತ್ಪ್ರಾಣನಂದನಂ ಹರುಷರಸ ।
ದಿಂದ ಹಿಗ್ಗಿದನದೇಂ ಸನ್ನುತಿಪ್ರಿಯಕರನೊ ಸಾಧುಚಾರಿತ್ರತರನೋ ॥
ಬೃಂದಾರಕರಪದವಿ ವಶವಾದತೆರದೊಳಾ ।
ನಂದವಾರ್ಧಿಯೊಳಾಳ ಕಾಯಮಂ ಬೆರ್ಚಿಸಿದ । (46)
ನೊಂದು ನಿಮಿಷಕೆ (ಮಹಾ) ಮಂದರದ ಪಾಸಟಿಯೆನಲ್ಕೆಮರುತಾತ್ಮಭವನು ॥

ಬೆಳಗಿದಳು ವೀರರವ ಮುಖಬಾಹುಮಂಡಲಗ ।
ಳೊಳು ವಿಲಾಸವ ತೋರಲತಿ ಶೌರ್ಯದಿಂ ದೇಹ ।
ಬೆಳೆದು ಬರುತಿರೆ ಕಂಡು ಕಪಿಕಟಕ ಸಂತಸಂಗೊಂಡು ಕೈಮುಗಿದು ನಿಂದು ॥
ಸಳಸಳಪ ಸವಿನುಡಿಗಳಿಂದ ಸ್ತುತಿಗೈವುತಿರ ।
ಲಿಳೆ ಸಂತಸಂಗೊಳುವೊಲೆಲ್ಲ ಕಪಿವೀರರುಂ ।
ಸಲಿವಂತೆ ವರಸುಧಾಕಲಿತ ವಾಣಿಗಳಿಂದಮೆಂದನಂಜನೆಯ ಸುತನು ॥ (47)

ಕೇಳಿರೈ ಕಪಿವರರು ನಿಮಗೆ ಸಂಭ್ರಮವ ಕ ।
ಟ್ಟೆಳು ರಘುವರಲಕ್ಷ್ಮಣಾದಿಗಳಗತಿಶಯದ ।
ಸಾಳದನಿಗತುಳ ಕೀರ್ತಿಯನೊಂದು ನಿಮಿಷದೊಳ್ ಪತಿಕಾರ್ಯಕೋಸುಗದಲಿ ॥
ಜಾಳಿಸಿಪ ನೀರಧಿಗಳೆಲ್ಲಮಂ ಲವಣದಳ ।
ಮಾಳದನ ಪರಿಯೆನುತ ನೂರು ಯೋಜನಗಳರೆ ।
ಸೂಳನಲಿ ದಾಂಟುವೆನು ನೋಡೆಂದು ಪ್ಲವಗರೊಳು ನುಡಿದ ಕೇಸರಿಯ ಸುತನು ॥ (48)

ರಸೆಯಣುಗಿಯಿರ್ಪ ಲಂಕಾಪುರವ ಶೋಧಿಸುವೆ ।
ನಿಸಿಯೊಳಗೆ ಸಿಲ್ಕಿದರೆ ದಶಗಳನ ರಜ್ಜುವಿಂ ।
ಬೆಸುಗೆಗೈದೆಳತಂದು ಭವದೀಯ ಸನ್ನಿಧಿಯ ಕೆಡಹುವೆಂ ಕ್ಷಣಮಾತ್ರದಿ ॥
ವಸುಮತೀಯರಸ ರಘುರಾಜೇಂದ್ರಚಂದ್ರಮನ ।
ಜಸವ ಮುಲ್ಲೋಕಜನರರಿವಂತೆ ಲಂಕೆಯೊಳು ।
ಹಸರಮನ್ನಿಟ್ಟುಬಹೆನೆಂದು ಮಾರುತಿ ನುಡಿದ ಕಪಿಕುಲೋತ್ತಮರೆಡೆಯೊಳು ॥ (49)

ಎನುತೆಲ್ಲರೊಳು ಬೀಳ್ಕೊಂಡು ಶ್ರೀರಾಮಪುರದರಸ ।
ನನು ನೆನೆದು ದಿಗ್ವಿಜಯಜಯಮೂರ್ತಿಮಹೇಂದ್ರ ।
ವನು ನೋಡುತಾರೋಹಣಂ ಗೈದುಲಿಚ್ಛ್ರಯಿಸಲಖಿಳ ಕಪಿವರರೆಲ್ಲರು ॥
ತನತನಗೆ ಜಯ ವಿಜೇಭವ ದಿಗ್ವಿಜೇಭವ ಗ ।
ಳೆನುತಮಾನಂದದಿಂ ಪೊಗಳುತಿರಲೆಚ್ಚಬಲದೊ ।
ಳನವಂಶಭವನ ಕೀರ್ತಿಧ್ವಜಂ ಗಿರಿಯೇರಿದಂತೇರ್ದ ಪವನ ಸುತನೊ ॥ (50)

ಸಂಧಿ 20 ಕ್ಕಂ ಪದ 884 ಕ್ಕಂ.

ಮಂಗಳಮಹಾಶ್ರೀ

ಇದು ರಾಮಚಂದ್ರಪಾದಾರವಿಂದವಂದನಪವನನಂದನವರಪ್ರಸಾದಾಸಾಧಿತ
ಸಾರಸ್ವತಾ ಸಾಹಿತ್ಯ ಸಾಮ್ರಾಜ್ಯ ಸರ್ವಕಷ ಚತುರ್ವಿಧ ಕವಿತಾ
ಪರಿಶೀಲಿತಾತ್ಮನಿಷ್ಠಾಗರಿಷ್ಠಗಾಂಧರ್ವಕಳಾವಿದ ವಿವಿಧ
ವಿದ್ವಜ್ಜನೋಪಲಾಲನೀಯ ರಾಮಪುರಿ ಹಂಪೆ
ಯಾಮಾತ್ಯ ತನೂಭವ ವೆಂಕಾಹ್ವಯ
ವಿರಚಿತಮಾದ ಶ್ರೀಮದ್ರಾಮಾಯಣ
ಮಹಾಪ್ರಬಂಧದಲ್ಲಿ
ಕಿಷ್ಕಿಂಧಾಕಾಂಡ
ಸಮಾಪ್ತಿಃ.

ಶ್ರೀ ಶ್ರೀ ಶ್ರೀ

LIST OF AGENTS FOR THE SALE OF MADRAS GOVERNMENT PUBLICATIONS.

IN MADRAS CITY.

ACCOUNT TEST INSTITUTE, Egmore, Madras.
CITY BOOK COMPANY, Madras-4.
HIGGINBOTHAMS, LIMITED, Madras-2.
P. VARADACHARI & CO., Madras-2.
THE SOUTH INDIA SAIVA SIDDHANTHA WORKS PUBLISHING SOCIETY, Madras-1.
VENKATRAMA & CO., Madras-1.
V. PERUMAL CHETTY & SONS, Madras-1.
M. DORAISWAMY MUDALIAR & CO., Madras-1.
C. SUBBIAH CHETTY & SONS, Madras-5.
SOUTH INDIA TRADERS, Madras-14.
FREE INDIA CO-OPERATORS' AGENCY, Madras-14.
THE SECRETARY, THE CENTRAL POLYTECHNIC CO-OPERATIVE STORES, LIMITED., Madras.

IN MUFASSAL.

THE EDUCATIONAL SUPPLIES COMPANY (R.S. Puram), Coimbatore.
D. SREEKRISHNAMURTHY, Ongole, Guntur district.
M. SESHACHALAM & CO., Masulipatnam, Krishna district.
HINDUSTAN DIARY PUBLISHERS, Vijayavada, Krishna district.
THE COMMERCIAL LINKS, Governorpet, Vijayavada, Krishna district.
E. M. GOPALAKRISHNA KONE, Madurai, Madurai district.
K. P. AHMED KUNHI & BROS., Cannanore, Malabar district.
P. K. BROTHERS, Kozhikode, South Malabar district.
A. VENKATASUBBAN, Vellore, North Arcot district.
TIMES MODERN MART, Salem, Salem district.
K. BHOJA RAO & CO., Mangalore, South Kanara district.
U. R. SHENOY & SONS, Mangalore, South Kanara distri ct.
P. N. SWAMINATHA SIVAM. Pudukkottai, Tiruchirappalli district.
S. KRISHNASWAMI & CO., Tiruchirappalli.
PALANIAPPA BROTHERS, Tiruchirappalli.
S. R. SUBRAMANIAM, Tirunelveli, Tirunelveli district.
ARIVUNOOLAGAM, Ootacamund, Nilgiris.
TRIVENI PUBLISHERS, Masulipatnam.

IN OTHER STATES.

JAIN BOOK AGENCY, New Delhi-1.
INTERNATIONAL BOOK HOUSE, Trivandrum.
BHARAT STORES, Ernakulam.

AGENTS SPECIALLY APPOINTED FOR THE SALE OF SRI BHARATHIAR'S PUBLICATIONS.

ANANDAVIKATAN, Madras-2.
THE SWADESAMITRAN, Madras-2.
SRIMAGAL & CO., Madras-1.
M. PALANI & CO., Pudukkottai.
THE KALAIMAGAL & CO., Colombo-11.
MOHAN & CO., LIMITED, Colombo.